

# ಯುಗರಶ್ಮಿ

ತ್ರೈಮಾಸಿಕ

# 40

## ಮಾಣಿಕ್ಯ ಜುಬಿಲಿ ವಿಶೇಷ ಸಂಚಿಕೆ

2015




ಲಂಡನ್: ಅಹ್ಮದಿಯಾ ಶಾಂತಿ ಪ್ರಶಸ್ತಿಯನ್ನು ಸಿಂಧುತಾಯ್ ಸಪ್ಕಲ್‌ಗೆ ಖಲೀಫರು ನೀಡಿದರು.




ಮಡಿಕೇರಿ: ಸೌತ್ ಝೋನ್ ಖಿದ್ದಾಮುಲ್ ಅಹ್ಮದಿಯಾ ಮತ್ತು ಅತ್ಫಾಲುಲ್ ಅಹ್ಮದಿಯಾ ಸಮ್ಮೇಳನ.




ಶಿವಮೊಗ್ಗ: ಅಹ್ಮದಿಯಾ ಮಹಿಳಾ ಶಾಂತಿ ಸಮ್ಮೇಳನ.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


**ಸೆಪ್ಟೆಂಬರ್ 2015**

ಸಂಪಾದಕ : ಮುಹಮ್ಮದ್ ಯೂಸುಫ್


ಆರಂಭ : 1975 | ಸಂಪುಟ : 32 | ತಬೂಕ್ 1394 ಹಿಜರೀ ಶಮ್ಸೀ | ಸಂಚಿಕೆ : 1-2


"ಮನುಷ್ಯನು ತನ್ನ ತಂದೆತಾಯಂದಿರಿಗೆ ಒಳಿತು ಮಾಡಬೇಕೆಂದು ನಾವು ಆಜ್ಞಾಪಿಸಿದ್ದೇವೆ. ಅವನ ತಾಯಿ ಕಷ್ಟ ಅನುಭವಿಸಿ ಅವನನ್ನು ಗರ್ಭಹೊತ್ತಳು ಹಾಗೂ ಕಷ್ಟ ಸಹಿಸಿ ಹೆತ್ತಳು. ಅವನ ಗರ್ಭಧಾರಣೆ ಮತ್ತು ಹಾಲೂಡಿಸುವ ಕಾಲಾವಧಿ (ಕನಿಷ್ಠ) ಮೂವತ್ತು ತಿಂಗಳುಗಳಾಗಿವೆ. ಹಾಗೆ ಅವನು ಪ್ರಾಪ್ತ ವಯಸ್ಕನಾಗಿ ನಲ್ವತ್ತು ವರ್ಷಕ್ಕೆ ತಲಪಿದಾಗ ಅವನು, 'ನನ್ನ ಪ್ರಭೂ, ನೀನು ನನಗೆ ಮತ್ತು ನನ್ನ ಮಾತಾಪಿತರಿಗೆ ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಸೂಚಿಸಲಿಕ್ಕೂ ನೀನು ಇಷ್ಟಪಡುವ ಸತ್ಕರ್ಮಗಳನ್ನು ಮಾಡಲಿಕ್ಕೂ ನನಗೆ ಶಕ್ತಿಯನ್ನು ದಯಪಾಲಿಸು. ನನಗೋಸ್ಕರ ನನ್ನ ಸಂತತಿಗಳನ್ನು ಧರ್ಮನಿಷ್ಠರನ್ನಾಗಿ ಮಾಡು. ನಾನು ನಿನ್ನ ಕಡೆಗೆ ತಿರುಗುತ್ತೇನೆ. ನಾನು ನಿನಗೆ ಶರಣಾಗುವವರೊಂದಿಗೆ ಸೇರಿದ್ದೇನೆ' ಎಂದು ಪ್ರಾರ್ಥಿಸುತ್ತಾನೆ." (ಪವಿತ್ರ ಖುರ್‌ಆನ್ 46:16)

**ವಿಷಯ ಸೂಚಿಕೆ** — **ಪುಟ**


★ ಯುಗವಾಣಿ — 2
★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು — 3
★ ಸಂದೇಶಗಳು — 4
★ ಯುಗರಶ್ಮಿಗೆ 40 ವರ್ಷ — 15
★ ಲೋಕಕ್ಕೆ ಧರ್ಮದ ಆವಶ್ಯಕತೆ ಏಕೆ? — 16
★ ಇಸ್ಲಾಮ್ – ಶಾಂತಿಯ ಮೂಲವೇ ಅಥವಾ ಶಾಂತಿಗೆ ಬೆದರಿಕೆಯೇ? — 28
★ ಇಸ್ಲಾಮ್ – ಶಾಂತಿ ಮತ್ತು ಸಂರಕ್ಷಣೆ ನೀಡುವ ಧರ್ಮ — 32
★ ಇಸ್ಲಾಮ್ ಧರ್ಮದಲ್ಲಿ ಮಹಿಳೆಯ ಸ್ಥಾನ — 41
★ ವಾಸ್ತವಿಕವಾಗಿ ಇಸ್ಲಾಮೀ ಜಿಹಾದ್ ಎಂದರೇನು? — 54
★ ರಮಝಾನ್ ವ್ರತಾನುಷ್ಠಾನ — 63
★ ಮುಸ್ಲಿಮೇತರರಿಗೆ ಸಲಾಮ್ ಹೇಳಬಹುದೇ? — 65
★ ವಾರ್ತೆಗಳು — 69
★ ನಿಧನ ವಾರ್ತೆಗಳು — 72
★ ಸಜ್ಜನರ ಸಂಗಾತಿ "ಯುಗರಶ್ಮಿ" — 73
★ ಓದಿದ್ದು — 74
★ ವ್ಯಕ್ತಿ ಪರಿಚಯ — 80
★ ಅಹ್ಮದಿಯಾ ಸುತ್ತೋಲೆ — 81
★ ಸ್ಮರಣೆ — 82
★ ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ.... — 83

# ಯುಗವಾಣಿ



"ಈ ದೇಶದಲ್ಲಿ ವಿವಿಧ ಧರ್ಮಗಳೂ ಅನೇಕ ಪಂಥಗಳೂ ಇವೆ. ಅದೇ ಪ್ರಕಾರ ವಿಶ್ವಾಸ ವೈಪರೀತ್ಯಗಳೂ ವೈರುಧ್ಯಗಳೂ ಬಹಳವಾಗಿವೆ. ಇದಕ್ಕೆ ಪ್ರಧಾನ ಕಾರಣ, ಅಧಿಕಾಂಶ ಜನರ ಹೃದಯಗಳಲ್ಲಿ ಆಧ್ಯಾತ್ಮ ಶಕ್ತಿ ಮತ್ತು ದೇವಭಕ್ತಿ ಇಲ್ಲದಿರುವುದೆಂದೂ ಸತ್ಯ ಮತ್ತು ಅಸತ್ಯಗಳನ್ನು ಗುರುತಿಸಲಿಕ್ಕಿರುವ ಆಧ್ಯಾತ್ಮಿಕ ಪ್ರಕಾಶ ನಂದಿಹೋಗಿರುವುದರಿಂದಾಗಿದೆಯೆಂದೂ ದೈವಿಕ ಜ್ಞಾನ ಮೂಲಕ ನನಗೆ ಮನಗಾಣಲು ಸಾಧ್ಯವಾಯಿತು. ಇಂದು ಲೋಕದಲ್ಲಿಡೀ ನಾಸ್ತಿಕತೆ ಮತ್ತು ಅಧಾರ್ಮಿಕತೆ ವ್ಯಾಪಿಸಿಕೊಂಡಿವೆ. ಬಾಯಿಯಲ್ಲಿ ದೇವನ ಕುರಿತು ಹೇಳುವುದಾದರೂ ಹೃದಯದಲ್ಲಿ ನಾಸ್ತಿಕತೆ, ಧರ್ಮರಾಹಿತ್ಯ ಚಿಂತನೆಗಳ ಅಲೆಯೇಳುತ್ತವೆ. ಇದಕ್ಕೆ ಜನರ ಅಂತರಂಗ ಜೀವಿತ ಮತ್ತು ಚರ್ಯೆಗಳು ಉತ್ತಮ ಸಾಕ್ಷಿಗಳು. ನಾಲಗೆಯಿಂದ ಉಚ್ಚರಿಸುವುದನ್ನು ವರ್ತನೆಯಲ್ಲಿ ನಮಗೆ ಕಾಣಲು ಸಾಧ್ಯವಾಗುವುದಿಲ್ಲ. ಯಥಾರ್ಥ ಸಾತ್ವಿಕರಾದ ಜನರ ಬಗ್ಗೆ ನಾನೇನೂ ಹೇಳುವುದಿಲ್ಲ. ಆದರೆ ಸಾಮಾನ್ಯವಾಗಿ ನೋಡುವಾಗ, ಯಾವ ಉದ್ದೇಶಾರ್ಥ ಮನುಷ್ಯನಿಗೆ ಧರ್ಮವನ್ನು ಕಡ್ಡಾಯಗೊಳಿಸಲಾಗಿದೆಯೋ, ಆ ಉದ್ದೇಶ ಇಂದು ನಮಗೆ ಕಾಣಲು ಸಾಧ್ಯವಾಗುವುದಿಲ್ಲವೆಂದು ಮನವರಿಯಬಹುದು. ಧರ್ಮದ ಜೀವನಾಡಿಯಾದ ಯಥಾರ್ಥ ಪರಿಶುದ್ಧತೆ, ದೇವಸ್ನೇಹ, ದೇವನ ಸೃಷ್ಟಿಗಳೊಡನೆ ಅನುಕಂಪ, ಕರುಣೆ, ನ್ಯಾಯ, ನೀತಿ, ವಿನಮ್ರತೆ, ಸಚ್ಚಾರಿತ್ರ್ಯ, ದೇವಭಕ್ತಿ ಇತ್ಯಾದಿ ಗುಣಗಳು ಇಂದು ಬಹ್ವಂತ ಜನರಲ್ಲಿ ಕಾಣಸಿಗುವುದಿಲ್ಲ. ಬದಲು, ಕಲಹಗಳೂ ಕೋಮು ಗಲಭೆಗಳೂ ದಿನೇದಿನೇ ಹೆಚ್ಚುತ್ತಿವೆ. ಹೀಗೆ ನಿಜವಾದ ಧಾರ್ಮಿಕತೆ ಮತ್ತು ದೇವಭಕ್ತಿ ಕಡಿಮೆಯಾಗುತ್ತಿರುವುದು ಬಹಳ ವೇದನಾಜನಕವಾಗಿದೆ.

ಸರ್ವಲೋಕಗಳ ಸೃಷ್ಟಿಕರ್ತನೂ ನಿಯಾಮಕನೂ ಆದ ದೇವನನ್ನು ಸರಿಯಾಗಿ ತಿಳಿದುಕೊಂಡು ಅವನೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸಿ ಪವಿತ್ರವೂ ಪಾವನವೂ ಆದ ಜೀವಿತವನ್ನು ನಡೆಸಿ ಅವನ ಸೃಷ್ಟಿಗಳೊಡನೆ ಪ್ರಾಮಾಣಿಕವಾದ ಅನುಕಂಪ ಮತ್ತು ಪ್ರೀತಿಯಿಂದ ವರ್ತಿಸಬೇಕೆಂಬುದು ಸರ್ವಧರ್ಮಗಳ ಮೂಲತತ್ವವಾಗಿದೆ. ಆದರೆ ಈ ಉದ್ದೇಶವು ನಿರ್ಮೂಲನಗೊಂಡಿರುವುದಾಗಿ ನಾನು ಕಾಣುತ್ತಿದ್ದೇನೆ. ಬಹುಪಕ್ಷ ಜನರು ನಾಸ್ತಿಕತೆಯ ಯಾವುದಾದರೊಂದು ಶಾಖೆಯನ್ನು ಕರಗತಮಾಡಿಕೊಂಡಿರುವರು. ದೇವಜ್ಞಾನ (ಮಅ್‌ರಿಫತ್)ದ ಅಭಾವ ಕಾರಣದಿಂದ ಭೂಮಿಯಲ್ಲಿ ದಿನೇದಿನೇ ಪಾಪಕೃತ್ಯಗಳು ವೃದ್ಧಿಗೊಳ್ಳುತ್ತಿವೆ. ಒಂದು ವಿಚಾರದ ಕುರಿತು ಸರಿಯಾದ ಜ್ಞಾನ ಇಲ್ಲವಾದರೆ ಅದರ ಮೌಲ್ಯವೂ ಘನತೆಯೂ ಹೃದಯವನ್ನು ತಟ್ಟುವುದಿಲ್ಲ. ಎಲ್ಲ ವಿಧ ಪ್ರೀತಿ ಮತ್ತು ಭಯ ಜ್ಞಾನ ಮೂಲಕ ಉದ್ಭವಿಸುತ್ತವೆ. ಇಂದು ಲೋಕದಲ್ಲಿ ಪಾಪ ಹೆಚ್ಚುತ್ತಿರುವುದರ ಪ್ರಧಾನ ಕಾರಣ ದೈವಿಕ ಜ್ಞಾನದ ಕೊರತೆ ಎಂಬುದು ಬಹಳ ಸ್ಪಷ್ಟವಾದ ಸತ್ಯ. ಒಂದು ಯಥಾರ್ಥ ಧರ್ಮವನ್ನು ಗುರುತಿಸಿ ಅರಿಯಲಿಕ್ಕೆ ಸಾಧ್ಯವಾದ ಲಕ್ಷಣಗಳಲ್ಲಿ ಪ್ರಧಾನವಾದುದು ಅದರಲ್ಲಿರುವ ದೈವಿಕ ಜ್ಞಾನ ಸಂಪಾದನೆಯ ಮಾರ್ಗಗಳಾಗಿವೆ. ಹಾಗಿದ್ದರೆ ಮಾತ್ರ ಮನುಷ್ಯನಿಗೆ ಪಾಪಕೃತ್ಯಗಳಿಂದ ತನ್ನನ್ನು ವಿಮುಕ್ತಗೊಳಿಸಿ ದೇವನ ಯಥಾರ್ಥ ಅಸ್ತಿತ್ವವನ್ನು ಮನಗಂಡು ಅವನೊಡನೆ ಪರಿಪೂರ್ಣ ಸಂಬಂಧ ಮತ್ತು ಅವನ ಸಂಪ್ರೀತಿಯನ್ನು ಗಳಿಸಲಿಕ್ಕೆ ಸಾಧ್ಯವಾಗುವುದು. ಅಲ್ಪ ಕಾಲಕ್ಕಾದರೂ ದೇವನೊಡನಿರುವ ಸಂಬಂಧವನ್ನು ಬೇರ್ಪಡಿಸುವುದು ಅವನಿಗೆ ನರಕತುಲ್ಯ ಅನುಭವವಾಗಬಹುದು. ಪಾಪ ಮುಕ್ತನಾಗಿ ದೇವನೊಡನಿರುವ ಸ್ನೇಹಸಂಬಂಧವನ್ನು ಸ್ಥಾಪಿಸುವುದು ಮಾನವನ ಅತ್ಯಂತ ಮಹತ್ತಾದ ಜನ್ಮೋದ್ದೇಶವಾಗಿದೆ. ಯಥಾರ್ಥವಾದ ಈ ಮನಃ ಸಂತೃಪ್ತಿಯನ್ನು ನಾವು ಸ್ವರ್ಗೀಯ ಜೀವಿತವೆಂದು ಅರ್ಥೈಸುತ್ತೇವೆ. ದೇವಪ್ರೀತಿಗೆ ವಿರುದ್ಧವಾದ ಎಲ್ಲ ಇಚ್ಛೆಗಳೂ ನರಕಾಗ್ನಿಗೆ ಸಮಾನವಾಗಿವೆ. ಅಂತಹ ಇಚ್ಛೆಗಳಿಗೆ ಶರಣಾಗಿಕೊಂಡಿರುವ ಬದುಕು ನರಕ ಜೀವನವಾಗುವುದು." (ಲೆಕ್ಚರ್ ಲಾಹೋರ್)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು.

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

❖ ನೀನು ಅಲ್ಲಾಹನನ್ನು ಆರಾಧಿಸಬೇಕು. ಯಾರನ್ನೂ ಅವನಿಗೆ ಸಹಭಾಗಿ ಮಾಡಬಾರದು. ನೀನು ನಮಾಝ್ ಮಾಡು, ಝಕಾತ್ ನೀಡು ಮತ್ತು ಕುಟುಂಬ ಸಂಬಂಧವನ್ನು ಜೋಡಿಸು. (ಹಾಗಿದ್ದರೆ ನಿನಗೆ ಸ್ವರ್ಗದಲ್ಲಿ ಪ್ರವೇಶಿಸಲು ಸಾಧ್ಯ.) (ಬುಖಾರಿ, ಮುಸ್ಲಿಂ)]

❖ ಮಾತಾಪಿತರು ಮೃತಪಟ್ಟ ನಂತರ ಅವರಿಗೆ ಮಾಡಬೇಕಾದ ಒಳಿತೇನೆಂದರೆ, ಅವರಿಗೋಸ್ಕರ ಪ್ರಾರ್ಥಿಸಬೇಕು, ಅವರ ಪಾಪ ವಿಮುಕ್ತಿಗೋಸ್ಕರ ಬೇಡಬೇಕು, ಅವರ ವಾಗ್ದಾನಗಳನ್ನು ಈಡೇರಿಸಬೇಕು, ಅವರಿಬ್ಬರ ಕುಟುಂಬಗಳನ್ನು ಒಗ್ಗೂಡಿಸಬೇಕು, ಅವರ ಸ್ನೇಹಿತರನ್ನು ಆದರಿಸಬೇಕು. (ಅಬೂದಾವೂದ್)

❖ ಕಪಟ ವಿಶ್ವಾಸಿಗೆ ಮೂರು ಲಕ್ಷಣಗಳಿವೆ: 1. ಸುಳ್ಳು ಹೇಳುವುದು, 2. ವಾಗ್ದಾನ ಲಂಘನ, 3. ವಿಶ್ವಾಸ ಘಾತ (ಬುಖಾರಿ, ಮುಸ್ಲಿಂ)

❖ ಉತ್ತಮವಾದ ಮಾತು ಪುಣ್ಯ ಕರ್ಮವಾಗಿದೆ. (ಬುಖಾರಿ, ಮುಸ್ಲಿಂ)

❖ ರೇಶ್ಮೆ ಮತ್ತು ಬಂಗಾರ ಧರಿಸುವುದು ನನ್ನ ಸಮುದಾಯದ ಪುರುಷರಿಗೆ ನಿಷಿದ್ಧ ಮತ್ತು ಸ್ತ್ರೀಯರಿಗೆ ಅನುಮತನೀಯ. (ತಿರ್ಮಿಧಿ)

❖ ಖುರ್‌ಆನನ್ನು ಕಲಿಯುವವನು ಮತ್ತು ಕಲಿಸುವವನು ನಿಮ್ಮ ಪೈಕಿ ಉತ್ತಮನು. (ಬುಖಾರಿ)

❖ ದೇವಸ್ಮರಣೆ ಮಾಡದೆ ನೀವು ಹೆಚ್ಚು ಮಾತಾಡಬಾರದು. ದೇವಸ್ಮರಣೆ ಮಾಡದೆ ಹೆಚ್ಚು ಮಾತಾಡುವುದು ಹೃದಯವನ್ನು ಕಠಿಣಗೊಳಿಸುವುದು. ಕಠಿಣ ಹೃದಯಿ ಜನರ ಪೈಕಿ ಅಲ್ಲಾಹನಿಂದ ಅತ್ಯಂತ ಅಗಲಿದವನು. (ತಿರ್ಮಿಧಿ)

❖ ಒಬ್ಬ ಮುಸ್ಲಿಂ ಮತ್ತೊಬ್ಬ ಮುಸ್ಲಿಮನ ಸಹೋದರನು. ಅವನನ್ನು ಆಕ್ರಮಿಸುವುದಾಗಲಿ ಶತ್ರುವಿಗೆ ಒಪ್ಪಿಸುವುದಾಗಲಿ ಮಾಡಬಾರದು. (ಮುತ್ತಫಿಕ್ ಅಲೈಹಿ)

❖ ಒಬ್ಬ ಮುಸ್ಲಿಂ ಮತ್ತೊಬ್ಬ ಮುಸ್ಲಿಮನ ಸಹೋದರನು. ಅವನನ್ನು ವಂಚಿಸುವುದಾಗಲಿ, ಅವನೊಡನೆ ಸುಳ್ಳು ಹೇಳುವುದಾಗಲಿ, ಅವನನ್ನು ಕೈಬಿಡುವುದಾಗಲಿ ಸಲ್ಲದು. (ತಿರ್ಮಿಧಿ)

❖ ಸತ್ಯವಿಶ್ವಾಸಿ ಸತ್ಯವಿಶ್ವಾಸಿನಿಯೊಡನೆ ಕೋಪಿಸಬಾರದು. ಅವಳ ಒಂದು ಸ್ವಭಾವವನ್ನು ಅವನು ಇಷ್ಟಪಡುವುದಿಲ್ಲವಾದರೂ ಬೇರೆ ಕೆಲವನ್ನು ಅವನು ಇಷ್ಟಪಡಬಹುದು. (ಮುಸ್ಲಿಂ)

❖ ವಿಶ್ವಾಸಿಗಳಲ್ಲಿ ಪರಿಪೂರ್ಣನು ಒಳ್ಳೆಯ ಸ್ವಭಾವದವನಾಗಿದ್ದಾನೆ. ನಿಮ್ಮ ಪೈಕಿ ಉತ್ತಮನು ಪತ್ನಿಯೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವವನಾಗಿದ್ದಾನೆ. (ತಿರ್ಮಿಧಿ)


❖ ಎಲ್ಲ ಮುಸ್ಲಿಂ ಪುರುಷ ಮತ್ತು ಮುಸ್ಲಿಂ ಸ್ತ್ರೀ ವಿದ್ಯೆ ಕಲಿಯುವುದು ಕಡ್ಡಾಯವಾಗಿದೆ. (ಬುಖಾರಿ)

❖ ಯಾರು ಜನರಿಗೆ ಮೊದಲು ಸಲಾಂ ಹೇಳುತ್ತಾನೋ ಅವನು ಜನರಲ್ಲಿ ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವನು. (ಅಬೂ ದಾವೂದ್)


❖ ಸಂಬಂಧಿಕರೊಂದಿಗೆ ಕೆಟ್ಟದ್ದಾಗಿ ವರ್ತಿಸುವವನು ಸ್ವರ್ಗವನ್ನು ಪ್ರವೇಶಿಸಲಾರ. (ಬುಖಾರಿ)

❖ ತನ್ನ ಸಹೋದರನಿಗೆ ಸಹಾಯ ಮಾಡುವ ಕಾರ್ಯದಲ್ಲಿ ಮಗ್ನನಾಗಿರುವವನಿಗೆ ಅಲ್ಲಾಹನು ಸಹಾಯ ಮಾಡುತ್ತಾನೆ. (ಬುಖಾರಿ)

MIRZA MASROOR AHMAD
HEAD OF THE AHMADIYYA COMMUNITY
IN ISLAM




بسم الله الرحمن الرحيم
نحمده ونصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر



ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ ಖಾಮಿಸ್
(ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫ)

ಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬ್,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ತಮ್ಮ ಪತ್ರ ತಲಪಿತು. ನೀವು ಪ್ರಕಟಿಸುತ್ತಿರುವ ಪತ್ರಿಕೆಯ ಪ್ರಚಾರವನ್ನು ಅಲ್ಲಾಹನು ಎಲ್ಲ ರೀತಿಗಳಲ್ಲೂ ಅನುಗ್ರಹದಾಯಕವನ್ನಾಗಿ ಮಾಡಲಿ. ಅದನ್ನು ಓದುವವರಿಗೆ ಅದರಿಂದ ಧಾರಾಳ ಲಾಭ ಪಡೆಯುವ ಭಾಗ್ಯ ಅಲ್ಲಾಹನು ನೀಡಲಿ. ನಿಮ್ಮ ಎಲ್ಲ ಉತ್ತಮ ಉದ್ದೇಶ ಲಕ್ಷ್ಯಗಳಲ್ಲಿ ಅಲ್ಲಾಹನು ಜಯವನ್ನು ನೀಡಲಿ ಮತ್ತು ಪ್ರತಿ ಕ್ಷಣದಲ್ಲೂ ನಿಮಗೆ ಬೆಂಬಲ ನೀಡುವವನೂ ಸಹಾಯಕನೂ ಆಗಲಿ – ಆಮೀನ್.

MIRZA MASROOR AHMAD
HEAD OF THE AHMADIYYA COMMUNITY
IN ISLAM



بسم الله الرحمن الرحيم
نحمده ونصلي على رسوله الكريم
وعلى عبده المسيح الموعود
خدا کے فضل اور رحم کے ساتھ
ھو الناصر

ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫ

## ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ ಸಂದರ್ಭದಲ್ಲಿ "ಯುಗರಶ್ಮಿ"ಯ ಓದುಗರಿಗೆ ಸಂದೇಶ

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್‌ರವರು ವಾಗ್ದತ್ತ ಮಸೀಹರೂ ಈ ಯುಗದಲ್ಲಿ ಪ್ರತೀಕ್ಷಿಸಲ್ಪಟ್ಟ ಉದ್ಧಾರಕರೂ ಆಗಿರುವರು. ಅವರು ತನ್ನ ಅನುಯಾಯಿಗಳಿಗೆ ಹೀಗೆ ಉಪದೇಶಿಸಿದರು:


"ನೀವು ಕೆಡುಕಿನಿಂದ ದೂರಸರಿಯಿರಿ. ನೀವು ಮಾನವರಿಗೆ ದಯೆ ತೋರಿಸುವವರಾಗಿರಿ. ನೀವು ನಿಮ್ಮ ಹೃದಯಗಳನ್ನು ದ್ವೇಷದಿಂದಲೂ ಅಸೂಯೆಯಿಂದಲೂ ಮುಕ್ತವಾಗಿಸಿ ಪರಿಶುದ್ಧಗೊಳಿಸಿರಿ. ನೀವು ಈ ನಡೆವಳಿಕೆಯಿಂದ ದೇವದೂತರ ಹಾಗೆ ಆಗುವಿರಿ. ಮನುಷ್ಯರ ಕುರಿತು ಸಹಾನುಭೂತಿ ಸೂಚಿಸದ ಧರ್ಮ ಎಷ್ಟು ಕೊಳಕು ಮತ್ತು ಮಲಿನಭರಿತವಾಗಿದೆ! ಸ್ವಾರ್ಥಭರಿತ ದ್ವೇಷದ ಮುಳ್ಳುಗಳಿಂದ ತುಂಬಿದ ಮಾರ್ಗವು ಎಷ್ಟು ಅಪವಿತ್ರವಾಗಿದೆ! ನನ್ನ ಜೊತೆಗೆ ಸೇರಿರುವ ನೀವು ಹಾಗೆ ಆಗಬಾರದು.... ನೀವು ದೇವನ ಪ್ರೀತಿಗಾಗಿ ಎಲ್ಲರಿಗೂ ದಯೆದೋರಿರಿ. ಹಾಗೆ ಮಾಡಿದರೆ ನೀವು ಆಕಾಶದಿಂದ ದಯೆಯನ್ನು ಗಳಿಸುವಿರಿ. ನೀವು ಬನ್ನಿರಿ, ನಿಮ್ಮ ಪ್ರಕಾಶವು ಇತರ ಎಲ್ಲರ ಪ್ರಕಾಶಗಳ ಮೇಲೆ ಜಯಗಳಿಸುವ ಒಂದು ದಾರಿಯನ್ನು ನಾನು ನಿಮಗೆ ಹೇಳಕೊಡುವೆನು. ಅದು ಏನೆಂದರೆ, ನೀವು ಎಲ್ಲ ರೀತಿಯ ಕೀಳು ಅಸೂಯೆಯನ್ನೂ ದ್ವೇಷವನ್ನೂ ಬಿಟ್ಟುಬಿಡಬೇಕು. ನೀವು ಮಾನವರಿಗೆ ಸಹಾನುಭೂತಿ ತೋರಿಸುವವರಾಗಬೇಕು ಮತ್ತು ನೀವು ನಿಮ್ಮನ್ನು ದೇವನಲ್ಲಿ ವಿಲೀನಗೊಳಿಸಬೇಕು. ನನ್ನ ಸೈನ್ಯಕ್ಕೆ ಸೇರಿದವರು ಭೂಮಿಯಲ್ಲಿ ಶಾಂತಿಯನ್ನು ಹರಡಬೇಕು. ಅದರ ಫಲಸ್ವರೂಪವಾಗಿ ಅವರ ಧರ್ಮವು ಹರಡುವುದು." (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ನಾವು ವಾಗ್ದತ್ತ ಮಸೀಹರ ಖಿಲಾಫತಿನ ಆಧ್ಯಾತ್ಮಿಕ ನೇತೃತ್ವದಲ್ಲಿ ಒಂದು ಸರಪಳಿಯ ಕೊಂಡಿಯ ಹಾಗೆ ಜೋಡಿಸಲ್ಪಟ್ಟಿದ್ದೇವೆ. ಅಹ್ಮದಿಯಾ ಜಮಾಅತಿನ ಸದಸ್ಯರು ಖಿಲಾಫತ್‌ನೊಂದಿಗೆ ಹೊಂದಿದ ಆಧ್ಯಾತ್ಮಿಕ ಸಂಬಂಧವು ಅವರನ್ನು ಮುಹಮ್ಮದೀ ಮಸೀಹರ ಉಪದೇಶಗಳನ್ನು ಅನುಸರಿಸಲು ನಿರ್ಬಂಧಿಸುತ್ತದೆ. ಆ ಉಪದೇಶಗಳ ಸಂಕ್ಷಿಪ್ತ ರೂಪ ಹೀಗಿದೆ: ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನೂ ಅಲ್ಲಾಹನ ಸೃಷ್ಟಿಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನೂ ಗೌರವಿಸಿ ಅವುಗಳನ್ನು ಅನುಷ್ಠಾನಕ್ಕೆ ತರಬೇಕು. ದ್ವೇಷದ ಗೋಡೆಗಳನ್ನು ಕೆಡವಿಹಾಕಬೇಕು. ಪ್ರೀತಿ ಮತ್ತು ವಾತ್ಸಲ್ಯದ ಸುವಾಸನೆಯನ್ನು ಲೋಕದಾದ್ಯಂತ ಹರಡಬೇಕು.

ಖಿಲಾಫತ್ ಅನುಗ್ರಹಗಳು "ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ" ದೊರಕುವುವು. ಅಲ್ಲಾಹನು ಅವರ ಕುರಿತು ಹೀಗೆ ಹೇಳುತ್ತಾನೆ : "ಅವರು ನನ್ನನ್ನು ಮಾತ್ರ ಆರಾಧಿಸುವರು. ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ.ನಿರಾಕರಿಸಿದರೆ ಅವರೇ ಧಿಕ್ಕಾರಿಗಳು." (ಪವಿತ್ರ ಖುರ್‌ಆನ್ 24 : 56)

ಪವಿತ್ರ ಖುರ್‌ಆನಿನ ಈ ವಚನ ಅಹ್ಮದಿಯರ ಮೇಲೆ ಕರ್ತವ್ಯಗಳನ್ನು ಕಡ್ಡಾಯಗೊಳಿಸುತ್ತದೆ. ಎಲ್ಲರೂ ತಮ್ಮ ನಮಾಝ್‌ಗಳ ಅನುಷ್ಠಾನವನ್ನು ಉತ್ತಮಗೊಳಿಸುವರೆಂದೂ ಅಲ್ಲಾಹನ ಎಲ್ಲ ಆಜ್ಞೆಗಳನ್ನು ಪಾಲಿಸುವರೆಂದೂ ಸತ್ಕರ್ಮಗಳನ್ನು ಹೆಚ್ಚು ಹೆಚ್ಚಾಗಿ ಮಾಡುವರೆಂದೂ ನಾನು ಆಶಿಸಿ ಅದರ ಬಗ್ಗೆ ಅಲ್ಲಾಹನನ್ನು ಬೇಡಿಕೊಳ್ಳುತ್ತೇನೆ.

(ಅಹ್ಮದಿಯಾ ಖಿಲಾಫತ್ ವಿಶೇಷ ಸಂಚಿಕೆ 2008)






## ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ
## ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹಿಬ್

"ಯುಗರಶ್ಮಿ" ಪತ್ರಿಕೆಯ ಸಂಪಾದಕರಾದ ಪ್ರಿಯ ಮುಹಮ್ಮದ್ ಯೂಸುಫ್ ಸಾಹಿಬ್,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ಅಹ್ಮದಿಯಾ ಶತಾಬ್ದ ಕೃತಜ್ಞತಾ ಸೂಚಕ ಆಚರಣೆಯ ಅಂಗವಾಗಿ "ಯುಗರಶ್ಮಿ"ಯ ವಿಶೇಷ ಸಂಚಿಕೆಯನ್ನು ಪ್ರಕಟಿಸುವಿರಾಗಿ ನೀವು ಬರೆದ ಪತ್ರದಿಂದ ತಿಳಿದು ಸಂತೋಷವಾಯಿತು. ಅಲ್ಲಾಹನು ಅದನ್ನು ಸಫಲಗೊಳಿಸಲಿ.

ನಿಮಗೆಲ್ಲರಿಗೂ ನನ್ನ ಸಂದೇಶವೇನೆಂದರೆ -- ಅಲ್ಲಾಹನೊಡನೆ ಸಜೀವ ಸಂಬಂಧ ಸ್ಥಾಪಿಸಿರಿ. ನಮಾಝ್‌ಗಳನ್ನು ನಿಷ್ಠೆಯಿಂದ ನಿರ್ವಹಿಸಲು ಗಮನ ಕೊಡಿರಿ. ಭಯಭಕ್ತಿಯ ಮಾರ್ಗವನ್ನು ಸದಾ ಅವಲಂಬಿಸಿರಿ. ನಿಮ್ಮ ಸಂತಾನಗಳು ಸಹ ಒಳಿತಿನ ಈ ಮಾರ್ಗಗಳಲ್ಲಿ ಚಲಿಸುವಂತೆ ಮಾಡಿರಿ. ಅವರು ಸಜ್ಜನರಾಗುವಂತೆ ಅವರಿಗೆ ಯೋಗ್ಯ ತರಬೇತಿ ನೀಡಿರಿ. ಈ ರೀತಿಯಲ್ಲಿ ನಿಮ್ಮ ಸಂತಾನ ತಲೆತಲಾಂತರ ಅಲ್ಲಾಹನ ಪ್ರೀತಿಗೆ ಪಾತ್ರವಾಗಿಯೂ ಧಾರ್ಮಿಕ ಮತ್ತು ಲೌಕಿಕ ಅನುಗ್ರಹಗಳನ್ನು ಗಳಿಸುವವರಾಗಿಯೂ ಮಾರ್ಪಡಲಿ. ಅಲ್ಲಾಹನು ನಿಮಗೆ ಈ ಸೌಭಾಗ್ಯವನ್ನು ದಯಪಾಲಿಸಲಿ.


ನಿಮ್ಮ ಗಮನಕ್ಕೆ ತರಲು ನಾನು ಇಚ್ಛಿಸುವ ಎರಡನೆಯ ಸಂಗತಿಯೇನೆಂದರೆ – ಎಲ್ಲ ವಿಧ ಪರಸ್ಪರ ವಿದ್ವೇಷಗಳನ್ನು ನಿವಾರಿಸುವುದು ಈ ಸಂದರ್ಭದಲ್ಲಿ ಧರ್ಮ ಮತ್ತು ದೇಶಕ್ಕೆ ಸಲ್ಲಿಸುವ ಅತ್ಯಂತ ದೊಡ್ಡ ಸೇವೆಯಾಗಿದೆ. ಅನ್ಯೋನ್ಯ ಇರುವ ಭಿನ್ನಾಭಿಪ್ರಾಯಗಳನ್ನು, ವಿವೇಚನಾಪೂರ್ವಕವಾಗಿ ತೆರೆದ ಹೃದಯದಿಂದ ಇತ್ಯರ್ಥಗೊಳಿಸಿರಿ. ನಿಮ್ಮ ಕಿರಿಯರೂ ಹಿರಿಯರೂ ಪುರುಷರೂ ಸ್ತ್ರೀಯರೂ – ಜಮಾಅತಿನ ಎಲ್ಲರೂ – ಐಕ್ಯ ಮತ್ತು ಭ್ರಾತೃತ್ವದ ಧ್ವಜವಾಹಕರಾಗಿರಿ. ಅಲ್ಲಾಹನ ಏಕತೆ ಭೂಮಿಗೆ ಇಳಿದು ಬಂದುದಾಗಿ ತೋರುವಂತೆ ನಿಮ್ಮ ಜಮಾಅತ್ ಈ ರೀತಿ ಐಕ್ಯದ ದಾರದಲ್ಲಿ ಪೋಣಿಸಲ್ಪಡಲಿ. ಹಝ್ರತ್ ವಾಗ್ದತ್ತ ಮಸೀಹ್[ಅ] ಈ ಬಗ್ಗೆ ಸೂಚನೆ ನೀಡುತ್ತಾ ಹೀಗೆ ನುಡಿದಿದ್ದಾರೆ:

"ನಾನು ಎರಡೇ ನೀತಿಬೋಧನೆಗಳನ್ನು ತಂದಿದ್ದೇನೆ. ಒಂದನೆಯದು – ಅಲ್ಲಾಹನ ಏಕತೆಯನ್ನು ನಂಬುವುದು. ಎರಡನೆಯದು– ಪರಸ್ಪರ ಪ್ರೀತಿ ಮತ್ತು ಅನುಕಂಪದಿಂದ ವರ್ತಿಸುವುದು. ಅನ್ಯರನ್ನು ಅದ್ಭುತಗೊಳಿಸುವ ಆದರ್ಶವನ್ನು ತೋರಿಸಿರಿ. ಪೈಗಂಬರರ[ಸ] ಶಿಷ್ಯವೃಂದದಲ್ಲಿ ಇದೇ ರೀತಿಯ ಮಾರ್ಪಾಟು ಸಂಭವಿಸಿತ್ತು. 'ಕುನ್‌ತುಂ ಅಅ್‌ದಾಅನ್ ಫ ಅಲ್ಲಫ ಬೈನ ಖುಲೂಬಿಕುಮ್' (ನೀವು ಮೊದಲು ಶತ್ರುಗಳಾಗಿದ್ದಾಗ ಅವನು ನಿಮ್ಮ ಹೃದಯಗಳನ್ನು ಪರಸ್ಪರ ಪ್ರೀತಿಯಿಂದ ಒಂದುಗೂಡಿಸಿದನು). ನೆನಪಿಡಿರಿ – ಸಾಮರಸ್ಯ ಒಂದು ಪವಾಡವಾಗಿದೆ." (ಮಲ್‌ಫೂಝಾತ್, ಸಂಪುಟ 2, ಪುಟ 48)

ಹಝ್ರತ್ ವಾಗ್ದತ್ತ ಮಸೀಹರ[ಅ] ಈ ಉಪದೇಶವನ್ನು ನಾವು ನಮ್ಮ ಹೃದಯದಲ್ಲಿ ಸ್ಥಾಪಿಸಬೇಕು ಮತ್ತು ಇತರರಿಗೂ ಬೋಧಿಸಬೇಕು. ಏಕೆಂದರೆ, ಇದು ಶಾಂತಿ, ಸಮಾಧಾನ, ಪ್ರೀತಿ, ಸಹೋದರತೆ ಹಾಗೂ ದೇವೈಕತ್ವದ ಸಂದೇಶವಾಗಿದೆ. ಲೋಕದಲ್ಲಿ ಜಯಹೊಂದುವಂತಹ ಪರಮ ಸತ್ಯ ಇದೇ ಆಗಿದೆ. ಯಾರು ಈ ಮಾರ್ಗದಲ್ಲಿ ತಡೆಯೊಡ್ಡುತ್ತಾರೋ ಅಥವಾ ಪರಿಸರವನ್ನು ಬಿಗಡಾಯಿಸಲು ಬಯಸುತ್ತಾರೋ ಅಂಥವರು ಸಕಲ ಸತ್ಯದ ಮೇಲೂ ಆಕ್ರಮಣ ಮಾಡುವವರಾಗುತ್ತಾರೆ. ನೀವು ಅವರೊಡನೆ ಒಳಿತಿನಿಂದ ಹೋರಾಡಿರಿ. ಅನಿಷ್ಟಕರ ವರ್ತನೆಗಳ ವಿರುದ್ಧ ದೇಶದ ಜನರಲ್ಲಿ ಪ್ರಜ್ಞೆ ಮೂಡಿಸುವುದು ಅದರಲ್ಲಿ ಒಂದು ವಿಧವಾಗಿದೆ. ಅಲ್ಲಾಹನು ನಿಮಗೆ ನೆರವು ನೀಡಲಿ.

ಯಾವ ರೀತಿ ಅಹ್ಮದಿಯತಿನ ಪ್ರಥಮ ಶತಮಾನದಲ್ಲಿ ಅಲ್ಲಾಹನ ಅಪಾರ ಅನುಗ್ರಹಗಳ ಲಬ್ಧಿಯಾಗಿತ್ತೋ ಅದೇ ರೀತಿ ಎರಡನೆಯ ಶತಕವು ಅಲ್ಲಾಹನ ಕಡೆಯಿಂದ ಬಹಳವಾದ ಔದಾರ್ಯಗಳ ಸಹಿತ ಉದಯಿಸಿದೆ. ಜಗತ್ತಿನಲ್ಲಿಡೀ ಒಂದು ಬದಲಾವಣೆ ವ್ಯಾಪಿಸುತ್ತಿದೆ. ಅನೇಕ ಕಡೆಗಳಲ್ಲಿ 'ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್‌ವಾಜ'ದ ದೃಶ್ಯ ಕಂಡು ಬರುತ್ತದೆ. ಈ ಸುಕ್ರಾಂತಿಯ ಗಾಳಿ ಮಂಗಳೂರಿಗೆ ಸಹ ತಲುಪುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನು ಅಹ್ಮದಿಯಾ ಚಟುವಟಿಕೆಗಳನ್ನು ಎಷ್ಟರ ಮಟ್ಟಿಗೆ ತೀವ್ರಗೊಳಿಸಿದ್ದಾನೆಂದರೆ, ಕೆಲವು ರಾಜ್ಯಗಳಲ್ಲಿ ಐವತ್ತು ವರ್ಷಗಳ ಕಾಲಾವಧಿಯಲ್ಲಿ ಸಾಧಿಸಬೇಕಾದಷ್ಟು ಕಾರ್ಯಗಳು ಈ ಕಳೆದ ಒಂದು ವರ್ಷದಲ್ಲಿ ಸಾಧಿಸಲ್ಪಟ್ಟಿವೆ. ಅದರಿಂದ ಮಂಗಳೂರು ಏಕೆ ಹೊರತಾಗಿದೆ? ನೀವು ಸಹ ಅದೃಷ್ಟದ ಗಾಳಿಯ ಗತಿಯಲ್ಲಿ ಮುಂದಕ್ಕೆ ಸಾಗಿರಿ; ಅಲ್ಲಾಹನ ಅನುಗ್ರಹಗಳಿಂದ ನಿಮ್ಮ ಜೋಳಿಗೆಗಳನ್ನು ತುಂಬಿಸಿಕೊಳ್ಳಿರಿ. ಅಲ್ಲಾಹನು ನಿಮ್ಮೊಂದಿಗಿರಲಿ ಮತ್ತು ಹೆಚ್ಚು ಹೆಚ್ಚು ಅನುಗ್ರಹಗಳನ್ನು ನೀಡಲಿ.

(ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆ 1990)






## ಹಝ್ರತ್ ಖಲೀಫತುಲ್ ಮಸೀಹ್ III
## ಅಹ್ಮದಿಯಾ ಸಂಘಟನೆಯ ಲೋಕೈಕ ನಾಯಕ (ತೃತೀಯ ಖಲೀಫ)
## ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹಿಬ್

ಮಂಗಳೂರಿನಿಂದ ಕನ್ನಡ ಭಾಷೆಯಲ್ಲಿ ಇಸ್ಲಾಂ ಮತ್ತು ಅಹ್ಮದಿಯತಿನ ಪ್ರಚಾರಕ್ಕಾಗಿ ಒಂದು ತ್ರೈಮಾಸಿಕ ಪತ್ರಿಕೆ ಹೊರಡಿಸುವ ಏರ್ಪಾಡು ಮಾಡಲಾಗಿದೆಯೆಂದು ತಿಳಿದು ಸಂತೋಷವಾಯಿತು. ಅಲ್ಲಾಹು ಈ ಪತ್ರಿಕೆಯಿಂದ ಇಸ್ಲಾಮ್ ಮತ್ತು ಅಹ್ಮದಿಯತಿನ ಪ್ರಚಾರ ಹಾಗೂ ಜನ ಸ್ವೀಕಾರದ ಉದ್ದೇಶವನ್ನು ಪೂರ್ತಿಗೊಳಿಸುವಂತೆ ಮಾಡಲಿ. ಈ ಪತ್ರಿಕೆಗಾಗಿ ಕೆಲಸ ಮಾಡುವವರಿಗೆ ಕಾರ್ಯತತ್ಪರತೆ ಮತ್ತು ಧೈರ್ಯದಿಂದ ಕೆಲಸ ಮಾಡುವ ಸೌಭಾಗ್ಯ ಲಭಿಸಲಿ – ಆಮೀನ್.

ಈ ಕಾಲದಲ್ಲಿ ಅಲ್ಲಾಹು ಮಹ್‌ದೀ* ಅಲೈಹಿಸ್ಸಲಾಮರನ್ನು ನಿಯೋಗಿಸಿರುವ ಮಹತ್ತಾದ ಉದ್ದೇಶವು ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಧರ್ಮವನ್ನು ಪುನಃ ಸ್ಥಾಪಿಸಲಿಕ್ಕಾಗಿದೆ ಹಾಗೂ ಆದಿಕಾಲದಲ್ಲಿ ಪೈಗಂಬರರ ಮತ್ತು ಧರ್ಮತತ್ವರರ ಜೀವನದಲ್ಲಿ ಯಥಾರ್ಥವಾದ ಯಾವ ವಿಶ್ವಾಸಗಳು ಪ್ರತ್ಯಕ್ಷವಾಗಿದ್ದುವೋ ಆ ಮಧುರ ಫಲವನ್ನುಂಟುಮಾಡುವ ವಿಶ್ವಾಸಾದರ್ಶಗಳನ್ನು ಪುನಃ ಜನರ ಹೃದಯ ಮತ್ತು ಮನಸ್ಸಿನಲ್ಲಿ ತುಂಬಲಿಕ್ಕಾಗಿದೆ. ಈಗಿನ ಲೋಕವು ಈ ವಿಶ್ವಾಸಗಳನ್ನು ಕಡೆಗಣಿಸಿದೆ. ಕೆಲವು ಸ್ಥಳಗಳಲ್ಲಿ ಗೋರಿಪೂಜೆ, ಕೆಲವು ಕಡೆ ಬರೇ ಊಹೆಯನ್ನು ಆಧರಿಸಿ ಬೇರೆ ಯಾವುದರದೋ ಪೂಜೆ ನಡೆಯುತ್ತಿದೆ. ಜನರು ತಿರುಳನ್ನು ಬಿಟ್ಟು ಸಿಪ್ಪೆಯ ಹಿಂದೆ ಬಿದ್ದಿರುವರು. ಇಸ್ಲಾಮ್ ಕೆಲವು ಆಚಾರಗಳು ಮತ್ತು ಸಂಪ್ರದಾಯಗಳ ಹೆಸರಾಗಿ ಉಳಿದಿದೆ. ಯಾವ ಆಡಂಬರದಿಂದ ಹಬ್ಬಗಳನ್ನು ಆಚರಿಸುತ್ತಾರೋ ಅಷ್ಟು ಮಹತ್ತಾಗಿಯೂ ಉತ್ಸಾಹದಿಂದಲೂ ಪ್ರಾರ್ಥನೆ ಮತ್ತು ಉಪವಾಸದ ಏರ್ಪಾಡು ಮಾಡುವುದಿಲ್ಲ. ಯಥಾರ್ಥವಾಗಿ ಮುಖ್ಯವಾದುದು ಹೃದಯದ ಪಾವಿತ್ರ್ಯತೆ ಮತ್ತು ಭಕ್ತಿಯಾಗಿದೆ. ಹಝ್ರತ್ ಮಸೀಹ್ ಮೌಊದ್* ಅಲೈಹಿಸ್ಸಲಾಮ್ ಹೇಳಿರುವರು:

ಪ್ರತಿಯೊಂದು ಒಳಿತಿನ ಬೇರು ಭಕ್ತಿಯಾಗಿದೆ.

ಈ ಒಂದು ಬೇರು ಇದ್ದರೆ ಎಲ್ಲವೂ ಇರುವುದು.


ಆದುದರಿಂದ ಭಕ್ತಿ ಮತ್ತು ದೇವಭಯವನ್ನು ನಮ್ಮ ನಡೆವಳಿಕೆಯ ಅಡಿಪಾಯವನ್ನಾಗಿ ಮಾಡಿ "ಧರ್ಮವನ್ನು ಪುನರುಜ್ಜೀವನಗೊಳಿಸುವ, ಧರ್ಮಶಾಸ್ತ್ರವನ್ನು ನೆಲೆನಿಲ್ಲಿಸುವ" ಯಥಾರ್ಥ ಉದ್ದೇಶವನ್ನು ಸುಸ್ಥಾಪಿಸಬೇಕು. ಇದೇ ಅಹ್ಮದಿಯತಿನ ಸ್ಥಾಪನೆಯ ಉದ್ದೇಶವಾಗಿದೆ. ಮಕ್ಕಳಲ್ಲೂ ದೊಡ್ಡವರಲ್ಲೂ ಸರಿಯಾದ ವಿಶ್ವಾಸಗಳನ್ನು ನೆಲೆನಿಲ್ಲಿಸಬೇಕು. ಇಸ್ಲಾಮಿನ ಪ್ರೇಮವು ಉತ್ಪನ್ನವಾಗುವಂತೆ ಮಾಡಿರಿ. ದೇವ ಸಂತೃಪ್ತಿಗೆ ಪ್ರಪಂಚದ ಎಲ್ಲ ವಸ್ತುಗಳಿಗಿಂತ ಪ್ರಾಧಾನ್ಯತೆ ಕಲ್ಪಿಸಿರಿ. ನಿಮ್ಮ ನಡೆವಳಿಕೆಯಿಂದ, ಇಸ್ಲಾಮಿಕ ಪ್ರಕಾಶವು ಜೀವದಾಯಕವೆಂದೂ ನಮ್ಮ ದೇವನು ಒಬ್ಬ ಜೀವಂತ ದೇವನಾಗಿದ್ದಾನೆಂದೂ ಅವನು ಎಲ್ಲ ಕಾಲಗಳಲ್ಲೂ ಹೊಸ ಹೊಸ ಮಹತ್ವಗಳೊಂದಿಗೆ ಪ್ರತ್ಯಕ್ಷನಾಗುತ್ತಾನೆಂದೂ ಅವನ ಜೊತೆ ಸಂಬಂಧ ಸ್ಥಾಪಿಸುವವರು ಒಂದು ಹೊಸ ಜೀವನವನ್ನು ಪಡೆಯುತ್ತಾರೆಂದೂ ಸಾಬೀತುಗೊಳಿಸಿರಿ.

ಪವಿತ್ರ ಖುರ್‌ಆನ್, ಅದರ ವ್ಯಾಖ್ಯಾನ ಮತ್ತು ಹಝ್ರತ್ ಮಸೀಹ್ ಮೌಊದರ(ಅ) ಗ್ರಂಥಗಳ ಆಧಾರದಿಂದ ಯಥಾರ್ಥ ಅಹ್ಮದಿಯಾ ವಿಶ್ವಾಸಗಳನ್ನು ಪ್ರಕಟಗೊಳಿಸಿ ಜನರ ಹೃದಯದಲ್ಲಿ ಬಲವಾಗಿ ಬೇರೂರುವಂತೆ ಮಾಡುವ ಕಾರ್ಯವನ್ನು ಈ ಪತ್ರಿಕೆ ಮುಂದುವರಿಸುವುದೆಂದು ನಾನು ಆಕಾಂಕ್ಷಿಸುತ್ತೇನೆ. ಅಲ್ಲಾಹು ಆ ಸೌಭಾಗ್ಯವನ್ನು ದಯಪಾಲಿಸಲಿ – ಆಮೀನ್.

28–2–1975

* ವಾಗ್ದತ್ತ ಧರ್ಮ ಸುಧಾರಕ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ – ಸಂಪಾದಕ

**('ಯುಗರಶ್ಮಿ' 1975 ಏಪ್ರಿಲ್ ಸಂಚಿಕೆಯಿಂದ)**






## ಮೌಲಾನ ಮುಹಮ್ಮದ್ ಇನಾಮ್ ಘೋರಿ ಸಾಹಿಬ್
## ನಾಝಿರ್ ಅಅ್‌ಲಾ, ಖಾದಿಯಾನ್

ಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬ್, "ಯುಗರಶ್ಮಿ" ಸಂಪಾದಕ, ಮಂಗಳೂರು,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ಕನ್ನಡ ಭಾಷೆಯ ತ್ರೈಮಾಸಿಕ "ಯುಗರಶ್ಮಿ" 1975ರಿಂದ ಪ್ರಕಟವಾಗುತ್ತಿದೆ ಎಂದೂ ನಲ್ವತ್ತು ವರ್ಷಗಳು ಪೂರ್ಣಗೊಳ್ಳುವಾಗ ಒಂದು ವಿಶೇಷಾಂಕವನ್ನು ಪ್ರಕಟಿಸಲಿದ್ದೀರೆಂದೂ ಅದರ ಓದುಗರಿಗೆ ಒಂದು ಸಂದೇಶ ನೀಡಬೇಕೆಂದೂ ನೀವು ಅಪೇಕ್ಷಿಸಿರುವಿರಿ.

ಮೊದಲನೆಯದಾಗಿ, ನೀವು ಪತ್ರಿಕೆಯ ಸಂಪಾದಕ, ಮುದ್ರಕ ಮತ್ತು ಪ್ರಕಾಶಕರಾದ ಕಾರಣ ನಿಮಗೆ ಶುಭಾಶಯಗಳನ್ನು ಕೋರುತ್ತೇನೆ. ನೀವು ನಿಮ್ಮ ವೈಯಕ್ತಿಕ ಪರಿಶ್ರಮ ಮತ್ತು ಆಸಕ್ತಿಯಿಂದ ಈ ಪತ್ರಿಕೆಯನ್ನು ರಚಿಸುತ್ತಿರುವಿರಿ, ಪ್ರಕಟಿಸುತ್ತಿರುವಿರಿ ಮತ್ತು ಚಂದಾದಾರರಿಗೂ ಆವಶ್ಯಪಡುವವರಿಗೂ ಸಾರ್ವಜನಿಕ ಗ್ರಂಥಾಲಯಗಳಿಗೂ ವಿದ್ವಾಂಸರಿಗೂ ಗಣ್ಯರಿಗೂ ಕರ್ನಾಟಕದಲ್ಲಿ ಹಂಚುತ್ತಿರುವಿರಿ.


ಅಲ್ಲಾಹನು ನಿಮ್ಮ ಈ ಪರಿಶ್ರಮ ಮತ್ತು ಪ್ರಶಂಸಾರ್ಹ ಪ್ರಯತ್ನಕ್ಕೆ ಅತ್ಯುತ್ತಮ ಪ್ರತಿಫಲ ದಯಪಾಲಿಸಲಿ.

ಅಲ್ಲಾಹನ ಅನುಗ್ರಹದಿಂದ ಕನ್ನಡ ಭಾಷೆಯಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಕ್ತಾರನಾಗಿ ಈ ಏಕಮಾತ್ರ ಪತ್ರಿಕೆಯನ್ನು ನಲ್ವತ್ತು ವರ್ಷಗಳಿಂದ ನಿರಂತರನಾಗಿ ಪ್ರಕಟಿಸುತ್ತಿರುವಿರಿ. ಇಸ್ಲಾಮ್ ಮತ್ತು ಅಹ್ಮದಿಯ್ಯತಿನ ಸುಂದರ ವದನವನ್ನು ವಿದ್ಯಾವಂತರಿಗೆ ತೋರಿಸಲು ಪ್ರಯತ್ನ ಮಾಡುತ್ತಿರುವಿರಿ.

ಹಝ್ರತ್ ಮಸೀಹ್ ಮೌಊದ್ (ವಾಗ್ದತ್ತ ಮಸೀಹ್) ಅಲೈಹಿಸ್ಸಲಾಮರು ಅಲ್ಲಾಹನಿಂದ ಆಜ್ಞಾಪಿಸಲ್ಪಟ್ಟ ಪ್ರಕಾರ ಇಸ್ಲಾಮಿನ ಪುನಶ್ಚೇತನ ಮತ್ತು ಪವಿತ್ರ ಖುರ್‌ಆನಿನ ಪ್ರಚಾರಕ್ಕೋಸ್ಕರ ದೈವಿಕ ಅಭಿಯೋಗವನ್ನು ಪ್ರಾರಂಭಿಸಿದರು. ಅವರು ತನ್ನ ಫತ್‌ಹೆ ಇಸ್ಲಾಮ್ ಎಂಬ ಪುಸ್ತಕದಲ್ಲಿ ದೈವಿಕ ಕಾರ್ಯಾಗಾರದ ಐದು ಬೃಹತ್ ಶಾಖೆಗಳನ್ನು ವಿವರಿಸಿದ್ದಾರೆ. ಅದರ ಒಂದು ಶಾಖೆ ಲೇಖನ ಮತ್ತು ಪ್ರಕಟಣೆಯಾಗಿದೆ. ಈ ರೀತಿ ನಿಮ್ಮ ಪತ್ರಿಕೆ ಸಹ ಫತ್‌ಹೆ ಇಸ್ಲಾಮ್ (ಇಸ್ಲಾಮಿನ ಜಯ) ಎಂಬ ದೈವಿಕ ಕಾರ್ಯಾಗಾರದ ಶಾಖೆಯ ಒಂದು ಹಚ್ಚಹಸುರಾದ ಭಾಗವಾಗಿದೆ.

ಹಝ್ರತ್ ವಾಗ್ದತ್ತ ಮಸೀಹ್ ಮಹದೀ(ಅ) ಈ ರೀತಿಯ ಸೇವೆ ಸಲ್ಲಿಸುವವರಿಗೆ ಉತ್ತೇಜನ ನೀಡುತ್ತಾ ಹೀಗೆ ಒಂದು ಕಡೆಯಲ್ಲಿ ಹೇಳಿದ್ದಾರೆ:

"ನೀವು ದೃಢವಾಗಿ ತಿಳಿದುಕೊಳ್ಳಿರಿ – ಈಗ ಆವಶ್ಯವಿರುವುದು ಖಡ್ಗವಲ್ಲ, ಲೇಖನಿಯಾಗಿದೆ. ನಮ್ಮ ಶತ್ರುಗಳು ಇಸ್ಲಾಮ್ ಧರ್ಮದ ಬಗ್ಗೆ ಸಂಶಯಗಳನ್ನು ಉಂಟುಮಾಡಿದ್ದಾರೆ. ವಿವಿಧ ವಿಜ್ಞಾನಗಳ ಮೂಲಕ ಮತ್ತು ಕಾರಸ್ಥಾನಗಳ ಮೂಲಕ ಅಲ್ಲಾಹನ ಸತ್ಯಧರ್ಮದ ವಿರುದ್ಧ ಆಕ್ರಮಣ ಮಾಡಲು ಬಯಸುತ್ತಾರೆ. ಅಲ್ಲಾಹನು ನನ್ನನ್ನು ಅವುಗಳ ಬಗ್ಗೆ ಗಮನಿಸಲು ಆಜ್ಞಾಪಿಸಿದ್ದಾನೆ. ನಾನು ಲೇಖನಿ ಎಂಬ ಆಯುಧವನ್ನು ಧರಿಸಿ ವಿಜ್ಞಾನ ಮತ್ತು ಜ್ಞಾನವೃದ್ಧಿಯ ಕಾರ್ಯಕ್ಷೇತ್ರದಲ್ಲಿ ಇಳಿದು ಇಸ್ಲಾಮಿನ ಆಧ್ಯಾತ್ಮಿಕ ಶೌರ್ಯದ ಮತ್ತು ಆಂತರಿಕ ಶಕ್ತಿಯ ಪವಾಡವನ್ನು ತೋರಿಸಬೇಕೆಂದು ಅಲ್ಲಾಹನು ಸೂಚಿಸಿರುವನು. ನಾನು ಈ ಕ್ಷೇತ್ರದಲ್ಲಿ ಹೋರಾಡಲು ಹೇಗೆ ತಾನೆ ಶಕ್ತನಾಗಬಲ್ಲವನಾಗಿದ್ದೆ? ಇದು ಅಲ್ಲಾಹನ ಅನುಗ್ರಹವಾಗಿದೆ ಮತ್ತು ಅವನ ಅಪರಿಮಿತ ವರದಾನವಾಗಿದೆ – ನನ್ನಂತಹ ಬಲಹೀನ ಮನುಷ್ಯನ ಕೈಯಿಂದ ಅಲ್ಲಾಹನ ಧರ್ಮದ ಗೌರವ ಪ್ರಕಟವಾಗುವುದು. ಇಸ್ಲಾಮ್ ವಿರುದ್ಧ ನಮ್ಮ ಶತ್ರುಗಳು ಮಾಡುವ ಆಕ್ಷೇಪಗಳನ್ನು ಮತ್ತು ಆಕ್ರಮಣಗಳನ್ನು ನಾನು ಒಮ್ಮೆ ಎಣಿಸಿದೆ. ನನ್ನ ಅಂದಾಜು ಪ್ರಕಾರ ಅವುಗಳ ಸಂಖ್ಯೆ ಮೂರು ಸಾವಿರವಾಗಿತ್ತು. ಆದರೆ ಈಗ ಅವುಗಳ ಸಂಖ್ಯೆ ಅದಕ್ಕಿಂತ ಹೆಚ್ಚಾಗಿರಬಹುದು. ಇಸ್ಲಾಮಿನ ಅಸ್ತಿಭಾರ ಬಲಹೀನ ಸಂಗತಿಗಳ ಮೇಲಿದೆ ಎಂದೂ ಅದರ ವಿರುದ್ಧ ಮೂರು ಸಾವಿರ ಆಕ್ಷೇಪಗಳನ್ನು ಮಾಡಬಹುದೆಂದೂ ಯಾರೂ ಯೋಚಿಸದಿರಲಿ. ಹೀಗೆ ಖಂಡಿತವಾಗಿ ಅಲ್ಲ. ಸಂಕುಚಿತ ದೃಷ್ಟಿ ಹೊಂದಿದವರು ಮತ್ತು ತಿಳಿಗೇಡಿಗಳು ಇಂತಹ ಆಕ್ಷೇಪಗಳನ್ನು ಮಾಡುತ್ತಾರೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಆಕ್ಷೇಪಗಳನ್ನು ಎಣಿಸಿದಾಗ ಅವುಗಳ ಬಗ್ಗೆ ಗಾಢವಾಗಿ ಚಿಂತಿಸಿದೆನು. ಆ ಆಕ್ಷೇಪಗಳ ತಳದಲ್ಲಿ ವಾಸ್ತವಿಕವಾಗಿ ಅತ್ಯಪೂರ್ವ ಸತ್ಯಗಳು ಇರುವುದಾಗಿ ನಾನು ಕಂಡೆನು. ದೃಷ್ಟಿದೋಷದ ಕಾರಣದಿಂದ ಆಕ್ಷೇಪಗಾರರಿಗೆ ಅವು ಕಾಣಿಸುವುದಿಲ್ಲ. ಅಂಧನಾದ ವಿರೋಧಿ ಎಲ್ಲಿಗೆ ತಲಪಿ ತಡೆಯಲ್ಪಡುತ್ತಾನೋ ಅಲ್ಲಿಯೇ ಸೂಕ್ಷ್ಮ ಜ್ಞಾನದ ರಹಸ್ಯ ಖಜಾನೆಗಳನ್ನು ಇರಿಸಿರುವುದು ಅಲ್ಲಾಹನ ಜಾಣ್ಮೆಯಾಗಿದೆ." (ಮಲ್‌ಫೂಝಾತ್ ಸಂಪುಟ 1 ಪುಟ 38)






## ದಿ ಹೇಗ್‌ನಲ್ಲಿರುವ ಅಂತರ್‍ರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷ
## ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್

ಪ್ರಿಯ ಮುಹಮ್ಮದ್ ಯೂಸುಫ್‌ರವರೆ,

ಅಸ್ಸಲಾಮು ಅಲೈಕುಮ್,

"ಯುಗರಶ್ಮಿ" ಎಂಬ ಒಂದು ಅಹ್ಮದಿಯಾ ತ್ರೈಮಾಸಿಕ ಪತ್ರಿಕೆಯು ಮಂಗಳೂರಿನಿಂದ ಪ್ರಕಟವಾಗಲಿರುವುದೆಂದು ತಿಳಿದು ನನಗೆ ತುಂಬಾ ಸಂತೋಷವಾಯಿತು. ಅದರ ಹೆಸರು ಯಥೋಚಿತವಾಗಿದೆ. ಪ್ರಪಂಚವು ಎಲ್ಲ ಭಾಗಗಳಿಂದಲೂ ಅಂಧಕಾರದಿಂದ ಆವರಿಸಲ್ಪಟ್ಟಿದೆ. ಮಾನವ ಕುಲವು ತನ್ನ ಬದುಕಿಗೂ ಅಭಿವೃದ್ಧಿಗೂ ದೈವಿಕ ಮಾರ್ಗದರ್ಶನದ ಅತ್ಯಂತ ಆವಶ್ಯವಿರುವ ಘಟ್ಟದಲ್ಲಿದೆ. ಮನುಷ್ಯ ಸಮುದಾಯವು ತನ್ನ ಸೃಷ್ಟಿಕರ್ತನ ಕಡೆಗೆ ಬೆನ್ನನ್ನು ತಿರುಗಿಸಿದೆ. ಇದಕ್ಕೆಲ್ಲ ಪರಿಹಾರವೇನೆಂದರೆ, ಅದು ದೇವನ ಅಸ್ತಿತ್ವವನ್ನೂ ಅವನ ಏಕತ್ವವನ್ನೂ ಮಾನ್ಯ ಮಾಡಿಕೊಂಡು ವಿನಯದಿಂದಲೂ ಆತ್ಮಾರ್ಥತೆಯಿಂದಲೂ ಪ್ರಾರ್ಥಿಸಿಕೊಂಡು ಎಲ್ಲ ಕಾರ್ಯಗಳಲ್ಲೂ -- ಅದು ಕಿರಿದಾಗಿರಲಿ ಯಾ ಹಿರಿದಾಗಿರಲಿ – ಅವನ ಅಭಿಮತವನ್ನೂ ಮೆಚ್ಚುಗೆಯನ್ನೂ ಅನುಸರಿಸಿ ನಡೆಯಲು ಧೃಢ ನಿಶ್ಚಯ ಮಾಡಿಕೊಂಡು ಅವನೊಡನೆ ಸಂಪರ್ಕವನ್ನು ಸ್ಥಾಪಿಸಲು ಹವಣಿಸಬೇಕಾಗಿದೆ.

ಈ ಸತ್ಯದ ಯಥಾರ್ಥತೆಯನ್ನು ತನ್ನ ವಾಚಕರ ಮನಸ್ಸಿನಲ್ಲಿ ಸೃಷ್ಟಿಸಲು "ಯುಗರಶ್ಮಿ"ಯು ಸರ್ವ ಪ್ರಯತ್ನಗಳನ್ನು ಮಾಡುವುದೆಂಬುದರಲ್ಲಿ ನನಗೆ ಸಂಶಯವಿಲ್ಲ. ಈ ಅನುಗ್ರಹೀತ ಕಾರ್ಯದಲ್ಲಿ ಸಂಬಂಧಪಟ್ಟ ಎಲ್ಲರನ್ನೂ ದೇವನು ಅನುಗ್ರಹಿಸಲೆಂದೂ ತನ್ನ ಕೃಪೆಯನ್ನೂ ಕರುಣೆಯನ್ನೂ ಬೀರಿ ಈ ಪ್ರಯತ್ನದಲ್ಲಿ ಅವರನ್ನು ಜಯಶೀಲರನ್ನಾಗಿ ಮಾಡಲೆಂದೂ ಯುಗರಶ್ಮಿಯು ಅದರ ವಾಚಕರೆಡೆಯಲ್ಲಿ ಜನಪ್ರಿಯವಾಗಿ ಅದರ ಮುಖಾಂತರ ಅವರು ಆ ಪ್ರಕಾಶವನ್ನು ಅರಿತು ಅದಕ್ಕನುಸಾರವಾಗಿ ತಮ್ಮ ಜೀವಿತವನ್ನು ನಡೆಸಲು ಪ್ರಾರಂಭಿಸಲೆಂದೂ ನಾನು ದೇವನೊಡನೆ ಪ್ರಾರ್ಥಿಸುತ್ತೇನೆ.

27--2-1975

**('ಯುಗರಶ್ಮಿ' 1975 ಎಪ್ರಿಲ್ ಸಂಚಿಕೆಯಿಂದ)**

---

*(ಹಿಂದಿನ ಪುಟದಿಂದ)*


ಅವರು ಪುನಃ ಹೇಳುತ್ತಾರೆ: "ಈಗ ನಮ್ಮ ವಿರುದ್ಧ ಲೇಖನಿಯ ಖಡ್ಗಗಳನ್ನು ಚಲಾಯಿಸಲಾಗುತ್ತಿದೆ. ಆಕ್ಷೇಪಗಳೆಂಬ ಬಾಣಗಳ ಸುರಿಮಳೆಯಾಗುತ್ತದೆ. ನಾವು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ವ್ಯರ್ಥಗೊಳಿಸಬಾರದು. ಅಲ್ಲಾಹನ ಪರಿಶುದ್ಧ ಧರ್ಮ ಮತ್ತು ಅವನ ಪರಿಶುದ್ಧ ಪೈಗಂಬರರ(ಸ) ಪ್ರವಾದಿತ್ವವನ್ನು ಸಾಬೀತುಗೊಳಿಸಲು ನಮ್ಮ ಲೇಖನಿ ಎಂಬ ಈಟಿಗಳನ್ನು ಹರಿತಗೊಳಿಸಬೇಕು.

(ಮಲ್‌ಫೂಝಾತ್ ಸಂಪುಟ 1 ಪುಟ 150)

ಸತ್ಯವನ್ನು ಬೆಂಬಲಿಸುತ್ತಾ ಯಾರಾದರೂ ಲೇಖನಿ ಎತ್ತಿದರೆ ಮತ್ತು ಪ್ರಯತ್ನ ಮಾಡಿದರೆ ಹಝ್ರತ್ ವಾಗ್ದತ್ತ ಮಸೀಹ್(ಅ) ಬಹಳ ಮೆಚ್ಚುತ್ತಿದ್ದರು. ಅವರು ಹೀಗೆ ಹೇಳಿದರು:

"ಧರ್ಮಕ್ಕೆ ಸಹಾಯ ಮಾಡಲು ಯಾರಾದರೂ ಒಂದು ಶಬ್ದವನ್ನು ಎತ್ತಿ ನಮಗೆ ಕೊಡುವುದಾದರೆ ಅದು ನಮಗೆ ಮುತ್ತುಗಳು ಮತ್ತು ಬಂಗಾರದ ನಾಣ್ಯಗಳು ತುಂಬಿದ ಜೋಳಿಗೆಗಿಂತ ಹೆಚ್ಚು ಬೆಲೆಬಾಳುವುದಾಗಿ ನಮಗೆ ಮನವರಿಕೆಯಾಗುವುದು. ಯಾರಾದರೂ ನಾವು ಆತನನ್ನು ಪ್ರೀತಿಸಬೇಕೆಂದು ಬಯಸುವವನಾದರೆ ಮತ್ತು ಆತನ ಪರವಾಗಿ ಅಳಲಿನೊಂದಿಗೆ ನಮ್ಮ ಪ್ರಾರ್ಥನೆಗಳು ಆಕಾಶಕ್ಕೆ ಹೋಗಬೇಕೆಂದು ಬಯಸುವವನಾದರೆ ಆತನು ಧರ್ಮದ ಸೇವಕನಾಗುವ ಯೋಗ್ಯತೆ ಹೊಂದಿದ್ದಾನೆ ಎಂದು ನಮಗೆ ಧೃಢಪಡಿಸಿಕೊಡಬೇಕು." (ಮಲ್‌ಫೂಝಾತ್ ಸಂಪುಟ 1 ಪುಟ 311)

ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ– ಪತ್ರಿಕೆ ಹಝ್ರತ್ ವಾಗ್ದತ್ತ ಮಸೀಹರ(ಅ) ಆಗಮನದ ಉದ್ದೇಶಗಳನ್ನು ಈಡೇರಿಸುವಂತಹದೂ ಜನರಿಗೆ ಪ್ರಯೋಜನಕರವೂ ಆಗಲಿ. ನಿಮ್ಮನ್ನು ಮತ್ತು ಪತ್ರಿಕೆಯಲ್ಲಿ ಬರೆಯುವವರನ್ನು ಹಝ್ರತ್ ವಾಗ್ದತ್ತ ಮಸೀಹರ(ಅ) ಉತ್ತಮ ಪ್ರತೀಕ್ಷೆಗಳ ಮತ್ತು ಪ್ರಾರ್ಥನೆಗಳ ವಾರೀಸುದಾರರನ್ನಾಗಿ ಮಾಡಲಿ.




## ಮೌಲಾನ ಸಯ್ಯಿದ್
## ಮಖ್‌ದೂಮ್ ಶರೀಫ್ ಸಾಹಿಬ್
## ನಾಝಿರ್ ನಶ್ರೋ ಇಶಾಅತ್, ಖಾದಿಯಾನ್




ಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬ್, "ಯುಗರಶ್ಮಿ" ಸಂಪಾದಕ

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ಈ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಆಗಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು[ಅ] ಅಲ್ಲಾಹನು ಇಸ್ಲಾಮಿನ ಸೇವೆಗೋಸ್ಕರ ನೇಮಿಸಿರುವನು. ಅವರು ಇಸ್ಲಾಮಿಗೋಸ್ಕರ ಬೃಹತ್ತಾದ ವೈಭವಶಾಲಿ ಜಿಹಾದನ್ನು ಲೇಖನಿಯ ಮೂಲಕ ಮಾಡಿ ಇಸ್ಲಾಮಿನ ಸತ್ಯತೆ, ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಶ್ರೇಷ್ಠತೆ ಮತ್ತು ಅಲ್ಲಾಹನ ಮಹತ್ವವನ್ನು ಲೋಕದ ಮುಂದೆ ಪುನಃ ವಾಸ್ತವಿಕ ರೂಪದಲ್ಲಿ ಪ್ರಕಟಿಸಿದರು ಮತ್ತು ತಪ್ಪು ನಂಬಿಕೆಗಳನ್ನು ಹೋಗಲಾಡಿಸಿದರು. ಅವರು ಎಲ್ಲ ಧರ್ಮಗಳ ಜನರ ಮುಂದೆ ಧಾರ್ಮಿಕ ಸತ್ಯಗಳನ್ನೂ ಸೂಕ್ಷ್ಮ ಜ್ಞಾನವನ್ನೂ ಇರಿಸಿ ಅವರ ನಂಬಿಕೆಗಳನ್ನು ಮತ್ತು ಕರ್ಮಗಳನ್ನು ಸುಧಾರಣೆ ಮಾಡಿದರು. ಅವರು ಎಂತಹ ಜ್ಞಾನ ಭರಿತ ಆಧ್ಯಾತ್ಮಿಕ ಖಜಾನೆಗಳನ್ನು ತನ್ನ ಹಿಂದೆ ಬಿಟ್ಟು ಹೋದರೆಂದರೆ, ಅವುಗಳ ಮೂಲಕ ಎಲ್ಲ ಧರ್ಮದವರು ಮತ್ತು ಸಮುದಾಯದವರು ಲಾಭಪಡೆಯುತ್ತಾ ಹೋಗುವರು. ಅವರ ಜ್ಞಾನಭರಿತ ಆಧ್ಯಾತ್ಮಿಕ ಖಜಾನೆಗಳನ್ನು ಜನರಿಗೆ ತಲಪಿಸಲು ಅಹ್ಮದಿಯಾ ಖಲೀಫರ ಮಾರ್ಗದರ್ಶನದಲ್ಲಿ ಪ್ರಯತ್ನ ಜಾರಿಯಲ್ಲಿದೆ. ಅಲ್ಲಾಹನ ಅನುಗ್ರಹದಿಂದ ಡಜನುಗಟ್ಟಲೆ ಪತ್ರಿಕೆಗಳು ಮತ್ತು ಪುಸ್ತಕಗಳು ಲೋಕದ ವಿವಿಧ ಭಾಷೆಗಳಲ್ಲಿ ಪ್ರಕಟಗೊಳಿಸಲ್ಪಡುತ್ತಿವೆ ಮತ್ತು ದಿನಂಪ್ರತಿ ಅದು ವರ್ಧಿಸುತ್ತಾ ಇದೆ.

ಕರ್ನಾಟಕದಲ್ಲಿ-ಮಂಗಳೂರಿನ ಅಹ್ಮದಿಯಾ ಜಮಾಅತಿನ ವತಿಯಿಂದ "ಯುಗರಶ್ಮಿ" ಎಂಬ ಕನ್ನಡ ಪತ್ರಿಕೆ ಕಳೆದ ನಲ್ವತ್ತು ವರ್ಷಗಳಿಂದ ಸುಂದರ ಮುದ್ರಣ ಮತ್ತು ಉತ್ತಮ ಲೇಖನಗಳೊಂದಿಗೆ ಇಸ್ಲಾಮಿನ ವಿಜಯದ ರಾಜಮಾರ್ಗದಲ್ಲಿ, ಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬರು ಸಂಪಾದಕರಾಗಿ ಹಗಲು ರಾತ್ರಿ ಮಾಡುವ ನಿಷ್ಠಾವಂತ ಪರಿಶ್ರಮದ ಫಲವಾಗಿ ಅಭಿಮಾನಾರ್ಹ ಜ್ಞಾನವರ್ಧಕ ಸೇವೆ ಸಲ್ಲಿಸುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯಲ್ಲಿ ಪ್ರಕಟವಾಗುವ ಅಹ್ಮದಿಯಾ ಜಮಾಅತಿನ ಏಕ ಮಾತ್ರ ಪತ್ರಿಕೆ ಇದಾಗಿದೆ. ಈ ಪ್ರದೇಶದಲ್ಲಿ ನಿರಂತರ ಇಷ್ಟು ದೀರ್ಘಕಾಲ ಸೇವೆ ಸಲ್ಲಿಸಿದ ಏಕ ಮಾತ್ರ ಪ್ರಥಮ ಇಸ್ಲಾಮೀ ಪತ್ರಿಕೆ ಸಹ ಇದಾಗಿದೆ. ಈ ಪತ್ರಿಕೆ ಉಪದೇಶ, ತರಬೇತಿಯನ್ನಲ್ಲದೆ ಈ ಪ್ರದೇಶದಲ್ಲಿ ಧರ್ಮ ಪ್ರಚಾರದ ಬಹಳ ದೊಡ್ಡದಾದೊಂದು ಮಾರ್ಗವೂ ಆಗಿದೆ. ಈಗ ನಲ್ವತ್ತು ವರ್ಷಗಳನ್ನು ಪೂರ್ಣಗೊಳಿಸುವ ಸಂದರ್ಭದಲ್ಲಿ ಒಂದು ವಿಶೇಷಾಂಕವನ್ನು ಪ್ರಕಟಿಸಲಾಗುತ್ತಿದೆ. ಇಸ್ಲಾಮ್ ಮತ್ತು ಅಹ್ಮದಿಯ್ಯತಿನ ಸೇವೆಯನ್ನು ಇನ್ನಷ್ಟು ಹೆಚ್ಚು ಮಾಡುವ ಭಾಗ್ಯ ಅದಕ್ಕೆ ಲಭಿಸಲಿ. ಅದಕ್ಕೋಸ್ಕರ ನಿಷ್ಠಾಪೂರ್ಣವಾಗಿ ಕಾರ್ಯ ಪ್ರವೃತ್ತರಾಗುವವರಿಗೆ ಅಲ್ಲಾಹನು ತನ್ನ ಅನುಗ್ರಹದಿಂದ ಬೃಹತ್ತಾದ ಪ್ರತಿಫಲ ನೀಡಲಿ ಮತ್ತು ವರದಾನಗಳನ್ನು ದಯಪಾಲಿಸಲಿ.




## ಮೌಲಾನ ಮುಹಮ್ಮದ್ ನಸೀಮ್ ಖಾನ್ ಸಾಹಿಬ್
## ನಾಝಿರ್ ಉಮೂರೆ ಆಮ್ಮ, ಖಾದಿಯಾನ್




ಮಾನ್ಯ ಸಂಪಾದಕರು, "ಯುಗರಶ್ಮಿ" ಪತ್ರಿಕೆ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು

"ಯುಗರಶ್ಮಿ" ಪತ್ರಿಕೆಗೆ ಸಂಬಂಧಿಸಿ ತಮ್ಮ ಪತ್ರ ತಲಪಿದೆ. ನಲ್ವತ್ತು ವರ್ಷಗಳಿಂದ ಈ ಪತ್ರಿಕೆಯನ್ನು ನೀವು ಪ್ರಕಟಿಸುತ್ತಿರುವಿರಿ ಎಂದು ಬರೆದಿದ್ದೀರಿ. ಅದು ಕರ್ನಾಟಕ ಮತ್ತು ಕರ್ನಾಟಕದ ಹೊರಗೆ ಸಹ ಪ್ರಸಾರಣೆಗೊಳ್ಳುತ್ತಿದೆ. ಅಲ್ಲಾಹನ ಅನುಗ್ರಹದಿಂದ ನೀವು ಮಂಗಳೂರಿನ ಅಹ್ಮದಿಯಾ ಜಮಾಅತಿನ ಅಧ್ಯಕ್ಷರಾಗಿಯೂ ಸೇವೆಸಲ್ಲಿಸುತ್ತಿರುವಿರಿ. ಅಲ್ಲಾಹನು ನಿಮ್ಮ ಪ್ರಯತ್ನಗಳನ್ನು ಅಂಗೀಕರಿಸಲಿ; ಅತ್ಯುತ್ತಮ ರೀತಿಯಲ್ಲಿ ಧರ್ಮಕ್ಕೆ ಸೇವೆ ಸಲ್ಲಿಸುವ ಭಾಗ್ಯ ನೀಡಲಿ – ಆಮೀನ್.

ಈ ಪತ್ರಿಕೆ ನಲ್ವತ್ತು ವರ್ಷ ಪೂರ್ಣಗೊಳಿಸಿದ ಪ್ರಯುಕ್ತ ವಿಶೇಷಾಂಕ ಪ್ರಕಟಿಸಲಾಗುವುದಾಗಿ ಬರೆದಿರುವಿರಿ. ಅದಕ್ಕೋಸ್ಕರ ಸಂದೇಶ ಕಳುಹಿಸಲು ಬರೆದಿರುವಿರಿ. ನಾನು "ಯುಗರಶ್ಮಿ"ಯ ಎಲ್ಲ ಓದುಗರೊಂದಿಗೆ ವಿನಂತಿಸಿಕೊಳ್ಳುವುದೇನೆಂದರೆ, ಅಲ್ಲಾಹನು ನಮಗೆ ಖಿಲಾಫತ್ ಎಂಬ ಅನುಗ್ರಹ ದಯಪಾಲಿಸಿದ್ದಾನೆ. ನಾವು ಅದರ ಬಗ್ಗೆ ಆದರಭಾವ ಹೊಂದಬೇಕು. ಆಯಾಕಾಲದ ಖಲೀಫರ ಉಪದೇಶಗಳ ಪ್ರಕಾರ ನಾವು ಜೀವಿಸಲು ಪ್ರಯತ್ನಿಸಬೇಕು. ಯಾರು ಈ ಅನುಗ್ರಹದಿಂದ ವಂಚಿತರಾಗಿರುವರೋ, ಅವರಿಗೆ ಈ ಅನುಗ್ರಹದ ಮಹತ್ವವನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸಬೇಕು.




**ಮೌಲಾನ ಮುನೀರ್ ಅಹ್ಮದ್ ಖಾದಿಮ್ ಸಾಹಿಬ್**
**ಅಡಿಷನಲ್ ನಾಝಿರ್,**
**ಇಸ್ಲಾಹೋ ಇರ್ಶಾದ್, ದಕ್ಷಿಣಭಾರತ**




ಮಾನ್ಯ ಸಂಪಾದಕರು, "ಯುಗರಶ್ಮಿ" ಪತ್ರಿಕೆ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ನೀವು ಆರೋಗ್ಯದಿಂದಿರಲು ಅಲ್ಲಾಹನನ್ನು ಪ್ರಾರ್ಥಿಸುತ್ತೇನೆ. "ಯುಗರಶ್ಮಿ" ಪತ್ರಿಕೆ ನಲ್ವತ್ತು ವರ್ಷಗಳು ಪೂರ್ಣಗೊಂಡಾಗ ಒಂದು ವಿಶೇಷ ಸಂಚಿಕೆಯನ್ನು ನೀವು ಪ್ರಕಟಿಸುವಿರಿ ಎಂದು ತಿಳಿದು ಸಂತೋಷವಾಯಿತು. ಅಲ್ಲಾಹನು ನಿಮಗೆ ಆ ಭಾಗ್ಯವನ್ನು ನೀಡಲಿ. ಅಲ್ಲಾಹನು ತನ್ನ ಅನುಗ್ರಹದಿಂದ ನಿಮ್ಮ ಈ ಸೇವೆಯನ್ನು ಸ್ವೀಕರಿಸಲಿ -- ಆಮೀನ್.

"ಯುಗರಶ್ಮಿ" ಪತ್ರಿಕೆ ಅಲ್ಲಾಹನ ಅನುಗ್ರಹದಿಂದ ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ತಬ್ಲೀಗ್ (ಪ್ರಚಾರ) ಮತ್ತು ತರಬೇತಿಯ ಒಳ್ಳೆಯ ಕೆಲಸ ಮಾಡಿದೆ. ಅದಕ್ಕೋಸ್ಕರ ನೀವು ಪ್ರಶಂಸಾರ್ಹರಾಗಿದ್ದೀರಿ. ನೀವು ಇನ್ನು ಮುಂದೆ ಸಹ ಹೆಚ್ಚು ಹೆಚ್ಚಾಗಿ ಧಾರ್ಮಿಕ ಸೇವೆ ಮಾಡುವ ಭಾಗ್ಯವನ್ನು ಅಲ್ಲಾಹನು ನೀಡಲಿ – ಆಮೀನ್.




**ಮೌಲಾನ ಝುಹೀರ್ ಅಹ್ಮದ್ ಖಾದಿಮ್ ಸಾಹಿಬ್**
**ಅಡಿಷನಲ್ ನಾಝಿರ್,**
**ದಅ್‌ವತ್ ಇಲಲ್ಲಾಹ್, ದಕ್ಷಿಣಭಾರತ**



ಮಾನ್ಯ ಸಂಪಾದಕರು, "ಯುಗರಶ್ಮಿ" ತ್ರೈಮಾಸಿಕ ಅವರಿಗೆ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ನೀವು ಆರೋಗ್ಯದಿಂದಿರಲು ಅಲ್ಲಾಹನು ಅನುಗ್ರಹಿಸಲಿ – ಆಮೀನ್.


ನಿಮ್ಮ ಪತ್ರಿಕೆ ಕಳೆದ ನಲ್ವತ್ತು ವರ್ಷಗಳಿಂದ ಪ್ರಕಟವಾಗುತ್ತಿದೆ ಎಂದು ತಿಳಿದು ಅಪರಿಮಿತ ಸಂತೋಷವಾಯಿತು. ಅಲ್‌ಹಮ್‌ದು ಲಿಲ್ಲಾಹ್. ಈಗ ಈ ಪತ್ರಿಕೆಯ ನಲ್ವತ್ತನೇ ವಾರ್ಷಿಕಾಂಕ ಪ್ರಕಟಿಸಲು ನಿಮಗೆ ಅಲ್ಲಾಹನ ಅನುಗ್ರಹದಿಂದ ಸಾಧ್ಯವಾಗುತ್ತಿದೆ. ಈ ಸಂದರ್ಭದಲ್ಲಿ ನಾನು ಸಂದೇಶವನ್ನು ಕಳುಹಿಸಬೇಕೆಂದು ನೀವು ಬರೆದಿರುವಿರಿ.

ಜಮಾಅತ್ ಪ್ರಕಟಿಸುವ ಪತ್ರಿಕೆಗಳಿಗೆ ಎರಡು ಮುಖ್ಯ ಮೂಲಭೂತ ಉದ್ದೇಶಗಳಿರುತ್ತವೆ:

1. ಇಂದಿನ ಕಾಲದಲ್ಲಿ ಹಬ್ಬಿರುವ ಕೆಡುಕುಗಳಿಂದಲೂ ಅಶ್ಲೀಲತೆಯಿಂದಲೂ ಜಮಾಅತನ್ನು ರಕ್ಷಿಸಿ ಅಹ್ಮದಿಯರು ಈ ಕಾಲದ ಇಮಾಮರಾದ ಹಝ್ರತ್ ವಾಗ್ದತ್ತ ಮಸೀಹ್‌ರ(ಅ) ಉಪದೇಶಗಳನ್ನು ಅನುಸರಿಸಿ ವರ್ತಿಸುವಂತೆ ಮಾಡಲು ಪ್ರಯತ್ನಿಸುವುದು. ಎಲ್ಲಕ್ಕಿಂತ ಮುಖ್ಯವಾದ ಮಾರ್ಗ ಹಝ್ರತ್ ಖಲೀಫತುಲ್ ಮಸೀಹರ ಖುತ್‌ಬಗಳು, ಭಾಷಣಗಳು ಮತ್ತು M.T.A. ಮೊದಲಾದವುಗಳೊಂದಿಗೆ ಜನರನ್ನು ಜೋಡಿಸುವುದಾಗಿದೆ.

2. ಜಮಾಅತ್ ಪ್ರಕಟಿಸುವ ಪತ್ರಿಕೆಯ ದ್ವಿತೀಯ ಮುಖ್ಯ ಮೂಲಭೂತ ಉದ್ದೇಶ ಅದರ ಮೂಲಕ ದೇವನ ಕಡೆಗೆ ಆಹ್ವಾನಿಸುವ ಕಡ್ಡಾಯ ಕರ್ತವ್ಯವನ್ನು ಈಡೇರಿಸುವುದಾಗಿದೆ ಮತ್ತು ಜಮಾಅತಿನ ಜನರು ಧರ್ಮಪ್ರಚಾರದ ಬಗ್ಗೆ ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಳ್ಳುವಂತಹ ಲೇಖನಗಳನ್ನು ಪ್ರಕಟಿಸಬೇಕು.

ಅಲ್ಲಾಹನು ಈ ನಿಟ್ಟಿನಲ್ಲಿ ತಮಗೆ ಸೇವೆ ಸಲ್ಲಿಸುವ ಭಾಗ್ಯ ದಯಪಾಲಿಸಲಿ – ಆಮೀನ್.






## ಮೌಲಾನ ಖುರ್ಶೀದ್ ಅಹ್ಮದ್ ಅನ್ವರ್ ಸಾಹಿಬ್
## ವಕೀಲುಲ್ ಮಾಲ್ ತಹ್‌ರೀಕ್ ಜದೀದ್, ಖಾದಿಯಾನ್

ಮಾನ್ಯ ಸಂಪಾದಕರು, "ಯುಗರಶ್ಮಿ" (ಕನ್ನಡ) ಮಂಗಳೂರು, ಕರ್ನಾಟಕ

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

"ಯುಗರಶ್ಮಿ" ಪತ್ರಿಕೆಯು ತನ್ನ ಪ್ರಕಟಣೆಯ ನಲ್ವತ್ತು ವರ್ಷ ಪೂರ್ಣಗೊಳಿಸಿದ ಸಂತೋಷದ ಸಂದರ್ಭದಲ್ಲಿ ಪ್ರಕಟಗೊಳಿಸಲಾಗುವ ವಿಶೇಷಾಂಕಕ್ಕೆ ನನ್ನ ಸಂದೇಶವನ್ನು ಅಪೇಕ್ಷಿಸುವ ತಮ್ಮ ಪ್ರೀತಿಯ ಪತ್ರ ತಲಪಿತು. ಜಝಾಕುಮುಲ್ಲಾಹು ಅಹ್‌ಸನಲ್ ಜಝಾ (ಅಲ್ಲಾಹನು ತಮಗೆ ಅತ್ಯುತ್ತಮ ಪ್ರತಿಫಲ ನೀಡಲಿ.)

ಪತ್ರಿಕೆಗಳು ಸಂಘ, ಸಂಸ್ಥೆಗಳ ವಕಾರರಾಗಿರುತ್ತವೆ. ಈ ನಿಟ್ಟಿನಲ್ಲಿ ನೀವು ಅದೃಷ್ಟಶಾಲಿಯಾಗಿದ್ದೀರಿ. ಹಝ್ರತ್ ವಾಗ್ದತ್ತ ಮಸೀಹ್(ಅ) ಸ್ಥಾಪಿಸಿದ ಆಧ್ಯಾತ್ಮಿಕ ಜಮಾಅತನ್ನು ಪ್ರತಿನಿಧೀಕರಿಸಿ ಕಳೆದ ನಲ್ವತ್ತು ವರ್ಷಗಳಿಂದ ಅಹ್ಮದಿಯಾ ಜಮಾಅತಿನ ಕನ್ನಡ ಭಾಷೆಯ ವಕ್ತಾರನಾಗಿರುವ "ಯುಗರಶ್ಮಿ"ಯನ್ನು ಪ್ರಕಟಿಸುವ ಭಾಗ್ಯ ನೀವು ಪಡೆದಿರುವಿರಿ.

ಅಲ್ಲಾಹುಮ್ಮ ಝಿದ್, ಫಝಿದ್-- ಓ ಅಲ್ಲಾಹ್ ನೀನು ಅನುಗ್ರಹ ವರ್ಧಿಸುತ್ತಾ ಇರು.

ಲೋಕದ ಅಂತಿಮ ಕಾಲಘಟ್ಟದ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

ತೂಮಿನೂನ ಬಿಲ್ಲಾಹಿ ವ ರಸೂಲಿಹೀ ವ ತುಜಾಹಿದೂನ ಫೀ ಸಬೀಲಿಲ್ಲಾಹಿ ಬಿಅಮ್‌ವಾಲಿಕುಮ್ ವ

ಅನ್‌ಫುಸಿಕುಮ್ ದ್ಹಾಲಿಕುಮ್ ಖೈರುಲ್ಲಕುಮ್ ಇನ್ ಕುನ್‌ತುಮ್ ತಅ್‌ಲಮೂನ್.

"ನೀವು ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ನಂಬುತ್ತಿರುವಿರಿ ಹಾಗೂ ನಿಮ್ಮ ಸಂಪತ್ತಿನಿಂದಲೂ ನಿಮ್ಮ ದೇಹದಿಂದಲೂ ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುತ್ತಿರುವಿರಿ. ನೀವು ಅದನ್ನು ಮನವರಿಕೆ ಮಾಡಿಕೊಂಡರೆ ಅದು ನಿಮಗೆ ಗುಣಕರವಾಗಿದೆ." (ಪವಿತ್ರ ಖುರ್‌ಆನ್ 61:12)

ಇಸ್ಲಾಮ್ ಧರ್ಮದ ಸೇವೆಗೋಸ್ಕರ ಪ್ರಾರಂಭಿಸಲಾದ ಈ ಜಿಹಾದನ್ನು ಹಝ್ರತ್ ವಾಗ್ದತ್ತ ಮಸೀಹ್(ಅ) ಖಡ್ಗಬಲದಿಂದಲ್ಲ, ಲೇಖನಿ ಬಲದಿಂದ ಮಾಡಿ ತೋರಿಸಿದರು. ತನ್ನ ಲೇಖನಿಯ ಶಕ್ತಿ ಪ್ರತಾಪಗಳನ್ನು ಹೀಗೆ ವಿವರಿಸಿದರು:

ಸಫೆ ದುಶ್ಮನ್ ಕೋ ಕಿಯಾ ಹಮ್‌ನೆ ಬಹುಜ್ಜತ್ ಪಾಮಾಲ್


ಸೈಫ್ ಕಾ ಕಾಮ್ ಖಲಮ್ ಸೆ ಹೈ ದಿಖಾಯಾ ಹಮ್‌ನೆ

ಶತ್ರುಗಳ ಸಾಲುಗಳನ್ನು ನಾವು ಸಾಕ್ಷ್ಯಾಧಾರಗಳಿಂದ ಧ್ವಂಸಗೊಳಿಸಿದೆವು.

ಖಡ್ಗದ ಕೆಲಸವನ್ನು ಲೇಖನಿಯಿಂದ ಮಾಡಿ ತೋರಿಸಿದೆವು.

ಈ ವಾಸ್ತವಿಕತೆಯನ್ನು ಅವರ ಶತ್ರುಗಳು ಸಹ ಅಂಗೀಕರಿಸಬೇಕಾಯಿತು. ಅಹ್ಮದಿಯಾ ಜಮಾಅತಿನ ಕಠಿಣ ಶತ್ರುವಾಗಿದ್ದ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಹಝ್ರತ್ ವಾಗ್ದತ್ತ ಮಸೀಹ್‌ರ(ಅ) ವೈಭವಶಾಲಿ ಗ್ರಂಥದ ಬಗ್ಗೆ ಅಭಿಪ್ರಾಯ ಸೂಚಿಸುತ್ತಾ ಹೀಗೆ ಹೇಳಿದರು: "ಈಗ ನಾವು ನಮ್ಮ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಮತ್ತು ಅತಿಶಯೋಕ್ತಿ ರಹಿತವಾಗಿ ಪ್ರಕಟಿಸುತ್ತೇವೆ. ಇಂದಿನ ಕಾಲದಲ್ಲಿ ಇಂದಿನ ಪರಿಸ್ಥಿತಿಯ ಕಡೆಗೆ ದೃಷ್ಟಿಸಿದರೆ, ನಮ್ಮ ಅಭಿಪ್ರಾಯದಲ್ಲಿ ಈ ಗ್ರಂಥ ಹೇಗಿದೆ ಎಂದರೆ ಇಂತಹ ಗ್ರಂಥ ಇಷ್ಟರವರೆಗೆ ಎಂದೂ ಬರೆಯಲ್ಪಟ್ಟಿಲ್ಲ.... ಇದರ ಲೇಖಕ ಇಸ್ಲಾಮ್‌ಗೋಸ್ಕರ, ಸಾಂಪತ್ತಿಕ, ಶಾರೀರಿಕ, ಲೇಖನಿ ಮತ್ತು ನಾಲಗೆ ಮೂಲಕ ಈಗಲೂ ಸಹಾಯ ನೀಡುವುದರಲ್ಲಿ ಎಷ್ಟು ಸ್ಥಿರಚಿತ್ತರಾಗಿ ವರ್ತಿಸುತ್ತಿದ್ದಾರೆಂದರೆ ಇಂತಹ ಉದಾಹರಣೆ ಹಿಂದಿನ ಕಾಲದ ಮುಸ್ಲಿಮರಲ್ಲಿ ಬಹಳ ಕಡಿಮೆ ಕಂಡುಬರುತ್ತಿದೆ." (ಇಶಾಅತುಸ್ಸುನ್ನ)

ಹಿಂದೂಸ್ಥಾನದ ಪ್ರಸಿದ್ಧ ಪತ್ರಿಕೆಯಾಗಿದ್ದ ಕರ್ಝುನ್ ಗಝೆಟ್ ಸಂಪಾದಕರಾಗಿದ್ದ ಮಿರ್ಝಾ ಹೈರತ್ ದೆಹ್ಲವಿ ಹಝ್ರತ್ ವಾಗ್ದತ್ತ ಮಸೀಹ್(ಅ) ಇಸ್ಲಾಮಿಗೆ ಲೇಖನಿ ಮೂಲಕ ಮಾಡಿದ ಸೇವೆ ಬಗ್ಗೆ ಹೀಗೆ ಹೇಳುತ್ತಾರೆ:






**ಮೌಲಾನ ಮುಹಮ್ಮದ್ ಕಲೀಮ್ ಖಾನ್ ಸಾಹಿಬ್**
**ಮುಬಲ್ಲಿಗ್ ಇನ್‌ಚಾರ್ಜ್ ಕರ್ನಾಟಕ, ಬೆಂಗಳೂರು**

ಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬ್, ಸಂಪಾದಕ, "ಯುಗರಶ್ಮಿ"

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ನೀವು ಕ್ಷೇಮದಿಂದಿರಬಹುದಾಗಿ ಗ್ರಹಿಸುತ್ತೇನೆ – ಆಮೀನ್.

ಈ ವರ್ಷ "ಯುಗರಶ್ಮಿ" ಪತ್ರಿಕೆ 40 ವರ್ಷಗಳನ್ನು ಪೂರ್ಣಗೊಳಿಸುತ್ತಿದೆ ಎಂದು ತಿಳಿದು ಸಂತೋಷವಾಯಿತು. ಅಲ್‌ಹಮ್ದು ಲಿಲ್ಲಾಹ್ .

ನನಗೆ ಕನ್ನಡ ಭಾಷೆ ತಿಳಿಯದು. ಆದರೆ ಯಾರಿಗೆಲ್ಲ ನಾನು ಈ ಪತ್ರಿಕೆ ನೀಡಿದೆನೋ ಅವರೆಲ್ಲ ಇದನ್ನು ಪ್ರಶಂಸಿದ್ದಾರೆ. ನೀವು ನಲ್ವತ್ತು ವರ್ಷಗಳಿಂದ ಈ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿರುವುದು ನಿಮಗೆ ದೊರೆತ ಭಾಗ್ಯವಾಗಿದೆ. ಕಳೆದ ಐವತ್ತು ವರ್ಷಗಳಿಂದ ವಿವಿಧ ಪುಸ್ತಕಗಳನ್ನು ಭಾಷಾಂತರ ಮಾಡುವ ಭಾಗ್ಯ ಸಹ ಅಲ್ಲಾಹನು ತಮಗೆ ನೀಡಿದ್ದಾನೆ. ಎಲ್ಲದಕ್ಕಿಂತಲೂ ಮಿಗಿಲಾಗಿ ಪವಿತ್ರ ಖುರ್‌ಆನಿನ ಕನ್ನಡ ಭಾಷಾಂತರಕ್ಕೆ ಸಂಬಂಧಿಸಿ ನಿಮ್ಮ ಸೇವೆ ಪ್ರಶಂಸಾರ್ಹವಾಗಿದೆ. ಅಲ್ಲಾಹನು ತಮ್ಮ ಆಯುಸ್ಸಿನಲ್ಲಿ ಅನುಗ್ರಹ ದಯಪಾಲಿಸಲಿ ಮತ್ತು ನಿಮ್ಮ ಸೇವೆಗಳನ್ನು ಸ್ವೀಕರಿಸಲಿ – ಆಮೀನ್. "ಯುಗರಶ್ಮಿ" ಪತ್ರಿಕೆ ಕರ್ನಾಟಕದ ಪ್ರಾದೇಶಿಕ ಭಾಷೆಯಲ್ಲಿ ಅಹ್ಮದಿಯ್ಯತಿನ ಪ್ರಚಾರವನ್ನು ಬಹಳ ಉತ್ಸಾಹಭರಿತವಾಗಿ ಮಾಡುತ್ತಿದೆ. ನಾವು ಬುಕ್‌ಸ್ಟಾಲ್‌ಗಳಲ್ಲಿ ಅದರ ಪ್ರತಿಗಳನ್ನು ಇರಿಸಿದಾಗ ಸಂದರ್ಶಕರು ಅದನ್ನು ಉತ್ಸಾಹದಿಂದ ಓದುತ್ತಾರೆ. ಅದರ ಮೂಲಕ ಸಾವಿರಾರು ಜನರಿಗೆ ಅಹ್ಮದಿಯ್ಯತಿನ ಸಂದೇಶ ತಲಪಿದೆ. ನೀವು ಕಳೆದ ನಲ್ವತ್ತು ವರ್ಷಗಳ ಕಾಲ ನಿಮ್ಮ ವೈಯಕ್ತಿಕ ಪರಿಶ್ರಮಗಳ ಮೂಲಕ ಈ ಪತ್ರಿಕೆಯನ್ನು ಪ್ರಕಟಿಸುತ್ತಾ ಇರುವುದಕ್ಕೆ ತಮಗೆ ಶುಭಾಯಗಳನ್ನು ಕೋರುತ್ತೇನೆ. ಅಲ್ಲಾಹನು ನಿಮ್ಮ ಜೊತೆಗಿರುವವನಾಗಲಿ – ಆಮೀನ್.

---

*(ಹಿಂದಿನ ಪುಟದಿಂದ)*

"ದಿವಂಗತ ಮಹಾನುಭಾವರು ಪಂಜಾಬಿ ಆಗಿದ್ದರೂ ಅವರ ಲೇಖನಿಯಲ್ಲಿ ಎಂತಹ ಶಕ್ತಿ ಇತ್ತೆಂದರೆ ಈಗ ಪಂಜಾಬ್‌ನಲ್ಲಿ ಮಾತ್ರವಲ್ಲ ಹಿಂದೂಸ್ಥಾನದಲ್ಲಿ ಎಲ್ಲಿಯೂ ಅಷ್ಟು ಶಕ್ತಿಯುತವಾಗಿ ಬರೆಯಬಲ್ಲವನು ಯಾರೂ ಇಲ್ಲ..... ಅವರ ಶಕ್ತಿಶಾಲಿ ಸಾಹಿತ್ಯ ತನ್ನ ವೈಭವದಲ್ಲಿ ಅಪ್ರತಿಮವಾಗಿತ್ತು. ಅವರ ಕೆಲವು ಬರಹಗಳನ್ನು ಓದುವಾಗ ವಾಸ್ತವಿಕವಾಗಿ ಒಂದು ರೀತಿಯ ಪರವಶತೆ ಉಂಟಾಗುತ್ತದೆ." (ಕರ್ಝನ್ ಗಝಟ್)

ಹಝ್ರತ್ ವಾಗ್ದತ್ತ ಮಸೀಹ್(ಅ) ಎಷ್ಟು ಉತ್ಸಾಹಭರಿತರಾಗಿ ಲೇಖನಿ ಮೂಲಕದ ಈ ಬೃಹತ್ತಾದ ಜಿಹಾದ್ ಮಾಡಿದರೋ, ಅದು ಪ್ರತಿಯೊಬ್ಬ ಅಹ್ಮದಿಯಿಂದ ಆವಶ್ಯಪಡುವುದೇನೆಂದರೆ, ನಾವು ಸಹ ಈ ಕ್ಷೇತ್ರದಲ್ಲಿ ಲೇಖನಿ ಎಂಬ ಆಯುಧದೊಂದಿಗೆ ಹಝ್ರತ್ ವಾಗ್ದತ್ತ ಮಸೀಹ್‌ರ(ಅ) ನೇತೃತ್ವದಲ್ಲಿ ಸಾಲುಗಟ್ಟಿ ಸತ್ಯದ ಶತ್ರುಗಳ ವಿರುದ್ಧ ಹೋರಾಡಬೇಕು. ಪ್ರಿಯ ನೇತಾರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ನಮಗೆ ಇದರ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಈ ಜಿಹಾದೆ ಕಬೀರ್‌ನಲ್ಲಿ (ದೊಡ್ಡ ಜಿಹಾದ್‌ನಲ್ಲಿ) "ಯುಗರಶ್ಮಿ" ಪತ್ರಿಕೆಯು ಒಬ್ಬ ಮುಜಾಹಿದ್ (ಧರ್ಮಯೋಧ)ನ ಹಾಗಿದೆ. ಸಾಂಪತ್ತಿಕವಾಗಿ ಮತ್ತು ಇತರ ವಿಧಾನಗಳಲ್ಲಿ ಜಮಾಅತಿನ ಪತ್ರಿಕೆಗಳಿಗೆ ಸಹಾಯ ಮಾಡುವ ಪುರುಷರು ಮತ್ತು ಮಹಿಳೆಯರು ಹಝ್ರತ್ ವಾಗ್ದತ್ತ ಮಸೀಹರ(ಅ) ಆಗಮನದ ಉದ್ದೇಶವನ್ನು ಈಡೇರಿಸಲು ಪ್ರಯತ್ನ ಮಾಡುವವರಾಗಿದ್ದಾರೆ. ಅವರೆಲ್ಲರಿಗೂ ಅಲ್ಲಾಹನು ಅತ್ಯುತ್ತಮ ಪ್ರತಿಫಲ ನೀಡಲಿ.

ಸಂತೋಷದ ಈ ಸಂದರ್ಭದಲ್ಲಿ ವಕಾಲತ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್, ಸಂಪಾದಕರಾದ ನಿಮಗೂ ನಿಮಗೆ ಸಹಾಯಕರಾಗಿರುವ ಸ್ನೇಹಿತರಿಗೂ ನಿಮ್ಮ ಸೇವಾನಿಷ್ಠೆಗೆ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತದೆ.

ಈ ಪತ್ರಿಕೆ ಇಸ್ಲಾಮ್ ಮತ್ತು ಅಹ್ಮದಿಯತ್‌ಗೆ ಹೆಚ್ಚು ಹೆಚ್ಚಾಗಿ ಸೇವೆ ಸಲ್ಲಿಸುವ ಮತ್ತು ಅದು ಅಲ್ಲಾಹನಿಂದ ಸ್ವೀಕರಿಸಲ್ಪಡುವ ಭಾಗ್ಯ ದೊರಕಲಿ ಎಂದು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇವೆ – ಆಮೀನ್.






**ಮೌಲಾನ ಇನಾಮುಲ್ಲಾಹ್ ಸಾಹಿಬ್**
**ಇನ್‌ಚಾರ್ಜ್ ಕನ್ನಡ ಡೆಸ್ಕ್, ಖಾದಿಯಾನ್**

"ಯುಗರಶ್ಮಿ"ಯ ಸನ್ಮಾನ್ಯ ಸಂಪಾದಕರೆ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

"ಯುಗರಶ್ಮಿ" ತನ್ನ ನಲ್ವತ್ತನೇ ವಯಸ್ಸು ಪೂರ್ತಿಗೊಳಿಸಿದ ಸಂದರ್ಭದಲ್ಲಿ ಒಂದು ವಿಶೇಷಾಂಕವನ್ನು ಪ್ರಕಟಿಸುವ ಸೌಭಾಗ್ಯವನ್ನು ನೀವು ಗಳಿಸುತ್ತಿರುವಿರಿ ಎಂದು ತಿಳಿದಾಗ ಅಲ್ಲಾಹನು ತನ್ನ ರಬ್ಬ್ (ಹಂತ ಹಂತವಾಗಿ ಬೆಳೆಸಿ ಪರಿಪೋಷಿಸುವವನು) ಎಂಬ ಗುಣವಿಶೇಷವನ್ನು ಈ ತ್ರೈಮಾಸಿಕದ ಮೇಲೆ ಎಷ್ಟು ಉತ್ತಮ ರೀತಿಯಲ್ಲಿ ಪ್ರಕಟಿಸಿದ್ದಾನೆ ಎಂದು ಯೋಚಿಸಿ ದೇವನಿಗೆ ಕೃತಜ್ಞತೆ ಅರ್ಪಿಸಿದೆ. (ಅಲ್‌ಹಮ್ದುಲಿಲ್ಲಾಹ್). ಅಲ್ಲಾಹನು ಈ ಕಾರ್ಯೋದ್ಯಮವನ್ನು ಮತ್ತು ಇದರಲ್ಲಿ ಕಾರ್ಯೋನ್ಮುಖರಾಗಿರುವ ಎಲ್ಲರ ಸೇವೆಯನ್ನು ಸ್ವೀಕರಿಸಲಿ. ಅಂಧಕಾರ ಕವಿದಿರುವ ಈ ಯುಗವನ್ನು ಆಧ್ಯಾತ್ಮಿಕ ರಶ್ಮಿಯಿಂದ ಬೆಳಗಿಸಿ ಜನ ಹೃದಯಗಳಲ್ಲಿ ನವಚೈತನ್ಯ ತುಂಬುವ ಉದ್ಯಮದಲ್ಲಿ "ಯುಗರಶ್ಮಿ" ಯಶಸ್ಸು ಗಳಿಸಲಿ. ಆಮೀನ್.


ಅಹ್ಮದಿಯಾ ಜಮಾಅತಿನಲ್ಲಿ ಇದ್ದುಕೊಂಡು ಹಝ್ರತ್ ವಾಗ್ದತ್ತ ಮಸೀಹರ[ಅ] ಗ್ರಂಥಗಳ ಮತ್ತು ಜಮಾಅತಿನ ಇತರ ಪುಸ್ತಕಗಳ ಅಧ್ಯಯನ ಮಾಡದವರ ಉದಾಹರಣೆ, ಅತಿಮನೋಹರವಾದ ಒಂದು ಕಟ್ಟಡವನ್ನು ಪ್ರವೇಶಿಸಿ ಕಣ್ಣು ಮುಚ್ಚುವ ವ್ಯಕ್ತಿಯ ಹಾಗೆ ಆಗಿದೆ ಎಂದು ಅಹ್ಮದಿಯಾ ಜಮಾಅತಿನ ಎರಡನೇ ಖಲೀಫರು ಹೇಳಿದ್ದರು. ಈ ನಿಟ್ಟಿನಲ್ಲಿ ಸಹ ಈ ಪತ್ರಿಕೆಯ ಕೊಡುಗೆ ಶ್ಲಾಘನೀಯವಾದುದಾಗಿದೆ. ಹಝ್ರತ್ ವಾಗ್ದತ್ತ ಮಸೀಹ್[ಅ] ಮತ್ತು ಗೌರವಾನ್ವಿತ ಖಲೀಫರ ಗ್ರಂಥಗಳಿಂದ ಅನುಗ್ರಹೀತ ನಿರ್ದೇಶನಗಳ ಭಾಷಾಂತರವನ್ನು ಕನ್ನಡಿಗರಿಗೆ ಒದಗಿಸುತ್ತಿದೆ. ಇದು ಈ ಪತ್ರಿಕೆಗೆ ಮುಂದೆಯೂ ಭೂಷಣವಾಗಲಿ. ಆಮೀನ್.

ಕೊನೆಯದಾಗಿ, "ಯುಗರಶ್ಮಿ" ಸಂಪಾದಕರಿಗೂ ಪತ್ರಿಕೆಯ ಕೆಲಸದಲ್ಲಿ ಸಹಾಯಕರಾಗಿರುವವರಿಗೂ ಈ ವಿಶೇಷಾಂಕದ ಪ್ರಕಟನೆಯ ಬಗ್ಗೆ ಶುಭಾಶಯಗಳನ್ನು ಕೋರುತ್ತೇನೆ. ಅಲ್ಲಾಹನು ಈ ಪತ್ರಿಕೆಯನ್ನು ಉತ್ತಮ ರೀತಿಯಲ್ಲಿ ಪ್ರಕಟಿಸುವಂತೆ ಮಾಡಲಿ ಮತ್ತು ಇದರ ಮೂಲಕ ಅನೇಕರಿಗೆ ಸನ್ಮಾರ್ಗವನ್ನು ದಯಪಾಲಿಸಲಿ. ಆಮೀನ್.

# Love for All
# Hatered for None

# ಎಲ್ಲರೊಂದಿಗೂ ಪ್ರೀತಿ
# ಯಾರಲ್ಲೂ ದ್ವೇಷವಿಲ್ಲ

**ಸಂಪಾದಕೀಯ**



# "ಯುಗರಶ್ಮಿ"ಗೆ 40 ವರ್ಷ

1975 ಎಪ್ರಿಲ್ ಮಾಸದಲ್ಲಿ ಪ್ರಥಮ ಸಂಚಿಕೆಯಾಗಿ ಹೊರಬಂದ "ಯುಗರಶ್ಮಿ"ಗೆ 40ನೇ ಹರೆಯ ತುಂಬಿದೆ. ಈ ಶುಭ ಸಂದರ್ಭದಲ್ಲಿ ನಾವು ಸರ್ವಶಕ್ತನಾದ ಅಲ್ಲಾಹನಿಗೆ ಕೋಟಿ ಕೋಟಿ ನಮನಗಳನ್ನು ಸಲ್ಲಿಸುತ್ತೇವೆ. ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

ಇಸ್ಲಾಮೀ ತತ್ವಗಳನ್ನು ಪ್ರತಿಪಾದಿಸುವ ಕನ್ನಡ ಪತ್ರಿಕೆಗಳ ಪೈಕಿ 40 ವರ್ಷಗಳನ್ನು ಪೂರ್ಣಗೊಳಿಸಿದ ಪ್ರಥಮ ಪತ್ರಿಕೆ "ಯುಗರಶ್ಮಿ" ಎಂದು ಹೇಳಲು ನಾವು ಅಭಿಮಾನಪಡುತ್ತೇವೆ.

"ಇಸ್ಲಾಂ" ಶಾಂತಿ, ಸಮಾಧಾನ, ಸಹೋದರತೆ, ಅಹಿಂಸೆಯನ್ನು ಪ್ರತಿಪಾದಿಸುವ ಧರ್ಮವಾದರೂ ಇಂದು "ಇಸ್ಲಾಂ" ಎಂದರೆ ಅಶಾಂತಿ, ದ್ವೇಷ, ಭಯೋತ್ಪಾದನೆಯನ್ನು ಪ್ರೋತ್ಸಾಹಿಸುವ ಧರ್ಮವೆಂದು ಬಿಂಬಿಸಲ್ಪಡುತ್ತಿದೆ. ಇದಕ್ಕೆ ಒಂದು ಕಾರಣ ಇಸ್ಲಾಂ ವಿರೋಧಿ ಶಕ್ತಿಗಳಾದರೆ ಇನ್ನೊಂದು ಕಾರಣ "ಮುಸ್ಲಿಂ" ಎಂದು ಹೇಳಿಕೊಳ್ಳುವ "ಮುಲ್ಲಾ"ಗಳೇ ಆಗಿದ್ದಾರೆ.

ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಭವಿಷ್ಯೋಕ್ತಿ ಪ್ರಕಾರ, ಇಸ್ಲಾಮಿನ ಪುನಶ್ಚೇತನಕ್ಕೋಸ್ಕರ ಅಲ್ಲಾಹನಿಂದ ಈ ಕಾಲಘಟ್ಟದಲ್ಲಿ ನಿಯೋಜಿತರಾದ ವಾಗ್ದತ್ತ ಧರ್ಮ ಸುಧಾರಕ ಮಹ್‌ದೀ – ಮಸೀಹ್ ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್[ಅ] ಸ್ಥಾಪಿಸಿದ ಅಹ್ಮದಿಯಾ ಮುಸ್ಲಿಂ ಜಮಾಅತಿನ ಮುಖವಾಣಿ "ಯುಗರಶ್ಮಿ" 40 ವರ್ಷಗಳಿಂದ, ಇಸ್ಲಾಮಿನ ಮುಖಕ್ಕೆ ಅಂಟಿಕೊಂಡಿದ್ದ ಕೊಳಕನ್ನು ನೀಗಿಸಿ ಅದರ ಸುಂದರ ರೂಪವನ್ನು ಲೋಕಕ್ಕೆ ತೋರಿಸಿಕೊಡುವುದರಲ್ಲಿ ಯಶಸ್ವಿಯಾಗಿದೆ. ಅಲ್ಲಾಹನಿಗೆ ಸರ್ವ ಸ್ತುತಿಸ್ತೋತ್ರಗಳು.

ಲೋಕದೆಲ್ಲೆಲ್ಲೂ ಅಶಾಂತಿ, ಸಂಘರ್ಷ, ಯುದ್ಧಭೀತಿ ಹರಡಿರುವ ಈ ಕಾಲದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಎಲ್ಲೆಡೆ ಶಾಂತಿ ಸ್ಥಾಪಿಸಲು ಬಹಳ ಪರಿಶ್ರಮಪಡುತ್ತಿದ್ದಾರೆ. ಪೋಪ್ ಬೆನೆಡಿಕ್ಟ್ XVI, ಪೋಪ್ ಫ್ರಾನ್ಸಿಸ್, ಇಸ್ರಾಯೇಲ್ ಪ್ರಧಾನ ಮಂತ್ರಿ, ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಅಧ್ಯಕ್ಷ, ಯು.ಎಸ್.ಎ. ಅಧ್ಯಕ್ಷ, ಕೆನಡದ ಪ್ರಧಾನ ಮಂತ್ರಿ, ಸೌದಿ ಅರೇಬಿಯಾದ ದೊರೆ, ಚೀನದ ಪ್ರಧಾನಮಂತ್ರಿ, ಯುನೈಟೆಡ್ ಕಿಂಗ್‌ಡಮ್ ಪ್ರಧಾನಮಂತ್ರಿ, ಜರ್ಮನಿಯ ಪ್ರಧಾನಮಂತ್ರಿ, ಫ್ರಾನ್ಸಿನ ಅಧ್ಯಕ್ಷ, ಬ್ರಿಟಿಷ್ ಮಹಾರಾಣಿ, ಇರಾನಿನ ಸರ್ವೋನ್ನತ ನಾಯಕ, ರಶ್ಯದ ಅಧ್ಯಕ್ಷ ಮೊದಲಾದವರಿಗೆ ಅವರು ಪತ್ರ ಬರೆದು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಶ್ರಮಿಸಲಿಕ್ಕೆ ಮತ್ತು ಸಂಭಾವ್ಯ ಮೂರನೆಯ ಲೋಕ ಮಹಾಯುದ್ಧವನ್ನು ತಡೆಯಲಿಕ್ಕೆ ತಮ್ಮ ಪ್ರಭಾವವನ್ನು ಪ್ರಯೋಗಿಸಬೇಕೆಂದು ವಿನಂತಿಸಿದ್ದಾರೆ. ಮಾತ್ರವಲ್ಲ, ದಿ ಬ್ರಿಟಿಷ್ ಪಾರ್ಲಿಮೆಂಟ್, ದಿ ಹೌಸ್ ಆಫ್ ಕಾಮನ್ಸ್ ಲಂಡನ್, ಮಿಲಿಟರಿ ಹೆಡ್‌ಕ್ವಾರ್ಟರ್ಸ್, ಕೋಬ್ಲೆನ್ಝ್ ಜರ್ಮನಿ, ಕ್ಯಾಪಿಟೋಲ್ ಹಿಲ್, ವಾಶಿಂಗ್‌ಟನ್ ಡಿ.ಸಿ., ಯು.ಎಸ್.ಎ., ಯುರೋಪಿಯನ್ ಪಾರ್ಲಿಮೆಂಟ್ ಬ್ರಸ್ಸೆಲ್ಸ್, ಬೆಲ್ಜಿಯಮ್, ಹೌಸಸ್ ಆಫ್ ಪಾರ್ಲಿಮೆಂಟ್, ಲಂಡನ್, ನ್ಯೂಝಿಲೇಂಡ್ ನ್ಯಾಶನಲ್ ಪಾರ್ಲಿಮೆಂಟ್, ವೆಲ್ಲಿಂಗ್‌ಟನ್ ಮೊದಲಾದ ಕಡೆಗಳಲ್ಲಿ ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಸ್ಥಾಪನೆ ಬಗ್ಗೆ ಭಾಷಣ ಮಾಡಿದ್ದಾರೆ.

ಸಂಕ್ಷಿಪ್ತವಾಗಿ, ಅಹ್ಮದಿಯಾ ಮುಸ್ಲಿಂ ಸಂಘಟನೆ, ಅದರ ಉಪ ಘಟಕಗಳು ಹಾಗೂ ಪತ್ರಿಕೆಗಳು ಇಸ್ಲಾಮಿನ ಸುಂದರ ರೂಪವನ್ನು ಲೋಕಕ್ಕೆ ತೋರಿಸಲು ಮತ್ತು ಜಾಗತಿಕ ಶಾಂತಿಗೋಸ್ಕರ ಬಹಳ ಪ್ರಯತ್ನಿಸುತ್ತಿವೆ. "ಯುಗರಶ್ಮಿ" ಸಹ ತನ್ನ ಕಿಂಚಿತ್ ಸೇವೆಯನ್ನು ಈ ನಿಟ್ಟಿನಲ್ಲಿ ಸಲ್ಲಿಸುತ್ತಿದೆ. ಮುಂದೆ ಸಹ ಅಲ್ಲಾಹನು "ಯುಗರಶ್ಮಿ"ಗೆ ಯಶಸ್ಸನ್ನೂ ದೀರ್ಘಾಯುಸ್ಸನ್ನೂ ದಯಪಾಲಿಸಲಿ ಎಂದು ಈ ಸಂದರ್ಭದಲ್ಲಿ ನಾವು ಅಲ್ಲಾಹನೊಡನೆ ಬೇಡಿಕೊಳ್ಳುತ್ತೇವೆ.

★

# ▶ ಲೋಕಕ್ಕೆ ಧರ್ಮದ ಆವಶ್ಯಕತೆ ಏಕೆ? ◀

**2014 ಆಗಸ್ಟ್ ತಿಂಗಳಲ್ಲಿ ಲಂಡನ್‌ನಲ್ಲಿ ಜರಗಿದ ಯುನೈಟೆಡ್ ಕಿಂಗ್‌ಡಮಿನ 48ನೇ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ)ದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದ ಸಮಾರೋಪ ಭಾಷಣ.**



ಸಾಂಪ್ರದಾಯಿಕ ಪ್ರಾರ್ಥನೆಗಳ ನಂತರ ಹಝ್ರತ್ ಖಲೀಫ ಹೀಗೆ ಹೇಳಿದರು:

ಧರ್ಮವನ್ನು ವಿಮರ್ಶಿಸುವವರು ತಮ್ಮನ್ನು ಧರ್ಮವನ್ನು ಆಕ್ಷೇಪಿಸುವುದಕ್ಕೆ ಸೀಮಿತಗೊಳಿಸದೆ ದೇವನ ಅಸ್ತಿತ್ವದ ಕಲ್ಪನೆಯನ್ನು ಸಹ ವಿರೋಧಿಸುತ್ತಿದ್ದಾರೆ. ಇಂದಿನ ಕಾಲಘಟ್ಟದಲ್ಲಿ ದೇವನನ್ನು ನಿಂದಿಸುವುದು ಹಿಂದೆಂದಿಗಿಂತಲೂ ಬಹಳ ಹೆಚ್ಚು ಆಗಿದೆ. ಅನೇಕ ಪುಸ್ತಕಗಳನ್ನು ದೇವನನ್ನು ನಿಂದಿಸಿ ಬರೆಯುವುದು ಮುಂದುವರಿದಿದೆ. ಆಧುನಿಕ ಕಾಲದಲ್ಲಿ ಲಭ್ಯವಾಗಿರುವ ಇಲೆಕ್ಟ್ರೋನಿಕ್ ಸಂಪರ್ಕ ಸಾಧನಗಳು ಈ ವಿಮರ್ಶೆಗಳನ್ನು ವಿಶಾಲವಾಗಿ ಪ್ರಕಟಿಸಲು ಸುಲಭಗೊಳಿಸಿವೆ. ಹಿಂದೆ ಸಂದೇಶಗಳನ್ನೂ ಧ್ಯೇಯಗಳನ್ನೂ ಅನ್ಯರಿಗೆ ತಲಪಿಸಲು ಹೆಚ್ಚು ಕಾಲಾವಕಾಶ ಬೇಕಾಗಿತ್ತು ಮತ್ತು ಅದನ್ನು ವಿದ್ಯಾವಂತರಾದ ಅಲ್ಪಸಂಖ್ಯಾತರಿಗೆ ಮಾತ್ರ ತಲಪಿಸಲು ಸಾಧ್ಯವಿತ್ತು. ಆದರೆ ಇಂದಿನ ಕಾಲದ ಇಲೆಕ್ಟ್ರೋನಿಕ್ ಸಂಪರ್ಕ ಮಾಧ್ಯಮಗಳ ಮೂಲಕ ಮತ್ತು ಇನ್ನಿತರ ವಿಧಾನಗಳಲ್ಲಿ ಅಂತಹ ವಿಮರ್ಶೆಗಳನ್ನು ವಾಸ್ತವಿಕವಾಗಿ ಲೋಕದಲ್ಲಿರುವ ಎಲ್ಲರಿಗೂ ತಲಪಿಸಲು ಸಾಧ್ಯವಾಗಿದೆ. ಈ ಕಾರಣದಿಂದ ಗಮನಾರ್ಹ ಸಂಖ್ಯೆಯ ಜನರು ಧರ್ಮದಿಂದ ದೂರಸರಿದು ಹೋಗುತ್ತಿದ್ದಾರೆ. ಬೇರೆ ಅನೇಕ ಜನರು ಧರ್ಮದಿಂದ ವಿಮುಖರಾಗುವುದು ಏಕೆಂದರೆ, ಧರ್ಮವು ಇಂದಿನ ರೂಪದಲ್ಲಿ ಪುರಾಣಕತೆಗಳನ್ನೂ ಕಟ್ಟುಕತೆಗಳನ್ನೂ ಒಳಗೊಂಡಿವೆ ಎಂದು ಅವರು ನಂಬುತ್ತಾರೆ. ಇಂದಿನ ಅಭಿವೃದ್ಧಿಹೊಂದಿದ ಲೋಕದಲ್ಲಿ ಧರ್ಮಕ್ಕೆ ಯಾವ ಸ್ಥಾನವೂ ಇಲ್ಲವೆಂದು ಅವರು ಯೋಚಿಸುತ್ತಾರೆ ಮತ್ತು ಜನರೊಂದಿಗೆ ಸಂಪರ್ಕ ಹೊಂದಬಲ್ಲ ದೇವನ ಕಲ್ಪನೆಯನ್ನು ನಿರಾಕರಿಸುತ್ತಾರೆ. ಧರ್ಮವು ಆಧುನಿಕ ಜ್ಞಾನ ಮತ್ತು ತಿಳುವಳಿಕೆಗೆ ವಿರುದ್ಧವಾಗಿದೆ ಎಂದು ಅವರು ಗಣಿಸುತ್ತಾರೆ. ಈ ಕಾರಣದಿಂದ ನಾವು ಯಾವುದಾದರೂ ಧರ್ಮವನ್ನು ಏಕೆ ಅವಲಂಬಿಸಬೇಕು ಎಂದು ಅವರು ಪ್ರಶ್ನಿಸುತ್ತಾರೆ.

ದೇವನ ಅಸ್ತಿತ್ವವನ್ನು ನಿರಾಕರಿಸುವವರು ಧರ್ಮವು ಹಾಳುಗೊಂಡು ಹಳತಾಗಿದೆ ಎಂದು ಹೇಳುವಾಗ, ತಥಾಕಥಿತ ಧಾರ್ಮಿಕ ನಾಯಕರೆಂದು ಹೇಳುವವರ ಸ್ಥಿತಿಯನ್ನು ನೋಡುತ್ತಾರೆ! ಅವರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ಜನರನ್ನು ಮರಳುಮಾಡುತ್ತಾರೆ. ಅವರ ಈ ಕೆಲಸ ಧರ್ಮವನ್ನು ವಿರೋಧಿಸುವವರನ್ನೂ ಉತ್ತೇಜಿಸುತ್ತದೆ ಮತ್ತು ಅವರು ಧರ್ಮದ ಪ್ರಯೋಜನವನ್ನು ಪ್ರಶ್ನಿಸುತ್ತಾರೆ. ಅಂತಹ ವಿಮರ್ಶಕರು ಪ್ರವಾದಿಗಳನ್ನೂ ನಿಂದಿಸಲು ಹಿಂಜರಿಯುವುದಿಲ್ಲ. ಪ್ರವಾದಿಗಳು ನಿರಕ್ಷರ ಕುಕ್ಷಿಗಳಾದ ಅವಿದ್ಯಾವಂತ ಜನರನ್ನು ತಮ್ಮ ಸ್ವಾರ್ಥ ಲಾಭಕ್ಕೋಸ್ಕರ ಬಳಸಿದರೆಂದು ಅವರು ಆಕ್ಷೇಪಿಸುತ್ತಾರೆ. ಜ್ಞಾನೋದಯಗೊಂಡ ಇಂದಿನ ಆಧುನಿಕ ಕಾಲದಲ್ಲಿ ಧರ್ಮದ ಯಾವುದೇ ಆವಶ್ಯಕತೆಯಿಲ್ಲ ಎಂದು ಅವರು ಪ್ರತಿಪಾದಿಸುತ್ತಾರೆ. ಹೀಗೆ ವಾದಿಸುವವರು, "ವಿದ್ಯಾವಂತರಾದ ಜನರು ತಮ್ಮ ಸಾಂಸ್ಕೃತಿಕ ಸಂಬಂಧಗಳ ಕಾರಣ ಧರ್ಮವನ್ನು ಅನುಸರಿಸುತ್ತಾರೆ. ಅವರಿಗೆ ತಮ್ಮ ಧರ್ಮದೊಂದಿಗೆ ಇರುವ ಸಾಂಪ್ರದಾಯಿಕ ಸಂಬಂಧಕ್ಕೋಳಪಟ್ಟು ಮಾತ್ರ ಅಂತಹ ಜನರು ಧರ್ಮವನ್ನು ಪಾಲಿಸುತ್ತಿದ್ದಾರೆ" ಎಂದು ಹೇಳುತ್ತಾರೆ.

ಕಳೆದ ವರ್ಷ ನಾನು ಆಸ್ಟ್ರೇಲಿಯಾಕ್ಕೆ ಭೇಟಿ ನೀಡಿದಾಗ ನಾನು ಒಬ್ಬ ರಾಜಕಾರಣಿಯನ್ನು ಕಂಡೆನು. ನಾವು ಚರ್ಚಿಸುವಾಗ ಅವರು ಹೇಳಿದರು:"ನಾನು ಒಬ್ಬ ಕ್ರಿಶ್ಚಿಯನ್ ಆಗಿ ಚರ್ಚ್‌ಗೆ ಹೋಗುತ್ತಿದ್ದೇನೆ ಮತ್ತು ಧರ್ಮದ ಆವಶ್ಯಕತೆಯನ್ನು ಮನವರಿಕೆ ಮಾಡಿದ್ದೇನೆ. ಆದರೆ ಆಧುನಿಕ ಕಾಲದಲ್ಲಿ ವಿಜ್ಞಾನದ ಪ್ರಗತಿಯೊಂದಿಗೆ ಧರ್ಮವು ಸಮನ್ವಯ ಹೊಂದಿಲ್ಲ. ಬೈಬಲ್ ಯಾವುದೇ ವೈಜ್ಞಾನಿಕ ವಿಶದೀಕರಣ ನೀಡುವುದಿಲ್ಲ. ಧರ್ಮ ಮತ್ತು ವಿಜ್ಞಾನ ಬೇರೆ ಬೇರೆ ಎಂದು ಗಣಿಸಿದರೆ ಮಾತ್ರ ಧರ್ಮವನ್ನು ರಕ್ಷಿಸಬಹುದೆಂದು ನಾನು ನಂಬುತ್ತೇನೆ."

ನಾನು ಹೀಗೆ ಉತ್ತರ ನೀಡಿದೆ: "ಮುಸ್ಲಿಮರ ಧರ್ಮಗ್ರಂಥ ವಿಜ್ಞಾನ ಮತ್ತು ಆಧುನಿಕ ಪ್ರಗತಿಯ ಬಗ್ಗೆ ಮಾರ್ಗದರ್ಶನ ನೀಡುತ್ತದೆ."

ಎಲ್ಲ ವಿಷಯಗಳ ಬಗ್ಗೆ ವಿಶದೀಕರಣ ನೀಡದ ಎಲ್ಲ ಧರ್ಮಗಳ ಸ್ಥಿತಿ ಹೀಗೆಯೇ ಆಗಿದೆ. ಈ ಕಾರಣದಿಂದ ಆ ಧರ್ಮಗಳ ಅನುಯಾಯಿಗಳು ಮೇಲೆ ಹೇಳಿದಂತಹ ಮನೋಭಾವ ಹೊಂದಿರುತ್ತಾರೆ. ಆದರೆ ಪರಿಪೂರ್ಣ ನಿಯಮಸಂಹಿತೆ ಅವತೀರ್ಣಗೊಂಡ ಮುಸ್ಲಿಮರು ಸಹ ಹೊಂದಿರುವ ಮನೋಭಾವ ನಿಜವಾಗಿಯೂ ಆಶ್ಚರ್ಯಕರವಾಗಿದೆ. ಪವಿತ್ರ ಖುರ್‌ಆನ್ ಎಲ್ಲ ವಿಷಯಗಳ ಬಗ್ಗೆ ವಿಶದೀಕರಣ ನೀಡುತ್ತದೆ. ಹೀಗಿದ್ದರೂ ಧರ್ಮ ಮತ್ತು ವಿಜ್ಞಾನ ಸಂಬಂಧ ಹೊಂದಿಲ್ಲವೆಂದು ಅವರು ಹೇಳಲು ತೊಡಗಿದ್ದಾರೆ. ದೇವನ ಯಾವುದೇ ಗುಣವಿಶೇಷ ಸ್ಥಗಿತಗೊಂಡಿಲ್ಲ ಎಂದು ನಂಬುವವರು ಅಹ್ಮದಿಯರು ಮಾತ್ರವಾಗಿದ್ದಾರೆ.

ಪವಿತ್ರ ಖುರ್‌ಆನ್ ಹಿಂದಿನ ಕಾಲದ ಚರಿತ್ರೆಯನ್ನು

ವಿವರಿಸುವುದರೊಂದಿಗೆ ಆಧುನಿಕ ಕಾಲದ ವೈಜ್ಞಾನಿಕ ಪ್ರಗತಿಯನ್ನೂ ವಿವರಿಸುತ್ತದೆ. ಇಸ್ಲಾಮಿನ ದೇವ, ಜೀವಂತ ದೇವನೆಂದು ಪವಿತ್ರ ಖುರ್‌ಆನ್ ನಮ್ಮೊಂದಿಗೆ ಹೇಳುತ್ತದೆ. ಅವನು ಹಿಂದಿನ ಕಾಲದಲ್ಲಿ ಜನರೊಂದಿಗೆ ಮಾತನಾಡುತ್ತಿದ್ದ ಹಾಗೆಯೇ ಈಗಲೂ ಮಾತನಾಡುತ್ತಿದ್ದಾನೆ. ಅವನು ಹಿಂದೆ ಪ್ರಾರ್ಥನೆಗಳಿಗೆ ಉತ್ತರ ನೀಡಿದಂತೆಯೇ ಈಗಲೂ ಉತ್ತರ ನೀಡುತ್ತಾನೆ. ಅವನು ಇಸ್ಲಾಮನ್ನು ನಿರಾಶಮಯ ಸ್ಥಿತಿಯಲ್ಲಿ ಬಿಟ್ಟುಬಿಟ್ಟಿಲ್ಲ. ಅವನು ವಾಗ್ದತ್ತ ಮಸೀಹ್ ಆಗಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದರನ್ನು[ಅ] ಕಳುಹಿಸಿದನು. ಅವರು ದೇವನ ಅಸ್ತಿತ್ವವನ್ನು ಲೋಕಕ್ಕೆ ಬಹಿರಂಗಗೊಳಿಸಿ ಕೊಟ್ಟರು. ಅವರು ಧರ್ಮ ಮತ್ತು ಅಂತಿಮ ಶರೀಅತ್ (ಧರ್ಮಶಾಸನ) ಆಗಿರುವ ಪವಿತ್ರ ಖುರ್‌ಆನ್ ಬಗ್ಗೆ ಸ್ಪಷ್ಟವಾಗಿ ವಿವರಣೆ ನೀಡಿದರು.

ಈ ಕಾಲಘಟ್ಟದ ಇಮಾಮರಾದ ಹಝ್ರತ್ ವಾಗ್ದತ್ತ ಮಸೀಹರನ್ನು[ಅ] ನಂಬಿದ ನಾವು ಭಾಗ್ಯಶಾಲಿಗಳಾಗಿದ್ದೇವೆ. ಧರ್ಮದ ಯಥಾರ್ಥವೇನೆಂದು ನಾವು ಅವರಿಂದ ಕಲಿತೆವು. ಧರ್ಮವು ವಿದ್ಯಾಭ್ಯಾಸ ಮತ್ತು ಪ್ರಗತಿಯನ್ನು ತಡೆಯುತ್ತದೆ, ಸ್ವಾರ್ಥವನ್ನು ಬೆಳೆಸುತ್ತದೆ ಮತ್ತು ಅದು ತನ್ನ ಹೆಸರಲ್ಲಿ ಕೊಲೆ ಮತ್ತು ರಕ್ತಪಾತ ನಡೆಸಲು ಪ್ರೋತ್ಸಾಹಿಸುತ್ತದೆ ಎಂದು ವಿಮರ್ಶಕರು ಆಕ್ಷೇಪಿಸುವುದನ್ನು ನಾವು ಲಕ್ಷಿಸುವುದಿಲ್ಲ. ಹಝ್ರತ್ ವಾಗ್ದತ್ತ ಮಸೀಹರು[ಅ] ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರುದ್ಧವಾಗಿಲ್ಲವೆಂದೂ ಅವು ಪರಸ್ಪರ ಸಂಪೂರ್ಣ ಸಮನ್ವಯ ಹೊಂದಿವೆ ಎಂದೂ ನಮಗೆ ವಿಶದೀಕರಿಸಿ ಹೇಳಿರುವರು. ವಿಜ್ಞಾನ ಎಷ್ಟು ಅಭಿವೃದ್ಧಿಗೊಂಡರೂ ಅದು ಪವಿತ್ರ ಖುರ್‌ಆನ್ ಮತ್ತು ಅದರ ದರ್ಶನವನ್ನು ಎಂದೂ ಅಲ್ಲಗಳೆಯಲಾರದೆಂದು ನಾವು ಪರಿಪೂರ್ಣವಾಗಿ ದೃಢನಂಬಿಕೆ ಹೊಂದಿದ್ದೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಮ್ಮ ಶರೀಅತ್ ಗ್ರಂಥವಾದ ಪವಿತ್ರ ಖುರ್‌ಆನ್ ವಿಶಾಲವೂ ಸಮಗ್ರವೂ ಆದ ಉಪದೇಶಗಳನ್ನು ಎಲ್ಲ ವಿಷಯಗಳ ಬಗ್ಗೆ ನೀಡಿದೆ. ಅಂತಹ ವಿಷಯಗಳಲ್ಲಿ ವಿಜ್ಞಾನ ಸಹ ಸೇರಿದೆ.

## ದೇವನು ಸೇಡು ತೀರಿಸುತ್ತಾನೆ ಎಂಬ ಮಿಥ್ಯಾರೋಪ

ಧರ್ಮದ ಬಗ್ಗೆ ತುಚ್ಛೀಕರಿಸುವ ಭಾವನೆ ಜನರಲ್ಲಿ ಸೃಷ್ಟಿಸಲು ಹೀಗೆ ವಾದಿಸಲಾಗುತ್ತಿದೆ:

*"ಧರ್ಮವು ರಕ್ತಪಾತವನ್ನು ಉಪದೇಶಿಸುತ್ತದೆ ಮಾತ್ರವಲ್ಲ ಅದು ರಕ್ತಪಾತಕ್ಕೆ ಕಾರಣವಾಗಿದೆ. ಆದುದರಿಂದ ವಿಜ್ಞಾನ ಮತ್ತು ಅಭಿವೃದ್ಧಿಯ ಮಾರ್ಗದಲ್ಲಿ ಸಾಗಲು ಹಾಗೂ ಕೊಲೆ ಮತ್ತು ಹಿಂಸಾಚಾರಗಳಿಂದ ಲೋಕವನ್ನು ರಕ್ಷಿಸಲು ಧರ್ಮವನ್ನು ಜಿಗುಪ್ಸೆಯಿಂದ ಕಾಣಬೇಕಾದುದು ಆವಶ್ಯಕವಾಗಿದೆ. ಧರ್ಮಗಳ ಅನುಯಾಯಿಗಳು ತಮ್ಮ ಎಲ್ಲ ಕೃತ್ಯಗಳನ್ನೂ ಅಂಧರಾಗಿ ದೇವನಿಗೆ ಅನ್ವಯಿಸುತ್ತಿರುತ್ತಾರೆ.*

*"ಲೋಕದಲ್ಲಿ ಎರಡು ಮುಖ್ಯ ಧರ್ಮಗಳಿವೆ. ಕ್ರೈಸ್ತಧರ್ಮ ಮತ್ತು ಇಸ್ಲಾಮ್ ಅವುಗಳಾಗಿವೆ. ಇವೆರಡು ಧರ್ಮಗಳ ದೇವ ಗ್ರಂಥಗಳು ಯುದ್ಧವನ್ನು ಪ್ರೋತ್ಸಾಹಿಸುವ ಉಪದೇಶಗಳಿಂದ ತುಂಬಿವೆ. ಧಾರ್ಮಿಕ ಗ್ರಂಥಗಳ ಪ್ರಕಾರ ದೇವನು ಕೋಪಗೊಂಡು ಜನಾಂಗಗಳನ್ನು ಅಳಿಸಿಬಿಟ್ಟನು.*

*"ಯಾವುದೇ ಯುದ್ಧ ನಡೆದಿಲ್ಲವಾದರೂ ನಿಷ್ಕಳಂಕರಾದ ಜನರ ಜೀವಗಳು ಅನಾವಶ್ಯಕವಾಗಿ ನಷ್ಟವಾದುವು. ಇದೆಂತಹ ದೇವನು ಮತ್ತು ಧರ್ಮ – ಅನೇಕ ಜನರನ್ನು ನೆರೆ ನೀರಲ್ಲಿ ಮುಳುಗಿಸಿ ಕೊಳ್ಳಲಾಯಿತು, ಹಲವರನ್ನು ಬೆಂಕಿಯಲ್ಲಿ ಸುಡಲಾಯಿತು, ಈಜಿಪ್ಟ್‌ನಲ್ಲಿ ಜನಿಸಿದ ಪ್ರಥಮ ಶಿಶುಗಳನ್ನು ಕೊಲ್ಲಲಾಯಿತು."*

ಇಂತಹ ವಿಮರ್ಶಕರಲ್ಲಿ ಒಬ್ಬನಾದ ಸ್ಟೀವ್‌ವೆಲ್ಸ್ (Steve Wells) ಹೀಗೆ ಬರೆದಿದ್ದಾನೆ: "ಬೈಬಲ್ ಪ್ರಕಾರ, ದೇವನ ಕೋಪದಿಂದ 2,476,000 ಜನರು ಕೊಲ್ಲಲ್ಪಟ್ಟರು."

ಸ್ಟೀವ್ ವೆಲ್ಸ್ ಪ್ರಕಾರ ಈ ಲೆಕ್ಕ ತಪ್ಪಾಗಿದೆ. ಅವನ ಅಂದಾಜು ಪ್ರಕಾರ 25 ಮಿಲಿಯ ಜನರು ಕೊಲ್ಲಲ್ಪಟ್ಟರು ಎಂದು ಲೆಕ್ಕಹಾಕಿದ್ದಾನೆ. ಸ್ಟೀವ್ ವೆಲ್ಸ್‌ನೊಂದಿಗೆ ಕೇಳಬೇಕಾದ ಪ್ರಶ್ನೆ ಏನೆಂದರೆ, ಅವನು ನಂಬುವುದೇನೆಂದರೆ ವಿಜ್ಞಾನಿ ಬಹಳ ಅಭಿವೃದ್ಧಿಹೊಂದಿದುದಾಗಿದೆ ಮತ್ತು ಧರ್ಮಕ್ಕೆ ಬದಲಿಯಾಗುವಂತಹದಾಗಿದೆ. ಆದರೆ ವಿಜ್ಞಾನ, ಧರ್ಮಕ್ಕಿಂತ ಎಷ್ಟೋಪಟ್ಟು ಮೃತ್ಯುಗಳಿಗೆ ಕಾರಣವಾಗಿಲ್ಲವೆ? ಧರ್ಮ ತನ್ನ ಅನುಯಾಯಿಗಳೊಂದಿಗೆ ಶಾಂತಿ, ಸೌಹಾರ್ದ ಮತ್ತು ಪಾವಿತ್ರ್ಯ ಅವಲಂಬಿಸಬೇಕೆಂದು ಹೇಳುತ್ತದೆ. ಮುಸ್ಲಿಮರ ವಿರುದ್ಧ ಆಕ್ಷೇಪಗಳನ್ನು ಮಾಡಲಾಗುತ್ತಿದೆಯಾದರೂ ಪವಿತ್ರ ಖುರ್‌ಆನ್ ಶಾಂತಿ, ಸೌಹಾರ್ದ ಮತ್ತು ನೈತಿಕತೆ ಬಗ್ಗೆ ನೀಡುವ ಸಂದೇಶಗಳು ಅತ್ಯಂತ ಉನ್ನತಮಟ್ಟದ್ದಾಗಿವೆ. ಲೋಕವು ಈ ಉಪದೇಶಗಳನ್ನು ಅನುಸರಿಸುವುದಾದರೆ ಶಾಂತಿ ಮತ್ತು ಸುರಕ್ಷೆ ಎಲ್ಲ ದಿಕ್ಕುಗಳಲ್ಲೂ ಹರಡುವುವು. ಜಿಹಾದ್ ಮಾಡುವ ಆಜ್ಞೆಯನ್ನು ನಿಶ್ಚಯವಾಗಿಯೂ ನೀಡಲಾಗಿದೆ. ಆದರೆ ಯುದ್ಧವನ್ನು ಮುಸ್ಲಿಮರ ಮೇಲೆ ಅನ್ಯರು ಮೊದಲಿಗರಾಗಿ ಹೇರಿದರೆ ಮಾತ್ರ ಅದು ಅನುಮತಿಸಲ್ಪಟ್ಟಿದೆ.

ವಿಜ್ಞಾನ ನಿರ್ಮಿಸಿದ ಉಪಕರಣಗಳು ಮತ್ತು ಆವಿಷ್ಕಾರಗಳು, ರಾಸಾಯನಿಕ ಆಯುಧಗಳು ವಿಶಾಲವಾಗಿ ಹರಡುವ ನಾಶವನ್ನು ಹೊರತು ಇನ್ನೇನನ್ನೂ ಮಾಡುವುದಿಲ್ಲ. ಧರ್ಮದಿಂದ ಸಂಭವಿಸಿದ ಮೃತರ ಸಂಖ್ಯೆಯನ್ನು ಹಿಗ್ಗಿಸಿ ಸ್ಟೀವ್ ವೆಲ್ಸ್ 25 ಮಿಲಿಯ ಎಂದು ಲೆಕ್ಕ ಹಾಕಿದ್ದಾನೆ. ಆದರೆ ದ್ವಿತೀಯ ಮಹಾಯುದ್ಧದಲ್ಲಿ ಸಂಭವಿಸಿದ ಮೃತ್ಯುವನ್ನು ಮಾತ್ರ ಲೆಕ್ಕ ಹಾಕಿದರೂ ಇದಕ್ಕಿಂತ ಹೆಚ್ಚಾಗುತ್ತದೆ ಎಂದು ಅವನಿಗೆ ಹೊಳೆದಿಲ್ಲವೇ? ವಿಜ್ಞಾನ ನಿರ್ಮಿಸಿದ ಉಪಕರಣಗಳು ಮತ್ತು ಆವಿಷ್ಕಾರಗಳು 60ರಿಂದ 70 ಮಿಲಿಯನ್ ಮೃತ್ಯುಗಳಿಗೆ ಕಾರಣವಾಯಿತು. ಅವರಲ್ಲಿ ನಿಷ್ಕಳಂಕ ಮಹಿಳೆಯರೂ ಮಕ್ಕಳೂ ಸೇರಿದ್ದರು. ನಗರಗಳು ಸಂಪೂರ್ಣವಾಗಿ ಭಸ್ಮೀಕರಿಸಲ್ಪಟ್ಟವು. ಅದು ಧಾರ್ಮಿಕ ಪರಿಣಾಮವಾಗಿದ್ದಿತೇ?

ಧರ್ಮ ಜನರನ್ನು ಕೊಲ್ಲುವುದಿಲ್ಲ. ಅದು ಜನರಿಗೆ ಎಚ್ಚರಿಕೆ ನೀಡುತ್ತದೆ. ಅವರು ಸಮಾಜದಲ್ಲಿ ಶಾಂತಿ ಮತ್ತು ಸುರಕ್ಷೆಯನ್ನು ಕಾಪಾಡಬೇಕೆಂದು ಉಪದೇಶಿಸುತ್ತದೆ. ನಮ್ಮ ಧರ್ಮದ ಉಪದೇಶ ಇದೇ ಆಗಿದೆ.

ನಮ್ಮ ಧರ್ಮದ ಪ್ರತಿಯೊಂದು ಉಪದೇಶ ಮಾನವರ ಬಗ್ಗೆ ಸಹಾನುಭೂತಿ ಮತ್ತು ಪ್ರೀತಿಯನ್ನು ಸೂಚಿಸುತ್ತದೆ.

ಎಲ್ಲ ಪ್ರವಾದಿಗಳು ಒಂದೇ ರೀತಿ ಉಪದೇಶಿಸಿದರೆಂದು ಪವಿತ್ರಖುರ್‌ಆನ್ ನಮಗೆ ತಿಳಿಸಿದೆ. ಕ್ರೌರ್ಯ, ಅನ್ಯಾಯ, ದಬ್ಬಾಳಿಕೆ ಮತ್ತು ಹಿಂಸಾಚಾರ ಮೊದಲಾದುವುಗಳನ್ನು ನಿರ್ಮೂಲನ ಮಾಡಬೇಕೆಂದೇ ಅವರೆಲ್ಲರ ಉಪದೇಶವಾಗಿತ್ತು. ಜನರು ಪರಸ್ಪರ ಪ್ರೀತಿ ಮತ್ತು ಸಹಾನುಭೂತಿ ಹೊಂದಬೇಕೆಂದು ಅವರು ಉಪದೇಶಿಸಿದರು. ಹಾಗೆ ಮಾಡದಿದ್ದರೆ ದೇವನ ಶಿಕ್ಷೆಗೆ ಗುರಿಯಾಗ

ಬೇಕಾದೀತೆಂದು ಪ್ರವಾದಿಗಳು ಉಪದೇಶಿಸಿದರು. ಪವಿತ್ರ ಖುರ್‌ಆನ್‌ನಲ್ಲಿ ದೇವನು ಹೇಳುತ್ತಾನೆ: ಅವನು ಜನರನ್ನು ಶಿಕ್ಷಿಸುವುದರಲ್ಲಿ ವಿಳಂಬದೋರುತ್ತಾನೆ. ತನ್ನ ಕೋಪವನ್ನು ಅವನು ಪ್ರಕಟಿಸುವುದಕ್ಕೆ ತ್ವರೆ ಪಡುವುದಿಲ್ಲ. ಶಿಕ್ಷೆ ನೀಡಲ್ಪಟ್ಟರೂ ಅದರ ಉದ್ದೇಶ ಸುಧಾರಣೆ ಮಾಡುವುದಾಗಿದೆ.

ಮನುಷ್ಯನು ರಕ್ತಪಾತ ಮಾಡುವುದು ಅವನ ಸ್ವಂತ ಉದ್ದೇಶಗಳನ್ನು ಈಡೇರಿಸಲು ಮತ್ತು ಲಾಭಗಳಿಸಲಿಕ್ಕಾಗಿರುತ್ತದೆ. ಯಾವುದಾದರೂ ಜನತೆ ಅಸಾಧಾರಣವಾದ ವಿಪತ್ತಿಗೆ ಈಡಾಗಿದ್ದರೆ ಅದು ಅವರ ಸ್ವಂತ ದೌರ್ಜನ್ಯ, ಕಷ್ಟಗಳ ಕಾರಣದಿಂದಲೂ ಅವರು ಮಾಡಿದ ಅನ್ಯಾಯಗಳ ಪರಿಣಾಮವಾಗಿಯೂ ಆಗಿರುತ್ತದೆ. ದೇವನಿಲ್ಲವೆಂದು ನಾವು ಒಂದು ಕ್ಷಣಕಾಲ ಯೋಚಿಸಿದರೆ ಮತ್ತು ಧರ್ಮ ಇಲ್ಲವೆಂದು ಯೋಚಿಸಿದರೆ ಭೂಕಂಪಗಳೂ ಜಲಪ್ರಳಯಗಳೂ ನಿಂತುಹೋಗುವುವೋ? ಅಂತಹ ಪರಿಸ್ಥಿತಿಯಲ್ಲಿ ಧರ್ಮವಿರೋಧಿಗಳು ಹೇಗೆ ಅವುಗಳನ್ನು ವರ್ಣಿಸುವರು? ಧರ್ಮದ ವಿಮರ್ಶಕರು ಈ ವಿಪತ್ತುಗಳನ್ನು ಯಾವ ವಿಭಾಗಕ್ಕೆ ಸೇರಿಸುವರು? ದೇವನು ಅತ್ಯಂತ ಕರುಣೆದೋರುವವನೂ ಉಪಕಾರ ಮಾಡುವವನೂ ಆಗಿದ್ದಾನೆ. ಅವನು ಹೀಗೆ ಹೇಳುತ್ತಾನೆ: ಮನುಷ್ಯನು ದೇವನ ಆಜ್ಞೆಗಳನ್ನು ಪಾಲಿಸುವುದಾದರೆ, ಅವನು ಮನುಷ್ಯನನ್ನು ರಕ್ಷಿಸಲು ವಿಪತ್ತನ್ನು ನೀಗಿಸುವನು ಅಥವಾ ಅದರ ಹಾನಿ ಮತ್ತು ಪರಿಣಾಮದಿಂದ ರಕ್ಷಿಸುವನು.

## ವಾಗ್ದತ್ತ ಮಸೀಹ್[ಅ] ಅನ್ಯಾಯವನ್ನು ಕೊನೆಗೊಳಿಸಲು ಆಗಮಿಸಿದರು

ನಾವು ಒಂದು ಉದಾಹರಣೆಯನ್ನು ನೋಡುವ. ಅದು ಪುರಾತನ ಕಾಲಕ್ಕೆ ಸಂಬಂಧಿಸಿಲ್ಲ. ಅದು ಕಳೆದ ಶತಮಾನದ್ದಾಗಿದೆ. ವಾಗ್ದತ್ತ ಮಸೀಹ್ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಆಗಮಿಸಿದ ಕಾಲಘಟ್ಟ ಅದಾಗಿತ್ತು. ಅವರನ್ನು ಪವಿತ್ರ ಪ್ರವಾದಿ ಮುಹಮ್ಮದ್‌ರವರ[ಸ] ಪ್ರತಿನಿಧಿಯಾಗಿ ದೇವನು ಲೋಕಕ್ಕೆ ಕಳುಹಿಸಿದನು. ಎಲ್ಲ ವಿಧ ದೌರ್ಜನ್ಯ, ದಬ್ಬಾಳಿಕೆ, ಅನ್ಯಾಯ ಮತ್ತು ಅತಿರೇಕ ವರ್ತನೆಗಳನ್ನು ಕೊನೆಗೊಳಿಸಲು, ಮಾನವರೆಲ್ಲರಿಗೂ ಉಪದೇಶಿಸಲು ಅವರನ್ನು ಕಳುಹಿಸಲಾಗಿತ್ತು. ದೇವನಿಂದ ಆಯ್ಕೆಗೊಂಡ ಈ ಮಹಾಪುರುಷರು ಜನರಿಗೆ ಮುನ್ನೆಚ್ಚರಿಕೆ ನೀಡಿದರು. ಜನರು ಸುಧಾರಣೆ ಮಾಡದಿದ್ದರೆ ಅವರು ಭೂಕಂಪಕ್ಕೆ ಗುರಿಯಾಗುವರೆಂದು ಮತ್ತು ಅವರು ತಮ್ಮನ್ನು ಶುದ್ಧೀಕರಿಸಬೇಕೆಂದೂ ಆ ರೀತಿ ಅವರು ತಮ್ಮ ಮೇಲೆಯೇ ದಯೆದೋರಬೇಕೆಂದೂ ಉಪದೇಶಿಸಿದರು. ಈ ಕಾಲಘಟ್ಟದ ಇಮಾಮರಾದ ಅವರು, ಜನರು ತಮ್ಮನ್ನು ಸುಧಾರಣೆ ಮಾಡದಿದ್ದರೆ ಮತ್ತು ಅವರು ಅನ್ಯಾಯಕರವಾಗಿ ವರ್ತಿಸಿ ದೇವನಿಗೆ ಅವಿಧೇಯರಾದರೆ ಪ್ಲೇಗ್ ರೋಗವು ಅಸಾಧಾರಣವಾಗಿ ತೀವ್ರವಾಗಿ ಹಬ್ಬುವುದೆಂದು ಸಹ ಮುನ್ನೆಚ್ಚರಿಕೆ ನೀಡಿದರು. ಜನರು ತಮ್ಮನ್ನು ಸುಧಾರಣೆ ಮಾಡಿ ಮೋಕ್ಷಗಳಿಸಬೇಕೆಂದು ಅವರು ಉಪದೇಶಿಸಿದರು. ಅವರ ಉಪದೇಶಗಳನ್ನು ಅಂಗೀಕರಿಸಿದವರು ತಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಿದರು ಮತ್ತು ಭೂಕಂಪದಿಂದಲೂ ಪ್ಲೇಗ್ ರೋಗದಿಂದಲೂ ರಕ್ಷಿಸಲ್ಪಟ್ಟರು.

ನಾವು ದೇವನಿಗೆ ಮತ್ತು ಅವನ ಪ್ರೀತಿಗೆ ಪಾತ್ರರಾದವರಿಗೆ ಕೃತಜ್ಞರಾಗಬೇಕು. ದೇವನ ಪ್ರವಾದಿಗಳು ಮತ್ತು ಪ್ರತಿನಿಧಿಗಳು ಮುನ್ನೆಚ್ಚರಿಕೆ ನೀಡದೆ ನಗರಗಳಿಗೆ ಬಾಂಬ್ ಹಾಕಿ ಲಕ್ಷಾಂತರ ಜನರನ್ನು ಕೊಂದು ನಗರಗಳನ್ನು ಬೂದಿಯ ದಿಬ್ಬಗಳನ್ನಾಗಿ ಮಾಡುವುದಿಲ್ಲ. ಅವರು ಮೊದಲು ಜನರಿಗೆ ಪ್ರೀತಿ ಮತ್ತು ಸಹಾನುಭೂತಿಯಿಂದ ಎಚ್ಚರಿಕೆ ನೀಡುತ್ತಾರೆ. ಆದರೆ ಲೋಕದ ಜನರು ಅದನ್ನು ಕಡೆಗಣಿಸಿದರೆ ದೇವನು ತನ್ನ ದೃಷ್ಟಾಂತವನ್ನು ಪ್ರಕಟಿಸುತ್ತಾನೆ. ದೇವನು ತನ್ನ ದಾಸರ ಪರವಾಗಿ ದೃಷ್ಟಾಂತ ಪ್ರಕಟಿಸುತ್ತಾನೆ. ಆ ದೇವದಾಸರು ಎಲ್ಲರೊಂದಿಗೂ ಪ್ರೀತಿ ಮತ್ತು ಸಹಾನುಭೂತಿಯನ್ನು ತಮ್ಮ ಧರ್ಮದ ಉಪದೇಶಗಳ ಮೂಲಕ ಪ್ರಕಟಿಸುತ್ತಾರೆ. ಲೋಕದ ಜನರು ಅಪಹಾಸ್ಯ ಮಾಡಿದರೂ ಹಿಂಸಾಚಾರಕ್ಕೆ ಗುರಿಪಡಿಸಿದರೂ ದೇವನ ಅನುಯಾಯಿಗಳು ಶಿಕ್ಷೆ ಮತ್ತು ಕೋಪವನ್ನು ಜನರಿಂದ ದೂರಸರಿಸಲು ದೇವನೊಂದಿಗೆ ಬೇಡಿಕೊಳ್ಳುತ್ತಾ ಇರುತ್ತಾರೆ.

ಹಝ್ರತ್ ವಾಗ್ದತ್ತ ಮಸೀಹರ[ಅ] ಸತ್ಯಕ್ಕೆ ದೃಷ್ಟಾಂತವಾಗಿ ಜನರ ಮೇಲೆ ವಿಪತ್ತು ಬಂದೆರಗಿದಾಗ ಅವರು ಸಂಪೂರ್ಣವಾಗಿ ಆತಂಕಗೊಂಡು ಜನರನ್ನು ರಕ್ಷಿಸಲು ದೇವನನ್ನು ಬೇಡಿಕೊಳ್ಳುತ್ತಾ ಇದ್ದರು. ವಾಗ್ದತ್ತ ಮಸೀಹರ[ಅ] ಒಬ್ಬ ಶಿಷ್ಯ ಹೀಗೆ ವರದಿ ಮಾಡಿದ್ದಾರೆ: ಹಝ್ರತ್ ವಾಗ್ದತ್ತ ಮಸೀಹರು ಸಾಷ್ಟಾಂಗ ಪ್ರಣಾಮ ಮಾಡುತ್ತಾ, ಕಣ್ಣೀರು ಸುರಿಸುತ್ತಾ ವಿನಯಾನ್ವಿತರಾಗಿ ಹೇಗೆ ಪ್ರಾರ್ಥಿಸುತ್ತಿದ್ದರೆಂದರೆ, ಬೆಂಕಿಯಲ್ಲಿ ಬಿಸಿಯಾಗುತ್ತಿರುವ ನೀರು ಕುದಿದು ಉಕ್ಕಿ ಬರುವಂತೆ ಭಾಸವಾಗುತ್ತಿತ್ತು. ಆ ಶಿಷ್ಯರು ಹಝ್ರತ್ ವಾಗ್ದತ್ತ ಮಸೀಹರ ಸಮೀಪ ಹೋದಾಗ ಅವರು ಹೀಗೆ ಪ್ರಾರ್ಥಿಸುತ್ತಿದ್ದುದಾಗಿ ಆಲಿಸಿದರು: "ಓ ಅಲ್ಲಾಹ್, ಮಾನವರಿಗೆ ನೀನು ವಿವೇಕ ದಯಪಾಲಿಸು. ಅವರನ್ನು ಶಿಕ್ಷೆಯಿಂದ ರಕ್ಷಿಸು."

ಹೀಗಿರುವಾಗ ಧರ್ಮ ದೌರ್ಜನ್ಯವನ್ನು ಪ್ರತಿಪಾದಿಸುತ್ತದೆ ಮತ್ತು ಅದು ರಕ್ತಪಾತಕ್ಕೆ ಕಾರಣವಾಗಿದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಧರ್ಮ ತನ್ನ ಅನುಯಾಯಿಗಳಲ್ಲಿ ದೇವನ ಸೃಷ್ಟಿಗಳ ಬಗ್ಗೆ ಪ್ರೀತಿ ಮತ್ತು ಅನುಕಂಪವನ್ನು ಬೆಳೆಸುತ್ತಿದೆಯಲ್ಲವೆ?

ಈ ಕಾಲಘಟ್ಟದ ಇಮಾಮರಾದ ಹಝ್ರತ್ ವಾಗ್ದತ್ತ ಮಸೀಹರನ್ನು ನಿರಾಕರಿಸುವ ಮುಸ್ಲಿಮರು ಸಹಿತ ಲೋಕದ ಜನರು ಏನೇ ಆರೋಪಣೆ ಮಾಡಲಿ, ಅವರು ಅದನ್ನು ಮನವರಿಕೆ ಮಾಡುತ್ತಾರಾದರೂ ಇಲ್ಲವಾದರೂ ವಾಸ್ತವಿಕವಾದುದೇನೆಂದರೆ, ದೇವನು ಮಾನವರನ್ನು ಪ್ರೀತಿಸುತ್ತಾನೆ ಮತ್ತು ಅವನು ಎಲ್ಲರೊಂದಿಗೆ ಹೊಂದಿರುವ ಕರುಣೆ ಮತ್ತು ದಯೆಯ ಕಾರಣ ಅವನು ವಿವಿಧ ಪ್ರವಾದಿಗಳನ್ನು ವಿವಿಧ ಕಾಲಗಳಲ್ಲಿ ಕಳುಹಿಸಿದನು. ದೇವನು ಅಂತಿಮ ಧರ್ಮವಾದ ಇಸ್ಲಾಮನ್ನು ಸ್ಥಾಪಿಸಿದನು. ಅದು ಎಲ್ಲ ಉಪದೇಶಗಳನ್ನೂ ದರ್ಶನಗಳನ್ನೂ ಒಳಗೊಂಡಿದೆ. ಅವನು ಪವಿತ್ರ ಖುರ್‌ಆನ್ ಎಂಬ ಅಂತಿಮ ನ್ಯಾಯ ಸಂಹಿತೆಯನ್ನು ಅವತೀರ್ಣಗೊಳಿಸಿದನು. ದೇವನು ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಅಂತಿಮ ನ್ಯಾಯ ಪ್ರಮಾಣವಾದ ಪವಿತ್ರ ಖುರ್‌ಆನ್‌ನೊಂದಿಗೆ ಕಳುಹಿಸಿದನು. ಅವನು ಈಗಿನ ಕಾಲಘಟ್ಟದಲ್ಲಿ ಹಝ್ರತ್ ಪೈಗಂಬರರ[ಸ] ದಾಸನಾದ ವಾಗ್ದತ್ತ ಮಸೀಹರನ್ನು[ಅ] ಕಳುಹಿಸಿದನು. ಅವರು ಧರ್ಮದ ವಾಸ್ತವಿಕತೆಯನ್ನು ನಮಗೆ ಕಲಿಸಿಕೊಟ್ಟರು. ನಾವು ಅವರೊಂದಿಗೆ ನಿಷ್ಠೆಯ ಪ್ರತಿಜ್ಞೆ (ಬೈಅತ್) ಮಾಡಿ ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಪ್ರವೇಶಿಸುವ ಭಾಗ್ಯ ಪಡೆದಿದ್ದೇವೆ. ಹಝ್ರತ್ ವಾಗ್ದತ್ತ ಮಸೀಹರ ಮಾತುಗಳಲ್ಲಿ ಧರ್ಮವೇನೆಂದು ಮತ್ತು ಅದರ ಆವಶ್ಯಕತೆ ಏನೆಂದು ವಿವರಿಸುವೆನು. ಇಂದಿನ ಕಾಲದಲ್ಲಿ ಧರ್ಮದ ವಿರುದ್ಧ ವಿಮರ್ಶೆಗಳು ಪ್ರಚಲಿತವಾಗಿವೆ. ಧರ್ಮದ ಆವಶ್ಯಕತೆಯೇನೆಂಬುದರ ಬಗ್ಗೆ ನಾವು ಚೆನ್ನಾಗಿ ಮನವರಿಕೆ

ಮಾಡಿಕೊಳ್ಳಬೇಕಾಗಿದೆ.

ನಾವು ನಮ್ಮ ಹೊಣೆಗಾರಿಕೆಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕು. ಹಝ್ರತ್ ವಾಗ್ದತ್ತ ಮಸೀಹರು ನಮ್ಮಿಂದ ಏನನ್ನು ಆವಶ್ಯಪಡುತ್ತಾರೆಂದು ನಾವು ತಿಳಿದುಕೊಳ್ಳಬೇಕು. ಇಸ್ಲಾಮ್ ಹೊಂದಿರುವ ಶ್ರೇಷ್ಠತೆಯನ್ನು ಅರಿತುಕೊಳ್ಳಬೇಕು. ಇಸ್ಲಾಮ್ ಧರ್ಮ ತನ್ನ ಅನುಯಾಯಿಗಳಿಂದ ಏನನ್ನು ಆವಶ್ಯಪಡುತ್ತದೆ ಎಂದು ಮನವರಿಕೆ ಮಾಡಿಕೊಳ್ಳಬೇಕು. ಅದು ಅವಶ್ಯಪಡುವುದನ್ನು ಮಾತ್ರವಲ್ಲ, ಅದು ನಮಗೆ ಏನನ್ನು ನೀಡುತ್ತದೆ ಎನ್ನುವುದನ್ನೂ ಅರಿತುಕೊಳ್ಳಬೇಕು. ಧರ್ಮ ಜೀವದಾಯಕವಾಗಿದೆ ಎಂದು ಹೇಳಲಾಗುತ್ತಿದೆ. ಅದು ಹೇಗೆ?

ಮಾನವರನ್ನು ಅಸ್ತವ್ಯಸ್ತತೆಯಿಂದಲೂ ಭ್ರಷ್ಟತೆಯಿಂದಲೂ ದೂರಸರಿಸಿ ಒಗ್ಗೂಡಿಸಲು ದೇವನು ಮಾರ್ಗವನ್ನುಂಟುಮಾಡಿದ್ದಾನೆ. ಹಝ್ರತ್ ವಾಗ್ದತ್ತ ಮಸೀಹರು(ಅ) ಈ ಕಾರ್ಯಗಳನ್ನು ಈಡೇರಿಸಿದ್ದಾರೆ.

ಹಝ್ರತ್ ವಾಗ್ದತ್ತ ಮಸೀಹರ ಅಸಂಖ್ಯಾತ ಲೇಖನಗಳು ಈ ವಿಷಯಕ್ಕೆ ಸಂಬಂಧಿಸಿವೆ. ನಾನು ಕೆಲವು ಉಲ್ಲೇಖಗಳನ್ನು ಮಾತ್ರ ಆಯ್ಕೆ ಮಾಡಿದ್ದೇನೆ. ಧರ್ಮ ವಾಸ್ತವಿಕವಾಗಿ ಏನೆಂದೂ ಹಝ್ರತ್ ವಾಗ್ದತ್ತ ಮಸೀಹರು ನಮ್ಮಿಂದ ಏನನ್ನು ಪ್ರತೀಕ್ಷಿಸುತ್ತಿದ್ದಾರೆಂದೂ ಈ ಉಲ್ಲೇಖಗಳಿಂದ ತಿಳಿಯಬಹುದು.

## ಧರ್ಮವೆಂದರೇನು?

ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ:

"ಧರ್ಮವೆಂದರೇನು? ಒಬ್ಬನು ತನಗೋಸ್ಕರ ಆಯ್ಕೆ ಮಾಡುವ ಮಾರ್ಗವೇ ಅದಾಗಿದೆ. ವಾಸ್ತವಿಕವಾಗಿ ಪ್ರತಿಯೊಬ್ಬನಿಗೆ ಒಂದು ಧರ್ಮ ಅಥವಾ ನಂಬಿಕೆ ಇರುತ್ತದೆ. ಧರ್ಮರಹಿತನಾದ ವ್ಯಕ್ತಿ ದೇವನ ಅಸ್ತಿತ್ವವನ್ನು ನಂಬುವುದಿಲ್ಲವಾದರೂ ಅವನು ಅನುಸರಿಸಿ ಹೋಗಲು ಒಂದು ಮಾರ್ಗವನ್ನು ಆಯ್ಕೆ ಮಾಡುತ್ತಾನೆ. ಅದು ಅವನ ಧರ್ಮವಾಗಿದೆ. ಆದರೆ ಪ್ರತಿಯೊಬ್ಬನು ಚಿಂತಿಸಬೇಕಾದುದೇನೆಂದರೆ, ತಾನು ಆಯ್ಕೆಮಾಡಿದ ಮಾರ್ಗ ತನಗೆ ಶಾಶ್ವತ ಸಂತೋಷವನ್ನೂ ಶಾಂತಿಯನ್ನೂ ಸಮಾಧಾನವನ್ನೂ ನೀಡುತ್ತಿದೆಯೋ ಎಂದು. (ಈ ಪ್ರಶ್ನೆಯನ್ನು ಧರ್ಮವನ್ನು ತಿರಸ್ಕರಿಸುವವರೊಂದಿಗೆ ಕೇಳಬೇಕು.) ಧರ್ಮ ಎಂಬ ಶಬ್ದ ಸರ್ವಸಾಮಾನ್ಯವಾದ ಪದವಾಗಿದೆ. ಅದು ಒಬ್ಬನು ಅನುಸರಿಸುವ ಮಾರ್ಗವನ್ನು ಸೂಚಿಸುತ್ತದೆ. ಅದು ವಿಶ್ವಾಸದೊಂದಿಗೆ ವಿಶಿಷ್ಟ ಸಂಬಂಧ ಹೊಂದಿಲ್ಲ. ಕಲೆ, ವಿಜ್ಞಾನ, ಭೌತಶಾಸ್ತ್ರ, ಖಗೋಳಶಾಸ್ತ್ರ ಮತ್ತು ಯಾವುದೇ ಜ್ಞಾನಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರವೀಣರಿಗೆ ತಮ್ಮದೇ ಆದ ನಿಯಮಗಳು, ಸಿದ್ಧಾಂತಗಳು ಮತ್ತು ನಂಬಿಕೆಗಳಿರುತ್ತವೆ. ಆದರೆ ಇವುಗಳು ಯಾರಿಗೂ ಮೋಕ್ಷ ನೀಡಲಾರವು ಎಂಬುದು ಖಂಡಿತವಾಗಿದೆ. ಆತ್ಮಕ್ಕೆ ಶರೀರದ ಆವಶ್ಯಕತೆ ಇರುವಂತೆ, ಶಬ್ದಕ್ಕೆ ಅರ್ಥದ ಆವಶ್ಯಕತೆ ಇರುವ ಹಾಗೆಯೇ ಮಾನವರಿಗೆ ಧರ್ಮದ ಆವಶ್ಯಕತೆ ಇರುತ್ತದೆ. ದೇವನನ್ನು ಅಲ್ಲಾಹ್ ಎಂದೂ ಗಾಡ್ ಎಂದೂ ಪರಮೇಶ್ವರ ಎಂದೂ ಕರೆಯುವುದು ಮುಖ್ಯ ಅಂಶವಲ್ಲ. ತಾನು ಬೇಡಿಕೊಳ್ಳುವ ಆ ಅಸ್ತಿತ್ವವನ್ನು ಯಾವ ರೀತಿ ಪರಿಗಣಿಸುತ್ತಾನೆ ಎಂಬುದು ಮುಖ್ಯ ವಾಸ್ತವಿಕ ವಿಷಯವಾಗಿದೆ. ನಮ್ಮ ಅಭಿಪ್ರಾಯದಲ್ಲಿ ವಾಸ್ತವಿಕ ಪ್ರಶ್ನೆ ಇರುವುದು ಒಬ್ಬನು ಆ ಮಹಾನ್ ಅಸ್ತಿತ್ವವನ್ನು ಯಾವರೀತಿ ಮನವರಿಕೆ ಮಾಡಿದ್ದಾನೆಂಬುದಾಗಿದೆ. ಆ ಮಹಾ ಅಸ್ತಿತ್ವದ ಗುಣವಿಶೇಷಗಳು ಯಾವುವು? ಒಬ್ಬ ಚಿಂತಿಸಬೇಕಾದ ಮುಖ್ಯ ವಿಷಯ ದೇವನ ಗುಣ ವಿಶೇಷಗಳ ಬಗ್ಗೆಯಾಗಿದೆ."

(ಮಲ್‌ಫೂಝಾತ್ – ಸಂಪುಟ 2, ಪುಟ 236–237)

ಇಸ್ಲಾಮ್ ದೇವನ ವಿಶೇಷಗುಣಗಳನ್ನು ವಿವರಿಸಿದೆ. ದೇವನ ವಿಶೇಷ ಗುಣಗಳು ಎಂದೂ ಸ್ಥಗಿತಗೊಳ್ಳುವುದಿಲ್ಲ ಎಂದು ಅದು ಪ್ರತಿಪಾದಿಸುತ್ತದೆ. ಹಝ್ರತ್ ವಾಗ್ದತ್ತ ಮಸೀಹ್(ಅ) ಬೇರೆ ಒಂದು ಕಡೆ ಹೀಗೆ ಹೇಳಿದ್ದಾರೆ:

"ಧರ್ಮವು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿದೆ. ದೇವನಿಗೆ ಸಲ್ಲಬೇಕಾದ ಹಕ್ಕುಗಳು ಒಂದನೆಯದು. ದೇವನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳು ಎರಡನೆಯದು."

ಇನ್ನೊಂದುಕಡೆ ಹಝ್ರತ್ ವಾಗ್ದತ್ತ ಮಸೀಹರು(ಅ) ಹೇಳುತ್ತಾರೆ: "ಧರ್ಮವು ಎರಡು ಹಕ್ಕುಗಳ ಮೇಲೆ ಅಸ್ತಿಭಾರ ಹೊಂದಿದೆ ಎನ್ನುವುದನ್ನು ನೆನಪಿಡಬೇಕು. ಮೊದಲನೆಯದು, ದೇವನಿಗೆ ಸಲ್ಲಬೇಕಾದ ಹಕ್ಕುಗಳಾಗಿವೆ. ಮನುಷ್ಯನು ಹೇಗೆ ದೇವನನ್ನು ನಂಬಬೇಕು, ಅವನ ಮೇಲೆ ಹೇಗೆ ಭರವಸೆ ಹೊಂದಬೇಕು ಮತ್ತು ಅವನನ್ನು ಹೇಗೆ ಆರಾಧಿಸಬೇಕು ಎನ್ನುವುದಾಗಿದೆ. ಎರಡನೆಯದು, ದೇವನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದಾಗಿದೆ. ಅದು, ದೇವನ ಸೃಷ್ಟಿಗಳೊಂದಿಗೆ ಕಾರುಣ್ಯ, ಪ್ರೀತಿ, ಸಹಾನುಭೂತಿ ಮತ್ತು ಸಹಾಯದೊಂದಿಗೆ ವರ್ತಿಸುವುದು ಹಾಗೂ ಅವರ ನೋವನ್ನೂ ಕಷ್ಟವನ್ನೂ ದುಃಖವನ್ನೂ ನಿವಾರಿಸುವುದಾಗಿದೆ."

(ರೂಹಾನೀ ಖಝಾಇನ್ – ಸಂಪುಟ 3, ಪುಟ 119)

ಹಝ್ರತ್ ವಾಗ್ದತ್ತ ಮಸೀಹ್(ಅ) ಧರ್ಮದ ನೈಜ ವಿಶ್ವಾಸಿಗಳು ಎರಡು ಹೊಣೆಗಾರಿಕೆಗಳನ್ನು ಹೊಂದಿರುತ್ತಾರೆಂದು ವಿವರಿಸಿ, ಧರ್ಮದ ವಿಮರ್ಶಕರನ್ನು ಮೌನ ಅವಲಂಬಿಸುವಂತೆ ಮಾಡಿರುವರು. ದೇವನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ದೇವನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳು ಆ ಹೊಣೆಗಾರಿಕೆಗಳಾಗಿವೆ. ದೇವನ ಸೃಷ್ಟಿಗಳಿಗೆ ನೈಜ ಸಹಾನುಭೂತಿ ಮತ್ತು ದಯೆ ತೋರಿಸಿ, ಅವರ ನೋವು ಮತ್ತು ಕಷ್ಟಗಳಲ್ಲಿ ಪಾಲುಗಾರನಾಗಿ, ಅವರ ತಪ್ಪುಗಳನ್ನು ಕಡೆಗಣಿಸಿ, ಅವರನ್ನು ಕ್ಷಮಿಸುವಾಗ ದೇವನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳು ಈಡೇರಿಸಲ್ಪಡುತ್ತವೆ. ಇದು ಇಸ್ಲಾಮ್ ಕಲಿಸುವ ಉಪದೇಶವಾಗಿದೆ. ಆದುದರಿಂದ ಇಸ್ಲಾಮ್ ಕೊಲ್ಲಲು ಮತ್ತು ರಕ್ತಪಾತ ಮಾಡಲು ಉಪದೇಶಿಸುವುದಿಲ್ಲ.

## ಸತ್ಯಧರ್ಮ ಜೀವಂತನಾದ ಒಬ್ಬ ದೇವನನ್ನು ತೋರಿಸುತ್ತದೆ ಮತ್ತು ಉಪದೇಶಿಸುತ್ತದೆ

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ಲೋಕದಲ್ಲಿ ಜನರು ಧರ್ಮವನ್ನು ಪರಾಂಬರಿಸಿ ಸಾವಿರಾರು ಚರ್ಚೆಗಳನ್ನು ಮಾಡುತ್ತಾ ಇರುತ್ತಾರೆ. ಆದರೆ ಅವರು ಧರ್ಮದ ಬಗ್ಗೆ ಯಾವುದೇ ತೀರ್ಮಾನ ಮಾಡಲು ಸಮರ್ಥರಾಗುವುದಿಲ್ಲ. ಸತ್ಯಧರ್ಮ ಮಾನವನ ಆಧ್ಯಾತ್ಮಿಕ ಅಂಧತೆಯನ್ನು ನಿವಾರಿಸಲು ಜಯಶಾಲಿಯಾಗುತ್ತದೆ ಮತ್ತು ಅದರ ಅನುಯಾಯಿಗಳಿಗೆ ದೈನಂದಿನ ಜೀವಿತದಲ್ಲಿ ಅನುಗ್ರಹಗಳನ್ನು ಸುರಿಯುತ್ತದೆ. ಅವರು ದೇವನಿಗೆ ನಿಷ್ಠರಾಗಿ ಆರಾಧಿಸುತ್ತಾ ದೇವನ ಸೃಷ್ಟಿಗಳಿಗೆ ಪ್ರೀತಿ ಮತ್ತು ದಯೆದೋರುವವರಾಗಿ ಕಾಣಿಸುತ್ತಾರೆ. ಇಂತಹ ಧರ್ಮದ ಅನುಯಾಯಿಗಳು ತಮ್ಮ ಆತ್ಮಗಳು ದಾಹದಿಂದ ಬಳಲಿ ಆಶಿಸುವ ಉದ್ದೇಶ ಲಕ್ಷ್ಯಗಳನ್ನು ತಲಪುತ್ತಾರೆ.

ಸಾಮಾನ್ಯವಾಗಿ ಜನರು ಒಬ್ಬ ಕಾಲ್ಪನಿಕ ದೇವನನ್ನು ನಂಬುತ್ತಾರೆ. ಅವನ ಗುಣವಿಶೇಷಗಳು ವರ್ತಮಾನ ಕಾಲದಲ್ಲಾಗಲಿ, ಭವಿಷ್ಯತ್ ಕಾಲದಲ್ಲಾಗಲಿ ಕಾಣಬರುವುದಿಲ್ಲ. ಅವುಗಳ ಬಗ್ಗೆ ಪುರಾತನ ಕಾಲದ ಕಥೆಗಳನ್ನು ಮಾತ್ರ ಅನುಯಾಯಿಗಳು ಪುನರಾವರ್ತಿಸುತ್ತಾರೆ. ಈ ಜನರು ಒಬ್ಬ ಕಾಲ್ಪನಿಕ ದೇವನನ್ನು ನಂಬುವುದರಿಂದ ಅವರು ಪಾಪದಿಂದಲೂ ಕೆಟ್ಟ ಕೃತ್ಯಗಳಿಂದಲೂ ತಮ್ಮನ್ನು ತಡೆಗಟ್ಟಲಾರರು. ಅವರ ಮತಾಂಧತೆ ಮತ್ತು ಅಸೂಯೆಗಳು ವರ್ಧಿಸುತ್ತವೆಯಲ್ಲದೆ ಅನೈತಿಕ ಮತ್ತು ಕೆಟ್ಟಕೆಲಸ ಮಾಡಲು ಅವರ ಧೈರ್ಯ ಸಹ ವರ್ಧಿಸುತ್ತದೆ. ಸ್ವಾರ್ಥ ಮತ್ತು ದುರಹಂಕಾರ ಭರಿತ ಭಾವೋದ್ವೇಗಗಳು ಅವರನ್ನು ಆವರಿಸುತ್ತದೆ ನದಿಯಲ್ಲಿ – ನೆರೆಬಂದು ಅದರ ನೀರು ನದಿದಂಡೆಯನ್ನು ಮುರಿದು ಎಲ್ಲ ದಿಕ್ಕುಗಳಿಗೂ ಹರಿದು ಮನೆಗಳನ್ನೂ ಹೊಲಗಳನ್ನೂ ನಾಶಮಾಡುವೋಪಾದಿಯಲ್ಲಿ."

(ಬರಾಹೀನೆ ಅಹ್ಮದಿಯಾ – ಸಂಪುಟ 5, ರೂಹಾನೀ ಖಝಾಇನ್– ಸಂಪುಟ 21, ಪುಟ 27–29.)

ಇಂದಿನ ಕಾಲದ ಮುಸ್ಲಿಮರು ತಾವು ಇಸ್ಲಾಮನ್ನು ಅನುಸರಿಸುವುದಾಗಿ ಹೇಳಿಕೊಳ್ಳುತ್ತಾರಾದರೂ ಅವರ ಈಗಿನ ದುಸ್ಥಿತಿ ನಿವಾರಣೆಯಾಗಬೇಕಾದರೆ ಮೇಲೆ ವಿವರಿಸಿದ ಗುಣಗಳನ್ನು ಅವರು ಹೊಂದಬೇಕು. ಹಝ್ರತ್ ವಾಗ್ದತ್ತ ಮಸೀಹರು ನಮಗೆ ಸತ್ಯವನ್ನು ಸ್ಪಷ್ಟವಾಗಿ ವಿವರಿಸಿಕೊಟ್ಟಿದ್ದಾರೆ. ಧರ್ಮವನ್ನು ಸರಿಯಾಗಿ ಮನವರಿಕೆ ಮಾಡಿಕೊಳ್ಳಲು ಅವರನ್ನು ಅನುಸರಿಸುವುದು ಆವಶ್ಯಕವಾಗಿದೆ.

## ದೇವನು ದೃಷ್ಟಾಂತಗಳನ್ನು ತೋರಿಸಿ ತನ್ನ ಅಸ್ತಿತ್ವಕ್ಕೆ ಸಾಕ್ಷನೀಡುತ್ತಾನೆ

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ದೇವನಿಗೆ ಅಪರಿಮಿತ ಶಕ್ತಿಯಿದೆ. ಅವನು ಉಜ್ವಲ ದೃಷ್ಟಾಂತಗಳ ಮೂಲಕ ತನ್ನ ಶಕ್ತಿಯನ್ನು ಪ್ರದರ್ಶಿಸುತ್ತಾ ಇರುತ್ತಾನೆ ಮತ್ತು ಈ ಅದ್ಭುತ ಕೃತ್ಯಗಳ ಮೂಲಕ ತನ್ನ ಅಸ್ತಿತ್ವದ ಬಗ್ಗೆ ಅಲ್ಲಗಳೆಯಲಾಗದ ದೃಢ ಸಾಕ್ಷ್ಯ ನೀಡುತ್ತಾನೆ. ಇಂತಹ ದೇವನನ್ನು ಮನವರಿಕೆ ಮಾಡಿಕೊಂಡವನು ಪಾಪದಿಂದ ತನ್ನನ್ನು ರಕ್ಷಿಸಿಕೊಳ್ಳಲು ಸಮರ್ಥನಾಗುತ್ತಾನೆ ಮತ್ತು ಅವನು ನಿಜವಾದ ಶಾಂತಿ, ಸಮಾಧಾನ, ತೃಪ್ತಿ, ಸಹನೆ, ಸ್ಥಿರತೆ ಮತ್ತು ಧೈರ್ಯ ಗಳಿಸುತ್ತಾನೆ. ದೇವನು ಪ್ರತಿಯೊಂದು ಪಾಪ ಕೃತ್ಯವನ್ನು ಸುಟ್ಟುಹಾಕುವ ಅಗ್ನಿಯಾಗುತ್ತಾನೆ ಮತ್ತು ಲೌಕಿಕ ಆಶಾಭಿಲಾಷೆಗಳನ್ನು ತಣಿಸುವ ನೀರಾಗುತ್ತಾನೆ ಹಾಗೂ ಅವುಗಳಿಂದ ಅವನನ್ನು ಮುಕ್ತನನ್ನಾಗಿ ಮಾಡಿ ಪರಿಶುದ್ಧಿಗೊಳಿಸುತ್ತಾನೆ. ಯಾರು ಈ ಉದ್ದೇಶ ಲಕ್ಷ್ಯವನ್ನು ತಲಪಲು ತೀವ್ರ ಯತ್ನಮಾಡುತ್ತಾನೋ ಅದೇ ಅವನ ಧರ್ಮವಾಗಿದೆ. ಕೆಲವರು ತಮ್ಮ ಅಹಂಕಾರದಿಂದ ಒಣ ಚರ್ಚೆ ಮಾಡುತ್ತಾರೆ, ಅನ್ಯರನ್ನು ದೂಷಿಸಿ ನಿಂದಿಸುತ್ತಾರೆ, ಕಠಿಣ ಮತ್ತು ಅಶ್ಲೀಲ ಪದಗಳನ್ನು ಬಳಸುತ್ತಾರೆ. ಅವರು ಇದನ್ನೆಲ್ಲ ಧರ್ಮದ ಹೆಸರಿನಲ್ಲಿ ಮಾಡುತ್ತಾರೆ. ಅವರು ತಮ್ಮ ಆಂತರಿಕ ಮಾಲಿನ್ಯಗಳನ್ನು ಶುದ್ಧೀಕರಿಸಲು ಪ್ರಯತ್ನಿಸುವುದಿಲ್ಲ, ಪಾಪದಿಂದ ದೂರಸರಿಯುವುದಿಲ್ಲ ಮತ್ತು ಅವರು ನಿಜವಾಗಿಯೂ ಪ್ರೀತಿಸುವ ದೇವನೊಂದಿಗೆ ಸಂಬಂಧ ಸ್ಥಾಪಿಸಲು ಪ್ರಯತ್ನಿಸುವುದಿಲ್ಲ. ಅವರು ಒಬ್ಬರಿನ್ನೊಬ್ಬರನ್ನು ಮಾನವೀಯ ಗುಣರಹಿತ ಅನಾಗರಿಕರ ಹಾಗೆ ಆಕ್ರಮಿಸುತ್ತಾರೆ. ಧರ್ಮವನ್ನು ಪ್ರತಿರೋಧಿಸುವ ಹೆಸರಿನಲ್ಲಿ ಅವರ ಅಶ್ಲೀಲ ಮತ್ತು ಕೆಟ್ಟ ವರ್ತನೆ ಬಹಿರಂಗವಾಗುತ್ತದೆ. ಇವುಗಳೆಲ್ಲ ಒಣ ಎಲುಬಿನ ಹಾಗೆ ಅತ್ಯಂತ ಜಿಗುಪ್ಸಾವಹವಾಗಿವೆ. ಇದನ್ನು ಧರ್ಮವೆಂದು ಹೇಳಲು ಸಾಧ್ಯವೇ ಇಲ್ಲ. ಈ ತಾತ್ಕಾಲಿಕ ಜೀವನಕ್ಕೆ ಪ್ರವೇಶಿಸಿದುದರ ಉದ್ದೇಶವನ್ನು ಈ ಜನರು ಅರಿತುಕೊಳ್ಳದೆ ಅಂಧರಾಗಿಯೂ ಕೊಳಕರಾಗಿಯೂ ಜೀವಿಸುವುದು ಎಷ್ಟು ದುರದೃಷ್ಟಕರವಾಗಿದೆ! ಅವರ ಅಂಧ ಸಂಕುಚಿತ ಮನೋಭಾವದ ಉದ್ವೇಗಗಳೇ ಅವರ ಧರ್ಮವಾಗಿದೆ. ಅವರು ತಮ್ಮ ಕಾಲ್ಪನಿಕ ದೇವನ ಪರವಾಗಿ ಕೆಟ್ಟ ಸ್ವಭಾವಗುಣಗಳನ್ನು, ದ್ವೇಷಭರಿತ ಭಾಷೆಯನ್ನು ಬಳಸುತ್ತಾರೆ. ಅವರು ತಮ್ಮ ಕಾಲ್ಪನಿಕ ದೇವನ ಅಸ್ತಿತ್ವವನ್ನು ಸಾಬೀತುಗೊಳಿಸಲಾರರು. ಜೀವಂತನಾಗಿಲ್ಲದ ಮತ್ತು ಶವಶರೀರದಂತೆ ಭುಜದ ಮೇಲೆ ಇರಿಸಿ ಎತ್ತಿಕೊಂಡು ಹೋಗಬೇಕಾದ ಒಬ್ಬ ಕಾಲ್ಪನಿಕ ದೇವನನ್ನು ಆರಾಧಿಸಬೇಕೆಂದು ಉಪದೇಶಿಸುವ ಧರ್ಮ ನಿಷ್ಪ್ರಯೋಜಕವಾಗಿದೆ. ದೇವನ ಬಗ್ಗೆ ಈ ಕಲ್ಪನೆಯನ್ನು ಸ್ಥಾಪಿಸಲು ಸಾಧ್ಯವಾಗದಾಗ ಮತ್ತು ಅನ್ಯರು ಅದನ್ನು ಬೆಂಬಲಿಸದಿರುವಾಗ ಅದು ನಿಶ್ಶೇಷವಾಗುತ್ತದೆ. ಇಂತಹ ಧರ್ಮ ಅವರ ಅನುಯಾಯಿಗಳನ್ನು ಅಂಧ ವಿಶ್ವಾಸಿಗಳನ್ನಾಗಿಯೂ ದ್ವೇಷಭರಿತರನ್ನಾಗಿಯೂ ಮಾಡುತ್ತದೆ. ಅವರು ದೇವನನ್ನು ಆರಾಧಿಸುವ ಉತ್ತಮ ರೀತಿಯನ್ನು ಹೊಂದಿರುವುದಿಲ್ಲ ಮತ್ತು ಮಾನವರ ಬಗ್ಗೆ ಪ್ರೀತಿ ಮತ್ತು ಸಹಾನುಭೂತಿ ಹೊಂದಿರುವುದಿಲ್ಲ. ಇಂತಹ ಧರ್ಮದ ಅನುಯಾಯಿಗಳು ತಮ್ಮ ವಿಶ್ವಾಸದ ಬಗ್ಗೆ ವಿರೋಧವನ್ನು ಎದುರಿಸುವಾಗ ಅವರ ಹೃದಯ ದ್ವೇಷಭರಿತವಾಗುತ್ತದೆ ಮತ್ತು ಅವರ ಹಗೆತನ ಅನ್ಯರಜೀವ, ಸಂಪತ್ತು ಮತ್ತು ಗೌರವವನ್ನು ಆಕ್ರಮಿಸುವಂತೆ ಮಾಡುತ್ತದೆ. ಅವರು ವಿರೋಧಿಗಳನ್ನು ನಾಶ ಮಾಡಲು ಬಯಸುತ್ತಾರೆ. ಅವರಿಗೆ ದೇವ ಭಯವಿರಲಾರದು; ನೈತಿಕತೆ ಮತ್ತು ನ್ಯಾಯಪಾಲನೆಯ ಬಗ್ಗೆ ಕಾಳಜಿ ಇರಲಾರದು; ಕಾರುಣ್ಯ, ನ್ಯಾಯಪಾಲನೆ ಮತ್ತು ಸಹಾನುಭೂತಿ ಮೊದಲಾದ ಉದಾತ್ತ ಗುಣಗಳು ಅವರಿಗಿರಲಾರದು. ಅವರು ಮತಾಂಧರಾಗಿ ಅನಾಗರಿಕ ಸ್ವಭಾವಗುಣಗಳನ್ನು ಹೊಂದುವರು. ಇಂತಹ ಪರಿಸ್ಥಿತಿಯಲ್ಲಿ ಧರ್ಮದ ನೈಜ ಉದ್ದೇಶ ಅವರಿಗೆ ಸಂಪೂರ್ಣವಾಗಿ ನಷ್ಟವಾಗಿರುವುದು."

## ಧರ್ಮ ಮನುಷ್ಯರ ಸಹಜಗುಣಗಳನ್ನು ಎಷ್ಟರಮಟ್ಟಿಗೆ ಪ್ರಭಾವಿಸುತ್ತದೆ?

ಧರ್ಮದ ಆವಶ್ಯಕತೆ ಬಗ್ಗೆ ವಿವರಿಸುತ್ತಾ ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ:

"ಸತ್ಯವನ್ನು ಅರಿತುಕೊಳ್ಳಬೇಕೆಂಬ ಹಸಿವು ಮತ್ತು ದಾಹವುಳ್ಳವನು ಬೇಗನೆ ಅರಿತುಕೊಳ್ಳುವನು – ಧರ್ಮದ ಉದಯಕ್ಕೆ ಮೊದಲೇ, ದೇವನು ಹೀಗೆ ವಿಧಿಸಿದ್ದನು: ಕೆಲವು ಜನರು ಪ್ರೀತಿ ಮತ್ತು ದಯೆಯ ಸಹಜಗುಣವನ್ನು ಹೆಚ್ಚು ಹೊಂದುವರು ಮತ್ತು ಬೇರೆ ಕೆಲವರು ಕೋಪ ಎಂಬ ಸಹಜಗುಣವನ್ನು ಹೆಚ್ಚು ಹೊಂದುವರು. ಧರ್ಮ ಕಲಿಸುವುದೇನೆಂದರೆ, ವಿಗ್ರಹಗಳ ಆರಾಧಕನು ಅಥವಾ ಮನುಷ್ಯರ ಆರಾಧಕನು ಅವರ ಬಗ್ಗೆ ಹೊಂದಿದ ಪ್ರೀತಿ, ವಿಧೇಯತೆ, ಪ್ರಾಮಾಣಿಕತೆ ಮತ್ತು ವಿಶ್ವಾಸವನ್ನು ಅವುಗಳಿಗೆ ಬದಲಾಗಿ ದೇವನ ಕಡೆಗೆ ಅಭಿಮುಖೀಕರಿಸಬೇಕು ಹಾಗೂ ದೇವ ಮಾರ್ಗದಲ್ಲಿ ನಿಷ್ಠಾವಂತನಾಗಬೇಕು.

"ಧರ್ಮ ಎಷ್ಟರ ಮಟ್ಟಿಗೆ ಸಹಜಗುಣಗಳ ಮೇಲೆ ಪ್ರಭಾವ ಬೀರುತ್ತದೆ? ಇದಕ್ಕೆ ಉತ್ತರ ಬೈಬಲಿನ ಸುವಾರ್ತೆಗಳು ನೀಡಿಲ್ಲ.

ಆದರೆ ಪವಿತ್ರ ಖುರ್‌ಆನ್ ಸವಿಸ್ತಾರವಾಗಿ ಉತ್ತರ ನೀಡಿದೆ. ಅದು ಹೇಳುವುದೇನೆಂದರೆ, ಧರ್ಮದ ಕೆಲಸ ಮನುಷ್ಯನ ಸಹಜ ಗುಣಗಳನ್ನು ಬದಲಾಯಿಸುವುದು ಅಥವಾ ತೋಳಗಳನ್ನು ಕುರಿಗಳನ್ನಾಗಿ ಮಾಡುವುದು ಅಲ್ಲ. ಧರ್ಮವು ಮನುಷ್ಯನ ಸಹಜಗುಣಗಳನ್ನು ಸಮಯ ಮತ್ತು ಸ್ಥಳದ ಆವಶ್ಯಕತೆಗೆ ಅನುಸಾರವಾಗಿ ಸರಿಯಾಗಿ ಬಳಸುವುದನ್ನು ಕಲಿಸುತ್ತದೆ. ಧರ್ಮದ ಉದ್ದೇಶ ಮನುಷ್ಯರ ಸಹಜಗುಣಗಳನ್ನು ಬದಲಾಯಿಸುವುದಲ್ಲ. ಅವುಗಳನ್ನು ಸರಿಯಾಗಿ ಬಳಸುವುದಕ್ಕೆ ಮಾರ್ಗದರ್ಶನ ನೀಡುವುದು ಧರ್ಮದ ಉದ್ದೇಶವಾಗಿದೆ. ಯಾವುದಾದರೂ ಒಂದು ಸಹಜಗುಣದ ಬಗ್ಗೆ ಒತ್ತಿಹೇಳದೆ, ಉದಾಹರಣೆಗೆ, ದಯೆ ಅಥವಾ ಕ್ಷಮೆಯ ಬಗ್ಗೆ ಒತ್ತಿ ಹೇಳದೆ ಅದು ಎಲ್ಲ ಸಹಜಗುಣಗಳನ್ನು ಸರಿಯಾದ ರೀತಿಯಲ್ಲಿ ಬಳಸುವುದನ್ನು ಉಪದೇಶಿಸುತ್ತದೆ. ಮನುಷ್ಯನ ಯಾವುದೇ ಸಹಜಗುಣ ಕೆಟ್ಟದಾಗಿಲ್ಲ. ಅವುಗಳ ತಪ್ಪು ಅಥವಾ ಅಮಿತವಾದ ಬಳಕೆ ಅವುಗಳನ್ನು ಹಾಗೆ ಮಾಡುತ್ತದೆ. ಒಬ್ಬನನ್ನು ಅವನ ಸಹಜ ಗುಣಗಳ ಕಾರಣ ನಿಂದಿಸಬಾರದು – ಅವುಗಳನ್ನು ದುರುಪಯೋಗಪಡಿಸಿದ ಸಂದರ್ಭಗಳಲ್ಲಿ ಹೊರತು." (ಸಿರಾಜುದ್ದೀನ್ ಈಸಾಯಿ ಕೆ ಚಾರ್ ಸವಾಲೋಂಕೆ ಜವಾಬ್ – ಪುಟ 15–16)

ಹಝ್ರತ್ ವಾಗ್ದತ್ತ ಮಸೀಹರು ಹೇಳುವುದೇನೆಂದರೆ, ಒಬ್ಬನು ತನ್ನ ಸಹಜ ಗುಣಗಳನ್ನು ಸರಿಯಾಗಿ ಬಳಸದೆ ತಪ್ಪುದಾರಿಯಲ್ಲಿ ಸಾಗುವನಾದರೆ ಮಾತ್ರ ಅವನನ್ನು ಖಂಡಿಸಬೇಕೆಂದಾಗಿದೆ. ಇದು ಇಸ್ಲಾಮಿನ ಸೌಂದರ್ಯವನ್ನು ಪ್ರಕಟಿಸುತ್ತದೆ. ಅದು ಮನುಷ್ಯನ ಪ್ರಕೃತಿಗೆ ಅನುಸಾರವಾದ ಮಹತ್ವಾದ ಆಜ್ಞೆಗಳನ್ನು ನೀಡುತ್ತದೆ. ಬೇರೆ ಯಾವುದೇ ಧರ್ಮ ಅಥವಾ ನಿಯಮ ಮನುಷ್ಯನ ಪ್ರಕೃತಿಯ ಆವಶ್ಯಕತೆಗಳಿಗೆ ಅನುಸಾರವಾಗಿ ಆಜ್ಞೆ ನೀಡುವುದಿಲ್ಲ ಮತ್ತು ಇಸ್ಲಾಮಿಗೆ ಸಮವಾಗಿಯೂ ಇಲ್ಲ. ಒಂದು ಮನುಷ್ಯ ನಿರ್ಮಿತ ನಿಯಮವನ್ನು ಜಾರಿಗೊಳಿಸಿದಾಗ ಅದನ್ನು ಪ್ರಚಲಿತ ಆವಶ್ಯಕತೆಗಳಿಗನುಸಾರವಾಗಿ ಹೇಗೆ ತಿದ್ದಬಹುದೆಂದು ಚರ್ಚೆಗಳು ಪ್ರಾರಂಭವಾಗುತ್ತವೆ. ಇಸ್ಲಾಮಿನ ಅನೇಕ ವಿಮರ್ಶಕರು ಕೆಲವು ಇಸ್ಲಾಮೀ ನಿಯಮಗಳನ್ನು ಆಕ್ಷೇಪಿಸುತ್ತಾರೆ. ಅವರ ಆಕ್ಷೇಪಗಳು ಸಿಂಧುವಲ್ಲವೆಂದು ಅವರು ನೆನಪಿಡಬೇಕು.

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ಧರ್ಮವನ್ನು ಅನುಸರಿಸುವ ವಾಸ್ತವಿಕ ಉದ್ದೇಶ, ದೇವನ ಬಗ್ಗೆ ದೃಢನಂಬಿಕೆಯನ್ನು ಹೇಗೆ ಹೊಂದಬೇಕೆಂದರೆ, ಅವನನ್ನು ಸ್ವತಃ ಕಾಣುವಂತೆ. ಪಾಪ ಮಾಡುವ ಕೆಟ್ಟ ಆಸಕ್ತಿ ಮನುಷ್ಯನನ್ನು ನಾಶಕ್ಕೆ ಒಯ್ಯುತ್ತದೆ. ದೇವನು ಅಸ್ತಿತ್ವದಲ್ಲಿರುವನು ಎಂಬ ದೃಢವಿಶ್ವಾಸ ಉಂಟಾಗುವ ತನಕ ಮನುಷ್ಯನು ಪಾಪವೆಂಬ ಜೀವಹರಣ ಮಾಡುವ ವಿಷದಿಂದ ತನ್ನನ್ನು ರಕ್ಷಿಸಿಕೊಳ್ಳಲಾರ. ದೇವನು ಪಾಪಿಯನ್ನು ಶಿಕ್ಷಿಸುತ್ತಾನೆ ಮತ್ತು ಸಾತ್ವಿಕನಾದವನಿಗೆ ಶಾಶ್ವತ ಸುಖ ನೀಡುತ್ತಾನೆ. ಒಬ್ಬನು ಒಂದು ವಸ್ತುವಿನ ಬಗ್ಗೆ ಅದು ಮಾರಕವೆಂದು ದೃಢವಾಗಿ ನಂಬಿದರೆ ಅದನ್ನು ಬಳಸಲಾರ ಎಂಬುದು ನಮ್ಮ ಸಾಮಾನ್ಯ ಅನುಭವವಾಗಿದೆ. ಉದಾಹರಣೆಗೆ, ಒಬ್ಬನು ವಿಷವನ್ನು ಪ್ರಜ್ಞಾವಂತನಾಗಿ ತಿನ್ನಲಾರ. ಒಂದು ಕ್ರೂರ ಹುಲಿಯ ಮುಂದೆ ಒಬ್ಬನು ಉದ್ದೇಶಪೂರ್ವಕವಾಗಿ ನಿಲ್ಲಲಾರ. ಒಂದು ವಿಷ ಸರ್ಪದ ದವಡೆಗೆ ಯಾರೂ ಬುದ್ಧಿಪೂರ್ವಕವಾಗಿ ಕೈ ತುರುಕಲಾರ. ಹೀಗಿರುವಾಗ ಮನುಷ್ಯನು ಬೇಕುಬೇಕೆಂದೇ ಪಾಪ ಏಕೆ ಮಾಡುತ್ತಾನೆ? ಅವನಿಗೆ ಮೇಲೆ ವಿವರಿಸಿದ ಹಾನಿಕಾರಕ ವಿಷಯಗಳ ಬಗ್ಗೆ ಎಂತಹ ದೃಢನಂಬಿಕೆ ಇದೆಯೋ ಅಂತಹ ದೃಢನಂಬಿಕೆ ಪಾಪವು ಹಾನಿಕಾರಕ ಎನ್ನುವುದರ ಬಗ್ಗೆ ಇಲ್ಲ. ಆದುದರಿಂದ ಮನುಷ್ಯನಿಗೆ ಮೊತ್ತ ಮೊದಲು ಇರುವ ಹೊಣೆಗಾರಿಕೆ ಏನೆಂದರೆ, ಅವನು ದೇವನ ಅಸ್ತಿತ್ವದ ಬಗ್ಗೆ ದೃಢನಂಬಿಕೆ ಹೊಂದಬೇಕು ಮತ್ತು ಇಂತಹ ದೃಢನಂಬಿಕೆ ಉಂಟುಮಾಡುವಂತಹ ಧರ್ಮವನ್ನು ಅವಲಂಬಿಸಬೇಕು. ಆ ಮೂಲಕ ದೇವನಿಗೆ ಭಯಪಡುತ್ತಾ ಪಾಪಕೃತ್ಯ ಮಾಡದಂತೆ ರಕ್ಷಿಸಿಕೊಳ್ಳಬೇಕು. ಇಂತಹ ದೃಢನಂಬಿಕೆ ಕೇವಲ ಕಥೆಗಳನ್ನು ಆಲಿಸಿದರೆ ಲಭಿಸಲಾರದು. ಅದನ್ನು ವಾಗ್ವಾದಗಳಿಂದ ಗಳಿಸಲಾಗದು. ದೇವನ ಬಗ್ಗೆ ದೃಢನಂಬಿಕೆ ಹುಟ್ಟುವುದು ಅವನ ಬಗ್ಗೆ ಅನುಭವ ಜ್ಞಾನಗಳಿಸುವ ಮೂಲಕ, ಅವನೊಂದಿಗೆ ಸಂವಾದಿಸುವ ಮೂಲಕ ಅಥವಾ ಅವನ ಅದ್ಭುತ ದೃಷ್ಟಾಂತಗಳನ್ನು ಕಾಣುವ ಮೂಲಕ ಅಥವಾ ಅಂತಹ ಅನುಭವ ಪಡೆದವರ ಜೊತೆಗಿರುವ ಮೂಲಕವಾಗಿರುತ್ತದೆ." (ನಸೀಮೆ ದಲ್‌ವತ್, ರೂಹಾನೀ ಖಝಾಇನ್ – ಸಂಪುಟ 19, ಪುಟ 447–448)

## ಅನ್ಯಧರ್ಮಗಳನ್ನು ನಿಂದಿಸುವುದು ಅಧಾರ್ಮಿಕ ಕೆಲಸ

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ಪುಣ್ಯ ಪುರುಷರನ್ನು, ಪ್ರವಾದಿಗಳನ್ನು, ಸಂದೇಶವಾಹಕರನ್ನು ದೂಷಿಸಲು ಮತ್ತು ಸುಳ್ಳು ಆರೋಪ ಮಾಡಲು ಧರ್ಮ ಕಲಿಸುವುದಿಲ್ಲ. ಹೀಗೆ ಮಾಡುವುದು ಧರ್ಮದ ಉದ್ದೇಶಕ್ಕೆ ವಿರುದ್ಧವಾಗಿದೆ. ಧರ್ಮದ ನಿಜವಾದ ಉದ್ದೇಶ, ಎಲ್ಲ ಕೆಡುಕುಗಳಿಂದ ತನ್ನನ್ನು ಶುದ್ಧೀಕರಿಸುವುದು, ಸರ್ವಶಕ್ತನ ಸನ್ನಿಧಿಯಲ್ಲಿ ಸದಾಕಾಲ ಸಾಷ್ಟಾಂಗ ಪ್ರಣಾಮ ಮಾಡುವ ಮನೋಭಾವ ಹೊಂದುವುದು, ದೃಢನಂಬಿಕೆ, ಪ್ರೀತಿ, ಜ್ಞಾನ, ಸತ್ಯ ಮತ್ತು ಪ್ರಾಮಾಣಿಕತೆ ಹೊಂದಿ ತನ್ನಲ್ಲಿ ಪರಿಶುದ್ಧ ಪರಿವರ್ತನೆ ಉಂಟುಮಾಡುವುದು ಮತ್ತು ಇಹಲೋಕದಲ್ಲಿಯೇ ಸ್ವರ್ಗೀಯ ಸುಖ ಅನುಭವಿಸುವುದಾಗಿದೆ." (ಲೆಕ್ಚರ್ ಸಿಯಾಲ್ ಕೋಟ್–ಪುಟ 47)

ಎಲ್ಲ ಪ್ರವಾದಿಗಳನ್ನೂ ಪುಣ್ಯಪುರುಷರನ್ನೂ ಗೌರವಿಸಲು ಇಸ್ಲಾಮ್ ಉಪದೇಶಿಸುತ್ತದೆ. ಅನ್ಯರು ಪೂಜಿಸುವ ವಿಗ್ರಹಗಳ ಬಗ್ಗೆ ಕೂಡ ನಿಂದಿಸಬಾರದೆಂದು ಅದು ಹೇಳುತ್ತದೆ. ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ಧಾರ್ಮಿಕ ವ್ಯಕ್ತಿಯಾಗಲು ಎರಡು ಹಾನಿಕಾರಕ ರೋಗಗಳಿಂದ ರಕ್ಷಿಸಲ್ಪಡುವುದು ಆವಶ್ಯಕವಾಗಿದೆ. ಒಂದನೆಯದು, ಸರ್ವ ಪರಿಪೂರ್ಣ ಗುಣವಿಶೇಷಗಳನ್ನು ಹೊಂದಿದ ಸರ್ವಶಕ್ತನಾದ ದೇವನ ಅಸ್ತಿತ್ವವನ್ನು ತಿರಸ್ಕರಿಸುವುದಾಗಿದೆ. ಇಂತಹ ವ್ಯಕ್ತಿ ಸಂಪೂರ್ಣವಾಗಿ ಅವಿಶ್ವಾಸಿಯಾಗಿ ದೇವನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಲು ನಿರ್ಲಕ್ಷಿಸುತ್ತಾನೆ ಮತ್ತು ಮನುಷ್ಯನ ನರನಾಡಿಗಳಲ್ಲಿ ದೇವನು ನೀಡಿದ ಅನುಗ್ರಹಗಳನ್ನು ನಿರಾಕರಿಸುತ್ತಾನೆ. ಎರಡನೆಯದು, ಅವನು ಅನ್ಯರಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಿಕೊಡುವ ಬದಲಾಗಿ ಅವರ ಹಕ್ಕುಗಳನ್ನು ಕಸಿದುಕೊಳ್ಳುತ್ತಾನೆ ಮತ್ತು ಅವನು ವಿಷಕಾರಿ ಸರ್ಪದ ಹಾಗೆ ತನ್ನ ಧರ್ಮವನ್ನು ಎದುರಿಸುವವನನ್ನೂ ಅದನ್ನು ತ್ಯಜಿಸುವವನನ್ನೂ ಆಕ್ರಮಿಸುತ್ತಾನೆ. ಇಂತಹ ಮನುಷ್ಯನಿಗೆ ಜೀವಂತ ದೇವನ ಬಗ್ಗೆ ಅರಿವಿಲ್ಲದ ಕಾರಣ ಅವನು ಮೃತ್ಯುವನ್ನು ಹೊಂದಿರುತ್ತಾನೆ. ಜೀವಂತ ಮತ್ತು ತಾಜಾ ದೃಷ್ಟಾಂತಗಳನ್ನು ಕಾಣದೆ ಒಬ್ಬನ ವಿಶ್ವಾಸ ಪುನಶ್ಚೇತನಗೊಳ್ಳಲಾರದು."

(ಬರಾಹೀನೆ ಅಹ್ಮದಿಯಾ – ಸಂಪುಟ 5 – ರೂಹಾನೀ ಖಝಾಇನ್ ಸಂಪುಟ 21, ಪುಟ 30)

ಇಂದಿನ ಕಾಲದಲ್ಲಿ ದೇವನ ಜೀವಂತ ದೃಷ್ಟಾಂತಗಳನ್ನು ಕಾಣುವ ಭಾಗ್ಯವನ್ನು ಅಹ್ಮದೀ ಮುಸ್ಲಿಮರು ಹೊಂದಿದ್ದಾರೆ. ಇಂತಹ ದೃಷ್ಟಾಂತಗಳನ್ನು ಕಾಣಲು ಆಶಿಸುವವರಿಗೆ ದೇವನು ಅಹ್ಮದಿಯತ್‌ನ ಕಡೆಗೆ ಮಾರ್ಗದರ್ಶನ ನೀಡಿದ್ದಾನೆ. ಇದಕ್ಕೆ ಸಂಬಂಧಿಸಿ ಅನೇಕ ಸಂಭವಗಳಿವೆ. ನಾನು ಒಂದು ಚಿಕ್ಕ ಘಟನೆ ಮಾತ್ರ ವಿವರಿಸುವೆನು.

## ಒಬ್ಬ ಅಲ್ಜೀರಿಯನ್ ಮಹಿಳೆ ಸತ್ಯದ ಕಡೆಗೆ ಮಾರ್ಗದರ್ಶನ ನೀಡಲ್ಪಟ್ಟರು

ಅಲ್ಜೀರಿಯಾ ದೇಶದ ಒಬ್ಬ ಮಹಿಳೆ ಹೀಗೆ ಹೇಳುತ್ತಾರೆ:

"ಕೆಲವು ವರ್ಷಗಳ ಹಿಂದೆ ನಾನು ಒಂದು ಸ್ವಪ್ನ ಕಂಡೆನು. ಅದರಲ್ಲಿ ನಾನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಮಾಧಿಭವನದ ಸಮೀಪ ದೀರ್ಘಕಾಲ ಧಾರಾಳವಾಗಿ ಅಳುತ್ತಾ ಇರುವುದಾಗಿ ಕಂಡೆನು. ಈ ಸ್ವಪ್ನ ಕಂಡ ನಂತರ ನಾನು ಸ್ಥಿರವಾಗಿ ದೇವನೊಂದಿಗೆ ನೇರಮಾರ್ಗದ ಕುರಿತು ಮಾರ್ಗದರ್ಶನ ನೀಡಲು ಬೇಡಿಕೊಳ್ಳುತ್ತಾ ಇದ್ದೆನು. ನಾನು ವಿವಿಧ ಧಾರ್ಮಿಕ ಟಿ.ವಿ.ಗಳನ್ನು ನೋಡುತ್ತಾ ಇದ್ದೆನು. ಆದರೆ ಯಾವುದೂ ನನಗೆ ಸಮಾಧಾನ ನೀಡಲಿಲ್ಲ. ನಾನು ಬಹಳ ದುಃಖದಿಂದ ಪ್ರಾರ್ಥಿಸುತ್ತಾ ಅಥವಾ ಆಕಾಶ ಮತ್ತು ನಕ್ಷತ್ರಗಳ ಕಡೆಗೆ ನೋಡುತ್ತಾ ರಾತ್ರಿ ಕಳೆಯುತ್ತಿದ್ದೆ. ಒಂದು ರಾತ್ರಿ ನನಗೆ ಶಬ್ದ ಕೇಳಿಸಿತು: 'ಮಾರ್ಗದರ್ಶನದ ದಾರಿಯನ್ನು ನೋಡು.' ಮರುದಿನ ನಾನು ಒಂದು ಟಿ.ವಿ. ಚ್ಯಾನಲ್ ಕಂಡೆನು. ಅದರಲ್ಲಿ ಒಂದು ಚರ್ಚೆ ಬಹಳ ಉತ್ತಮ ರೀತಿಯಲ್ಲಿ ನಡೆಯುತ್ತಿತ್ತು. ಅದು ನನ್ನ ಹೃದಯವನ್ನು ಆಕರ್ಷಿಸಿತು. ನಾನು ಆ ಟಿ.ವಿ. ಚ್ಯಾನಲ್ ನಿತ್ಯ ನೋಡತೊಡಗಿದೆ. ನನಗೆ ನನ್ನ ಸ್ವಪ್ನದ ವ್ಯಾಖ್ಯಾನ ತಿಳಿಯಿತು. ಏಕೆಂದರೆ ಎಂ.ಟಿ.ಎ. (ಮುಸ್ಲಿಮ್ ಟೆಲಿವಿಷನ್ ಅಹ್ಮದಿಯಾ ಇಂಟರ್‌ನೇಶನಲ್) ಮೂಲಕ ಇಮಾಮ್ ಮಹ್‌ದಿಯನ್ನು (ವಾಗ್ದತ್ತ ಮಸೀಹರೂ ಮಹ್‌ದಿಯೂ ಆಗಿರುವ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು) ಮತ್ತು ಖಿಲಾಫತನ್ನು ಗುರುತಿಸಲು ಸಾಧ್ಯವಾಯಿತು. ನಾನು ನಿಷ್ಠೆಯ ಪ್ರತಿಜ್ಞೆ ಮಾಡಿ ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಪ್ರವೇಶಿಸಿದೆ."

ಈ ರೀತಿ ಜೀವಂತ ದೇವನು ತನ್ನ ಜೀವಂತ ಧರ್ಮದ ಕಡೆಗೆ ಮಾರ್ಗದರ್ಶನ ನೀಡುತ್ತಾನೆ.

## ಧರ್ಮದ ಉದ್ದೇಶ ನೈತಿಕ ಅಭಿವೃದ್ಧಿ ಮತ್ತು ಸಹನೆಯಾಗಿದೆ

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ಧರ್ಮದ ಉದ್ದೇಶ, ನೈತಿಕ ಗುಣಗಳನ್ನು ವರ್ಧಿಸುವ ದೇವನ ಗುಣಗಳ ಪ್ರತಿಬಿಂಬವಾಗುವುದಾಗಿದೆ. ಇಂತಹ ಸ್ಥಿತಿಯನ್ನು ಪಡೆಯುವವರನ್ನು ಸಾವಿರಾರು ಸಾರಿ ಅನ್ಯರು ಶಪಿಸಬಹುದು ಅಥವಾ ಬಯ್ಯಬಹುದು. ಆದರೆ ಇದಕ್ಕೆ ಹಿಂಸಾತ್ಮಕ ಪ್ರತಿಕ್ರಿಯೆ ಅವರು ನೀಡಲಾರರು. ಧರ್ಮದ ನೈಜ ಅನುಯಾಯಿ ಉದ್ಧಟನೂ ಸಹನೆದೋರದವನೂ ಆಗಲಾರನು. ಕ್ರೈಸ್ತ, ಮುಸ್ಲಿಮ್ ಅಥವಾ ಹಿಂದುವಾಗಿರುವ ವ್ಯಕ್ತಿ ತಾಳ್ಮೆರಹಿತನಾಗಿದ್ದರೆ ಅನ್ಯಧರ್ಮದ ಪರಿಶುದ್ಧ ವ್ಯಕ್ತಿಗಳನ್ನು ನಿಂದಿಸಲು ಹಿಂಜರಿಯಲಾರನು. ನಾನು ವಿವಿಧ ಧರ್ಮಗಳ ನಂಬಿಕೆಗಳ ಬಗ್ಗೆ ಚರ್ಚೆಮಾಡುವುದನ್ನು ನಿಷಿದ್ಧಗೊಳಿಸುವುದಿಲ್ಲ, ಆದರೆ ಆ ಚರ್ಚೆ ಪ್ರಾಮಾಣಿಕವಾಗಿಯೂ ಸಭ್ಯತೆಯಿಂದಲೂ ಮಾಡಬೇಕು, ಅಸೂಯೆ ಮತ್ತು ದುರ್ವಿಚಾರಗಳಿಂದ ಭರಿತವಾಗಬಾರದು. ಹಿಂದು ಮತ್ತು ಮುಸ್ಲಿಮರ ಮಧ್ಯೆ ಇರುವ ಈಗಿನ ಸಂಬಂಧ ಇತ್ತೀಚೆಗೆ ಪ್ರಾರಂಭವಾದುದಲ್ಲ. ನೂರಾರು ವರ್ಷಗಳಿಂದ ಈ ಸಂಬಂಧ ಜಾರಿಯಲ್ಲಿದೆ. ಪರಸ್ಪರ ಸಂಬಂಧವನ್ನು ಉತ್ತಮಪಡಿಸುವ ಮನೋಭಾವ ಹುಟ್ಟಲಿ ಎಂದು ನಾವು ಪ್ರಾರ್ಥಿಸುತ್ತೇವೆ."

(ಮಲ್‌ಫೂಝಾತ್ – ಸಂಪುಟ 6, ಪುಟ 210)

## ಧರ್ಮ ತನ್ನ ಅನುಯಾಯಿಗಳ ಶುದ್ಧೀಕರಣ ಆವಶ್ಯಪಡುತ್ತದೆ

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ಧರ್ಮ ಎಂದರೆ ಕೇವಲ ಚರ್ಚೆ, ವಾದ ಪ್ರತಿವಾದಗಳು ಮತ್ತು ವಾಕ್ಕಲಹಗಳಲ್ಲ. ಧರ್ಮ ಆವಶ್ಯಪಡುವ ಪ್ರಯೋಗಿಕ ಪರಿವರ್ತನೆ ಮಾಡದಿದ್ದರೆ ದೇವನು ಅದನ್ನು ಇಷ್ಟಪಡಲಾರ. ಇಸ್ಲಾಮ್ ಮತ್ತು ಹಿಂದು ಧರ್ಮದ ಸಂತರು ತಾವು ಮಾಡಿದಂತೆ ನಡೆಯುತ್ತಿದ್ದರು ಎಂದು ಅವರು ವರ್ತಿಸುತ್ತಿದ್ದ ರೀತಿಯಿಂದ ಸ್ಪಷ್ಟವಾಗುತ್ತದೆ."

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಓ ವಿಶ್ವಾಸಿಗಳೇ, ನೀವು ನಿಮ್ಮ ಬಗ್ಗೆ ಜಾಗ್ರತೆವಹಿಸಿಕೊಳ್ಳಿರಿ."

(ಪವಿತ್ರ ಖುರ್‌ಆನ್ 5:106)

"ಪವಿತ್ರ ಖುರ್‌ಆನಿನ ಈ ವಚನ ನಾವು ನಮ್ಮನ್ನು ಸುಧಾರಣೆ ಮಾಡಬೇಕೆಂದು ಆದೇಶಿಸುತ್ತದೆ. ಒಬ್ಬನು ಆಧ್ಯಾತ್ಮಿಕ ಪ್ರಕಾಶವನ್ನು ಗಳಿಸಿಲ್ಲವಾದರೂ ಅನ್ಯರಿಗೆ ಉಪದೇಶಿಸುವುದಾದರೆ, ಅದು ಧರ್ಮವನ್ನು ಮಕ್ಕಳಾಟದಂತೆ ಪರಿಗಣಿಸಿದಂತಾಗುವುದು. ಇಂತಹ 'ಸುಧಾರಕ' ಸಮಾಜಕ್ಕೆ ಹಾನಿಕಾರಕನಾಗುವನು. ಅಂತಹ ಜನರು ತರ್ಕಶಾಸ್ತ್ರ, ವಿಚಾರ ಮತ್ತು ದರ್ಶನಶಾಸ್ತ್ರವನ್ನು ತಮ್ಮ ಪ್ರವಚನಗಳಲ್ಲಿ ಬಳಸುತ್ತಾರಾದರೂ ಅವರು ಒಳಗೆ ಪೊಳ್ಳಾಗಿರುತ್ತಾರೆ."

ಇಂದಿನ ಕಾಲದಲ್ಲಿ ಲೋಕದಲ್ಲಿ ಉತ್ತಮ ನೈತಿಕಗುಣಗಳನ್ನು ಮತ್ತು ಸಹನೆಯನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತಿನವರು ತೋರಿಸುತ್ತಿದ್ದಾರೆ. ಅಹ್ಮದಿಯೇತರರು ಅಹ್ಮದಿಯರ ಈ ಗುಣಗಳನ್ನು ನೋಡಿ ಬಹಿರಂಗವಾಗಿ ಒಪ್ಪಿಕೊಳ್ಳುತ್ತಾರೆ. ನಾವು ಯಾವಾಗಲೂ ಈ ಗುಣಗಳನ್ನು ಹೊಂದಿರಲು ಪರಿಶ್ರಮಿಸಬೇಕು. ಈ ಸದ್ಗುಣಗಳೇ

## ಮಾಲಿ ದೇಶದ ಒಬ್ಬ ವೃದ್ಧ ವ್ಯಕ್ತಿ ಸತ್ಯಾಸತ್ಯಗಳನ್ನು ಗುರುತಿಸಿದರು

ಮಾಲಿ ಆಫ್ರಿಕ ಖಂಡದಲ್ಲಿ ದೂರದಲ್ಲಿರುವ ಒಂದು ದೇಶವಾಗಿದೆ. ಅಲ್ಲಿನ ಜನರು ನಿರಕ್ಷರರೆಂದೂ ಅವಿದ್ಯಾವಂತರೆಂದೂ ಹೇಳಲಾಗುತ್ತಿದೆ. ನಾನು ವಿವರಿಸುವ ವ್ಯಕ್ತಿಯ ಸ್ಥಿತಿ ಹೀಗೆಯೇ ಆಗಿದೆ. ಒಂದು ದಿನ ಒಬ್ಬ ವೃದ್ಧ, ಮಾಲಿಯಲ್ಲಿರುವ ನಮ್ಮ ಮಿಶನ್ ಹೌಸ್‌ಗೆ ಬಂದು ಅಹ್ಮದಿಯಾ ಮುಸ್ಲಿಮ್ ಜಮಾಅತ್‌ಗೆ ಸೇರಲು ಬಯಸುತ್ತೇನೆಂದು ಹೇಳಿದರು. ಅವರು ಹಾಗೆ ಮಾಡಲು ಬಯಸುವುದೇಕೆಂದು ವಿಚಾರಿಸಿದಾಗ ಅವರು ಹೇಳಿದರು:

"ಕಳೆದ ರಾತ್ರಿ ನಾನು ನಿಮ್ಮ ರೇಡಿಯೋ ಕಾರ್ಯಕ್ರಮ ಆಲಿಸಿದೆ. ನಿಮ್ಮ ಜಮಾಅತಿನ ಒಬ್ಬ ವಿರೋಧಿ ಅಹ್ಮದಿಯಾ ಮಿಷನರಿಯನ್ನು

ಬಿರುಸಾಗಿ ಬಯ್ಯುತ್ತಿದ್ದಾಗ ಅಹ್ಮದಿ ಮಿಷನರಿ ಅದಕ್ಕೆ ಅದೇ ರೀತಿ ಉತ್ತರಕೊಡದೆ ತರ್ಕಬದ್ಧ ವಾದಗಳನ್ನು ಮಂಡಿಸುತ್ತಿದ್ದರು. ಆ ಕಾರ್ಯಕ್ರಮ ನಡೆಯುತ್ತಿದ್ದಾಗ ನಾನು ಪ್ರಾರ್ಥಿಸಿದೆ: 'ಓ ಅಲ್ಲಾಹ್ ಇವರಿಬ್ಬರಲ್ಲಿ ಯಾರು ಸತ್ಯಸಂಧರೆಂದು ನನಗೆ ಮಾರ್ಗದರ್ಶನ ನೀಡು.' ನಾನು ಪ್ರಾರ್ಥಿಸುತ್ತಾ ಇದ್ದಾಗ ನಿದ್ರೆ ನನ್ನನ್ನು ಆವರಿಸಿತು ಮತ್ತು ನಾನೊಂದು ಸ್ವಪ್ನ ಕಂಡೆನು. ಒಂದು ಕಡೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನವರು, ಇನ್ನೊಂದು ಕಡೆ ಅವರ ವಿರೋಧಿಗಳು ಸೇರಿ ವಾದ ಪ್ರತಿವಾದ ನಡೆಸುತ್ತಿದ್ದಾರೆ. ವಿರೋಧಿಗಳು ಅಹ್ಮದಿಯಾ ಮಿಷನರಿಗೆ ಉತ್ತರ ನೀಡಲು ಅಸಮರ್ಥರಾದಾಗ, ಅವರು ಮಿಷನರಿಯನ್ನು ಒಂದು ಹೊಂಡಕ್ಕೆ ಎಸೆದು ಅವರ ಮೇಲೆ ಕೊಳಕು ಚೆಲ್ಲಲು ತೊಡಗಿದರು. ಆಗ ಒಬ್ಬ ಪರಿಶುದ್ಧ ವ್ಯಕ್ತಿ ಇಳಿದು ಬಂದು 'ನಾನು ಮಹ್‌ದಿ' ಎಂದು ಹೇಳಿ ಕೈನೀಡಿ ಮಿಷನರಿಯನ್ನು ರಕ್ಷಿಸಿದರು. ಅನಂತರ ನನಗೆ ಎಚ್ಚರವಾಯಿತು. ಈಗ ನನಗೆ ಅಹ್ಮದಿಯ್ಯತ್ ಬಗ್ಗೆ ಯಾವ ಸಂಶಯವೂ ಇಲ್ಲ."

ಅಲ್ಲಾಹನ ಅನುಗ್ರಹದಿಂದ ಆ ವೃದ್ಧ ವ್ಯಕ್ತಿ ನಿಷ್ಠೆಯ ಪ್ರತಿಜ್ಞೆಮಾಡಿ ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಪ್ರವೇಶಿಸಿದರು. ಅಹ್ಮದಿಯರ ಅತ್ಯುತ್ತಮ ನೈತಿಕಗುಣಗಳು ಮತ್ತು ಅವರ ವರ್ತನೆ ಸಾತ್ವಿಕನೂ, ಪ್ರಾಮಾಣಿಕನೂ ಆಗಿರುವ ಆ ವ್ಯಕ್ತಿ ಪ್ರಾರ್ಥಿಸುವಂತೆ ಮಾಡಿತು. ಇಂತಹ ಜನರಿಗೆ ದೇವನೇ ಮಾರ್ಗದರ್ಶನ ನೀಡುತ್ತಾನೆ. ಇದು ಜೀವಂತ ಧರ್ಮದ ಮತ್ತು ಜೀವಂತ ದೇವನ ಚಿಹ್ನೆಗಳಾಗಿವೆ.

## ಧರ್ಮದ ಕರೆ

ಧರ್ಮದ ಆವಶ್ಯಕತೆಯ ಬಗ್ಗೆ ಹಝ್ರತ್ ವಾಗ್ದತ್ತ ಮಸೀಹ್[ಅ] ಹೀಗೆ ಹೇಳುತ್ತಾರೆ:

"ಕೆಡುಕಿನಿಂದ ರಕ್ಷಿಸಿಕೊಳ್ಳಿರಿ ಮತ್ತು ಮಾನವರ ಬಗ್ಗೆ ದಯೆಯನ್ನು ಹೊಂದಿರಿ. ನಿಮ್ಮ ಹೃದಯಗಳನ್ನು ದ್ವೇಷ, ಅಸೂಯೆಗಳಿಂದ ಮುಕ್ತವಾಗಿ ಮಾಡಿ ಪರಿಶುದ್ಧಗೊಳಿಸಿರಿ. ಈ ಸ್ವಭಾವ ನೀವು ಹೊಂದಿದರೆ ನೀವು ದೇವದೂತರ ಹಾಗೆ ಆಗುವಿರಿ. ಮಾನವರ ಬಗ್ಗೆ ಸಹಾನುಭೂತಿ ಹೊಂದದ ಧರ್ಮ ಕೊಳಕು ಮತ್ತು ಅಪವಿತ್ರವಾಗಿದೆ. ಸ್ವಾರ್ಥ ಹಿತಾಸಕ್ತಿ ಮತ್ತು ದ್ವೇಷದ ಮುಳ್ಳಿನಿಂದ ಕೂಡಿದ ಮಾರ್ಗವೂ ಕೊಳಕಾಗಿದೆ. ನನ್ನೊಂದಿಗೆ ಸೇರಿದವರು ಹೀಗೆ ಆಗಬಾರದು. ನಾವು ಧರ್ಮದಿಂದ ಏನನ್ನು ಗಳಿಸಲು ಬಯಸುತ್ತೇವೆಂದು ಚಿಂತಿಸಿರಿ. ಯಾವಾಗಲೂ ಅನ್ಯರಿಗೆ ಹಿಂಸೆ ನೀಡುವುದೇ ನಿಮ್ಮ ಗುಣವಾಗಬೇಕೆ? ಹಾಗೆ ಅಲ್ಲ, ಧರ್ಮವಿರುವುದು ದೇವನಲ್ಲಿರುವಂತಹ ಜೀವಿತವನ್ನು ಗಳಿಸಲಿಕ್ಕಾಗಿದೆ. ದೇವನ ವಿಶೇಷಗುಣಗಳು ಮನುಷ್ಯರಲ್ಲಿ ಅಡಕವಾಗುವ ತನಕ ಇಂತಹ ಜೀವಿತ ಯಾರಿಗೂ ಲಭಿಸಿಲ್ಲ ಮತ್ತು ಮುಂದೆ ಲಭಿಸಲಾರದು. ನೀವು ದೇವನಿಗೋಸ್ಕರ ಎಲ್ಲರೊಂದಿಗೆ ದಯೆಯಿಂದ ವರ್ತಿಸಿರಿ. ಅದರ ಫಲವಾಗಿ ನಿಮಗೆ ಆಕಾಶದಿಂದ ದಯೆ ಲಭಿಸುವುದು. ನೀವು ಬನ್ನಿರಿ, ನಾನು ನಿಮಗೊಂದು ಮಾರ್ಗವನ್ನು ತೋರಿಸಿಕೊಡುವೆನು. ಅದರ ಮೂಲಕ ನಿಮ್ಮ ಪ್ರಕಾಶ ಇತರ ಪ್ರಕಾಶಗಳಿಗಿಂತ ಬೆಳಕನ್ನು ಹೊಂದುವುದು. ನೀವು ಎಲ್ಲ ವಿಧ ದ್ವೇಷ, ಅಸೂಯೆಗಳನ್ನು ತ್ಯಜಿಸಿರಿ. ನೀವು ಮಾನವರಿಗೆ ಸಹಾನುಭೂತಿ ತೋರಿಸುವವರಾಗಿರಿ ಮತ್ತು ನೀವು ದೇವನಲ್ಲಿ ಸೇರಿಕೊಳ್ಳಿರಿ. ನೀವು ದೇವನೊಂದಿಗೆ ಸೇರಿಕೊಂಡು ಪರಿಶುದ್ಧತೆಯ ಅತ್ಯುನ್ನತ ಮಟ್ಟವನ್ನು ಹೊಂದಿರಿ. ಈ ಮಾರ್ಗವನ್ನು ಅವಲಂಬಿಸುವುದರಿಂದ ಪವಾಡಗಳು ಪ್ರಕಟವಾಗುತ್ತವೆ; ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ ಮತ್ತು ದೇವದೂತರು ಸಹಾಯಮಾಡಲು ಇಳಿದುಬರುತ್ತಾರೆ. ಆದರೆ ಇದು ಒಂದು ದಿನದೊಳಗೆ ಸಾಧಿಸಲ್ಪಡುವುದಿಲ್ಲ. ನೀವು ಅಭಿವೃದ್ಧಿ ಹೊಂದುತ್ತಾ ಹೋಗಿರಿ. ನೀವು ಅಗಸನಿಂದ ಪಾಠ ಕಲಿಯಿರಿ. ಅವನು ಕುದಿಯುವ ನೀರಿನಲ್ಲಿ ಬಟ್ಟೆಗಳನ್ನು ಹಾಕುತ್ತಾನೆ. ಆಗ ಬಟ್ಟೆಯಿಂದ ಮಾಲಿನ್ಯಗಳು ಹೊರಗೆ ಬರುತ್ತವೆ. ಬೆಳಗೆ ಎದ್ದು ಅವನು ಬಟ್ಟೆಗಳನ್ನು ನೀರಿನಲ್ಲಿ ಮುಳುಗಿಸಿ ಅವುಗಳನ್ನು ಕಲ್ಲಿಗೆ ಬಡಿಯುತ್ತಾ ಇರುವಾಗ ಬಟ್ಟೆಗಳಲ್ಲಿ ಉಳಿದಿರುವ ಕೊಳಕು ಸಹ ಮೆಲ್ಲನೆ ನಿವಾರಣೆಯಾಗುತ್ತದೆ. ಈ ರೀತಿ ಬಟ್ಟೆ ಕೊಳೆಯಿಂದ ಮುಕ್ತವಾಗಿ ಮೊದಲು ಇದ್ದ ಹಾಗೆ ಆಗುತ್ತದೆ. ಮನುಷ್ಯನ ಆತ್ಮದ ಶುದ್ಧೀಕರಣ ಸಹ ಹೀಗೆಯೇ ಕ್ರಮೇಣವಾಗಿ ನಡೆಯುತ್ತದೆ. ನಿಮ್ಮ ಮೋಕ್ಷಕ್ಕೆ ಆತ್ಮ ಶುದ್ಧೀಕರಣ ಅತ್ಯಾವಶ್ಯಕವಾಗಿದೆ. ಮಹೋನ್ನತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಇದರ ಬಗ್ಗೆ ಹೀಗೆ ಹೇಳಿದ್ದಾನೆ:

"ಅದನ್ನು (ಆತ್ಮವನ್ನು) ಪರಿಶುದ್ಧವಾಗಿರಿಸಿದವನು ಖಂಡಿತವಾಗಿಯೂ ಜಯಗಳಿಸಿದನು." (ಪವಿತ್ರ ಖುರ್‌ಆನ್ 91:10)

(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್ – ಪುಟ 16 –17)

## ವಿವಿಧ ಕಾಲಘಟ್ಟಗಳಲ್ಲಿ ಆಗಮಿಸಿದ ಪ್ರವಾದಿಗಳು

ಹಝ್ರತ್ ವಾಗ್ದತ್ತ ಮಸೀಹ್[ಅ] ಇಸ್ಲಾಮ್ ಧರ್ಮದ ಸತ್ಯತೆ ಬಗ್ಗೆ ಹೀಗೆ ವಿವರಿಸುತ್ತಾರೆ:

"ಹಿಂದಿನ ಕಾಲದ ಪ್ರವಾದಿಗಳು ನಿರ್ದಿಷ್ಟ ಜನಾಂಗಗಳಿಗೆ, ಗೋತ್ರಗಳಿಗೆ ಮತ್ತು ಜನಸಮೂಹಗಳಿಗೆ ಕಳುಹಿಸಲ್ಪಟ್ಟರು. ಆದುದರಿಂದ ಅವರ ಉಪದೇಶಗಳು ಪರಿಪೂರ್ಣವಾಗಿರಲಿಲ್ಲ. ಮಾನವರು ಅಭಿವೃದ್ಧಿ ಹೊಂದುತ್ತಾ ಇದ್ದರು. ಅವರ ಜ್ಞಾನ ವರ್ಧಿಸುತ್ತಾ ಇತ್ತು. ಅವರ ಬುದ್ಧಿಶಕ್ತಿ ಸಹ ಬೆಳವಣಿಗೆ ಹೊಂದುತ್ತಾ ಇತ್ತು. ಆದುದರಿಂದ ಅವರು ಉನ್ನತಮಟ್ಟದ ಉಪದೇಶಗಳನ್ನು ಗಳಿಸಲು ಸಿದ್ಧರಾಗಿರಲಿಲ್ಲ. ಅನಂತರ ಮಾನವರ ಶಕ್ತಿಸಾಮರ್ಥ್ಯಗಳು ವರ್ಧಿಸಿದುವು. ಆದರೆ ಪಾಪ, ಕೆಟ್ಟಕೆಲಸಗಳು, ಅನೈತಿಕತೆ, ಮಾನವಪೂಜೆ ಮೊದಲಾದುವು ಜಾರಿಯಲ್ಲಿದ್ದುವು. ದೇವನ ಏಕತ್ವ ಮತ್ತು ಸತ್ಯಸಂಧತೆ ಹಿಂದುಗಳು, ಝೊರಾಸ್ಟ್ರೀಯನರು, ಯಹೂದಿಯರು ಮತ್ತು ಕ್ರೈಸ್ತರಲ್ಲಿ ಕಂಡುಬರುತ್ತಿರಲಿಲ್ಲ. ಮನುಷ್ಯನ ಶಕ್ತಿ ಸಾಮರ್ಥ್ಯಗಳು ಅಂಧಕಾರದಿಂದಲೂ ಸ್ವಾರ್ಥ ಉದ್ದೇಶಗಳಿಂದಲೂ ಭಾವೋದ್ವೇಗಗಳಿಂದಲೂ ಆವೃತವಾಗಿದ್ದುವು. ಇಂತಹ ಸಂದರ್ಭದಲ್ಲಿ ದೇವನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಿ ಇಸ್ಲಾಮನ್ನು ಲೋಕಕ್ಕೆ ಕಲಿಸಿದನು. ಅದು ಪರಿಪೂರ್ಣ ಧರ್ಮವಾಗಿದೆ. ಹಿಂದಿನ ಕಾಲದ ಪ್ರವಾದಿಗಳು ಪ್ರತ್ಯೇಕ ಜನಾಂಗಗಳಿಗೆ ಕಳುಹಿಸಲ್ಪಟ್ಟರು ಮತ್ತು ಅವರ ಉಪದೇಶಗಳು ಅವರು ಯಾರ ಬಳಿಗೆ ಕಳುಹಿಸಲ್ಪಟ್ಟರೋ ಅವರ ಮನೋಭಾವ ಮತ್ತು ಸಾಮರ್ಥ್ಯಗಳಿಗೆ ಅನುಸಾರವಾಗಿದ್ದವು. ಆ ಕಾಲಘಟ್ಟದಲ್ಲಿ ಆ ಜನಾಂಗಗಳು ಇಸ್ಲಾಮಿನ ಉಪದೇಶಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಸಮರ್ಥರಾಗಿರಲಿಲ್ಲ. ಆದುದರಿಂದ ಆ ಪ್ರವಾದಿಗಳು ಆ ಜನಾಂಗಗಳಿಗೆ ಇಸ್ಲಾಮ್ ಧರ್ಮವನ್ನು ಕಲಿಸಿರಲಿಲ್ಲ. ಆ ಕಾಲಘಟ್ಟಗಳ ಆವಶ್ಯಕತೆಗಳಿಗನುಸಾರವಾಗಿ ಪ್ರವಾದಿಗಳು ಉಪದೇಶಿಸಿದರು. ಆದುದರಿಂದ ಹಿಂದಿನ ಧರ್ಮದಲ್ಲಿ ಯಾವುದಕ್ಕೂ ಇಸ್ಲಾಮ್ ಎಂದು ಹೆಸರಿರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಉಪದೇಶಿಸಿದ

ಧರ್ಮ ಎಲ್ಲ ಮಾನವರಿಗೋಸ್ಕರ, ಅವರ ಸುಧಾರಣೆಗೋಸ್ಕರವಾಗಿತ್ತು. ಅದರ ಉಪದೇಶಗಳು ಮನುಷ್ಯರ ಪ್ರಕೃತಿಗುಣಗಳಿಗೂ ಶಕ್ತಿಸಾಮರ್ಥ್ಯಗಳಿಗೂ ಅನುಗುಣವಾಗಿವೆ. ಆದುದರಿಂದ ಅದು ಉನ್ನತ ಮಟ್ಟದ ಶ್ರೇಷ್ಠಧರ್ಮವಾಗಿದೆ. ಈ ಧರ್ಮವನ್ನು ಇಸ್ಲಾಮ್ ಎಂದು ದೇವನೇ ಹೆಸರಿಸಿರುವನು ಮತ್ತು ಅದು ಪರಿಪೂರ್ಣ ಧರ್ಮವೆಂದು ಹೀಗೆ ಘೋಷಿಸಿರುವನು:

**'ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ತೃಪ್ತಿಪಟ್ಟಿರುವೆನು.' (ಪವಿತ್ರ ಖುರ್‌ಆನ್ 5:4)**

"ಹಿಂದಿನ ಧರ್ಮಗಳು ಪರಿಪೂರ್ಣವಾಗಿರಲಿಲ್ಲ. ಅವು ನಿರ್ದಿಷ್ಟ ದೇಶಗಳಿಗೆ, ನಿರ್ದಿಷ್ಟ ಕಾಲಘಟ್ಟಕ್ಕೆ ನಿರ್ಮಿಸಲ್ಪಡುವ ನಿಯಮಗಳ ಹಾಗೆ ಇದ್ದುವು. ಆದುದರಿಂದ ದೇವನು ಆ ಧರ್ಮಗಳನ್ನು ಇಸ್ಲಾಮ್ ಎಂದು ಹೆಸರಿಸಲಿಲ್ಲ. ಹೀಗೆ ಮಾಡಿದುದು ಸಹಜವೇ ಆಗಿದೆ. ಏಕೆಂದರೆ, ಆ ಪ್ರವಾದಿಗಳು ಲೋಕದ ಎಲ್ಲರಿಗೋಸ್ಕರ ಬಂದವರಾಗಿರಲಿಲ್ಲ. ಅವರು ನಿರ್ದಿಷ್ಟ ಜನಾಂಗಗಳಿಗೆ ಆಗಮಿಸಿದವರಾಗಿದ್ದರು. ಆ ಪ್ರವಾದಿಗಳ ಆಗಮನದ ಉದ್ದೇಶ, ತಾವು ಯಾವ ಜನಾಂಗಕ್ಕೋಸ್ಕರ ಆಗಮಿಸಿದರೋ ಅವರ ಕೆಡುಕುಗಳನ್ನು ಹೋಗಲಾಡಿಸಿ ಅವರನ್ನು ಸುಧಾರಣೆ ಮಾಡುವುದಾಗಿತ್ತು. ಅವರ ಆಗಮನದ ಉದ್ದೇಶ, ಲೋಕದ ಎಲ್ಲ ಜನರನ್ನು ಸುಧಾರಣೆ ಮಾಡುವುದಾಗಿರಲಿಲ್ಲ. ಅವರು ಆಗಮಿಸಿದುದು ಅವರ ಜನಾಂಗಗಳ ನಿರ್ದಿಷ್ಟ ಕೆಡುಕುಗಳ ನಿವಾರಣೆಗೋಸ್ಕರವಾಗಿತ್ತು. ಹಿಂದಿನ ಕಾಲದ ಪ್ರವಾದಿಗಳು ತಂದ ಧಾರ್ಮಿಕ ಗ್ರಂಥಗಳೂ ಅಪೂರ್ಣವಾಗಿದ್ದುವು. ಅವುಗಳಲ್ಲಿರುವ ತತ್ವಗಳು ಸೀಮಿತ ಆಯಾಮವನ್ನು ಹೊಂದಿದ್ದುವು. ಆದರೆ ಇಸ್ಲಾಮ್ ಧರ್ಮ ಲೋಕದ ಎಲ್ಲ ಜನರಿಗೋಸ್ಕರವಾಗಿದೆ. ಮನುಷ್ಯರ ಎಲ್ಲ ಸಹಜಗುಣಗಳನ್ನೂ ಶಕ್ತಿ ಸಾಮರ್ಥ್ಯಗಳನ್ನೂ ಅದು ದೃಷ್ಟಿಯಲ್ಲಿ ಇರಿಸಿಕೊಂಡಿದೆ. ಸಾಮಾನ್ಯ ಜನರನ್ನೂ ಗಣ್ಯರನ್ನೂ ಬುದ್ಧಿಶಾಲಿಗಳನ್ನೂ ದಾರ್ಶನಿಕರನ್ನೂ ಅದು ಸುಧಾರಣೆ ಮಾಡುವ ಉದ್ದೇಶ ಹೊಂದಿದೆ. ಪವಿತ್ರ ಖುರ್‌ಆನ್ ಮನುಷ್ಯನ ಸಹಜಗುಣಗಳನ್ನು ಎಲ್ಲ ಜನರಿಗೆ ಸಂಬಂಧಿಸಿ ಚರ್ಚಿಸುತ್ತದೆ ಮತ್ತು ಅವುಗಳನ್ನು ದೇವ ಮಾರ್ಗದಲ್ಲಿ ವಿನಿಯೋಗಿಸಲು ಉಪದೇಶಿಸುತ್ತದೆ. ಪವಿತ್ರ ಖುರ್‌ಆನ್ ಎಲ್ಲ ಜನರ ಸುಧಾರಣೆಯ ಉದ್ದೇಶವನ್ನು ಹೊಂದಿದೆ. ಹಝ್ರತ್ ಮುಹಮ್ಮದ್ ಪೈಗಂಬರ್‌ರನ್ನು(ಸ) ಪ್ರವಾದಿಗಳ ಮುದ್ರೆ ಎಂದು ಕರೆಯಲಾಗಿದೆ. ಅವರು ಹಿಂದಿನ ಎಲ್ಲ ಪ್ರವಾದಿಗಳ ಆಗಮನೋದ್ದೇಶವನ್ನು ಪರಿಪೂರ್ಣವಾಗಿ ಈಡೇರಿಸುವವರಾಗಿದ್ದರು. ಪವಿತ್ರ ಖುರ್‌ಆನ್ ಅವತೀರ್ಣಗೊಳಿಸಲ್ಪಟ್ಟಿದ್ದು ಎಲ್ಲ ಮಾನವರ ಸುಧಾರಣೆಗೋಸ್ಕರವಾಗಿದೆ. ಮಾನವರ ಎಲ್ಲ ಸಹಜಗುಣಗಳನ್ನು ಸರಿಯಾಗಿ ಬಳಸಲು ಅದು ಉಪದೇಶಿಸುತ್ತದೆ. ಈ ಕಾರಣದಿಂದ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಇಸ್ಲಾಮ್ ಎಂದು ಕರೆಯಲಾಗುತ್ತದೆ. ಇತರ ಧರ್ಮಗಳು ಸೀಮಿತ ಉದ್ದೇಶಗಳನ್ನು ಹೊಂದಿದ್ದ ಕಾರಣ ಈ ಹೆಸರಿಗೆ ಅರ್ಹವಾಗಿರಲಿಲ್ಲ ಮತ್ತು ಅವು ಅಪೂರ್ಣವಾಗಿದ್ದುವು. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ವಾಸ್ತವಿಕವಾಗಿಯೂ ಹೀಗಿರುವಾಗ ತಮ್ಮನ್ನು ಮುಸ್ಲಿಮರೆಂದು ಹೇಳಲು ಏಕೆ ಹಿಂಜರಿಕೆ ಹೊಂದಬೇಕು? ಇಸ್ಲಾಮಿನ ವಾದವನ್ನು ಪವಿತ್ರ ಖುರ್‌ಆನ್ ವಿವರಿಸುತ್ತದೆ ಮತ್ತು ಬಲವತ್ತಾದ ಸಾಕ್ಷ್ಯಾಧಾರಗಳ ಮೂಲಕ ಅದನ್ನು ಬೆಂಬಲಿಸುತ್ತದೆ."
(ಸತ್‌ಬಚನ್, ರೂಹಾನೀ ಖಝಾಇನ್ – ಸಂಪುಟ 10, ಪುಟ 272–274)

ಇಂದಿನ ಕಾಲದಲ್ಲಿ ಸಹ ಪವಿತ್ರ ಖುರ್‌ಆನಿನ ಉಪದೇಶಗಳು ಮತ್ತು ಸಾಕ್ಷ್ಯಾಧಾರಗಳು ಸಾತ್ವಿಕರಾದ ಜನರನ್ನು ಪ್ರಭಾವಿಸುತ್ತವೆ ಮತ್ತು ಅವರು ಅವುಗಳ ಕಡೆಗೆ ಆಕರ್ಷಿಸಲ್ಪಡುತ್ತಾರೆ. ಅನೇಕ ಮುಸ್ಲಿಮೇತರರು ಇಸ್ಲಾಮ್ ಧರ್ಮಕ್ಕೆ ಸೇರಿ ಆಂತರಿಕ ನೆಮ್ಮದಿಯನ್ನೂ ಸಮಾಧಾನವನ್ನೂ ಗಳಿಸುತ್ತಾರೆ.

## ಒಬ್ಬ ಇಟಾಲಿಯನ್ ಪ್ರಜೆ ಜಪಾನ್‌ನಲ್ಲಿ ದೇವದರ್ಶನ ಪಡೆದುದು

ಒಬ್ಬ ಇಟಾಲಿಯನ್ ಪ್ರಜೆಯನ್ನು ನೇರಮಾರ್ಗಕ್ಕೆ ದೇವನು ಮಾರ್ಗದರ್ಶನ ನೀಡಿದುದು ಹೇಗೆಂದು ನೋಡುವ. ಜಪಾನಿನ ಟೋಕಿಯೋ ನಗರದಲ್ಲಿ ಪುಸ್ತಕಗಳ ಒಂದು ಪ್ರದರ್ಶನದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸಹ ಭಾಗವಹಿಸಿತ್ತು. ಒಬ್ಬ ಇಟಾಲಿಯನ್ ನಮ್ಮ ಪುಸ್ತಕದ ಮಳಿಗೆಯನ್ನು ಸಂದರ್ಶಿಸಿದರು. ಅವರು ದೇವನ ಅಸ್ತಿತ್ವ ಮತ್ತು ಧರ್ಮದ ಬಗ್ಗೆ ಚರ್ಚೆ ನಡೆಸಿದರು. ಅವರು ಹೇಳಿದರು:"ನಾನು ಸ್ವಲ್ಪ ಸಮಯದಿಂದೀಚೆಗೆ ದೇವನ ಬಗ್ಗೆ ಸಂಶೋಧನೆ ನಡೆಸುತ್ತಿದ್ದೆ. ನಾನು ಅದಕ್ಕೋಸ್ಕರ ಸೌದಿ ಅರೇಬಿಯದ ರಾಯಭಾರಿ ಕಚೇರಿಗೂ ಹೋಗಿದ್ದೆ. ಅಲ್ಲಿ ದೇವನ ಬಗ್ಗೆ ಅವರ ಮೂಲಕ ತಿಳಿಯಬಹುದು, ಮಕ್ಕಕ್ಕೆ ಸಹ ಹೋಗಬಹುದೆಂದು ನಾನು ಭಾವಿಸಿದ್ದೆ. ಆದರೆ ನನಗೆ ಅಲ್ಲಿ ದೇವನ ಅಸ್ತಿತ್ವದ ಬಗ್ಗೆ ತಿಳಿಯಲಿಲ್ಲ."

ಆ ಇಟಾಲಿಯನ್ ಪ್ರಜೆಗೆ ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದಿ ಬಗ್ಗೆ ತಿಳಿಸಲಾಯಿತು. ಅವರು ದೇವನ ಅಸ್ತಿತ್ವದ ಬಗ್ಗೆ ಲೋಕದ ಜನರಿಗೆ ತಿಳುವಳಿಕೆ ನೀಡಲು ಆಗಮಿಸಿದ್ದರೆಂದೂ ದೇವನು ಸಕಲಲೋಕಗಳ ಪ್ರಭುವೆಂದೂ ಅವನನ್ನು ಬೇಡಿಕೊಳ್ಳುವವರಿಗೆ ಉತ್ತರ ನೀಡುವ ಜೀವಂತ ದೇವ ಅವನಾಗಿದ್ದಾನೆಂದೂ ತಿಳಿಸಲಾಯಿತು. ಅವರಿಗೆ ವಾಗ್ದತ್ತ ಮಸೀಹರ "ಇಸ್ಲಾಮ್ ಧರ್ಮ ತತ್ವಜ್ಞಾನ' ಮತ್ತು ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರ ಗ್ರಂಥ ಇಸ್ಲಾಮ್ಸ್ ರೆಸ್ಪೋನ್ಸ್ ಟು ಕಂಟೆಂಪರರಿ ಇಶ್ಯೂಸ್ (Islam's Response to Contemporary Issues) ಕೊಡಲಾಯಿತು ಮತ್ತು ನನ್ನ ಒಂದು ಪುಸ್ತಕವನ್ನು ಸಹ ಕೊಡಲಾಯಿತು. ಅವರು ಆ ಎಲ್ಲ ಪುಸ್ತಕಗಳನ್ನು ಓದುವುದಾಗಿ ಮತ್ತು ಏನಾದರೂ ಸಮಸ್ಯೆಗಳಿದ್ದರೆ ಮರುದಿನ ಅಲ್ಲಿಗೆ ಬರುವುದಾಗಿ ಹೇಳಿಹೋದರು. ಮರುದಿನ ಅವರು ಬಂದು ಹೇಳಿದರು: "ನನಗೆ ಕೃತಜ್ಞತೆ ಅರ್ಪಿಸಲು ಶಬ್ದಗಳೇ ಸಿಗುವುದಿಲ್ಲ. ದೇವನು ಮತ್ತು ಅವನ ಪ್ರವಾದಿಗಳ ಬಗ್ಗೆ ಈ ಪುಸ್ತಕಗಳಲ್ಲಿ ನೀಡಲಾದ ವಿವರಣೆಗಳು ನನ್ನ ಕಣ್ಣುಗಳನ್ನು ತೆರೆಸಿದವು. ನಾನು ಎಷ್ಟೋ ವರ್ಷಗಳಿಂದ ಹುಡುಕುತ್ತಿದ್ದ ದೇವನನ್ನು ಗುರುತಿಸಲು ನನಗೆ ಸಾಧ್ಯವಾಯಿತು. ನಾನು ನಿಮ್ಮೊಂದಿಗೆ ಅಹ್ಮದಿಯಾ ಕೇಂದ್ರಕ್ಕೆ ಬಂದು ನಿಮ್ಮೊಂದಿಗೆ ಪ್ರಾರ್ಥನೆಯಲ್ಲಿ ಭಾಗವಹಿಸಲು ಬಯಸುತ್ತೇನೆ. ನಮ್ಮ ಒಡೆಯನೂ ನಮ್ಮ ಸೃಷ್ಟಿಕರ್ತನೂ ಆಗಿರುವ ದೇವನಿಗೆ ಶರಣಾಗಲು ಬಯಸುತ್ತೇನೆ. ನನಗೆ ನೇರಮಾರ್ಗ ತೋರಿಸಿದ ಧರ್ಮಕ್ಕೆ ನಾನು ಸೇರಲು ಬಯಸುತ್ತೇನೆ."

ಅವರಿಗೆ ಬೇರೆ ಪುಸ್ತಕಗಳನ್ನೂ ಓದಲು ಕೊಡಲಾಯಿತು. "ಜೀಸಸ್

ಇನ್ ಇಂಡಿಯಾ" (ಭಾರತದಲ್ಲಿ ಯೇಸು ಕ್ರಿಸ್ತ) ಮೊದಲಾದ ಪುಸ್ತಕಗಳನ್ನು ಓದಿ ಅವರು ಹೇಳಿದರು: "ಎಂತಹ ಬುದ್ಧಿಶಾಲಿ ಸಂಶೋಧನೆ ಮಾಡಲಾಗಿದೆ." ಅವರಿಗೆ ವುರ್ಯು ಮಾಡಲು ಮತ್ತು ನಮಾಝ್ ಮಾಡಲು ಕಲಿಸಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇವನು ನೇರಮಾರ್ಗಕ್ಕೆ ಈ ರೀತಿ ಮಾರ್ಗದರ್ಶನ ನೀಡುತ್ತಾ ಇರುತ್ತಾನೆ.

## ವಾಗ್ದತ್ತ ಮಸೀಹರ(ಅ) ಆಗಮನದ ಉದ್ದೇಶ

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ದಾಸನಾಗಿ ಇಸ್ಲಾಮಿನ ಸುಂದರ ತತ್ವಗಳನ್ನು ಲೋಕಕ್ಕೆ ಪುನಃ ವಿವರಿಸಿಕೊಡಲು ತಾನು ಆಗಮಿಸಿದುದಾಗಿ ವಾಗ್ದತ್ತ ಮಸೀಹ್(ಅ) ಹೇಳಿದ್ದಾರೆ. ಅವರು ಹೀಗೆ ಹೇಳಿದರು:

"ದೇವನು ಈ ಪ್ರವಾದಿಯನ್ನು (ಎಂದರೆ ತನ್ನನ್ನು) ಕಳುಹಿಸಿದುದು ಈ ಕಾಲಘಟ್ಟಕ್ಕೆ ಆವಶ್ಯಕವಾದ ಮಾರ್ಗದರ್ಶನ ಮತ್ತು ತಿಳುವಳಿಕೆ ನೀಡಲಿಕ್ಕಾಗಿದೆ ಹಾಗೂ ನೇರ ಮಾರ್ಗವನ್ನು ತೋರಿಸಿಕೊಡಲಿಕ್ಕಾಗಿದೆ. ಈ ಪ್ರವಾದಿ ಜ್ಞಾನ ನೀಡಿ ಜನರ ಹೃದಯಗಳಿಗೆ ಸಮಾಧಾನ ನೀಡಬೇಕಾಗಿದೆ, ವಿಶ್ವಾಸವನ್ನು ದೃಢಪಡಿಸಿ ಶತ್ರುಗಳನ್ನು ಎದುರಿಸಿ ಸಾಕ್ಷ್ಯಾಧಾರಗಳನ್ನು ನೀಡಿ ನಿರುತ್ತರರನ್ನಾಗಿ ಮಾಡಬೇಕಾಗಿದೆ. ಈ ಪ್ರವಾದಿ ವಿಶ್ವಾಸಾದರ್ಶಗಳನ್ನು ಪ್ರಕಾಶಮಾನವಾಗಿ ಪ್ರದರ್ಶಿಸಲಿಕ್ಕಿದೆ. ಜನರು ದೇವನಿಂದ ಆಗಮಿಸಿದ ಈತನ ಬಗ್ಗೆ ಪ್ರತೀಕ್ಷಿಸಿರಲಿಲ್ಲವಾದರೂ ತಿಳಿದುಕೊಳ್ಳುತ್ತಾ ಇದ್ದಾರೆ..... ಇಸ್ಲಾಮ್ ಇತರ ಎಲ್ಲ ಧರ್ಮಗಳನ್ನೊಳಗೊಂಡಿದೆ, ಎಲ್ಲ ಅನುಗ್ರಹಗಳನ್ನೂ ಸೂಕ್ಷ್ಮಜ್ಞಾನಗಳನ್ನೂ ಎಲ್ಲ ದೃಷ್ಟಾಂತಗಳನ್ನೂ ಒಳಗೊಂಡಿದೆ. ಈ ಪ್ರವಾದಿ ಮೂಲಕ ಇಸ್ಲಾಮ್ ಎಲ್ಲ ರೀತಿಗಳಲ್ಲೂ ಪ್ರಕಾಶಿಸಬೇಕು ಎನ್ನುವುದು ದೇವನ ವಿಧಿನಿರ್ಣಯವಾಗಿದೆ."

ತಾವು ದೇವನಿಂದ ಕಳುಹಿಸಲ್ಪಟ್ಟವರೆಂದು ಬೇರೆ ಯಾರು ತಾನೆ ವಾದಿಸಬಲ್ಲರು? ಇಂದಿನ ಕಾಲದಲ್ಲಿ ಹಝ್ರತ್ ವಾಗ್ದತ್ತ ಮಸೀಹರ(ಅ) ಮೂಲಕ ದೇವನ ಜೀವಂತ ದೃಷ್ಟಾಂತಗಳು ಪ್ರಕಟವಾಗುತ್ತಾ ಇವೆ.

## ಇಸ್ಲಾಮ್ ತನ್ನ ಅನುಯಾಯಿಗಳಿಂದ ಏನನ್ನು ಆವಶ್ಯಪಡುತ್ತದೆ?

ಇಸ್ಲಾಮ್ ತನ್ನ ಅನುಯಾಯಿಗಳಿಂದ ಏನನ್ನು ಆವಶ್ಯಪಡುತ್ತದೆ? ಇಸ್ಲಾಮ್ ಧರ್ಮದ ಉಪದೇಶಗಳನ್ನು ಅನುಸರಿಸಿದರೆ ಮತ್ತು ಅದರ ಆವಶ್ಯಕತೆಗಳನ್ನು ಈಡೇರಿಸಿದರೆ ಸಿಗುವ ಪ್ರಯೋಜನವೇನು? ಇದರ ಬಗ್ಗೆ ವಾಗ್ದತ್ತ ಮಸೀಹರು(ಅ) ಹೀಗೆ ಹೇಳುತ್ತಾರೆ:

"ಅರಬಿ ಭಾಷೆಯಲ್ಲಿ ಇಸ್ಲಾಮ್ ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ಒಂದು ಒಪ್ಪಂದ ಮಾಡಿದಾಗ ಕೊಡುವ ಮುಂಗಡ, ಒಂದು ಕೆಲಸ ಇನ್ನೊಬ್ಬನಿಗೆ ವಹಿಸಿಕೊಡುವುದು, ಶಾಂತಿ ಬಯಸುವುದು, ಶರಣಾಗುವುದು. ಇಸ್ಲಾಮ್ ಪದದ ತಾಂತ್ರಿಕ ಅರ್ಥ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನದಲ್ಲಿದೆ:

'ಯಾರು ಅಲ್ಲಾಹನಿಗೆ ಸಂಪೂರ್ಣವಾಗಿ ಶರಣಾಗಿ ಸತ್ಕರ್ಮಿಯಾಗುತ್ತಾನೋ ಅವನಿಗೆ ತನ್ನ ಪ್ರಭುವಿನಿಂದ ಪ್ರತಿಫಲವಿದೆ. ಅಂತಹವನಿಗೆ ಭಯವಿಲ್ಲ, ಅವರು ದುಃಖಿತರೂ ಅಲ್ಲ'.

(ಪವಿತ್ರ ಖುರ್‌ಆನ್ 2:113)

"ಈ ವಚನ ಪ್ರಕಾರ ಮುಸ್ಲಿಮನಾದವನು ಸಂಪೂರ್ಣವಾಗಿ ದೇವನ ಇಚ್ಛೆಗೆ ಶರಣಾಗುತ್ತಾನೆ. ಅವನ ಸಂಪ್ರೀತಿಯನ್ನು ಆಶಿಸುತ್ತಾನೆ ಮತ್ತು ಸತ್ಕರ್ಮಗಳನ್ನು ದೃಢವಿಶ್ವಾಸ ಹೊಂದಿ ಮಾಡುತ್ತಾನೆ. ಅವನು ಸಂಪೂರ್ಣವಾಗಿ ವಿಶ್ವಾಸದಲ್ಲೂ ಕರ್ಮದಲ್ಲೂ ದೇವನಿಗೆ ಸೇರುತ್ತಾನೆ. ವಿಶ್ವಾಸ ಹೇಗಿರಬೇಕೆಂದರೆ, ದೇವನನ್ನು ಗುರುತಿಸಲು ತನ್ನನ್ನು ಸೃಷ್ಟಿಸಲಾಗಿದೆ ಎಂದು ನಂಬಿ ಅವನಿಗೆ ವಿಧೇಯನಾಗಿ ಅವನ ಪ್ರೀತಿಯನ್ನು ಗಳಿಸಲು ಪ್ರಯತ್ನಿಸಬೇಕು. ಕರ್ಮಗಳು ಹೇಗಿರಬೇಕೆಂದರೆ, ಎಲ್ಲ ಶಕ್ತಿಸಾಮರ್ಥ್ಯಗಳನ್ನು ಬಳಸಿ ಪ್ರಿಯಕರನಾದ ದೇವನನ್ನು ತನ್ನ ವಿಧೇಯತೆಯ ಕನ್ನಡಿಯಲ್ಲಿ ನೋಡುತ್ತಿರುವೆನೋ ಎಂಬಂತೆ ನಿಷ್ಠೆಯಿಂದಲೂ ಆಸಕ್ತಿಯಿಂದಲೂ ಕರ್ಮಗಳನ್ನು ಮಾಡಬೇಕು." (ಆಯಿನಯೆ ಕಮಾಲಾತೆ ಇಸ್ಲಾಮ್, ರೂಹಾನೀ ಖಝಾಇನ್ – ಸಂಪುಟ 5, ಪುಟ57–58)

ಧರ್ಮದ ಅನುಯಾಯಿಗಳು ಹೀಗೆ ಭಾವೋದ್ವೇಗ ಭರಿತರಾಗಬೇಕು.

## ದೇವನೊಂದಿಗೆ ಜೀವಂತ ಸಂಬಂಧ ಸ್ಥಾಪಿಸಿರಿ

ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳಿದ್ದಾರೆ: ಇಸ್ಲಾಮ್ ಕೇವಲ ಕಥೆಗಳನ್ನು ಹೊಂದಿರುವ ಧರ್ಮವಲ್ಲ ಮತ್ತು ಹಿಂದಿನ ಕಾಲದ ಜನರನ್ನು ಅನುಸರಿಸುವುದು ಮಾತ್ರ ಅವರ ಹೊಣೆಗಾರಿಕೆ ಎಂದು ಆಜ್ಞಾಪಿಸುವುದಿಲ್ಲ. ಇಸ್ಲಾಮ್ ತನ್ನ ಅನುಯಾಯಿಗಳು ದೇವನೊಂದಿಗೆ ಜೀವಂತ ಸಂಬಂಧ ಸ್ಥಾಪಿಸಬೇಕೆಂದೂ ಈ ಸಂಬಂಧದ ಮೂಲಕ ಅನುಗ್ರಹ ಗಳಿಸಬೇಕೆಂದೂ ಮಾರ್ಗದರ್ಶನ ನೀಡುತ್ತದೆ.

ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ:

"ಬೇರೆ ಯಾವುದೇ ಉಪದೇಶ ಅಥವಾ ನಿಯಮ ಇಸ್ಲಾಮಿನ ಬದಲಾಗಿ ಬರಲಾರದು. ಏಕೆಂದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರವಾದಿಗಳ ಮುದ್ರೆಯಾಗಿದ್ದಾರೆ ಮತ್ತು ಪವಿತ್ರ ಖುರ್‌ಆನ್ ಪರಿಪೂರ್ಣ ಗ್ರಂಥವಾಗಿದೆ. ಇಸ್ಲಾಮಿನ ಕಲಿಮ (ಮೂಲಮಂತ್ರ) ಹೊರತು ಬೇರೆ ಕಲಿಮ ಬರಲು ಸಾಧ್ಯವಿಲ್ಲ. ಹಝ್ರತ್ ಪೈಗಂಬರರು(ಸ) ನುಡಿದಂತೆ ನಡೆದರು. ಪವಿತ್ರ ಖುರ್‌ಆನನ್ನು ಅನುಸರಿಸದೆ ಮೋಕ್ಷ ಸಾಧ್ಯವಿಲ್ಲ. ಅದರ ಕಡೆಗೆ ಬೆನ್ನು ತಿರುಗಿಸುವವನು ನರಕಕ್ಕೆ ಹೋಗುವನು. ಇದು ನಮ್ಮ ವಿಶ್ವಾಸವಾಗಿದೆ. ಆದರೆ ಅದರೊಂದಿಗೆ ಇನ್ನೊಂದು ವಿಷಯ ಸಹ ನೆನಪಿಡಬೇಕು. ದೇವ ವಾಣಿ ಲಭಿಸುವ ಮಾರ್ಗ ಈ ಸಮುದಾಯಕ್ಕೆ ತೆರೆದಿದೆ. ಈ ಬಾಗಿಲು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರ(ಸ) ಸತ್ಯತೆಗೆ ಶಾಶ್ವತವಾಗಿರುವ ಸಾಕ್ಷ್ಯವಾಗಿದೆ. ಇದಕ್ಕೋಸ್ಕರವೇ ಅಲ್ಲಾಹನು ಸೂರತುಲ್ ಫಾತಿಹದಲ್ಲಿ ಈ ಕೆಳಗಿನ ಪ್ರಾರ್ಥನೆ ಕಲಿಸಿದನು:

'ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು – ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.' (ಪವಿತ್ರಖುರ್‌ಆನ್ 1:6, 7)

"ಈ ಪ್ರಾರ್ಥನೆಯಲ್ಲಿ 'ನಿನ್ನ ಅನುಗ್ರಹಕ್ಕೆ ಪಾತ್ರರಾದವರ' ಎಂದು ಹೇಳಿದುದು ಪ್ರವಾದಿಗಳಿಗೆ ದೊರೆತ ಅನುಗ್ರಹಗಳ ಬಗ್ಗೆಯಾಗಿದೆ. ಅವರಿಗೆ ದೊರೆತ ಅನುಗ್ರಹ ದೇವನ ಬಗ್ಗೆ ಸತ್ಯವಾದ ಜ್ಞಾನವಾಗಿದೆ. ಅವರು ದೇವನೊಂದಿಗೆ ನೇರ ಸಂಪರ್ಕ ಸಾಧಿಸಿ ಇದನ್ನು ಗಳಿಸಿದರು. ಇದು ನೀವು ಬಯಸುವುದೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ

ಪ್ರಾರ್ಥಿಸಲು ಹೇಳಿದೆಯಾದರೂ ನಾವು ಈ ಪ್ರಾರ್ಥನೆ ಮಾಡಿ ಏನನ್ನೂ ಗಳಿಸಲಾರೆವು ಎಂದೂ ಮುಸ್ಲಿಮರಲ್ಲಿ ಯಾರೂ ಆಧ್ಯಾತ್ಮಿಕ ಪದವಿಗಳಿಸಲಾರದೆಂದೂ ಮತ್ತು ಈ ಪ್ರಾರ್ಥನೆ ಅಂಗೀಕರಿಸಲ್ಪಡುವ ಬಾಗಿಲು ಪುನರುತ್ಥಾನದ ದಿನದ ತನಕ ಮುಚ್ಚಲಾಗಿದೆ ಎಂದೂ ನೀವು ಯೋಚಿಸುವುದಾದರೆ ಹಾಗೆ ಮಾಡುವುದು ಇಸ್ಲಾಮನ್ನು ಅಪಮಾನಿಸಿದಂತೆಯೂ ಹರ್ಝ್‌ರತ್ ಪೈಗಂಬರರನ್ನು(ಸ) ಅಪಮಾನಿಸಿದಂತೆಯೂ ಆಗಲಾರದೆ? ಹೀಗೆ ಯೋಚಿಸುವವನು ಮತ್ತು ನಂಬುವವನು ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುತ್ತಾನೆ. ಅವನು ಇಸ್ಲಾಮಿನ ಸತ್ಯವನ್ನು ಮನವರಿಕೆ ಮಾಡದವನಾಗಿದ್ದಾನೆ. ಇಸ್ಲಾಮ್ ಒತ್ತಿಹೇಳುವುದೇನೆಂದರೆ, ಕೇವಲ ಬಾಯಿಮಾತಿನಲ್ಲಿ ಏಕದೇವ ವಿಶ್ವಾಸ ಪ್ರಕಟಿಸಿದರೆ ಸಾಕಾಗಲಾರದು. ಅದರ ವಾಸ್ತವಿಕ ಅರ್ಥವನ್ನು ಮನವರಿಕೆ ಮಾಡಿಕೊಳ್ಳಬೇಕು. ಸ್ವರ್ಗ ನರಕಗಳ ಬಗ್ಗೆ ವಿಶ್ವಾಸ ಕೇವಲ ಊಹಾತ್ಮಕವಾಗಿರಬಾರದು. ಮನುಷ್ಯನು ಸ್ವರ್ಗದ ಅನುಗ್ರಹಗಳನ್ನು ಇಹಲೋಕದಲ್ಲೂ ಅನುಭವಿಸಬೇಕು. ಅನಾಗರಿಕರು ಹೊರಳಾಡುವ ಪಾಪಗಳನ್ನು ತನ್ನಿಂದ ಉದುರಿಸಬೇಕು. ಇದು ಮನುಷ್ಯರು ಹಿಂದೆ ಹೊಂದಿದ್ದ ಮತ್ತು ಈಗ ಹೊಂದಬೇಕಾದ ಭವ್ಯ ಪರಿಶುದ್ಧ ಉದ್ದೇಶಲಕ್ಷ್ಯವಾಗಿದೆ." (ಲೆಕ್ಚರ್ ಲುಧಿಯಾನ – ಪುಟ 53–55)

## ಇಸ್ಲಾಮ್ ಪ್ರತಿಪಾದಿಸುವ ದೇವನು ತನ್ನ ಬಳಿಗೆ ಸ್ವಾಗತಿಸುತ್ತಾನೆ

ಹರ್ಝ್‌ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ: "ಮನುಷ್ಯರನ್ನು ಸೃಷ್ಟಿಸಿದುದು ದೇವನಿಗೆ ವಿಧೇಯರೂ ಶರಣಾಗತರೂ ಆಗಲಿಕ್ಕಾಗಿದೆ. ಯಾರೂ ಅಂಧನಾಗಿರಲು ಬಯಸಲಾರನು. ತಮ್ಮ ಮೋಕ್ಷ ದೇವನನ್ನು ಗುರುತಿಸುವುದರಲ್ಲಿದೆ ಎಂದು ತಿಳಿದುಕೊಂಡರೆ ಅವರು ಅವನನ್ನು ಕಾಣಲು ಪ್ರಯತ್ನಿಸುವಾಗ ಕೆಲವು ಕಥೆಗಳಿಂದ ಅವರು ಎಂದೂ ಸಂತೃಪ್ತರಾಗಲಾರರು. ಅವರು ದೇವನ ಪರಿಪೂರ್ಣ ಗುಣವಿಶೇಷಗಳ ಬಗ್ಗೆ ಜ್ಞಾನದ ಮೂಲಕ ಮಾತ್ರ ಅವನನ್ನು ಗುರುತಿಸಲು ಸಾಧ್ಯ. ಇಸ್ಲಾಮ್ ಧರ್ಮವನ್ನು ಅನುಷ್ಠಿಸುವ ಮೂಲಕ ಮಾತ್ರ ದೇವನನ್ನು ಗುರುತಿಸಬೇಕೆಂಬ ಅವರ ಆಶೆ ಈಡೇರಲು ಸಾಧ್ಯವಾಗುತ್ತದೆ. ಕೆಲವರಲ್ಲಿ ಈ ಆಶೆ ಅವರ ಅಹಂಕಾರ ಮತ್ತು ಅಭಿಲಾಷೆಗಳ ಕಾರಣ ದಬಾಯಿಸಲ್ಪಟ್ಟಿರುತ್ತದೆ. ಕೆಲವರು ಲೌಕಿಕ ಸುಖವನ್ನು ಆಶಿಸುತ್ತಾರೆ. ಅವರು ಲೌಕಿಕ ಆಶಾಭಿಲಾಷೆಗಳಲ್ಲಿ ಎಷ್ಟು ತಲ್ಲೀನರಾಗಿರುತ್ತಾರೆಂದರೆ, ಅವರು ದೇವನನ್ನು ಸಂಪೂರ್ಣವಾಗಿ ಮರೆತುಬಿಡುತ್ತಾರೆ ಮತ್ತು ದೇವನೊಂದಿಗೆ ಸಂಪರ್ಕ ಹೊಂದಲು ಬಯಸದವರಾಗಿರುತ್ತಾರೆ. ಆದರೆ ಲೌಕಿಕ ಅಭಿಲಾಷೆಗಳಿಂದ ಮುಕ್ತನಾದವನು ಮತ್ತು ಆಧ್ಯಾತ್ಮಿಕ ಸುಖವನ್ನು ಪಡೆದವನು ಕೇವಲ ದಂತ ಕಥೆಗಳನ್ನು ಹೊಂದಿದ ಧರ್ಮದಿಂದ ಸಂಪೂರ್ಣವಾಗಿ ತೃಪ್ತನಾಗಲಾರನು. ಅಂತಹ ಜನರಿಗೆ ಇಸ್ಲಾಮ್ ಧರ್ಮ ಮೂಲಕ ಮಾತ್ರ ಪೂರ್ಣ ತೃಪ್ತಿ ಲಭಿಸುವುದು. (ಎಂದರೆ ನೈಜ ಇಸ್ಲಾಮ್ ಧರ್ಮ ತತ್ವಗಳನ್ನು ಅನುಷ್ಠಿಸುವ ಮೂಲಕ.) ಇಸ್ಲಾಮಿನ ದೇವನು ತನ್ನ ಅನುಗ್ರಹದ ಬಾಗಿಲನ್ನು ಯಾರಿಗೂ ಮುಚ್ಚಿಲ್ಲ. ಅವನು ತೆರೆದ ಬಾಹುಗಳಿಂದ ಸ್ವಾಗತಿಸುತ್ತಾನೆ. ಅವನನ್ನು ಕಾಣಲು ಪರಿಶ್ರಮಪಡುವವರಿಗೆ ಅವನ ಅನುಗ್ರಹದ ಬಾಗಿಲನ್ನು ತೆರೆದಿಟ್ಟಿರುವುದಾಗಿ ಕಾಣುವರು."

(ಹಕೀಖತುಲ್ ವಹೀ, ರುಹಾನೀ ಖಝಾಇನ್ – ಸಂಪುಟ 22, ಪುಟ 64)

ಇದಕ್ಕೆ ಸಂಬಂಧಿಸಿ ನಾನು ಇದರ ಮೊದಲು ಒಬ್ಬ ಇಟಾಲಿಯನ್ ಪ್ರಜೆಯ ಉದಾಹರಣೆ ನೀಡಿದ್ದೇನೆ. ದೇವನು ಅವರಿಗೆ ಅಶ್ಚರ್ಯಕರವಾದ ರೀತಿಯಲ್ಲಿ ಮಾರ್ಗದರ್ಶನ ನೀಡಿದನು.

## ಸತ್ಯಧರ್ಮ ತನ್ನ ತಾಜಾ ದೃಷ್ಟಾಂತಗಳನ್ನು ಪ್ರಕಟಿಸಬೇಕು

ಹರ್ಝ್‌ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ: "ಜೀವಂತ ದೃಷ್ಟಾಂತಗಳನ್ನು ಪ್ರಕಟಿಸದ ಧರ್ಮ ತನ್ನ ಅನುಯಾಯಿಗಳನ್ನು ದೇವನ ಕಡೆಗೆ ಒಯ್ಯಲು ಅಸಮರ್ಥವಾಗುತ್ತದೆ ಮತ್ತು ಅವರಲ್ಲಿ ಪಾಪಕೃತ್ಯದ ಬಗ್ಗೆ ಜಿಗುಪ್ಸೆ ಹುಟ್ಟಿಸಲಾರದು. ಧರ್ಮದ ಅನುಯಾಯಿಗಳು ತಮ್ಮ ಧರ್ಮವನ್ನು ಉಚ್ಚಸ್ವರದಲ್ಲಿ ಹೇಳಬಹುದಾದರೂ ಅವರಿಗೆ ಪರಿಶುದ್ಧ ಹೃದಯ ಹೊಂದಲು ಮತ್ತು ದೇವ ಭಯವನ್ನು ಹೊಂದಲು ಸಾಧ್ಯವಾಗದು – ಅವರು ಆ ಧರ್ಮವನ್ನು ಅನುಸರಿಸುವ ಮೂಲಕ ಅಸಾಧಾರಣ ಅನುಭವ ಪಡೆಯದ ಹೊರತು. ತನ್ನ ವಿಶ್ವಾಸಗಳ ಬಗ್ಗೆ ಹೊಸದಾದ ದೃಢೀಕರಣ ಲಭಿಸಿದಾಗ ಮಾತ್ರ ಧರ್ಮದಲ್ಲಿ ನವಜೀವನ ಉಂಟಾಗುವುದು. ಹೊಸ ಪವಾಡಗಳು ಪ್ರಕಟವಾಗುವಾಗ ಇಂತಹ ಸ್ಥಿತಿ ಯಾವಾಗಲೂ ಉಂಟಾಗುತ್ತಿತ್ತು. ಪ್ರವಾದಿಗಳಾದ ಮೂಸಾ(ಅ), ಈಸಾ(ಅ), ಇಬ್ರಾಹೀಮ್(ಅ), ಯಅ್‌ಖೂಬ್(ಅ) ಮತ್ತು ಮುಹಮ್ಮದ್ ಪೈಗಂಬರ್(ಸ) ಇಂತಹ ಪವಾಡಗಳನ್ನು ತೋರಿಸಿದರು. ದೇವನು ಯಾರಿಗೆ ಸ್ಥಿರವಾಗಿ ಪ್ರಕಟವಾಗುತ್ತ ಇರುತ್ತಾನೋ ಅವರ ವಿಶ್ವಾಸ ನವೀಕರಣ ಹೊಂದುತ್ತಾ ಇರುತ್ತದೆ. ಅವರು ಹೊಸ ದೃಷ್ಟಾಂತಗಳನ್ನು ಕಾಣುತ್ತಾರೆ. ಇತರ ಧರ್ಮಗಳು ದಂತ ಕಥೆಗಳ ಮತ್ತು ಕಟ್ಟುಕಥೆಗಳ ಬಲೆಯಲ್ಲಿ ಸಿಲುಕಿವೆ. ಅಂತಹ ಧರ್ಮದ ಅನುಯಾಯಿಗಳು ದೇವನ ಹೆಸರು ಹೇಳುತ್ತಾರಾದರೂ ಅವರ ಹೃದಯಗಳು ಅವನನ್ನು ನಿರ್ಲಕ್ಷಿಸುತ್ತವೆ. ನಾನು ಸತ್ಯವಾಗಿ ಹೇಳುತ್ತೇನೆ – ಎಲ್ಲ ಕೋಲಾಹಲಗಳು ಕಥೆಗಳನ್ನು ಅಸ್ತಿಭಾರವಾಗಿಟ್ಟುಕೊಂಡಾಗಿವೆ. ಹಿಂದಿನ ಕಾಲದ ಸಂದೇಶವಾಹಕರ ಮತ್ತು ಸಂತರ ಪವಾಡ ಕೃತ್ಯಗಳನ್ನು ವಿವರಿಸುವವರು ತಾವು ಹಳೆಗಾಲದ ಕಥೆಗಳನ್ನು ಮಾತ್ರ ಹೇಳುತ್ತಿದ್ದೇವೆ; ತಾವಾಗಲಿ ತಮ್ಮ ತಂದೆ ತಾಯಂದಿರಾಗಲಿ ಅವುಗಳಿಗೆ ಸಾಕ್ಷ್ಯವಹಿಸಿಲ್ಲ ಎಂದು ತಮ್ಮ ಹೃದಯದಲ್ಲಿ ಮನವರಿಕೆ ಮಾಡಿಕೊಂಡಿರುತ್ತಾರೆ. ತಾವು ವಿವರಿಸುವುದು ಎಷ್ಟರಮಟ್ಟಿಗೆ ಸತ್ಯವಾಗಿದೆ ಎಂದು ಅವರಿಗೆ ತಿಳಿದಿರುವುದಿಲ್ಲ. ಗದ್ದಲ ದಿಬ್ಬವನ್ನು ಪರ್ವತ ಎಂಬಂತೆ ಅತಿಶಯೋಕ್ತಿಯಿಂದ ವಿವರಿಸುವುದು ಲೌಕಿಕ ಜನರ ಸಾಮಾನ್ಯ ಪ್ರವೃತ್ತಿಯಾಗಿದೆ. ಹೀಗಿರುವಾಗ ಅವರು ಹಿಂದಿನ ಕಾಲದ ಘಟನೆಗಳನ್ನು ಪವಾಡಗಳೆಂದು ವರ್ಣಿಸುತ್ತಾರೆ. ಹಿಂದಿನ ಕಾಲದ ಕಥೆಗಳನ್ನು ಹೇಳುವ ಮುಸ್ಲಿಮ್, ಯೇಸು ಕ್ರಿಸ್ತರನ್ನು ದೇವನೆಂದು ಹೇಳಿ ಅವರ ಪವಾಡಗಳನ್ನು ವಿವರಿಸುವ ಕ್ರೈಸ್ತ, ಅವತಾರಗಳ ಮಹಿಮೆಗಳನ್ನು ವಿವರಿಸುವ ಹಿಂದು ಇವರೆಲ್ಲರೂ ಅವುಗಳೊಂದಿಗೆ ಜೀವಂತ ಉದಾಹರಣೆಗಳನ್ನು ವಿವರಿಸುವುದಿಲ್ಲವಾದರೆ ಅವುಗಳೆಲ್ಲ ನಿಷ್ಪ್ರಯೋಜಕವಾಗಿವೆ. ಸತ್ಯಧರ್ಮ ಜೀವಂತ ಉದಾಹರಣೆಗಳ ಬೆಂಬಲ ಹೊಂದಿರುತ್ತದೆ. ಒಂದು ಧರ್ಮ ಸತ್ಯವಾಗಿದೆ, ಆದರೆ ಅದರ ಸತ್ಯತೆ ವರ್ತಮಾನ ಕಾಲದಲ್ಲಿ ಮತ್ತು ಭವಿಷ್ಯತ್ ಕಾಲದಲ್ಲಿ ಪ್ರಕಾಶಭರಿತವಾಗಿ ಬೆಳಗಲಾರದು; ಅದಕ್ಕೆ ಬೆಂಬಲವಾಗಿ ಕೆಲವು ದಂತ ಕಥೆಗಳೂ ಕಟ್ಟುಕಥೆಗಳೂ ಮಾತ್ರ ಇವೆ ಎಂದಿರುವಾಗ ಒಬ್ಬನ ಹೃದಯ ಮತ್ತು ಆತ್ಮಸಾಕ್ಷಿ ಅಂಗೀಕರಿಸುವುದೇ? ಮಾರ್ಗದರ್ಶನ ಗಳಿಸಲು ಹಸಿದಿರುವವನು ಅಂತಹ ಧರ್ಮದ ಬಾಗಿಲು ಮುಚ್ಚಲ್ಪಟ್ಟಿರುವುದಾಗಿ

ಕಾಣುವನು. ದೇವನನ್ನು ಕಾಣಬೇಕೆಂಬ ದಾಹ ಹೊಂದಿದವನು ಇಂತಹ ಮನೋಭಾವ ಹೊಂದಲಾರನೆಂದು ನಾನು ದೃಢವಾಗಿ ನಂಬುತ್ತೇನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸತ್ಯಧರ್ಮ ಹೊಸದಾದ ಮತ್ತು ಪ್ರಕಾಶಮಾನವಾದ ದೃಷ್ಟಾಂತಗಳನ್ನು ತೋರಿಸಬೇಕು. ದೇವನ ಅಸ್ತಿತ್ವವನ್ನು ಪ್ರಕಟಿಸಬೇಕು. ಅವು ಜೀವಂತ ಪ್ರಕಟಣೆಯಾಗಬೇಕು!"

ಹಝ್ರತ್ ವಾಗ್ದತ್ತ ಮಸೀಹ್[ಅ] ಪುನಃ ಹೇಳುತ್ತಾರೆ:

"ಲೋಕದ ವಿವಿಧ ಭಾಗಗಳಲ್ಲಿ ವಾಸಿಸುವ ಜನರಲ್ಲಿ ಒಳ್ಳೆಯ ಪ್ರಕೃತಿ ಹೊಂದಿದವರನ್ನು – ಅವರು ಯುರೋಪಿನಲ್ಲಿರಲಿ ಅಥವಾ ಏಶಿಯಾದಲ್ಲಿರಲಿ, ಏಕದೇವ ವಿಶ್ವಾಸದ (ಎಂದರೆ ತೌಹೀದ್) ಕಡೆಗೆ ಎಳೆದು ತನ್ನ ದಾಸರನ್ನು ಏಕಧರ್ಮದಲ್ಲಿ ಜಮಾಯಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನ ಇದೇ ಉದ್ದೇಶ ಲಕ್ಷ್ಯವನ್ನು ಈಡೇರಿಸಲು ನಾನು ಕಳುಹಿಸಲ್ಪಟ್ಟಿದ್ದೇನೆ. ನೀವು ಈ ಉದ್ದೇಶ ಲಕ್ಷ್ಯವನ್ನು ಮೃದುತ್ವ, ಸುಸ್ವಭಾವ ಮತ್ತು ಪ್ರಾರ್ಥನೆಗಳ ಮೂಲಕ ಈಡೇರುವಂತೆ ಮಾಡಿರಿ."

(ಅಲ್‌ವಸಿಯ್ಯತ್–ಕನ್ನಡ ಪುಟ 8)

ಧರ್ಮವನ್ನು ಅನುಷ್ಠಿಸಬೇಕಾದುದು ಪ್ರಾರ್ಥನೆ ಮೂಲಕ ಮತ್ತು ಸ್ವಭಾವ ಗುಣಗಳನ್ನು ಸುಧಾರಣೆ ಮಾಡುವ ಮೂಲಕವೇ ಹೊರತು ಖಡ್ಗ ಬೀಸುತ್ತಾ ರಕ್ತ ಹರಿಸುವ ಮೂಲಕವಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸತ್ಯಸಂಧನಾದ ಸೇವಕನ (ವಾಗ್ದತ್ತ ಮಸೀಹ್) ಅನುಯಾಯಿಗಳ ಹೊಣೆಗಾರಿಕೆ ಏನೆಂದರೆ, ಅವರು ಹಝ್ರತ್ ಪೈಗಂಬರರು ಸ್ಥಾಪಿಸಿದ ಈ ಧರ್ಮದ ಸಂದೇಶವನ್ನು ಲೋಕದಲ್ಲಿ ಹರಡಬೇಕು.

## ಸತ್ಯಧರ್ಮದ ಸಾರಾಂಶ

ಇಸ್ಲಾಮ್ ಧರ್ಮದ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು: "ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ತೃಪ್ತಿಪಟ್ಟಿರುವೆನು." (ಪವಿತ್ರ ಖುರ್‌ಆನ್ 5:4)

ಇಸ್ಲಾಮ್ ಎಂತಹ ಧರ್ಮವೆಂದರೆ, ಅಂತ್ಯಕಾಲದ ತನಕ ತಲೆದೋರಬಹುದಾದ ಎಲ್ಲ ಸಮಸ್ಯೆಗಳಿಗೆ ಮತ್ತು ಪ್ರಶ್ನೆಗಳಿಗೆ ಅದು ಪರಿಹಾರವನ್ನು ಒದಗಿಸಿದೆ. ಈ ಧರ್ಮ ಈಗ ಸಹ ಮಾನವರ ಮತ್ತು ದೇವನ ಮಧ್ಯೆ ಸಂಬಂಧ ಸ್ಥಾಪಿಸುತ್ತದೆ ಹಾಗೂ ದೇವನ ದೃಷ್ಟಾಂತಗಳನ್ನು ಪ್ರಕಟಿಸುತ್ತದೆ. ಈ ಧರ್ಮ ಕೊನೆಯ ಕಾಲದಲ್ಲಿ ತನ್ನ ಸಂದೇಶವಾಹಕನನ್ನು ಕಳುಹಿಸಿತು ಮತ್ತು ಜನರನ್ನು ಮೊದಲನೆಯ ಕಾಲದವರೊಂದಿಗೆ ಜೋಡಿಸಿತು ಹಾಗೂ ಧರ್ಮದ ವಾಸ್ತವಿಕತೆಯನ್ನು ಕಲಿಸಿತು. ಪ್ರವಾದಿತ್ವದ ಮಾರ್ಗದಲ್ಲಿ ಖಿಲಾಫತ್ ಹೇಗೆ ಸ್ಥಾಪಿಸಲಾಗುವುದು ಎಂದು ಈ ಧರ್ಮ ವಿವರಿಸಿತು ಮತ್ತು ಖಿಲಾಫತ್ ಸ್ಥಾಪಿತವಾಗುವಂತೆ ಮಾಡಿ ವಿಶ್ವಾಸಿಗಳ ಭಯವನ್ನು ನಿವಾರಿಸಿ ಅವರಿಗೆ ಶಾಂತಿಯನ್ನೂ ಭದ್ರತೆಯನ್ನೂ ನೀಡಿತು. ಈ ಧರ್ಮ ಹಝ್ರತ್ ವಾಗ್ದತ್ತ ಮಸೀಹರ ಖಲೀಫರ ಮೂಲಕ ಲೋಕದಲ್ಲಿ ಶಾಂತಿ ಸ್ಥಾಪಿಸುವ ಮಾರ್ಗವನ್ನು ಬೆಳಗಿಸಿತು ಮತ್ತು ವಿಜ್ಞಾನ ಆಶ್ಚರ್ಯಕರವಾದ ಆವಿಷ್ಕಾರಗಳನ್ನು ಮಾಡುತ್ತಿರುವಾಗ ಧರ್ಮ ಆಧುನಿಕ ಕಾಲದ ಆವಶ್ಯಕತೆಗಳನ್ನು ಈಡೇರಿಸುವುದಿಲ್ಲ, ಅದಕ್ಕೆ ಯಾವ ಸ್ಥಾನವೂ ಇಲ್ಲ ಎಂದು ವಿಮರ್ಶಿಸುವವರನ್ನು ಮೌನ ಅವಲಂಬಿಸುವಂತೆ ಮಾಡಿತು.

## ಇಸ್ಲಾಮ್ – ಪರಿಪೂರ್ಣ ಧರ್ಮ

ಇಸ್ಲಾಮ್ ಪರಿಪೂರ್ಣ ಉಪದೇಶಗಳನ್ನು ಹೊಂದಿದೆ. ವಿಜ್ಞಾನ ಅದಕ್ಕೆ ಅಧೀನವಾಗಿದೆ. ಪವಾಡಗಳು ಮತ್ತು ದೃಷ್ಟಾಂತಗಳ ಹಿಂದಿನ ಕಥೆಗಳು ಮಾತ್ರವಲ್ಲ ಇಂದು ಸಹ ಅಹ್ಮದಿಯಾ ಮುಸ್ಲಿಮ್ ಜಮಾಅತ್ ದೇವನ ಜೀವಂತ ದೃಷ್ಟಾಂತಗಳನ್ನೂ, ಅವನ ಅನುಗ್ರಹಗಳನ್ನು ತೋರಿಸಿಕೊಡಬಲ್ಲದು. ಪ್ರಾರ್ಥನೆ ಒಂದು ಹಾಳಾದ ಮತ್ತು ಹಳೆಯ ಕ್ರಮವಲ್ಲ. ಇಂದು ಸಹ ಪ್ರಾರ್ಥನೆಗಳು ದೇವನಿಂದ ಸ್ವೀಕರಿಸಲ್ಪಡುವುದು ಇಸ್ಲಾಮ್ ಧರ್ಮದ ಮೂಲಕ ಕಾಣಿಸುತ್ತದೆ. ದೇವನು ಅಸಾಧಾರಣವಾಗಿ ದೃಷ್ಟಾಂತಗಳನ್ನು ತೋರಿಸುತ್ತಾನೆ. ಲೋಕದ ಎಲ್ಲ ಕಡೆಗಳಲ್ಲಿರುವ ಅಹ್ಮದೀ ಮುಸ್ಲಿಮರು ಈ ಆಶ್ಚರ್ಯಕರ ದೃಷ್ಟಾಂತಗಳಿಗೆ ಸಾಕ್ಷ್ಯವಹಿಸುತ್ತಾರೆ. ಇಂದು ಇಸ್ಲಾಮ್ ಮಾತ್ರ ಸತ್ಯವೂ ಸ್ಥಿರವೂ ಆದ ಜೀವನವನ್ನು ಲೋಕಕ್ಕೆ ನೀಡಲು ಸಾಧ್ಯವಿದೆ. ಹಝ್ರತ್ ಪೈಗಂಬರರ[ಸ] ಪತಾಕೆ ಮಾತ್ರ ಜಾಗತಿಕ ಶಾಂತಿಯ ಖಾತರಿ ನೀಡಬಹುದಾಗಿದೆ. ಇಹಲೋಕದ ಜೀವಿತ ಮತ್ತು ಪರಲೋಕದ ಜೀವಿತ ಸ್ಥಾಪಿತವಾಗಿರಲು ದೇವನೊಂದಿಗೆ ಸಂಬಂಧ ಸ್ಥಾಪಿಸಬೇಕಾಗಿದೆ. ಇಂದಿನ ಕಾಲದಲ್ಲಿ ಅಹ್ಮದೀ ಮುಸ್ಲಿಮರ ಹೊರತು ಬೇರೆ ಯಾರೂ ಈ ವಾಸ್ತವಿಕತೆಗಳ ಬಗ್ಗೆ ಲೋಕಕ್ಕೆ ಮನವರಿಕೆ ಮಾಡಿಕೊಡಲಾರರು.

## ನಿಮ್ಮ ಜವಾಬ್ದಾರಿಗಳನ್ನು ಈಡೇರಿಸಿರಿ


ನೀವೆಲ್ಲರೂ ಎದ್ದೇಳಿರಿ. ನಿಮ್ಮ ಪ್ರತಿಜ್ಞೆಗಳನ್ನು ಈಡೇರಿಸಿರಿ. ನಿಮ್ಮ ಶಕ್ತಿಸಾಮರ್ಥ್ಯಗಳು, ಜೀವ, ಸಂಪತ್ತು, ಸಮಯ ಮತ್ತು ಗೌರವವನ್ನು ಈ ಉದ್ದೇಶವನ್ನು ಈಡೇರಿಸಲು ಬಲಿದಾನವಾಗಿ ನೀಡಿರಿ. ನಿಮ್ಮ ಎಲ್ಲ ಶಕ್ತಿಸಾಮರ್ಥ್ಯಗಳನ್ನು ಬಳಸಿರಿ. ನಿಮ್ಮ ಪ್ರಾರ್ಥನೆಗಳನ್ನು ವರ್ಧಿಸಿರಿ. ನೀವು ಹೇಗೆ ಅಳುತ್ತಾ ಪ್ರಾರ್ಥಿಸಬೇಕೆಂದರೆ, ದೇವನು ನಮ್ಮ ಪ್ರಯತ್ನಗಳಿಗೆ ಅಪರಿಮಿತ ಅನುಗ್ರಹಗಳನ್ನು ಸುರಿಸುವಂತಾಗಲಿ ಮತ್ತು ನಾವು ನಮ್ಮ ಗುರಿ ತಲಪುವಂತಾಗಲಿ. ಒಂದು ಸತ್ಯಧರ್ಮ ಮತ್ತು ಒಬ್ಬ ಸತ್ಯ ಪ್ರವಾದಿ ಗುರುತಿಸಲ್ಪಡಲಿ ಮತ್ತು ಲೋಕದಲ್ಲಿ ಒಬ್ಬ ದೇವನು ಮಾತ್ರ ಆರಾಧಿಸಲ್ಪಡಲಿ. ದೇವನು ನಮ್ಮ ಹೊಣೆಗಾರಿಕೆಗಳನ್ನು ನೆರವೇರಿಸಲು ನಮಗೆ ಶಕ್ತಿಸಾಮರ್ಥ್ಯ ನೀಡಲಿ.

ಈಗ ನಾವು ಮೌನ ಪ್ರಾರ್ಥನೆ ಮಾಡುವೆವು. ಲೋಕದಲ್ಲಿ ವಿವಿಧ ಪ್ರದೇಶಗಳಲ್ಲಿ ದೌರ್ಜನ್ಯ ಪೀಡಿತರಾಗಿರುವ ಎಲ್ಲ ಅಹ್ಮದಿಯರಿಗೋಸ್ಕರ ಪ್ರಾರ್ಥಿಸಿರಿ. ಮುಸ್ಲಿಮ್ ಲೋಕದ ಎಲ್ಲರಿಗೋಸ್ಕರ ಪ್ರಾರ್ಥಿಸಿರಿ. ದೇವನು ಅವರನ್ನು ನೋವಿನಿಂದಲೂ ದುಃಖದಿಂದಲೂ ಕಷ್ಟಗಳಿಂದಲೂ ಸಂರಕ್ಷಿಸಲಿ. ಆಡಳಿತೆಗಾರರು ಮತ್ತು ತಥಾಕಥಿತ ಧಾರ್ಮಿಕ ನಾಯಕರು ಮತ್ತು ಸಂಸ್ಥೆಗಳು ಮಾಡುತ್ತಿರುವ ಅನ್ಯಾಯಗಳಿಂದಲೂ ದೌರ್ಜನ್ಯಗಳಿಂದಲೂ ಜನರನ್ನು ಅಲ್ಲಾಹನು ರಕ್ಷಿಸಲಿ ಎಂದು ಬೇಡಿಕೊಳ್ಳಿರಿ. ಈ ದೌರ್ಜನ್ಯಗಾರರು ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುತ್ತಿದ್ದಾರೆ. ಈಗ ಲೋಕ ನಾಶದ ಕಡೆಗೆ ಸಾಗುತ್ತಿದೆ. ಅದನ್ನು ರಕ್ಷಿಸಲಿಕ್ಕೆ ಬೇಡಿಕೊಳ್ಳಿರಿ. ನಾವೆಲ್ಲರೂ ನಮ್ಮ ವಿಶ್ವಾಸದಲ್ಲಿ ವರ್ಧಿಸುವವರಾಗಲಿ. ಅಲ್ಲಾಹನು ನಮ್ಮೆಲ್ಲರನ್ನೂ ರಕ್ಷಿಸಲಿ. ಶತ್ರುಗಳ ಕಾರಸ್ಥಾನಗಳಿಂದ ನನ್ನನ್ನೂ ನಿಮ್ಮೆಲ್ಲರನ್ನೂ ಅಲ್ಲಾಹನು ರಕ್ಷಿಸಲಿ.

(The Review of Religions ಅಕ್ಟೋಬರ್–2014 ಸಂಚಿಕೆಯಿಂದ. ಅನುವಾದಕ: ಎಮ್. ಉಬೈದುಲ್ಲಾ)

# ಇಸ್ಲಾಮ್-ಶಾಂತಿಯ ಮೂಲವೇ ಅಥವಾ ಶಾಂತಿಗೆ ಬೆದರಿಕೆಯೇ?

*2014 ಜೂನ್ ದಿನಾಂಕ 13ರಂದು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋನ್ನತ ನಾಯಕ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಜರ್ಮನಿಯ 39ನೇ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ ಆಗಮಿಸಿದ ಒಂದು ಸಾವಿರಕ್ಕಿಂತ ಹೆಚ್ಚು ಅಹ್ಮದಿಯೇತರ ಅತಿಥಿಗಳನ್ನು ಪ್ರತ್ಯೇಕ ಸಭೆಯಲ್ಲಿ ಸಂಬೋಧಿಸಿ ಮಾಡಿದ ಭಾಷಣ.*



ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು:

ಎಲ್ಲ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ –

ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ನಮ್ಮ ವಾರ್ಷಿಕ ಸಮ್ಮೇಳನವಾದ ಜಲ್ಸಾ ಸಾಲಾನಕ್ಕೆ ಆಗಮಿಸಲು ಸಮಯಾವಕಾಶವನ್ನು ಬಳಸಿದ ನಿಮಗೆಲ್ಲರಿಗೂ ನಾನು ಪ್ರಾಮಾಣಿಕವಾಗಿ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ದುರದೃಷ್ಟಕರವಾಗಿ, ಲೋಕದ ಬಹಳ ಭಾಗಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಜನರು ಸಾಮಾನ್ಯವಾಗಿ ಧರ್ಮದ ಬಗ್ಗೆ ಮತ್ತು ವಿಶಿಷ್ಟವಾಗಿ ಇಸ್ಲಾಮ್ ಬಗ್ಗೆ ಭಯವನ್ನು ಹೊಂದಿದ್ದಾರೆ. ಹೀಗಿರುವಾಗ, ಇಂತಹ ಪರಿಸ್ಥಿತಿಯಲ್ಲಿ ನೀವು ಪೂರ್ಣವಾಗಿ ಧಾರ್ಮಿಕವಾದ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದುದು ನಿಮಗೆ ನಮ್ಮ ಧರ್ಮದ ಬಗ್ಗೆ ಗಾಢವಾದ ಆಸಕ್ತಿ ಇದೆಯೆಂದೂ ನೀವು ಅದರ ಬಗ್ಗೆ ಅಧ್ಯಯನ ನಡೆಸಲು ಬಯಸುತ್ತೀರೆಂದೂ ಸ್ಪಷ್ಟವಾಗುತ್ತದೆ. ಆದುದರಿಂದ ನಿಮಗೆ ಕೃತಜ್ಞತೆ ಅರ್ಪಿಸುವುದರೊಂದಿಗೆ, ನೀವು ಧರ್ಮದ ಸತ್ಯವಾದ ಸತ್ವವನ್ನು ಮತ್ತು ಧರ್ಮದ ಆವಶ್ಯಕತೆಯನ್ನು ಕಲಿತುಕೊಳ್ಳಲು ಹೃತ್ಪೂರ್ವಕವಾಗಿ ಪರಿಶ್ರಮಿಸುವವರಾಗಲಿ ಎಂದು ಪ್ರಾರ್ಥಿಸುತ್ತೇನೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನಾಯಕನೆಂಬ ನೆಲೆಯಲ್ಲಿ ನಾನು ಇಸ್ಲಾಮ್ ಧರ್ಮದ ನೈಜ ಉಪದೇಶಗಳ ಬಗ್ಗೆ ಸಂಕ್ಷಿಪ್ತವಾಗಿ ನಿಮ್ಮನ್ನು ಸಂಬೋಧಿಸಿ ಮಾತನಾಡುವೆನು. ಸೀಮಿತ ಸಮಯದಲ್ಲಿ ಇಸ್ಲಾಮಿನ ಎಲ್ಲ ಉಪದೇಶಗಳನ್ನು ವಿವರಿಸುವುದು ಖಂಡಿತವಾಗಿಯೂ ಅಸಾಧ್ಯವಾಗಿದೆ. ಆದುದರಿಂದ ನಾನು ಕೆಲವು ಉಪದೇಶಗಳ ಬಗ್ಗೆ ಮಾತ್ರ ಪ್ರಸ್ತಾಪಿಸುವೆನು.

ಪಾಶ್ಚಿಮಾತ್ಯ ಲೋಕದಲ್ಲಿ ಆಗಾಗ ಇಸ್ಲಾಮ್ ಧರ್ಮದ ವಿರುದ್ಧ ವಿವಿಧ ಆಕ್ಷೇಪಗಳನ್ನು ಮಾಡುತ್ತಿರುವುದಾಗಿ ನಾವು ಕಾಣುತ್ತೇವೆ ಮತ್ತು ಇಸ್ಲಾಮ್ ವಿರುದ್ಧ ಹಗೆತನದ ತಳಪ್ರವಾಹ ಜಾರಿಯಲ್ಲಿದೆಯಾದುದರಿಂದ ಅನ್ಯಾಯಕರವಾದ ಆಕ್ಷೇಪಗಳನ್ನು ಅದರ ವಿರುದ್ಧ ಮಾಡಲಾಗುತ್ತಿದೆ. ತಪ್ಪು ವ್ಯಾಖ್ಯಾನಗಳನ್ನು ಪವಿತ್ರ ಖುರ್‌ಆನಿನ ಉಪದೇಶಗಳೆಂದು ಆರೋಪಿಸಲಾಗುತ್ತಿದೆ ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ ಇಸ್ಲಾಮ್ ಭೀಕರತೆಯನ್ನೂ ಬರ್ಬರತೆಯನ್ನೂ ಹೊರತು ಬೇರೆ ಏನನ್ನೂ ಪ್ರತಿಪಾದಿಸುವುದಿಲ್ಲ ಎಂದು ತೋರಿಸಿಕೊಡಲಾಗುತ್ತದೆ. ಇಸ್ಲಾಮ್ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಸಹ ಕ್ರೂರವಾಗಿಯೂ ದೌರ್ಜನ್ಯಕರವಾಗಿಯೂ ವರ್ತಿಸಿದರೆಂದು ಆಕ್ಷೇಪಿಸಲಾಗುತ್ತಿದೆ. (ಇಂತಹ ಆಕ್ಷೇಪಗಳನ್ನು ಪ್ರಸ್ತಾಪಿಸಿದುದಕ್ಕೋಸ್ಕರ ಅಲ್ಲಾಹನ ಅಭಯಕೋರುತ್ತೇನೆ.) ಇದರ ಪರಿಣಾಮವಾಗಿ ಮಸ್‌ಜಿದ್‌ಗಳ ನಿರ್ಮಾಣದ ಬಗ್ಗೆ ಬಹಳ ಭಯ ಸೂಚಿಸುವ ಜನರಿದ್ದಾರೆ. ಏಕೆಂದರೆ ಭೀಕರವಾದದ ಉಪದೇಶಗಳು ಪಶ್ಚಿಮದ ದೇಶಗಳನ್ನು ತಲಪುವ ಬಗ್ಗೆ ಅವರು ಭಯಪಡುತ್ತಾರೆ.

ಮುಸ್ಲಿಮ್ ಲೋಕದ ಬಹಳ ದೊಡ್ಡ ಭಾಗದ ಸ್ಥಿತಿ ದಾರುಣವಾಗಿದೆ ಎಂದು ಒಪ್ಪಿಕೊಳ್ಳುವ ಬಗ್ಗೆ ನನಗೆ ಹಿಂಜರಿಕೆ ಇಲ್ಲ. ಕೆಲವು ಮುಸ್ಲಿಮ್ ನಾಮಧಾರಿಗಳ ವರ್ತನೆಗಳನ್ನು ನಾವು ಕಾಣುವಾಗ ಈ ಭಯಗಳು ನ್ಯಾಯಪೂರ್ಣವಾಗಿವೆ ಎಂದು ತೋರುತ್ತದೆ. ಇದರ ಪರಿಣಾಮವಾಗಿ ಭಯಪೀಡಿತರಾದವರು ಹೇಳುವುದೇನೆಂದರೆ, ಮುಸ್ಲಿಮರ ಕರ್ಮಗಳನ್ನೂ ಅವರ ಉಪದೇಶಗಳನ್ನೂ ನಿಯಂತ್ರಿಸಬೇಕು. ಇಸ್ಲಾಮ್ ಧರ್ಮದ

ಪ್ರಚಾರವನ್ನೂ ಹೊಸ ಮಸ್‌ಜಿದ್‌ಗಳ ನಿರ್ಮಾಣವನ್ನೂ ನಿಷಿದ್ಧಗೊಳಿಸಬೇಕೆಂದು ಬಹಳ ಬಲಯುತವಾಗಿ ಅವರು ವಾದಿಸುತ್ತಾರೆ. ಇಂತಹ ಜನರು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅತ್ಯಂತ ರೊಚ್ಚಿಗೆಬ್ಬಿಸುವ ಬೈಗಳಿಂದ ನಿಂದಿಸುತ್ತಾರೆಂಬುದು ಖೇದಕರವಾಗಿದೆ.

ಇಸ್ಲಾಮ್ ಧರ್ಮವು ಕ್ರೈಸ್ತಧರ್ಮದ ನಂತರ ಲೋಕದ ಅತ್ಯಂತ ದೊಡ್ಡ ಧರ್ಮವೆಂದು ಪ್ರಸಿದ್ಧವಾಗಿದೆ. ಆದರೆ ವಾಸ್ತವಿಕವಾದುದೇನೆಂದರೆ, ಪಶ್ಚಿಮದ ದೇಶಗಳಲ್ಲಿ ವಾಸಿಸುವ ಕ್ರೈಸ್ತರು ತಮ್ಮ ಧರ್ಮವನ್ನು ಅನುಷ್ಠಿಸುವುದಿಲ್ಲ ಮತ್ತು ಅವರಿಗೆ ಧರ್ಮದ ಬಗ್ಗೆ ನೈಜ ಆಸಕ್ತಿಯೂ ಇಲ್ಲ. ಚರ್ಚ್ ಆಡಳಿತೆಗಾರರು ಇದು ಸರಿಯೆಂದು ಒಪ್ಪಿಕೊಳ್ಳುತ್ತಾರೆ ಮತ್ತು ಸಂಪರ್ಕ ಮಾಧ್ಯಮಗಳ ವಿವಿಧ ವರದಿಗಳು ಇದನ್ನು ಸರಿಯೆಂದು ಸ್ಥಾಪಿಸಿವೆ. ಈ ಜನರಲ್ಲಿ ಗಣನೀಯ ಸಂಖ್ಯೆಯವರು ದೇವನ ಅಸ್ತಿತ್ವವನ್ನು ನಂಬುವುದೇ ಇಲ್ಲ. ಕೆಲವರು ದೇವನಿದ್ದಾನೆಂದು ನಂಬುತ್ತಾರೆ; ಆದರೆ ಧರ್ಮ ದೇವನಿಂದ ಬಂದುದೆಂದು ನಂಬುವುದಿಲ್ಲ. ಆದುದರಿಂದ ತಮಗೆ ಧರ್ಮದ ಆವಶ್ಯಕತೆಯಿಲ್ಲ ಎಂದು ಭಾವಿಸುತ್ತಾರೆ.

ಇದಕ್ಕೆ ತದ್ವಿರುದ್ಧವಾಗಿ, ಮುಸ್ಲಿಮರಲ್ಲಿ ಬಹುತೇಕ ಜನರು ತಮ್ಮ ಧರ್ಮದೊಂದಿಗೆ ನಿಕಟ ಸಂಬಂಧ ಹೊಂದಿರುವುದಾಗಿ ಕಾಣುತ್ತೇವೆ. ಆದುದರಿಂದ ತಮ್ಮ ಧರ್ಮದ ವಿರುದ್ಧ ಮತ್ತು ಪವಿತ್ರ ಪ್ರವಾದಿ ಹಝ್ರತ್ ಮುಹಮ್ಮದರ(ಸ) ವಿರುದ್ಧ ಏನು ಹೇಳಿದರೂ ಅವರು ಸಹಿಸಲಾರರು. ಇಸ್ಲಾಮನ್ನು ವಿರೋಧಿಸುವವರು ಮುಸ್ಲಿಮರ ಧಾರ್ಮಿಕ ಭಾವನೆಯನ್ನು ಕೆರಳಿಸುವಾಗ ಅದರ ಪ್ರತಿಕ್ರಿಯೆಯಾಗಿ ಅತ್ಯಂತ ಕೆಟ್ಟ ಅಸ್ವಸ್ಥತೆಯೂ ಕಲಹಗಳೂ ಲೋಕದಲ್ಲಿ ತಲೆದೋರುತ್ತವೆ. ಮುಸ್ಲಿಮರು ಮಾಡುವ ವಿಧ್ವಂಸಕ ಕೃತ್ಯಗಳು ಸಂಪೂರ್ಣವಾಗಿ ತಪ್ಪಾಗಿವೆ ಮತ್ತು ಅನ್ಯಾಯಕರವಾಗಿವೆ. ಆದರೆ ಮನುಷ್ಯರ ಪ್ರಕೃತಿ ಮತ್ತು ತರ್ಕ ಹೇಗಿದೆ ಎಂದರೆ ಅವರ ಭಾವನೆಗಳನ್ನು ತಪ್ಪಾದ ರೀತಿಯಲ್ಲಿ ಉದ್ರೇಕಿಸಿದಾಗ ಅಥವಾ ರೊಚ್ಚಿಗೆಬ್ಬಿಸಿದಾಗ ಅವರು ಪ್ರತಿಕ್ರಿಯೆ ಸೂಚಿಸುವುದು ಸಹಜವಾಗಿದೆ.

ಇಂತಹ ಪ್ರತಿಕ್ರಿಯೆಗಳನ್ನು ತಮ್ಮ ಲಾಭಕ್ಕೆ ಬಳಸಿಕೊಂಡು ಇಸ್ಲಾಮ್ ವಿರುದ್ಧ ಶಕ್ತಿಗಳು, ಇಸ್ಲಾಮ್, ಅತಿರೇಕ ವರ್ತನೆಯನ್ನು ಮತ್ತು ಭೀಕರತೆಯನ್ನು ಪ್ರತಿಪಾದಿಸುವ ಧರ್ಮವೆಂದು, ಏನೂ ಯೋಚಿಸದೆ ಮತ್ತು ಅದರ ಬಗ್ಗೆ ಪರಿಶೀಲಿಸದೆ ತಕ್ಷಣ ಹೇಳಲು ತೊಡಗುತ್ತವೆ. ಅವರು ನಿರ್ಲಜ್ಜೆಯಿಂದಲೂ ನಿಸ್ಸಂಕೋಚರಾಗಿಯೂ ಇಸ್ಲಾಮನ್ನು ಖಂಡಿಸುತ್ತಾರೆ. ಆದರೆ ಅವರು ಸರಿಯಾಗಿ ಮಾಡಬೇಕಾದುದೇನೆಂದರೆ, ಅವರು ಅಂತಹ ಅಪರಾಧಗಳನ್ನು ತಡೆಯಬೇಕು ಮಾತ್ರವಲ್ಲ, ಅಂತಹ ಅಪರಾಧ ಕೃತ್ಯಗಳು ಇಸ್ಲಾಮಿನ ನೈಜ ಉಪದೇಶಗಳ ಪ್ರಕಾರವಾಗಿದೆಯೋ ಅಥವಾ ಅನ್ಯಾಯಕರವಾಗಿ ಹಾಗೆ ಆಪಾದಿಸಲಾಗುತ್ತಿದೆಯೋ ಎಂದು ನೋಡಬೇಕು. ಇದರ ಬಗ್ಗೆ ಪಶ್ಚಿಮದ ಮಾಧ್ಯಮಗಳಲ್ಲಿ ಕೆಲವು ಮುಸ್ಲಿಮೇತರ ವಿಮರ್ಶೆಗಾರರು ಒಂದು ಪ್ರಶ್ನೆಯನ್ನು ಎತ್ತಿದುದಾಗಿ ತಿಳಿದು ನನಗೆ ಸಂತೋಷವಾಯಿತು. ಅವರು ಕೇಳುತ್ತಾರೆ – ಕ್ರೈಸ್ತ ಧರ್ಮದವರೆಂದು ಹೇಳಿಕೊಳ್ಳುವವರು ಮಾಡುವ ಕೃತ್ಯಗಳನ್ನು ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಕೃತ್ಯಗಳು ಎಂದು ಆಪಾದಿಸದೆ ಇರುವಾಗ ಕೆಲವು ಮುಸ್ಲಿಮರು ಮಾಡುವ ತಪ್ಪು ಕೃತ್ಯಗಳನ್ನು ಯಾವಾಗಲೂ ಇಸ್ಲಾಮಿನ ಉಪದೇಶಗಳಿಗೆ ಸಂಬಂಧಿಸಿದೆ ಎಂದು ಹೇಳುವುದು ಹೇಗೆ ತಾನೆ ಸರಿಯಾಗುವುದು?

ಅವರ ಈ ಪ್ರಶ್ನೆ ವಾಸ್ತವಿಕವಾಗಿ ನ್ಯಾಯಪಾಲನೆಯನ್ನು ಬೆಂಬಲಿಸಿ ಕೇಳಿದ ಪ್ರಶ್ನೆಯಾಗಿದೆ. ಇದು ಲೋಕದಿಂದ ಎಲ್ಲ ಬೇಗುದಿಗಳನ್ನೂ ಕಹಿ ಭಾವನೆಗಳನ್ನೂ ದೂರಸರಿಸಲು ಮಾಡಿದ ಒಂದು ಪ್ರಯತ್ನದ ಭಾಗವಾಗಿ ಹೇಳಿದುದಾಗಿದೆ. ಇದು ಜನರನ್ನು ಪರಸ್ಪರ ಸಮೀಪಕ್ಕೆ ತರಲು ಮತ್ತು ಸೌಹಾರ್ದದ ವಾತಾವರಣ ಸೃಷ್ಟಿಸಲು ಮಾಡಿದ ಪ್ರಯತ್ನದ ಭಾಗವಾಗಿದೆ.

ಪವಿತ್ರ ಖುರ್‌ಆನ್ ಮತ್ತು ಪುಣ್ಯ ಪ್ರವಾದಿ ಮುಹಮ್ಮದರ(ಸ) ನಡವಳಿಕೆಯಿಂದ ನಾವು ಕಲಿತ ನೈಜ ಇಸ್ಲಾಮ್, ನಾವು ಎಂದೂ ಕ್ರೂರತೆಯಿಂದ ವರ್ತಿಸಬಾರದೆಂದೂ ಮಾನವರ ಹಕ್ಕುಗಳನ್ನು ಈಡೇರಿಸಿಕೊಡಬೇಕೆಂದೂ ಉಪದೇಶಿಸುತ್ತದೆ. ಮುಸ್ಲಿಮರು ಪ್ರತಿಯೊಬ್ಬನನ್ನೂ ಎಲ್ಲ ವಿಧಗಳ ಗುಲಾಮಗಿರಿಯಿಂದ – ಶಾರೀರಿಕ, ಆರ್ಥಿಕ ಮತ್ತು ಸಾಮಾಜಿಕ ಗುಲಾಮಗಿರಿಯಿಂದ ವಿಮೋಚಿಸಬೇಕೆಂದು ಇಸ್ಲಾಮ್ ಕಲಿಸುತ್ತದೆ. ಎಲ್ಲ ಮನುಷ್ಯರು ಸಮಾನರೆಂದೂ ಅವರ ವಂಶ ಮತ್ತು ಬಣ್ಣ ಯಾರನ್ನೂ ಶ್ರೇಷ್ಠರನ್ನಾಗಿ ಮಾಡುವುದಿಲ್ಲ, ಅವರಿಗೆ ಉನ್ನತ ಸ್ಥಾನ ನೀಡುವುದಿಲ್ಲ ಎಂದೂ ಇಸ್ಲಾಮ್ ಕಲಿಸುತ್ತದೆ. ರಾಷ್ಟ್ರೀಯ ವ್ಯತ್ಯಾಸ ಮತ್ತು ವಂಶೀಯ ವ್ಯತ್ಯಾಸದ ಉದ್ದೇಶ ಪರಸ್ಪರ ಗುರುತಿಸಕೊಳ್ಳಲಿಕ್ಕಾಗಿದೆ; ಇದಕ್ಕಿಂತ ಹೆಚ್ಚಿನ ಮಹತ್ವ ಅವುಗಳಿಗಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಕಲಿಸಿದರು: ಒಬ್ಬ ಅರಬಿಗೆ ಅರಬಿಯೇತರನಾದ ಒಬ್ಬನ ಮೇಲೆ ಶ್ರೇಷ್ಠತೆ ಇಲ್ಲ. ಅದೇ ರೀತಿ ಅರಬಿಯೇತರನಿಗೆ ಅರಬಿಯ ಮೇಲೆಯೂ ಶ್ರೇಷ್ಠತೆ ಇಲ್ಲ. ಅಲ್ಲಾಹನು ಬಯಸುವುದು ಸಾತ್ವಿಕತೆಯನ್ನಾಗಿದೆ. ಯಾರು ಸತ್ಕರ್ಮಗಳನ್ನು ಮಾಡುತ್ತಾನೋ ಅವನನ್ನು ಅಲ್ಲಾಹನು ಪ್ರೀತಿಸುತ್ತಾನೆ ಮತ್ತು ತನ್ನ ಸಾಮೀಪ್ಯ ದಯಪಾಲಿಸುತ್ತಾನೆ. ಆದುದರಿಂದ ಯಾರಿಗಾದರೂ ವಿಶಿಷ್ಟ ಸ್ಥಾನವಿದ್ದರೆ ಅದು ಅವನ ಭಯಭಕ್ತಿ ಮತ್ತು ಸತ್ಕರ್ಮಗಳ ಕಾರಣದಿಂದಾಗಿರುತ್ತದೆ.

ಸಾತ್ವಿಕತೆಗೆ ಸಂಬಂಧಿಸಿ ಇಸ್ಲಾಮ್ ಎರಡು ಕಾರ್ಯಗಳನ್ನು ಆವಶ್ಯಪಡುತ್ತದೆ. ಒಂದನೆಯದು, ಸರ್ವಶಕ್ತನಾದ ದೇವನಿಗೆ ಸಂಬಂಧಿಸಿ ನಮ್ಮ ಕರ್ತವ್ಯಗಳನ್ನು ಈಡೇರಿಸುವುದು ಮತ್ತು ಅವನನ್ನು ಆರಾಧಿಸುವುದು. ಎರಡನೆಯದು, ದೇವನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಿಕೊಡುವುದು ಮತ್ತು ಅವರ ಸೇವೆ ಮಾಡುವುದು. ಮುಸ್ಲಿಮರು ಪ್ರತಿಯೊಂದು ದಿಕ್ಕಿನಲ್ಲೂ ಸಮಾಜದ ಎಲ್ಲ ವಿಭಾಗಗಳಲ್ಲೂ ಪ್ರೀತಿ ವಾತ್ಸಲ್ಯಗಳನ್ನು ಹರಡಬೇಕೆಂದು ಇಸ್ಲಾಮ್ ಕಲಿಸುತ್ತದೆ. ಅತ್ಯಂತ ದುರ್ದೆಸೆಯಲ್ಲಿರುವ, ಬಡವರಾದ ಜನರಿಗೆ ಮತ್ತು ಅನಾಥರಿಗೆ ನೆರವು ನೀಡುವ ಬಗ್ಗೆ ಅದು ಉಪದೇಶಿಸುತ್ತದೆ. ಲೋಕದಲ್ಲಿ ಶಾಂತಿಯನ್ನು ಕಾಪಾಡಲು ಇಸ್ಲಾಮ್ ಉಪದೇಶಿಸುವುದೇನೆಂದರೆ, ನೀವು ಪ್ರಥಮ ಹೆಜ್ಜೆ ಇಡಲು ಅಥವಾ ದೌರ್ಜನ್ಯ ಮಾಡಲು, ಯುದ್ಧಮಾಡಲು ಮೊದಲು ಪ್ರಯತ್ನ ಮಾಡಬಾರದೆಂದಾಗಿದೆ.

ಆದರೆ ಯುದ್ಧವು ಹೇರಲ್ಪಟ್ಟರೆ, ನೀವು ಅದನ್ನು ಎದುರಿಸಿ ಹೋರಾಡದೆ ಇರಲು ಸಾಧ್ಯವಾಗದಿದ್ದರೆ, ನಿಮ್ಮ ಹೋರಾಟ ಶಾಂತಿಯನ್ನು ಮರುಸ್ಥಾಪನೆ ಮಾಡುವುದಕ್ಕಾಗಿರಬೇಕು. ಇಸ್ಲಾಮ್ ಕಲಿಸುವುದೇನೆಂದರೆ, ಆಕ್ರಮಣಗಾರರು ಯುದ್ಧದಿಂದ ಹಿಂದೆ ಸರಿದರೆ, ಅದರ ಲಾಭ ಪಡೆದು ಅವರ ಮೇಲೆ ಕ್ರೂರತೆಯಿಂದ ವರ್ತಿಸಬಾರದು. ಅಂತಹ ಸಂದರ್ಭದಲ್ಲಿ ಯುದ್ಧವನ್ನು ತಕ್ಷಣ ನಿಲ್ಲಿಸಬೇಕು ಮತ್ತು ಸೋತ ಪಕ್ಷವನ್ನು ಆರ್ಥಿಕ ದಿಗ್ಬಂಧನಗಳಿಗೆ ಗುರಿಪಡಿಸಬಾರದು.

ಜಯಶಾಲಿ ಅವರ ಮೇಲೆ ಅಧಿಕಾರ ಚಲಾಯಿಸಬಾರದು, ಅವರನ್ನು ಯಾವುದೇ ರೀತಿಯಲ್ಲಿ ಹೀನೈಸಬಾರದು.

ಇಸ್ಲಾಮ್ ಪ್ರತಿರೋಧಕ ಯುದ್ಧಕ್ಕೆ ಮಾತ್ರ ಅನುಮತಿ ನೀಡಿದ್ದರೂ ಅದರ ಬಗ್ಗೆ ಕಠಿಣ ನಿಬಂಧನೆಗಳನ್ನು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೇರಿದ್ದಾರೆ. ಶಾಂತಿ ಸ್ಥಾಪನೆಗೋಸ್ಕರ ಮುಸ್ಲಿಮರು ಯುದ್ಧ ಮಾಡಲು ನಿರ್ಬಂಧಿಸಲ್ಪಟ್ಟಾಗ ಅವರು ಮಹಿಳೆಯರನ್ನೂ ಮಕ್ಕಳನ್ನೂ ಕೊಲ್ಲಬಾರದೆಂದು ಆಜ್ಞಾಪಿಸಲಾಗಿದೆ. ಪುರೋಹಿತರೂ ಧಾರ್ಮಿಕ ಪಂಡಿತರೂ ತಮ್ಮ ಆರಾಧನಾಲಯಗಳಲ್ಲಿ ಇರುವಾಗ ಅವರನ್ನು ಕೊಲ್ಲಬಾರದೆಂದೂ ಇಗರ್ಜಿಗಳನ್ನೂ ಇತರ ಆರಾಧನಾಲಯಗಳನ್ನೂ ಆಕ್ರಮಿಸಬಾರದೆಂದೂ ಅವರು ಆಜ್ಞಾಪಿಸಿದ್ದರು. ಇಂದು ನಾವು ಪರಿಸರದ ಬಗ್ಗೆ ಮಾತನಾಡುತ್ತೇವೆ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಪರಿಸರದ ಬಗ್ಗೆ ಕಾಳಜಿ ಇತ್ತು. ಅವರು ಹೇಳಿದರು – ಮರಗಳನ್ನು ಕಡಿಯಬಾರದು; ಧಾನ್ಯದ ಬೆಳೆಗಳನ್ನು ನಾಶಮಾಡಬಾರದು.

ಯುದ್ಧ ನಡೆಯುವಾಗ ಮುಸ್ಲಿಮನು ತನ್ನ ಎದುರಾಳಿ ಸೈನಿಕರನ್ನು ಹೊರತು ಬೇರೆ ಯಾರನ್ನೂ ಆಕ್ರಮಿಸಬಾರದೆಂದು ಆಜ್ಞಾಪಿಸಲಾಗಿದೆ. ಈ ರೀತಿ ಯಾವುದೇ ಪೌರನನ್ನೂ ಹಾನಿಗೊಳಪಡಿಸಬಾರದೆಂದು ಸ್ಪಷ್ಟವಾಗುತ್ತದೆ.

ಆದರೆ ದುಃಖಕರವಾದುದೇನೆಂದರೆ, ಇಂದಿನ ಕಾಲದಲ್ಲಿ ನಡೆಯುವ ಯುದ್ಧಗಳಲ್ಲಿ ನಿರಪರಾಧಿಗಳಾದ ಜನರು ಹೆಚ್ಚು ಹಾನಿಗೆ ಗುರಿಯಾಗುತ್ತಾರೆ. ಸೈನಿಕರಿಗಿಂತ ಹೆಚ್ಚು ಜನ ನಾಗರಿಕರು ಕೊಲ್ಲಲ್ಪಡುತ್ತಾರೆ. ದ್ವಿತೀಯ ಮಹಾಯುದ್ಧ ನಡೆದಾಗ, ಯುದ್ಧದಲ್ಲಿ ಕೊಲ್ಲಲ್ಪಟ್ಟವರಲ್ಲಿ ಬಹುತೇಕ ಮಂದಿ ನಿಷ್ಕಳಂಕ ನಾಗರಿಕರಾಗಿದ್ದರು. ಚಿಕ್ಕಮಟ್ಟದ ಯುದ್ಧಗಳಲ್ಲೂ ಸಂಘರ್ಷಗಳಲ್ಲೂ ನಾಗರಿಕರೇ ಹೆಚ್ಚು ಕಷ್ಟ ಅನುಭವಿಸುತ್ತಿದ್ದಾರೆ.

ಯುದ್ಧದಲ್ಲಿ ನಾಗರಿಕರ ಹತ್ಯೆ ಇಸ್ಲಾಮೀ ತತ್ವಗಳಿಗೆ ಸಂಪೂರ್ಣ ವಿರುದ್ಧವಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಒಂದು ಯುದ್ಧ ನಡೆದಾಗ ಒಬ್ಬ ಮುಸ್ಲಿಮನು ಒಬ್ಬ ಮಹಿಳೆಯನ್ನೂ ಮಗುವನ್ನೂ ಕೊಂದನು. ಈ ಘಟನೆ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ತಿಳಿದಾಗ ಅವರು ಬಹಳ ಕೋಪಗೊಂಡರು.

ಹತ್ಯೆ ಮಾಡಿದ ಮುಸ್ಲಿಮನು ತಾನು ಮಾಡಿದುದನ್ನು ಸರಿಯೆಂದು ಸಾಬೀತುಗೊಳಿಸಲು ಹೇಳಿದನು: "ನನ್ನಿಂದ ಕೊಲ್ಲಲ್ಪಟ್ಟವರು ಮುಸ್ಲಿಮೇತರರಾದ ಯಹೂದಿ ಮಹಿಳೆ ಮತ್ತು ಮಗುವಾಗಿದೆ." ಆಗ ಹಝ್ರತ್ ಪೈಗಂಬರರು(ಸ) ಸ್ಪಷ್ಟವಾಗಿ ಹೇಳಿದರು: "ಅವರು ನಿರಪರಾಧಿಗಳಾಗಿದ್ದರು. ನಿರಪರಾಧಿಗಳನ್ನು ಕೊಲ್ಲುವುದು ಘೋರ ಪಾಪವಾಗಿದೆ."

ಈ ರೀತಿ ಇಸ್ಲಾಮಿನ ಸತ್ಯವಾದ ಮತ್ತು ಸುಂದರ ಉಪದೇಶಗಳಲ್ಲಿ ನಾನು ಕೆಲವು ಉದಾಹರಣೆಗಳನ್ನು ಮಾತ್ರ ನೀಡಿದ್ದೇನೆ.

ಒಂದು ಪ್ರಶ್ನೆ ಖಂಡಿತವಾಗಿಯೂ ತಲೆದೋರುತ್ತದೆ. ಇವೆಲ್ಲ ಇಸ್ಲಾಮಿನ ನೈಜ ಅಧಿಕೃತ ತತ್ವಗಳಾಗಿದ್ದರೆ ಕೆಲವು ಮುಸ್ಲಿಮ್ ಗುಂಪುಗಳೂ ವ್ಯಕ್ತಿಗಳೂ ತಮ್ಮ ಸಹೋದರರಾದ ಮುಸ್ಲಿಮರ ವಿರುದ್ಧ ಮತ್ತು ಮುಸ್ಲಿಮೇತರರ ವಿರುದ್ಧ ಕ್ರೂರವೂ ಭಯಾನಕವೂ ಆಗಿರುವ ಆಕ್ರಮಣಗಳನ್ನೂ ನಡೆಸುತ್ತಾ ಇರುವುದನ್ನು ನಾವು ಕಾಣುತ್ತಿರುವ ಕಾರಣವೇನು? ಈ ಪ್ರಶ್ನೆಗೆ ಉತ್ತರ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಒಂದು ಭವಿಷ್ಯವಾಣಿ ಮೂಲಕ ಒಂದು ಸಾವಿರದ ನಾಲ್ಕು ನೂರು ವರ್ಷಗಳ ಹಿಂದೆಯೇ ನೀಡಿದ್ದಾರೆ. ಅವರು ಹೇಳಿದರು: "ಮುಂದೆ ಒಂದು ಕಾಲ ಬರಲಿದೆ. ಆ ಕಾಲದಲ್ಲಿ ಮುಸ್ಲಿಮರಲ್ಲಿ ಬಹು ಹೆಚ್ಚಿನ ಸಂಖ್ಯೆಯ ಜನರು ವಾಸ್ತವಿಕ ಇಸ್ಲಾಮೀ ತತ್ವಗಳಿಂದ ದೂರಸರಿದು ಹೋಗುವರು."

ಹಝ್ರತ್ ಪೈಗಂಬರರು(ಸ) ಒಂದು ಶುಭವಾರ್ತೆ ಸಹ ನೀಡಿದ್ದಾರೆ: "ಆಧ್ಯಾತ್ಮಿಕ ಅಂಧಕಾರ ವ್ಯಾಪಿಸಿರುವ ಆ ಕಾಲದಲ್ಲಿ ಅಲ್ಲಾಹನ ಕರುಣೆ ಮತ್ತು ದಯೆ ಲೋಕವನ್ನು ಸುತ್ತುವರಿಯುವುದು. ಅವನು ಮಸೀಹ್ ಮತ್ತು ಮಹ್‌ದಿಯನ್ನು ಕಳುಹಿಸುವನು. ಅವರು ಇಸ್ಲಾಮಿನ ಪರಿಶುದ್ಧ ತತ್ವಗಳನ್ನು ಲೋಕದಲ್ಲಿ ಪುನಃ ಸ್ಥಾಪಿಸುವರು." ಅಹ್ಮದೀ ಮುಸ್ಲಿಮರಾದ ನಾವು ಮಸೀಹ್ ಮತ್ತು ಮಹ್‌ದಿ ಆಗಮಿಸಿದ್ದಾರೆಂದು ನಂಬುತ್ತೇವೆ. ಹೀಗೆ ಆಗಮಿಸಿದ ಅವರೇ ಅಹ್ಮದಿಯಾ ಮುಸ್ಲಿಮ್ ಸಂಘಟನೆಯನ್ನು ಸ್ಥಾಪಿಸಿದರು. ಹೀಗೆ ಆಗಮಿಸಿದ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರು ಇಸ್ಲಾಮಿನ ಸತ್ಯವಾದ ಮತ್ತು ಮೂಲತತ್ವಗಳನ್ನು ಲೋಕದಲ್ಲಿ ಪ್ರಕಟಿಸಿದರು. ನಾನು ಈಗ ಅವರ ಲೇಖನಗಳಿಂದ ಕೆಲವು ಭಾಗಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಇಸ್ಲಾಮಿನ ಪರಿಪೂರ್ಣವಾಗಿ ಶಾಂತಿ ಪ್ರತಿಪಾದಕ ತತ್ವಗಳ ಮೇಲೆ ಪ್ರಕಾಶಮಾನವಾದ ಬೆಳಕು ಬೀರಿ ಬೆಳಗಿಸಿದ್ದಾರೆ.

ವಾಗ್ದತ್ತ ಮಸೀಹರು ಹೇಳಿದರು:

"ಧಾರ್ಮಿಕ ವಿಶ್ವಾಸ ಎರಡು ಪೂರ್ಣಭಾಗಗಳನ್ನು ಹೊಂದಿದೆ. ಒಂದನೆಯದು, ದೇವನನ್ನು ಪ್ರೀತಿಸುವುದಾಗಿದೆ. ಎರಡನೆಯದು, ಮಾನವರನ್ನು ಪ್ರೀತಿಸುವುದಾಗಿದೆ. ನೀವು ಹೇಗೆ ಮಾನವರನ್ನು ಪ್ರೀತಿಸಬೇಕೆಂದರೆ, ಅನ್ಯರ ಕಷ್ಟಗಳು, ಪರೀಕ್ಷೆಗಳು ಮತ್ತು ಹಾನಿಗಳು ನಿಮ್ಮದೇ ಎಂಬಂತೆ ಭಾವಿಸಬೇಕು ಮತ್ತು ಅವರಿಗೋಸ್ಕರ ಪ್ರಾರ್ಥಿಸಬೇಕು."

ವಾಗ್ದತ್ತ ಮಸೀಹರ ಇನ್ನೊಂದು ಉಪದೇಶ ಹೀಗಿದೆ:

"ಮಾನವರ ಹಕ್ಕುಗಳನ್ನು ಈಡೇರಿಸಿ ಕೊಡುವುದು ವಿಶ್ವಾಸದ ಅತ್ಯಂತ ಕಷ್ಟ ಮತ್ತು ಸೂಕ್ಷ್ಮವಾದ ಹೊಣೆಗಾರಿಕೆಯಾಗಿದೆ. ಮನುಷ್ಯನು ಯಾವಾಗಲೂ ಪರೀಕ್ಷಿಸಲ್ಪಡುವ ಪಂಥಾಹ್ವಾನ ಇದಾಗಿದೆ. ನಾನು ಸತ್ಯವಾಗಿ ಹೇಳುತ್ತೇನೆ – ಯಾರನ್ನೂ ನಿಮ್ಮ ವೈಯಕ್ತಿಕ ಶತ್ರು ಎಂದು ಗಣಿಸಬೇಡಿರಿ. ಅನ್ಯರ ವಿರುದ್ಧ ದ್ವೇಷಾಸೂಯೆಗಳನ್ನು ಹೊಂದುವುದನ್ನು ಸಂಪೂರ್ಣವಾಗಿ ತ್ಯಜಿಸಿರಿ."

ಇನ್ನೊಂದು ಕಡೆ ವಾಗ್ದತ್ತ ಮಸೀಹ್ ಹೇಳುತ್ತಾರೆ:

"ನೀವು ದೇವನ ಎಲ್ಲ ಸೃಷ್ಟಿಗಳಿಗೂ ಪ್ರೀತಿ ಮತ್ತು ದಯೆದೋರಬೇಕು. ಹಿಂದು ಎಂದೋ ಮುಸ್ಲಿಮ್ ಎಂದೋ ಬೇರೆ ಯಾವುದಾದರೂ ಧರ್ಮದವನೆಂದೋ ಭೇದ ಭಾವ ತೋರಬಾರದು."

ಅವರ ಇನ್ನೊಂದು ಉಪದೇಶ ಹೀಗಿದೆ:

"ಜನರು ತಮ್ಮ ಪ್ರೀತಿ ಮತ್ತು ಸಹಾನುಭೂತಿಯನ್ನು ತಮ್ಮವರಿಗೆ ಮಾತ್ರ ಸೀಮಿತಗೊಳಿಸುವುದನ್ನು ನಾನು ಇಷ್ಟಪಡುವುದಿಲ್ಲ........ ನಾನು ನಿಮಗೆ ಪದೇಪದೇ ಉಪದೇಶಿಸುತ್ತೇನೆ – ನೀವು ನಿಮ್ಮ

ಸಹಾನುಭೂತಿಯನ್ನು ಸೀಮಿತಗೊಳಿಸಬೇಡಿರಿ."

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರ ಕೆಲವು ಉಪದೇಶಗಳನ್ನು ಮಾತ್ರ ನಿಮ್ಮ ಮುಂದಿರಿಸಿದ್ದೇನೆ. ಈ ಉಪದೇಶಗಳಲ್ಲಿ ಅವರು ತನ್ನ ಅನುಯಾಯಿಗಳು ಪ್ರೀತಿ ಮತ್ತು ಸಹಾನುಭೂತಿಯನ್ನು ಲೋಕದ ಎಲ್ಲ ಭಾಗಗಳಲ್ಲೂ ಹರಡಲು ಆಗ್ರಹಪಡಿಸಿದ್ದಾರೆ. ಇವು ಇಸ್ಲಾಮಿನ ಸತ್ಯವಾದ ತತ್ವಗಳೇ ಆಗಿವೆ. ಅಲ್ಲಾಹನ ಅನುಗ್ರಹದಿಂದ ಈ ಶಾಂತಿ ಪ್ರತಿಪಾದಕ ಮತ್ತು ಸಹಾನುಭೂತಿದೋರುವ ಈ ಉಪದೇಶಗಳ ಮೂಲಕ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಅಭಿವೃದ್ಧಿ ಹೊಂದಿದೆ ಮತ್ತು ಲೋಕದ ಪ್ರತಿಯೊಂದು ಭಾಗಕ್ಕೆ ಹರಡಿದೆ. ನಮ್ಮ ಸಂದೇಶ ಕರ್ಕಶ ಶಬ್ದಗಳನ್ನು ಒಳಗೊಂಡಿರುವುದಿಲ್ಲ. ಅದರಲ್ಲಿ ಯಾವುದೇ ರೀತಿಯ ಬಲಾತ್ಕಾರದ ಪ್ರತಿಪಾದನೆ ಇರುವುದಿಲ್ಲ.

ನಮ್ಮ ಸಂದೇಶ ಪ್ರೀತಿ, ವಾತ್ಸಲ್ಯ ಮತ್ತು ಐಕ್ಯದ್ದಾಗಿದೆ. ಬೈಗಳಿಗೆ ಮತ್ತು ನೋವುಂಟು ಮಾಡುವ ಭಾಷೆಗೆ ಉತ್ತರವಾಗಿ ಪ್ರಾರ್ಥಿಸಲು ನಮಗೆ ಕಲಿಸಲಾಗಿದೆ. ನಾವು ಅನುಭವಿಸುತ್ತಿರುವ ಹಿಂಸಾಚಾರ ಮತ್ತು ದುಃಖಗಳಿಗೆ ಪ್ರತಿಯಾಗಿ, ನಾವು ಪ್ರೀತಿ, ಶಾಂತಿ ಮತ್ತು ಸುಖವನ್ನು ಲೋಕಕ್ಕೆ ನೀಡುತ್ತೇವೆ. ಇದು ನಮ್ಮ ಉಪದೇಶವಾಗಿದೆ. ಇದು ನಮ್ಮ ವಿಶ್ವಾಸವಾಗಿದೆ.

ಇಂದಿನ ಕಾಲದಲ್ಲಿ ಖಿಲಾಫತ್ ವ್ಯವಸ್ಥೆ, ಎಂದರೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಆಧ್ಯಾತ್ಮಿಕ ನೇತೃತ್ವಕ್ಕೆ ವಾರೀಸುದಾರಿಕೆಯ ವ್ಯವಸ್ಥೆ – ಇದರ ಮೂಲಕ ಇಸ್ಲಾಮಿನ ನೈಜತತ್ವಗಳನ್ನು ಜೀವಂತವಾಗಿ ಇಡಲಾಗಿದೆ. ಅಹ್ಮದಿಯಾ ಜಮಾಅತಿನ ಖಿಲಾಫತ್ ದೇವನ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಮತ್ತು ಮನುಷ್ಯರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಇರುವ ಇಸ್ಲಾಮಿನ ಮೂಲತತ್ವಗಳಿಂದ ದೂರಸರಿಯಲಾರದು. ಈಗ ಖಿಲಾಫತ್ ವ್ಯವಸ್ಥೆ ಲೋಕದಾದ್ಯಂತ ಶಾಂತಿ ಸ್ಥಾಪಿಸಲು, ಪ್ರೀತಿ ಮತ್ತು ವಾತ್ಸಲ್ಯಗಳನ್ನು ಹರಡಲು ಪರಿಶ್ರಮಿಸುತ್ತಾ ಇದೆ.

ಕೆಲವು ಮುಸ್ಲಿಮೇತರರು, "ನಾವು, ಖಿಲಾಫತ್ ಈ ದೇಶದಲ್ಲಿ ಒಂದು ಹೆಜ್ಜೆ ಇಡಲು ಕೂಡ ಬಿಡಲಾರೆವು" ಎಂದು ಜರ್ಮನಿಯ ಕೆಲವು ಭಾಗಗಳಲ್ಲಿ ಹೇಳುವುದರ ಬಗ್ಗೆ ತಿಳಿದಾಗ ನನಗೆ ಆಘಾತವೂ ದುಃಖವೂ ಆಯಿತು. ನಾನು ಇದರ ಮೊದಲು ಹೇಳಿದ ಹಾಗೆ ನಿಜವಾದ ಖಿಲಾಫತ್ ಜನರಿಗೆ ದಯೆದೋರುವುದು ಮತ್ತು ಉಪಕಾರ ಮಾಡುವುದು. ಇಲ್ಲಿ ಶಾಂತಿಯಿಂದ ಜೀವಿಸುತ್ತಾ ದೇಶವನ್ನು ಪ್ರೀತಿಸುತ್ತಾ ಇರುವವರ ಮೇಲೆ ಕಷ್ಟ ಮತ್ತು ಹತೋಟಿ ಹೇರಲು ನೀವು ಬಯಸುವಿರೇನು ಎಂದು ನಾನು ಅಂತಹ ಜನರನ್ನು ಕೇಳಲು ಬಯಸುತ್ತೇನೆ. ಯಾವುದೇ ಪ್ರಜ್ಞಾವಂತನಾದ ಬುದ್ಧಿಶಾಲಿ ವ್ಯಕ್ತಿ ಅಂತಹ ಅವಿವೇಕದ ಅಭಿಪ್ರಾಯವನ್ನು ಬೆಂಬಲಿಸುವನೆಂದು ನಾನು ನಂಬುವುದಿಲ್ಲ.

ಜರ್ಮನಿಯ ಬಹುತೇಕ ಜನರು ಇಂತಹ ಅಸಹಿಷ್ಣು ಅಭಿಪ್ರಾಯಗಳಿಗೆ ಗಮನಹರಿಸುವುದಿಲ್ಲ ಎನ್ನುವುದನ್ನು ನಾವು ಕೃತಜ್ಞತೆಯಿಂದ ಹೇಳುತ್ತೇವೆ. ನಾವು ಎಲ್ಲರೂ ಇಲ್ಲಿರುವುದು ಈ ಕಾರಣದಿಂದಲೇ ಆಗಿದೆ. ಇಲ್ಲಿನ ಸಮ್ಮೇಳನದ ಸ್ಥಳಗಳಲ್ಲಿ ಸಾವಿರಗಟ್ಟಲೆ ಪುರುಷರೂ ಮಹಿಳೆಯರೂ ಸಂಪೂರ್ಣವಾಗಿ ಖಿಲಾಫತ್‌ಗೆ ನಿಷ್ಠರಾಗಿರುವುದನ್ನು ನೀವು ಕಾಣುತ್ತಿರುವಿರಿ. ಮುರಿದು ಹೋಗದ ಈ ಆಧ್ಯಾತ್ಮಿಕ ಬಂಧನದ ಕಾರಣದಿಂದ ಅವರೆಲ್ಲರೂ ಐಕ್ಯದಿಂದಿದ್ದಾರೆ.

ಅವರು ಪ್ರೀತಿಯನ್ನು ಹರಡುವ ಬಗ್ಗೆ ಮತ್ತು ಮಾನವರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಮಾತನಾಡುತ್ತಾರೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಜರ್ಮನ್ ಜನತೆಯಿಂದ ಬಂದು ಸೇರುವವರು, ಅಹ್ಮದಿಯಾ ಖಿಲಾಫತ್ ಜನರನ್ನು ದೇವನ ಹಕ್ಕುಗಳನ್ನು ಮತ್ತು ಮಾನವರ ಹಕ್ಕುಗಳನ್ನು ಈಡೇರಿಸಲು ಒಗ್ಗೂಡಿಸುವ ಒಂದು ಮಾಧ್ಯಮವಾಗಿದೆ ಎಂದು ಸಾಕ್ಷ್ಯ ಹೇಳುತ್ತಾರೆ.

ನಾನು ಒಂದು ವಿಷಯ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ – ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ನೇತೃತ್ವ ವಹಿಸುವ ಖಿಲಾಫತ್ ವ್ಯವಸ್ಥೆಗೆ ಅಧಿಕಾರ ಅಥವಾ ಸರಕಾರ ಗಳಿಸುವ ಯಾವ ಆಸಕ್ತಿಯೂ ಇಲ್ಲ. ನೈಜ ಖಿಲಾಫತ್ ಯಾವುದೇ ಲೌಕಿಕ ಅಥವಾ ರಾಜಕೀಯ ಹಿತಾಸಕ್ತಿಗಳನ್ನು ಅಥವಾ ಲಾಭದ ಆಕಾಂಕ್ಷೆಯನ್ನು ಹೊಂದಿಲ್ಲ. ಅಂತಹ ಅಭಿಲಾಷೆ ಹೊಂದಿದವರಿಗೆ ಖಿಲಾಫತ್ ಭಾಗ್ಯ ಲಭಿಸುವುದೂ ಇಲ್ಲ ಎಂಬುದರ ಬಗ್ಗೆ ದೃಢವಾಗಿ ತಿಳಿದುಕೊಳ್ಳಿರಿ.

ಅಹ್ಮದಿಯಾ ಖಿಲಾಫತಿನ ಏಕ ಮಾತ್ರ ಉದ್ದೇಶ, ಲೋಕದ ಜನರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಬೇಕು ಮತ್ತು ಏಕದೇವನ ಮುಂದೆ ತಲೆಬಾಗಬೇಕು ಎಂದಾಗಿದೆ. ಲೋಕದ ಜನರ ಮಧ್ಯೆ ಪ್ರೀತಿ ಮತ್ತು ಸೌಹಾರ್ದದ ಮನೋಭಾವ ಬೆಳೆಸಬೇಕೆಂಬುದು ಇನ್ನೊಂದು ಉದ್ದೇಶವಾಗಿದೆ.

ಈಗ 204 ದೇಶಗಳಲ್ಲಿರುವ ಅಹ್ಮದೀ ಮುಸ್ಲಿಮರು ಈ ಸತ್ಯದ ಬಗ್ಗೆ ಸಾಕ್ಷ್ಯ ನೀಡುತ್ತಾರೆ. 30,000 ಮುಸ್ಲಿಮರು ಜಮಾಯಿಸಿದ ಒಂದು ಸ್ಥಳದಲ್ಲಿ ನೀವು ಪರಿಪೂರ್ಣವಾಗಿ ಶಾಂತಿಯಿಂದ ಕುಳಿತಿರುವುದರ ಕಾರಣವೇನೆಂದರೆ, ಈ ಮುಸ್ಲಿಮರು ಖಿಲಾಫತ್‌ನ ಅನುಯಾಯಿಗಳಾಗಿದ್ದಾರೆ. ಈ ಖಿಲಾಫತ್ ಜನರ ಹೃದಯವನ್ನು ಪ್ರೀತಿಯಿಂದ ಮಾತ್ರ ಜಯಿಸಲು ಬಯಸುತ್ತದೆ. ಅದು ಬಲಪ್ರಯೋಗಿಸಿ ಅಥವಾ ಅತಿರೇಕದಿಂದ ವರ್ತಿಸಿ ಜನರನ್ನಾಗಲಿ, ದೇಶವನ್ನಾಗಲಿ ಅಧೀನಪಡಿಸಲು ಪ್ರಯತ್ನಿಸಲಾರದು.

ಕೊನೆಯದಾಗಿ, ನಾನು ಹೇಳುವುದೇನೆಂದರೆ, ನಾನು ನಿಮಗೆ ವಿವರಿಸಿದ ಪ್ರಕಾರ ನಿಮಗೆ ಇಸ್ಲಾಮಿನ ನೈಜ ತತ್ವಗಳು ಸ್ಪಷ್ಟವಾಗಿರಬಹುದು ಮತ್ತು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ನೇತೃತ್ವ ವಹಿಸಿರುವ ಖಿಲಾಫತ್ ಬಗ್ಗೆಯೂ ಸರಿಯಾಗಿ ತಿಳಿದಿರಬಹುದು. ಈ ಖಿಲಾಫತ್ ಬಗ್ಗೆ ಭಯಪಡುವ ಆವಶ್ಯಕತೆ ಇಲ್ಲವೆಂದು ನಾನು ನಿಮಗೆ ಖಾತರಿ ನೀಡುತ್ತೇನೆ. ನೀವು ನಿಮ್ಮ ಸುತ್ತಮುತ್ತಲೂ ಇರುವವರಿಗೆ ಈ ಖಿಲಾಫತ್‌ನ ವಾಸ್ತವಿಕ ಸ್ಥಿತಿ ವಿವರಿಸಿಕೊಡಬೇಕೆಂದು ಅಪೇಕ್ಷಿಸುತ್ತೇನೆ. ಲೋಕದಲ್ಲಿ ಸಂಭವಿಸುವ ಪ್ರತಿಯೊಂದು ವಿಧದ ದೌರ್ಜನ್ಯ, ಅನ್ಯಾಯಗಳನ್ನು ಖಂಡಿಸುವುದರಲ್ಲಿ ಈ ಖಿಲಾಫತ್ ಯಾವಾಗಲೂ ಮುಂಚೂಣಿಯಲ್ಲಿರುತ್ತದೆ. ಯಾವನೇ ಅಹ್ಮದಿ ಯಾವುದಾದರೂ ತಪ್ಪು ಕೆಲಸವನ್ನು ಮಾಡಿದರೆ ನಾವು ಯಾವಾಗಲೂ ಅವನ ವಿರುದ್ಧ ಅನುಯೋಜ್ಯವಾದ ಕ್ರಮಗಳನ್ನು ಕೈಗೊಳ್ಳುತ್ತೇವೆ.

ನಾನು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನೀವು ಇಲ್ಲಿಗೆ ಆಗಮಿಸಿದುದಕ್ಕೋಸ್ಕರ ಇನ್ನೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನೀವೆಲ್ಲರೂ ನನ್ನ ಪ್ರಾಮಾಣಿಕ ಮತ್ತು ಹೃತ್ಪೂರ್ವಕವಾದ ಸಂದೇಶವನ್ನು ಮನವರಿಕೆ ಮಾಡುವ ಭಾಗ್ಯ ಅಲ್ಲಾಹನು ನಿಮಗೆ ನೀಡಲಿ. ಒಬ್ಬರಿನ್ನೊಬ್ಬರಿಗೆ ಬೊಟ್ಟು ಮಾಡಿ ಹೇಳುವುದಕ್ಕೆ ಪ್ರತಿಯಾಗಿ,

# ಇಸ್ಲಾಮ್-ಶಾಂತಿ ಮತ್ತು ಸಂರಕ್ಷಣೆ ನೀಡುವ ಧರ್ಮ

★ ಮೌಲಾನಾ ಮುಹಮ್ಮದ್ ಹಮೀದ್ ಕೌಸರ್

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ತಳಹದಿ ಹಾಕಿದ ಧರ್ಮದ ಹೆಸರನ್ನು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು "ಇಸ್ಲಾಮ್" ಎಂದೂ ಈ ಧರ್ಮಕ್ಕೆ ಸೇರುವವರನ್ನು "ಮುಸ್ಲಿಮ್" ಎಂದೂ ಹೆಸರಿಸಿರುವನು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿರುವನು:

**ಇನ್ನದ್ದೀನ ಇಂದಲ್ಲಾಹಿಲ್ ಇಸ್ಲಾಮ್**

"ಖಂಡಿತವಾಗಿಯೂ ಅಲ್ಲಾಹನ ಬಳಿ ನಿಜವಾದ ಧರ್ಮ ಇಸ್ಲಾಮ್ ಆಗಿದೆ." (3:20)

**ಹೂವ ಸಮ್ಮಾಕುಮ್ ಮುಸ್ಲಿಮೀನ್**

"ಅವನು ನಿಮಗೆ ಮುಸ್ಲಿಮರೆಂದು ಹೆಸರಿಟ್ಟಿರುವನು." (22:79)

## ಇಸ್ಲಾಮ್ ಪದದ ಅರ್ಥ

ಇಸ್ಲಾಮ್ ಆರಬಿ ಭಾಷೆಯ ಪದವಾಗಿದೆ. ಅದು ಸಲಿಮ ಎಂಬ ಪದದಿಂದ ವ್ಯುತ್ಪನ್ನವಾಗಿದೆ. ಸಲಿಮ ಎಂದರೆ ಶಾಂತಿ ಮತ್ತು ಸಂರಕ್ಷಣೆ ಎಂದು ಆಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದರು:

**ಅಸ್ಸಲಾಮು ಮಿನಲ್ ಇಸ್ಲಾಮ್**

"ಶಾಂತಿ ಮತ್ತು ಸಂರಕ್ಷಣೆ ಇಸ್ಲಾಮ್ ಧರ್ಮದಿಂದಲೇ ಲಭಿಸುತ್ತದೆ."

ಹಝ್ರತ್ ಪೈಗಂಬರ್(ಸ) ಇನ್ನೊಮ್ಮೆ ಹೀಗೆ ಹೇಳಿದರು:

**ಅಲ್‌ಮುಸ್ಲಿಮು ಮನ್ ಸಲಿಮನ್ನಾಸ ಮಿನ್‌ಲಿಸಾನಿಹೀ ವ ಯದಿಹೀ**

"ಯಾರ ನಾಲಗೆಯಿಂದಲೂ ಕೈಯಿಂದಲೂ ಆಕ್ರಮಿಸಲ್ಪಡದೆ ಜನರು ಸುರಕ್ಷಿತರಾಗುತ್ತಾರೋ ಅವನೇ ನಿಜವಾದ ಮುಸ್ಲಿಮ್."

ಅಲ್ಲಾಹನು ಲೋಕದ ಎಲ್ಲ ಜನರನ್ನು ಸಂಬೋಧಿಸಿ ಹೀಗೆ ಹೇಳುತ್ತಾನೆ:

**ವಲ್ಲಾಹು ಯದ್‌ಊ ಇಲಾ ದಾರಿಸ್ಸಲಾಮ್**

"ಅಲ್ಲಾಹನು ಶಾಂತಿಯ ನೆಲೆವೀಡಿಗೆ ಆಹ್ವಾನಿಸುತ್ತಾನೆ."

(ಪವಿತ್ರ ಖುರ್‌ಆನ್ 10:26)

ಇಸ್ಲಾಮ್ ಎಂಬ ಪದಕ್ಕೆ ಇನ್ನೊಂದು ಅರ್ಥ ಹೀಗಿದೆ: ಅಲ್ಲಾಹನಿಂದ ಅವತೀರ್ಣಗೊಂಡ ಆಜ್ಞೆಗಳನ್ನು ಪರಿಪೂರ್ಣವಾಗಿ ಅನುಸರಿಸುವುದು.

ಇಸ್ಲಾಮ್ ಎಂತಹ ಧರ್ಮವೆಂದರೆ, ಅದು ತನ್ನ ಅನುಯಾಯಿಗಳಿಗೆ ಲೋಕದ ಎಲ್ಲ ಮನುಷ್ಯರೊಂದಿಗೆ, ಅವರು ಯಾವ ಧರ್ಮ, ಜಾತಿ ಮತ್ತು ಪ್ರದೇಶಕ್ಕೆ ಸೇರಿದವರಾಗಿದ್ದರೂ ಪ್ರೀತಿ, ವಾತ್ಸಲ್ಯ ಮತ್ತು ಶುಭಕೋರುವ ಮನೋಭಾವದಿಂದ ವರ್ತಿಸಬೇಕೆಂಬ ಉಪದೇಶ ನೀಡುತ್ತದೆ.



ಪ್ರತಿಯೊಬ್ಬ ಮುಸ್ಲಿಮನು ಐದು ಹೊತ್ತು ನಮಾಝ್ ಮಾಡುತ್ತಾನೆ ಮತ್ತು ಪ್ರತಿಯೊಂದು ನಮಾಝ್‌ನ ಕೊನೆಗೆ, ಬಲಗಡೆಗೆ ತಿರುಗಿ "ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹ್" ಎಂದು ಹೇಳುತ್ತಾನೆ. ಅನಂತರ ಎಡಗಡೆಗೆ ತಿರುಗಿ ಈ ಶಬ್ದಗಳನ್ನು ಪುನರಾವರ್ತಿಸುತ್ತಾನೆ.

ಈ ಶಬ್ದಗಳ ಅರ್ಥ:

ಓ ನನ್ನ ಬಲಗಡೆ ಇರುವವರೇ (ಅವರು ಯಾರೇ ಆಗಿರಲಿ) ನಿಮ್ಮ ಮೇಲೆ ಅಲ್ಲಾಹನ ಶಾಂತಿ ಮತ್ತು ಅನುಗ್ರಹ ಉಂಟಾಗಲಿ.

ಇದೇ ರೀತಿ ಅವನು ತನ್ನ ಎಡೆಗಡೆಗೆ ಇರುವವರಿಗೋಸ್ಕರ ಸಹ ಪ್ರಾರ್ಥಿಸುತ್ತಾನೆ. ಅವನು ಭೇಟಿಯಾಗುವ ಪ್ರತಿಯೊಬ್ಬನೊಂದಿಗೆ, ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – "ನಿಮ್ಮ ಮೇಲೆ ಅಲ್ಲಾಹನ ಶಾಂತಿ, ಅನುಗ್ರಹ ಮತ್ತು ವರದಾನಗಳು ಉಂಟಾಗಲಿ ಎಂದು ಪ್ರಾರ್ಥಿಸುತ್ತಾನೆ. ಆದುದರಿಂದ ಇಸ್ಲಾಮ್ ಮತ್ತು ಮುಸ್ಲಿಮ್ ಎಂಬ ಹೆಸರುಗಳು ಒಂದು ವಾಸ್ತವಾಂಶವನ್ನು ಸೂಚಿಸುತ್ತದೆ: ಈ ಧರ್ಮ ತನ್ನ ಅನುಯಾಯಿಗಳಿಗೆ ಹೀಗೆ ಉಪದೇಶಿಸುತ್ತದೆ – ಲೋಕದ ಎಲ್ಲ ಜನರಿಗೆ ತನಗೆ ಸಾಧ್ಯವಿರುವಷ್ಟು ಪ್ರಯತ್ನಿಸಿ ಶಾಂತಿ ಸಂರಕ್ಷಣೆ ಮತ್ತು ಸಾಂತ್ವನವನ್ನು ಮುಸ್ಲಿಮನು ಒದಗಿಸಿಕೊಡಬೇಕು.

## ಮುಹಮ್ಮದ್ ಪೈಗಂಬರರು(ಸ) ಲೋಕದ ಸಕಲ ಜನರಿಗೆ ಅನುಗ್ರಹ

ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಸಕಲ ಲೋಕಗಳಿಗೂ ಒಂದು ಅನುಗ್ರಹವನ್ನಾಗಿ ಕಳುಹಿಸಿರುವುದಾಗಿ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು:

**ವ ಮಾ ಅರ್‌ಸಲ್‌ನಾಕ ಇಲ್ಲಾ ರಹ್ಮತನ್ ಲಿಲ್‌ಆಲಮೀನ್**

---

*(ಹಿಂದಿನ ಪುಟದಿಂದ)*

ಒಬ್ಬರಿನ್ನೊಬ್ಬರ ಭಾವನೆಗಳನ್ನು ನೋಯಿಸುವುದಕ್ಕೆ ಪ್ರತಿಯಾಗಿ, ನಾವೆಲ್ಲರೂ ಒಟ್ಟಿಗೆ ಸೇರಿ ದೇಶದ ಅಭಿವೃದ್ಧಿಗೋಸ್ಕರ ಮತ್ತು ಲೋಕದಲ್ಲಿ ಶಾಂತಿ ಸ್ಥಾಪಿಸುವುದಕ್ಕೋಸ್ಕರ ಪ್ರಯತ್ನಿಸಬೇಕು. ನಾವು ನಮ್ಮ ಈ ಪರಿಶ್ರಮದಲ್ಲಿ ಜಯಶಾಲಿಯಾಗಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ನಿಮಗೆ ತುಂಬಾ ಧನ್ಯವಾದಗಳು.

**(Review of Religions - ಜುಲೈ 2014 ಸಂಚಿಕೆಯಿಂದ)**

"ಲೋಕದ ಸಕಲ ಜನರಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ." (21:108)

ಈ ವಚನದಲ್ಲಿ ಮುಸ್ಲಿಮರಿಗೆ ಅಥವಾ ಅರಬಿಗಳಿಗೆ ಮಾತ್ರ ಹಝ್ರತ್ ಪೈಗಂಬರರು(ಸ) ಅನುಗ್ರಹವಾಗಿದ್ದಾರೆಂದು ಹೇಳಿಲ್ಲ. ಅವರು ಲೋಕದಲ್ಲಿರುವ ಎಲ್ಲ ಜನರಿಗೆ ಮತ್ತು ಎಲ್ಲ ಸೃಷ್ಟಿಗಳಿಗೆ ಅನುಗ್ರಹವಾಗಿದ್ದಾರೆ. ಆದುದರಿಂದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ನಿಷ್ಠಾವಂತನಾದವನು ಅವರ ಉತ್ತಮ ನಡೆವಳಿಕೆಗಳ ಪ್ರಕಾರ ವರ್ತಿಸಿ ಅಲ್ಲಾಹನ ಸೃಷ್ಟಿಗಳಿಗೆ ಅನುಗ್ರಹವಾಗಬೇಕು ಮತ್ತು ಮಾನವರಿಗೆ ಕಷ್ಟ ನೀಡುವವನಾಗುವುದರಿಂದ ಎಲ್ಲ ರೀತಿಗಳಲ್ಲೂ ತನ್ನನ್ನು ರಕ್ಷಿಸಿಕೊಳ್ಳಬೇಕು.

## ಪ್ರತಿಯೊಬ್ಬ ಮನುಷ್ಯನನ್ನು ಪ್ರೀತಿಸುವುದು ಏಕೆ?

ಇಲ್ಲಿ ಪ್ರತಿಯೊಬ್ಬ ಮನುಷ್ಯನೊಂದಿಗೆ ಪ್ರೀತಿ ಮತ್ತು ಸಹಾನುಭೂತಿಯಿಂದ ವರ್ತಿಸುವುದು ಏಕೆಂಬ ಪ್ರಶ್ನೆ ಉದಿಸುತ್ತದೆ. ಈ ಪ್ರಶ್ನೆಗೆ ಉತ್ತರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಒಂದು ಹದೀಸಿನಿಂದ ದೊರಕುತ್ತದೆ. ಹಝ್ರತ್ ಪೈಗಂಬರ್(ಸ) ಹೇಳಿದರು:

**ಅಲ್‌ಖಲ್‌ಖು ಇಯಾಲುಲ್ಲಾಹಿ ಫ ಅಹಬ್ಬುಲ್‌ಖಲ್‌ಖಿ ಇಲಲ್ಲಾಹಿ ಮನ್ ಅಹ್‌ಸನ ಇಲಾ ಇಯಾಲಿಹೀ**

"ಎಲ್ಲ ಸೃಷ್ಟಿಗಳು ಅಲ್ಲಾಹನ ಕುಟುಂಬ. ಅಲ್ಲಾಹನ ಕುಟುಂಬವನ್ನು ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸುವವನೇ ಅಲ್ಲಾಹನಿಗೆ ಅತ್ಯಂತ ಹೆಚ್ಚು ಪ್ರಿಯನಾದವನು." (ಮಿಶ್ಕಾತ್, ಕಿತಾಬುಲ್ ಆದಾಬ್)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

**ಯಾ ಅಯ್ಯು ಹನ್ನಾಸುತ್ತಖೂ ರಬ್ಬಕುಮುಲ್ಲದೀ ಖಲಖಕುಮ್ ಮಿನ್‌ನಫ್‌ಸಿನ್ ವಾಹಿದ ವ ಖಲಖ ಮಿನ್‌ಹಾ ಝೌಜಹಾ ವ ಬಸ್ಸ ಮಿನ್‌ಹುಮಾ ರಿಜಾಲನ್ ಕಸೀರನ್ ವ ನಿಸಾಅ**

"ಓ ಜನರೇ, ನೀವು ನಿಮ್ಮ ಪ್ರಭುವಿನ ಭಯವಿರಿಸಿಕೊಳ್ಳಿರಿ. ಅವನು ನಿಮ್ಮನ್ನು ಒಂದು ಜೀವಾಳದಿಂದ ಸೃಷ್ಟಿಸಿ, ಅದರಿಂದ (ಅದರ ವರ್ಗದಿಂದಲೇ) ಅದರ ಜೋಡಿಯನ್ನೂ ಸೃಷ್ಟಿಸಿ, ಅವೆರಡರಿಂದ ಅನೇಕ ಪುರುಷರನ್ನೂ ಸ್ತ್ರೀಯರನ್ನೂ (ಲೋಕದಲ್ಲಿ) ವ್ಯಾಪಿಸುವಂತೆ ಮಾಡಿರುವನು." (4:2)

ಇದೇ ರೀತಿ ಅಲ್ಲಾಹನು ಇನ್ನೊಂದೆಡೆ ಹೇಳುತ್ತಾನೆ:

**ಯಾ ಅಯ್ಯುಹನ್ನಾಸು ಇನ್ನಾ ಖಲಖ್‌ನಾಕುಮ್ ಮಿನ್ ಧಕರಿನ್ ವ ಉನ್‌ಸಾ ವ ಜಅಲ್‌ನಾಕುಮ್ ಶುಊಬನ್ ವ ಖಬಾಇಲ ಲಿತಆರಫೂ. ಇನ್ನ ಅಕ್‌ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್. ಇನ್ನಲ್ಲಾಹ ಅಲೀಮುನ್ ಖಬೀರ್**

"ಓ ಜನರೇ, ನಿಶ್ಚಯವಾಗಿಯೂ ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ, ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ." (49:14)

ಪವಿತ್ರ ಖುರ್‌ಆನಿನ ವಚನಗಳಿಂದ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳಿಂದ ಸ್ಪಷ್ಟವಾಗುವುದೇನೆಂದರೆ, ಲೋಕದಲ್ಲಿರುವ ಎಲ್ಲ ಧರ್ಮಗಳ ಎಲ್ಲ ನಂಬಿಕೆಗಳ, ಎಲ್ಲ ಭೂಖಂಡಗಳ ಮತ್ತು ಪ್ರದೇಶಗಳ ಜನರು ಅಲ್ಲಾಹನ ಕುಟುಂಬವಾಗಿದ್ದಾರೆ. ಮನುಷ್ಯನು ತನ್ನ ಸ್ವಂತ ಕುಟುಂಬದ ಜನರನ್ನು ಪ್ರೀತಿಸುವ ಹಾಗೆ ಲೋಕದ ಎಲ್ಲ ಜನರನ್ನು ತನ್ನ ಕುಟುಂಬಕ್ಕೆ ಸೇರಿದವರೆಂದು ಗಣಿಸಿ ಅವರೊಂದಿಗೆ ಪ್ರೀತಿಯಿಂದ ವರ್ತಿಸಬೇಕು. ಹೀಗೆ ವರ್ತಿಸುವುದರಿಂದಲೇ ನಾವು ಅಲ್ಲಾಹನಿಗೆ ಪ್ರಿಯರಾಗಬಲ್ಲೆವು. ಹೀಗೆ ಮಾಡದಿದ್ದರೆ ನಾವು ಅಲ್ಲಾಹನಿಗೆ ಪ್ರಿಯರಾಗಲು ಸಾಧ್ಯವಿಲ್ಲ, ಏಕೆಂದರೆ, ಪ್ರತಿಯೊಬ್ಬ ಮುಸ್ಲಿಮನು ಅಲ್ಲಾಹನನ್ನು "ರಬ್ಬುಲ್ ಆಲಮೀನ್" – "ಸಕಲ ಲೋಕಗಳ ಪ್ರಭು" ಎಂದೂ "ಅಸ್ಸಲಾಮ್" – "ಸಂರಕ್ಷಣೆ ನೀಡುವವನು" ಎಂದೂ ನಂಬುತ್ತಾನೆ. ಇಂತಹ ಗುಣವಿಶೇಷಗಳನ್ನು ಹೊಂದಿರುವ ಅಲ್ಲಾಹನನ್ನು ನಂಬುವವರಾದ ಮುಸ್ಲಿಮರಿಗೆ ಆವಶ್ಯಕವಾದುದೂ ಅವರ ಹೊಣೆಗಾರಿಕೆ ಆಗಿರುವುದೂ ಏನೆಂದರೆ ಅವರು ತಮ್ಮ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಅಲ್ಲಾಹನ ಪಾಲಕ ಪೋಷಕ (ರಬ್ಬ್) ಎಂಬ ಗುಣವನ್ನು ತಮ್ಮಲ್ಲಿ ಅಳವಡಿಸಿಕೊಂಡು ಸಂರಕ್ಷಣೆ ನೀಡುವ ದೇವಗುಣವನ್ನು ಪ್ರಕಟಿಸಬೇಕು. ಹೀಗೆ ಮಾಡದಿದ್ದರೆ, ಅಲ್ಲಾಹನೊಂದಿಗೆ ಸಂಬಂಧ ಹೊಂದಿರುವವರು ಎಂದು ಹೇಳುವ ಅರ್ಹತೆ ಕಳೆದು ಹೋಗುತ್ತದೆ.

## ಸಕಲ ಜನರಿಗೆ ಅನುಗ್ರಹವಾದ ಮಹಾನುಭಾವರು ಯುದ್ಧವನ್ನು ಮಾಡಿದುದೇಕೆ?

ಈ ಪ್ರಶ್ನೆಗೆ ಉತ್ತರ ಹೀಗೆ: ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರಾಯ ನಲ್ವತ್ತು ಆದಾಗ ಅಲ್ಲಾಹನಿಂದ ಅವರಿಗೆ ಸಂದೇಶವಾಣಿಗಳು ಅವತೀರ್ಣವಾಗಲು ತೊಡಗಿದುವು. ಆ ದೈವಿಕ ವಾಣಿಗಳ ಪ್ರಕಾರ ಅವರು ಮಕ್ಕದವರೊಂದಿಗೆ ಹೇಳಿದರು: ಅಲ್ಲಾಹನು ನನ್ನನ್ನು ತನ್ನ ಸಂದೇಶವಾಹಕನನ್ನಾಗಿಯೂ ಪ್ರವಾದಿಯನ್ನಾಗಿಯೂ ಮಾಡಿದ್ದಾನೆ. ನೀವು ಏಕದೇವನನ್ನು ಮಾತ್ರ ಆರಾಧಿಸಿರಿ. ಪಾಪ, ಕೆಡುಕು ಮತ್ತು ದೌರ್ಜನ್ಯ ಭರಿತವಾದ ಜೀವಿತದ ಬಗ್ಗೆ ಪಶ್ಚಾತ್ತಾಪಗೊಂಡು ಅಲ್ಲಾಹನ ಕಡೆಗೆ ತಿರುಗಿರಿ.

ಅರಬಿ ಭಾಷೆಯಲ್ಲಿ ಒಂದು ಗಾದೆ ಹೀಗಿದೆ:

"ಲಿಲ್ ಮತರಿ ಮುಹಿಬ್ಬುನ್ ವ ಕಾರಿಹುನ್"

ಅರ್ಥ: ಮಳೆಯನ್ನು ಪ್ರೀತಿಸುವವರೂ ಇರುತ್ತಾರೆ ಮತ್ತು ದ್ವೇಷಿಸುವವರೂ ಇರುತ್ತಾರೆ.

ಲೌಕಿಕ ಮಳೆಯ ಹಾಗೆ ಆಧ್ಯಾತ್ಮಿಕ ಮಳೆಯನ್ನು ಸಹ ಕೆಲವು ಜನರು ಇಷ್ಟಪಟ್ಟರು, ಬೇರೆ ಕೆಲವರು ಇಷ್ಟಪಡಲಿಲ್ಲ. ಇಷ್ಟಪಡುವವರು ಮತ್ತು ನಂಬುವವರು ಮೃದುಸ್ವಭಾವ, ಸದ್ಗುಣ ಮತ್ತು ಪ್ರೀತಿಯ ಮಾರ್ಗವನ್ನು ಅವಲಂಬಿಸಿದರು. ಇಷ್ಟಪಡದ ಶತ್ರುಗಳು ದೌರ್ಜನ್ಯ, ದ್ವೇಷ ಮತ್ತು ಹಿಂಸಾಚಾರದ ಮಾರ್ಗವನ್ನು ಅವಲಂಬಿಸಿದರು. ದಿನಗಳೆದಂತೆ ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ಮಧ್ಯೆ ಇರುವ ದೂರವು ವರ್ಧಿಸುತ್ತಾ ಹೋಯಿತು. ಮಕ್ಕ ನಗರದ ಶತ್ರುಗಳು, "ನಾವು ಮುಹಮ್ಮದ್ ಮತ್ತು ಅವರ ಅನುಯಾಯಿಗಳನ್ನು ಬಲಪ್ರಯೋಗದಿಂದ ನಾಮಾವಶೇಷಗೊಳಿಸುವೆವು" ಎಂದು ಭಾವಿಸುತ್ತಾ ಇದ್ದರು. ಇನ್ನೊಂದು ಕಡೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) "ನಾವು ಪ್ರೀತಿ ಮತ್ತು ಸಾಕ್ಷ್ಯಾಧಾರಗಳು ತುಂಬಿದ ಮಾತುಗಳಿಂದ ನಿಮಗೆ ಇಸ್ಲಾಮ್ ಧರ್ಮದ

ಸತ್ಯವನ್ನು ಮನವರಿಕೆ ಮಾಡಿಕೊಡುತ್ತಾ ಹೋಗುವೆವು. ನೀವು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರಿ. ನಾವು ಬಲಾತ್ಕಾರ ಮಾಡುವುದಿಲ್ಲ, ಅಲ್ಲಾಹನು ಹೀಗೆ ಆಜ್ಞಾಪಿಸಿದ್ದಾನೆ – **ಲಾ ಇಕ್‌ರಾಹ ಫಿದ್ದೀನಿ** – ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ." (ಪವಿತ್ರ ಖುರ್‌ಆನ್ 2:257)

ಅಲ್ಲಾಹನು ಹೀಗೆ ಸಹ ಆಜ್ಞಾಪಿಸಿದ್ದಾನೆ: **ವ ಖುಲಿಲ್ ಹಕ್ಕು ಮಿನ್‌ರ್ರಬ್ಬಿಕುಮ್ ಫಮನ್‌ಶಾಅ ಫಲ್‌ಯೂಮಿನ್ ವ ಮನ್ ಶಾಅ ಫಲ್ ಯಕ್‌ಫುರು.**

"ನೀನು ಹೇಳು: ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ; ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ." (ಪವಿತ್ರ ಖುರ್‌ಆನ್ 18:30)

ಒಂದು ದಿನವಲ್ಲ, ಒಂದು ತಿಂಗಳಲ್ಲ, ಒಂದು ವರ್ಷವಲ್ಲ, ನಿರಂತರವಾಗಿ ಹದಿಮೂರು ವರ್ಷಗಳ ಕಾಲ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮತ್ತು ಅವರ ಅನುಯಾಯಿಗಳು ಶತ್ರುಗಳ ಕೈಗಳಿಂದ ಕಷ್ಟ, ದುಃಖ ಮತ್ತು ಹಿಂಸಾಚಾರಗಳನ್ನು ಅನುಭವಿಸುತ್ತಾ ಇದ್ದರು. ಅವರಲ್ಲಿ ಕೆಲವರು ಶತ್ರುಗಳಿಂದ ಹುತಾತ್ಮರಾದರು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅದಕ್ಕೆ ಪ್ರತಿಯಾಗಿ ಕಠಿಣ ಕ್ರಮ ಕೈಗೊಳ್ಳಲಿಲ್ಲ. ಕಲ್ಲೆಸೆಯುವವನಿಗೆ ಕಲ್ಲೆಸೆಯಲಿಲ್ಲ. ಬೈಯುವವನನ್ನು ಬೈಯಲಿಲ್ಲ. ಹೀಗೆ ಮಾಡಿದುದು ಬಲಹೀನತೆ ಅಥವಾ ಹೇಡಿತನದ ಕಾರಣದಿಂದಾಗಿರಲಿಲ್ಲ. ಅವರು ಮಾನವೀಯತೆಯನ್ನೂ ಮಾನವರನ್ನೂ ಪ್ರೀತಿಸುತ್ತಿದ್ದ ಕಾರಣ ಹಾಗೆ ಮಾಡಿದರು. ವಿರೋಧಿಗಳು ಸತ್ಯವಿಶ್ವಾಸಿಗಳಿಗೆ ಕಷ್ಟಕೊಡುತ್ತಿದ್ದುದು ಅವರ ಅಜ್ಞತೆಯ ಕಾರಣದಿಂದ ಎಂದು ಅವರು ಭಾವಿಸುತ್ತಿದ್ದುದರಿಂದಾಗಿತ್ತು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಒಬ್ಬ ಶಿಷ್ಯರಾಗಿದ್ದ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಮಕ್ಕದ ಗಣ್ಯರಲ್ಲಿ ಒಬ್ಬರಾಗಿದ್ದರು. ಅವರು ಹೇಳಿದರು: "ಓ ಅಲ್ಲಾಹನ ಸಂದೇಶವಾಹಕರೇ, ನಾವು ಮುಸ್ಲಿಮರಾಗುವ ಮೊದಲು ಗೌರವಿಸಲ್ಪಡುವವರೂ ಧನವಂತರೂ ಆಗಿದ್ದೆವು. ನಮ್ಮೆದುರಿಗೆ ದೃಷ್ಟಿಸಿ ನೋಡಲು ಯಾರಿಗೂ ಧೈರ್ಯವಿರಲಿಲ್ಲ. ನಾವು ಮುಸ್ಲಿಮರಾದ ನಂತರ ಮಕ್ಕದಲ್ಲಿರುವ ಇಸ್ಲಾಮಿನ ಶತ್ರುಗಳು ನಮ್ಮನ್ನು ಬಲಹೀನರೆಂದು ಭಾವಿಸಲು ತೊಡಗಿರುವರು. ಅವರನ್ನು ಎದುರಿಸಲು ನೀವು ನಮಗೆ ಅನುಮತಿ ನೀಡಿರಿ." ಆಗ ಮನುಷ್ಯರನ್ನು ಅತ್ಯಧಿಕ ಪ್ರೀತಿಸುತ್ತಿದ್ದ, "ರಹ್ಮತುನ್ ಲಿಲ್‌ಆಲಮೀನ್" (ಸಕಲ ಜನರಿಗೆ ಅನುಗ್ರಹ) ಆಗಿರುವ ಅವರು ಹೇಳಿದರು:

**ಇನ್ನೀ ಉಮಿರ್‌ತು ಬಿಲ್ ಅಫ್ವ್**

ಕ್ಷಮಿಸಲು ನಾನು ಆಜ್ಞಾಪಿಸಲ್ಪಟ್ಟಿರುವೆನು. ನಾನು ನಿಮಗೆ ಅವರನ್ನು ಎದುರಿಸಲು ಅನುಮತಿ ನೀಡಲಾರೆ." (ನಸಾಯೀ)

ಸಂಕ್ಷಿಪ್ತವಾಗಿ ಹೇಳುವುದಾದರೆ, ಹದಿಮೂರು ವರ್ಷಗಳ ಕಾಲ ಇಸ್ಲಾಮಿನ ಶತ್ರುಗಳ ಕೈಗಳಿಂದ ನಿರಂತರವಾಗಿ ದೌರ್ಜನ್ಯ ಸಹಿಸಿದ ನಂತರ ಹಝ್ರತ್ ಪೈಗಂಬರರು(ಸ) ಹೀಗೆ ಯೋಚಿಸಿದರು: ಈ ಜನರು ಇಸ್ಲಾಮ್ ಧರ್ಮವನ್ನು ಸೇರುವುದೂ ಇಲ್ಲ ಮತ್ತು ಇಸ್ಲಾಮ್ ಧರ್ಮಕ್ಕೆ ಸೇರುವವರನ್ನು ಸ್ವತಂತ್ರರಾಗಿ ಜೀವಿಸಲು ಬಿಡುವುದೂ ಇಲ್ಲ. ಈಗ ಎರಡು ಮಾರ್ಗಗಳನ್ನು ಅವಲಂಬಿಸಬಹುದಾಗಿದೆ. ಒಂದು, ಅವರ ವಿರುದ್ಧ ಯುದ್ಧಮಾಡುವುದು. ಎರಡನೆಯದು, ದೇಶ ಬಿಟ್ಟು ಹೋಗುವುದು. ಹಝ್ರತ್ ಪೈಗಂಬರ್(ಸ) ಅನುಗ್ರಹದಾಯಕ ಭಾವನೆಯಿಂದ ಕೂಡಿದವರಾದ ಕಾರಣ ಮನುಷ್ಯನ ರಕ್ತ ಹರಿಸಲು ಬಯಸಲಿಲ್ಲ. ಅವರು ಮಕ್ಕದಿಂದ ಮುನ್ನೂರು ಕಿಲೋ ಮೀಟರ್ ದೂರವಿದ್ದ ಯಸ್‌ರಿಬ್ (ಮದೀನ)ಗೆ ವಲಸೆ ಹೋದರು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮತ್ತು ಅವರ ಅನುಯಾಯಿಗಳು ಮಕ್ಕವನ್ನು ಬಿಟ್ಟುಹೋದ ನಂತರ ಅವರ ಶತ್ರುಗಳು ಅವರನ್ನು ಬೆನ್ನಟ್ಟುವುದನ್ನು ಬಿಟ್ಟು ಬಿಡಬೇಕಾಗಿತ್ತು. ಆದರೆ ಖೇದಕರವಾದುದೇನೆಂದರೆ, ಮಕ್ಕದ ಶತ್ರುಗಳು ಮದೀನವನ್ನು ಆಕ್ರಮಿಸಿ ಮುಸ್ಲಿಮರನ್ನು ನಾಶಮಾಡಲು ಸಿದ್ಧತೆಗಳನ್ನು ಪ್ರಾರಂಭಿಸಿದರು. ಒಂದು ವ್ಯಾಪಾರಿ ಸಂಘವನ್ನು ಪರದೇಶಕ್ಕೆ ಕಳುಹಿಸಿ ಅದರಿಂದ ಲಭಿಸಿದ ಲಾಭದಿಂದ ಯುದ್ಧಕ್ಕೆ ಬೇಕಾದ ಸಾಮಗ್ರಿಗಳನ್ನು ಖರೀದಿಸಿದರು. ಒಂದು ಸಾವಿರ ಶಸ್ತ್ರಸಜ್ಜಿತ ಸೈನಿಕರನ್ನು ಮಕ್ಕದ ಶತ್ರುಗಳು ಮದೀನವನ್ನು ಆಕ್ರಮಿಸಲು ಕಳುಹಿಸಿದರು. ಹಝ್ರತ್ ಪೈಗಂಬರರು(ಸ) ವಲಸೆ ಬಂದ ಮುಹಾಜಿರ್‌ಗಳ ಮತ್ತು ಮದೀನ ನಿವಾಸಿಗಳಾದ ಅನ್‌ಸಾರ್‌ಗಳ 313 ಯೋಧರ ಮುಖಾಂತರ ಶತ್ರು ಸೈನಿಕರನ್ನು ಬದ್ರ್ ಎಂಬಲ್ಲಿ ತಡೆದರು.

ಹಝ್ರತ್ ಪೈಗಂಬರರ(ಸ) ಸೈನಿಕರಲ್ಲಿ ಬಹುತೇಕ ಜನರ ಕೈಗಳಲ್ಲಿ ಆಯುಧಗಳಿರಲಿಲ್ಲ. ಹಿಜರಿ ವರ್ಷ 2 ರಮಝಾನ್ ದಿನಾಂಕ 17ರಂದು (14–3–624) ಮುಸ್ಲಿಮರು ಆಕ್ರಮಣಗಾರರ ವಿರುದ್ಧ ಪ್ರಥಮ ಯುದ್ಧ ಮಾಡಿದರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿಶಿಷ್ಟ ಪ್ರಾರ್ಥನೆಗಳ ಫಲವಾಗಿ ಅಲ್ಲಾಹನು ಸ್ಪಷ್ಟವಾದ ಜಯವನ್ನು ಮುಸ್ಲಿಮರಿಗೆ ದಯಪಾಲಿಸಿದನು. ಈ ಯುದ್ಧ ಬದ್ರ್ ಯುದ್ಧವೆಂದು ಪ್ರಸಿದ್ಧವಾಗಿದೆ.

ಶತ್ರುಗಳು ಈ ಯುದ್ಧದಿಂದ ಪಾಠ ಕಲಿತು ಅನಂತರ ಯುದ್ಧ ಮಾಡುವುದನ್ನು ನಿಲ್ಲಿಸಬೇಕಾಗಿತ್ತು. ಅವರು ಸ್ವತಃ ನೆಮ್ಮದಿಯಿಂದ ಜೀವಿಸಿ ಮುಸ್ಲಿಮರನ್ನು ಸಹ ಜೀವಿಸಲು ಬಿಡಬೇಕಾಗಿತ್ತು. ಆದರೆ ಅವರ ದುರಹಂಕಾರ ಅವರನ್ನು ಈ ಸೋಲಿನ ಒಂದು ವರ್ಷ ದಾಟಿದ ನಂತರ ಮದೀನವನ್ನು ಆಕ್ರಮಿಸಿ ಮುಸ್ಲಿಮರನ್ನು ನಾಶಮಾಡಲು ಉತ್ತೇಜಿಸಿತು. ಮೂರುಸಾವಿರ ಶತ್ರು ಸೈನಿಕರು ಮಕ್ಕದಿಂದ ಮದೀನದ ಕಡೆಗೆ ಸಾಗಿದರು. ಹಝ್ರತ್ ಪೈಗಂಬರರಿಗೆ(ಸ) ಇದರ ಬಗ್ಗೆ ಸಮಾಚಾರ ದೊರೆತಾಗ ಏಳುನೂರು ಅನುಯಾಯಿಗಳೊಂದಿಗೆ ಶತ್ರುಗಳ ಸೈನ್ಯವನ್ನು ತಡೆಯಲು ಮದೀನದ ಹೊರಗೆ ಉಹುದ್ ಎಂಬಲ್ಲಿಗೆ ಹೋದರು.

ಹಿಜರಿ ವರ್ಷ 2 ಶವ್ವಾಲ್ ಮಾಸ ದಿನಾಂಕ 7ರಂದು (23–3–625) ಮುಸ್ಲಿಮರು ಇಸ್ಲಾಮ್ ಧರ್ಮದ ರಕ್ಷಣೆಗೋಸ್ಕರ ದ್ವಿತೀಯ ಪ್ರತಿರೋಧಕ ಯುದ್ಧವನ್ನು ಮಾಡಿದರು. ಅಲ್ಲಾಹನ ವಿಶಿಷ್ಟ ನೆರವಿನ ಕಾರಣ ಮುಸ್ಲಿಮರಿಗೆ ಜಯಲಭಿಸಿತು. ಆದರೆ ಕೆಲವು ಮುಸ್ಲಿಮರು ಮಾಡಿದ ತಪ್ಪುಗಳ ಕಾರಣ ಆ ಜಯ ಆರಂಭದ ಸ್ಥಿತಿಯಲ್ಲಿದ್ದಂತೆ ಬಾಕಿಯಾಗಲಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಯಾವಾಗಲೂ ಯುದ್ಧಕ್ಕೆ ಧುಮುಕದಿರಲು ಪ್ರಯತ್ನಿಸುತ್ತಿದ್ದರು. ಮುಸ್ಲಿಮರೊಂದಿಗೂ ಹಾಗೆಯೇ ಉಪದೇಶಿಸುತ್ತಿದ್ದರು. ಅವರು ಹೀಗೆ ಆಜ್ಞಾಪಿಸಿದ್ದರು:

**"ಯಾ ಅಯ್ಯುಹನ್ನಾಸು ಲಾ ತತಮನ್ನವ್ ಲಿಖಾಅಲ್ ಅದುವ್ವಿ**

ವಸ್ ಅಲುಲ್ಲಾಹಲ್ ಆಫಿಯತ."

"ಓ ಜನರೇ, ಶತ್ರುಗಳೊಂದಿಗೆ ಯುದ್ಧವನ್ನು ಆಶಿಸಬೇಡಿರಿ. ಅಲ್ಲಾಹನಿಂದ ಸಂರಕ್ಷಣೆಯನ್ನು ಬೇಡಿಕೊಳ್ಳಿರಿ."

(ಮುಸ್ಲಿಮ್ ಕಿತಾಬುಲ್ ಜಿಹಾದ್ ವಸ್ಸೈರ್, ಬಾಬು ಕರಾಹತಿ ತಮನ್ನಾ ಲಿಖಾಅಲ್ ಅದುವ್ವಿ)

ಆದರೆ ಮಾಡುವುದೇನು? ದುಷ್ಟಶಕ್ತಿಗಳು ಯಾವಾಗಲೂ ಅಲ್ಲಾಹನ ಕಡೆಯಿಂದ ಆಗಮಿಸುವ ಪ್ರವಾದಿಗಳನ್ನೂ ಸಂದೇಶವಾಹಕರನ್ನೂ ವಿರೋಧಿಸಲು ಮತ್ತು ಅವರ ವಿರುದ್ಧ ಹಗೆತನದಿಂದ ವರ್ತಿಸಲು ಯಾವಾಗಲೂ ಸನ್ನದ್ಧರಾಗಿರುತ್ತವೆ. ಒಂದು ಸಾರಿ ಅಲ್ಲ, ಪದೇ ಪದೇ ಪ್ರವಾದಿಗಳನ್ನೂ ಅನುಯಾಯಿಗಳನ್ನೂ ನಾಶ ಮಾಡಲು ಗೂಢತಂತ್ರಗಳನ್ನು ಹೂಡುತ್ತಾ ಇರುತ್ತವೆ.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಮದೀನಕ್ಕೆ ವಲಸೆ ಬಂದ ನಂತರದ ಹತ್ತು ವರ್ಷಗಳ ಚರಿತ್ರೆಯನ್ನು ಅಧ್ಯಯನ ಮಾಡುವುದಾದರೆ, ಅಂದಾಜು ಎಂಬತ್ತು ಸಾರಿ ಅರಬ್ ಮತ್ತು ಅರಬಿಯೇತರ ಶತ್ರುಗಳು ಮುಸ್ಲಿಮರ ವಿರುದ್ಧ ಒಂದಲ್ಲವಾದರೆ ಇನ್ನೊಂದು ರೀತಿಯಲ್ಲಿ ಆಕ್ರಮಣ ಮಾಡಲು ಪ್ರಯತ್ನಿಸಿದರೆಂದು ತಿಳಿಯುತ್ತದೆ. 77 ಸಾರಿ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಕಾರ್ಯಕ್ಷಮತೆಯ ಕಾರಣ ರಕ್ತಪಾತದ ಯುದ್ಧಗಳು ನಡೆಯದಂತೆ ತಡೆಗಟ್ಟಲ್ಪಟ್ಟವು. ಕೇವಲ ಮೂರು ಯುದ್ಧಗಳು ನಡೆದುವು. ಅವುಗಳಲ್ಲಿ ಬದ್ರ್ ಮತ್ತು ಉಹುದ್ ಯುದ್ಧಗಳ ಬಗ್ಗೆ ಇಷ್ಟರಲ್ಲಿಯೇ ಪ್ರಸ್ತಾಪಿಸಲಾಗಿದೆ. ಮೂರನೆಯ ರಕ್ತಪಾತದ ಯುದ್ಧ ಹುಸ್ನೈನ್ ಆಗಿತ್ತು. ಹಿಜರಿ ವರ್ಷ 8 ಶವ್ವಾಲ್ ತಿಂಗಳಲ್ಲಿ (ಎಂದರೆ ಜನವರಿ, ಫೆಬ್ರವರಿ 630) ಈ ಯುದ್ಧ ನಡೆಯಿತು.

ಈ ಮೂರು ಯುದ್ಧಗಳು ಅಲ್ಲಾಹನ ವಿಧಿ ನಿರ್ಣಯದ ಪ್ರಕಾರ ನಡೆದವುಗಳೆಂದು ತಿಳಿಯುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಮತ್ತು ಮುಸ್ಲಿಮರು ಹೇಡಿಗಳೂ ಬಲಹೀನರೂ ಆಗಿದ್ದಾರೆ; ಅವರು ನಮ್ಮನ್ನು ಎದುರಿಸಲಾರರು ಎಂದು ಶತ್ರುಗಳು ಭಾವಿಸದಿರಲು ಈ ಶಸ್ತ್ರಕ್ರಿಯೆಯು ಆವಶ್ಯಕವಾಗಿತ್ತು. ಒಬ್ಬ ಸರ್ಜನ್ ಗ್ಯಾಂಗ್ರೀನ್ (Gangrene) ಬಾಧಿಸಿದ ರೋಗಿಯ ಕಾಲನ್ನು ಅವನ ಶರೀರಕ್ಕೆ ರೋಗ ಬಾಧಿಸಿ ಸಾಯದಿರಲು ಕಡಿದು ಹಾಕುತ್ತಾನೆ. ಕಾಲನ್ನು ಕಡಿಯುವವನನ್ನು ಯಾರೂ ದೌರ್ಜನ್ಯಗಾರನೆಂದಾಗಲೀ ಪ್ರೀತಿ ವಾತ್ಸಲ್ಯ ರಹಿತನಾದವನೆಂದಾಗಲೀ ಆಕ್ಷೇಪಿಸಲಾರರು. ಅದಕ್ಕೆ ಪ್ರತಿಯಾಗಿ ಡಾಕ್ಟರ್ ರೋಗಿಯ ಜೀವವನ್ನು ರಕ್ಷಿಸಿದುದಕ್ಕಾಗಿ ಹೊಗಳುವರು. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಒಬ್ಬ ವಾತ್ಸಲ್ಯಮಯಿ ಸರ್ಜನರಿಗಿಂತ ಮೇಲಿನ ಸ್ಥಾನದಲ್ಲಿದ್ದರು. ಅವರು ಮಾಡಿದ ಶಸ್ತ್ರಕ್ರಿಯೆ ಮಾನವೀಯತೆಯನ್ನು ಕಾಪಾಡಲು ಆಗಿತ್ತು. ಇದೇ ರೀತಿಯ ಶಸ್ತ್ರ ಕ್ರಿಯೆಗಳನ್ನು ಶ್ರೀ ರಾಮಚಂದ್ರಜಿಯವರು ರಾವಣನ ವಿರುದ್ಧ ಮತ್ತು ಶ್ರೀ ಕೃಷ್ಣಜಿಯವರು ಕೌರವರ ವಿರುದ್ಧ ಮಹಾಭಾರತ ಯುದ್ಧದಲ್ಲಿ ಮಾಡಿದರು. ಇದೇ ರೀತಿಯ ಶಸ್ತ್ರ ಕ್ರಿಯೆಗೆ ಸಂಬಂಧಿಸಿ ಹಝ್ರತ್ ಈಸಾ ಮಸೀಹ್ ಹೇಳಿದರು:

"ಭೂ ಲೋಕದ ಮೇಲೆ ಸಮಾಧಾನ ಹುಟ್ಟಿಸುವುದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ; ಖಡ್ಗವನ್ನು ಹಾಕುವುದಕ್ಕೆ ನಾನು ಬಂದೆನು." (ಮತ್ತಾಯನ ಸುವಾರ್ತೆ 10:34)

ಆದುದರಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಯುದ್ಧಮಾಡಿದುದು ಅನುಗ್ರಹದಾಯಕ ಮನೋಭಾವದಿಂದಲೂ ಅಲ್ಲಾಹನ ಅನುಮತಿಯಿಂದಲೂ ಮನುಷ್ಯ ಮತ್ತು ಮಾನವೀಯತೆಯ ಸಂರಕ್ಷಣೆಗೋಸ್ಕರವೂ ಆಗಿತ್ತು. ಅವರು ಅಧಿಕಾರ ಮತ್ತು ರಾಜ್ಯಭಾರ ಸ್ಥಾಪಿಸಲು ಯುದ್ಧಮಾಡಿರಲಿಲ್ಲ. ಆದರೆ ದುಃಖಕರವಾದುದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಮತ್ತು ಖಿಲಫಾಉರ್ರಾಶಿದೀನ್ (ನೇರಮಾರ್ಗದಲ್ಲಿದ್ದ ಖಲೀಫರು) ಕಾಲದ ನಂತರ ಅರಬಿ ಮತ್ತು ಅರಬಿಯೇತರ ಮುಸ್ಲಿಮ್ ರಾಜ್ಯಾಧಿಕಾರಿಗಳು ಮಾಡಿದ ಯುದ್ಧಗಳು ತಮ್ಮ ಅಧಿಕಾರ ಸಂರಕ್ಷಣೆಗೋಸ್ಕರವಾಗಿತ್ತು. ಅದರ ಹೆಸರು ಅವರು ಜಿಹಾದ್ ಎಂದು ಇರಿಸಿದರು. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಆಜ್ಞೆಗಳ ಬೆಳಕಿನಲ್ಲಿ ಅವರು ಮಾಡಿದ ಯುದ್ಧಗಳನ್ನು ಪರಿಶೀಲಿಸುವುದಾದರೆ, ಅವರು ಮಾಡಿದ ಯುದ್ಧಗಳಲ್ಲಿ ಬಹುತೇಕ ಇಸ್ಲಾಮ್ ಧರ್ಮಕ್ಕೆ ಯಾವುದೇ ರೀತಿಯಲ್ಲೂ ಸಂಬಂಧಿಸಿರಲಿಲ್ಲ. ಇಂದಿನ ಕಾಲಘಟ್ಟದಲ್ಲಿ ಸಹ ಮುಸ್ಲಿಮರೆಂದು ಹೇಳಿಕೊಳ್ಳುವವರು ರಾಜ್ಯಾಡಳಿತೆ ನಡೆಸುತ್ತಿರುವಾಗ ಇಸ್ಲಾಮ್ ಹೆಸರಲ್ಲಿ ಯಾವುದಾದರೂ ಯುದ್ಧ, ಜಿಹಾದ್ ಅಥವಾ ಖಿತಾಲ್ (ರಕ್ತಪಾತ) ನಡೆಸುವುದಾದರೆ, ಅದು ಇಸ್ಲಾಮ್ ಧರ್ಮ ತತ್ವಗಳಿಗೆ ಪೂರ್ಣವಾಗಿ ವಿರುದ್ಧವಾಗಿರುತ್ತದೆ. ಇದೇ ರೀತಿ ಮುಸ್ಲಿಮರ ಸಂಘಟನೆಗಳು ಇಸ್ಲಾಮ್ ಹೆಸರಿನಲ್ಲಿ ಜಿಹಾದ್ ಅಥವಾ ಖಿತಾಲ್ ಎಂದು ಭೀಕರ ಕೃತ್ಯಗಳನ್ನು ಮಾಡುತ್ತಾ ಇರುವುದು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣ ವಿರುದ್ಧವಾಗಿದೆ. ಇಸ್ಲಾಮ್ ದೃಷ್ಟಿಯಲ್ಲಿ ಜಿಹಾದ್ ಅಸ್‌ಗರ್ (ಚಿಕ್ಕ ಜಿಹಾದ್ – ಯುದ್ಧ) ಅನುಮತಿಸಲ್ಪಡುವುದು ಯಾವುದಾದರೂ ಮುಸ್ಲಿಮೇತರ ಶಕ್ತಿ ಅಥವಾ ದೇಶ ಇಸ್ಲಾಮ್ ಧರ್ಮದ ಕಾರಣದಿಂದ ನಾಶ ಮಾಡಲು ಮತ್ತು ನಾಮಾವಶೇಷ ಮಾಡಲು ಯುದ್ಧ ಮಾಡುವಾಗ ಮತ್ತು ರಬ್ಬುನಲ್ಲಾಹು (ನಮ್ಮ ಪ್ರಭು ಅಲ್ಲಾಹ್) ಎಂದು ಹೇಳಿದ ಕಾರಣದಿಂದ ಸತ್ಯವಿಶ್ವಾಸಿಗಳನ್ನು ಮನೆಗಳಿಂದ ಹೊರಗೆ ಹಾಕುವಾಗ ಆಗಿರುತ್ತದೆ. ಪವಿತ್ರ ಖುರ್‌ಆನ್ ಇದರ ಬಗ್ಗೆ ಹೀಗೆ ಹೇಳಿದೆ:

**ಉಧಿನ ಲಿಲ್ಲಧೀನ ಯುಖಾತಲೂನ ಬಿಅನ್ನಹುಮ್**

**ಝುಲಿಮೂ ವ ಇನ್ನಲ್ಲಾಹ ಅಲಾ ನಸ್‌ರಿಹಿಮ್ ಲಖದೀರ್**

**ಅಲ್ಲಧೀನ ಉಖ್‌ರಿಜೂ ಮಿನ್ ದಿಯಾರಿಹಿಮ್**

**ಬಿಗೈರಿ ಹಕ್ಕಿನ್ ಇಲ್ಲಾ ಅನ್ ಯಖೂಲೂ ರಬ್ಬುನಲ್ಲಾಹ್.**

"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು." (22:40, 41)

ಇಸ್ಲಾಮ್ ಧರ್ಮ ಪ್ರಕಾರ ಯಾವ ಯುದ್ಧಕ್ಕೆ ಅನುಮತಿ ನೀಡಲಾಗುತ್ತಿದೆಯೋ ಅದು ನ್ಯಾಯಬದ್ಧವಾಗಲು ಇಸ್ಲಾಮ್ ವಿಧಿಸುವ ಇನ್ನೊಂದು ಶರತ್ತೇನೆಂದರೆ, ಮುಸ್ಲಿಮರು ಅನುಸರಿಸುವಂತಹ ಒಬ್ಬ ಇಮಾಮ್ (ನೇತಾರ) ಅವರಿಗೆ ಇರಬೇಕು ಎಂದಾಗಿದೆ. ಏಕೆಂದರೆ

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿರುವರು:

**ಇನ್ನಮಲ್ ಇಮಾಮು ಜುನ್ನತುನ್ ಯುಖಾತಲು ಮಿನ್ ವರಾಇಹೀ ವ ಯುತ್ತಖಾ ಬಿಹೀ.**

"ಇಮಾಮ್ ಒಂದು ಗುರಾಣಿಯಾಗಿದ್ದಾರೆ. ಅವರ ಹಿಂದೆ ನಿಂತುಕೊಂಡು ಯುದ್ಧಮಾಡುವವರು ಅವರ ಮೂಲಕ ರಕ್ಷಿಸಲ್ಪಡುತ್ತಾರೆ."

(ಸಹೀಹ್ ಮುಸ್ಲಿಮ್ – ಕಿತಾಬುಲ್ ಇಮಾರತ್)

ಇಮಾಮ್ ಒಂದು ಗುರಾಣಿಯಾಗಿರುತ್ತಾರೆ. ಅವರ ಹಿಂದೆ ನಿಂತು ಯುದ್ಧಮಾಡಲಾಗುತ್ತದೆ ಮತ್ತು ಅವರ ಮೂಲಕವೇ ರಕ್ಷಿಸಲ್ಪಡುತ್ತಾರೆ. ಇಮಾಮರ ಹಿಂದೆ ಯುದ್ಧಮಾಡುವವರ ಬಗ್ಗೆ ಅಲ್ಲಾಹನು ವಾಗ್ದಾನ ನೀಡಿರುವನು – ಅಲ್ಲಾಹನು ಅವರಿಗೆ ಪೂರ್ಣವಾಗಿ ಸಹಾಯ ನೀಡುವನೆಂದು. ಇಂದಿನ ಕಾಲಘಟ್ಟದಲ್ಲಿ ಮುಸ್ಲಿಮರೆಂದು ಹೇಳಿಕೊಂಡು ರಾಜ್ಯಭಾರ ನಡೆಸುತ್ತಿರುವ ದೇಶಗಳು ಮತ್ತು ತಮ್ಮನ್ನು ಇಸ್ಲಾಮ್‌ನೊಂದಿಗೆ ಸಂಬಂಧಪಡಿಸಿ ಹೇಳುವ ಭೀಕರವಾದಿ ಸಂಘಟನೆಗಳು ಎಲ್ಲ ಕ್ಷೇತ್ರಗಳಲ್ಲೂ ಸೋಲಿನ ನಂತರ ಸೋಲನ್ನು ಅನುಭವಿಸುತ್ತಿವೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಮೇಲೆ ವಿವರಿಸಿದ ಪವಿತ್ರ ಖುರ್‌ಆನಿನ ವಚನಗಳ ಬೆಳಕಿನಲ್ಲಿ ನೋಡುವುದಾದರೆ, ಅವರಿಗೆ ಅಲ್ಲಾಹನ ಸಹಾಯ ಲಭಿಸುತ್ತಾ ಇಲ್ಲ. ರಾಜಕೀಯ ಉದ್ದೇಶಗಳಿಗೋಸ್ಕರ ಮಾಡುವ ಯುದ್ಧಗಳನ್ನು ರಾಜಕೀಯದ ಹೆಸರಿನಲ್ಲಿಯೇ ಮಾಡಬೇಕು. ಧರ್ಮ ಮತ್ತು ಇಸ್ಲಾಮ್‌ನೊಂದಿಗೆ ಆ ಯುದ್ಧಗಳಿಗೆ ಯಾವ ಸಂಬಂಧವೂ ಇಲ್ಲ.

## ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನೀಡಿದ ಕ್ಷಮೆ

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋದುದು ಕ್ರಿ.ಶ.622 ಸೆಪ್ಟಂಬರ್ ದಿನಾಂಕ 11ರಂದು. ಅಂದಾಜು ಆರು ವರ್ಷಗಳ ನಂತರ ಮಕ್ಕದ ಖುರೈಶಿಗಳೊಂದಿಗೆ ಒಂದು ಒಪ್ಪಂದ ಮಾಡಿದರು. ಅದರ ಹೆಸರು "ಸುಲ್‌ಹು ಹುದೈಬಿಯಾ" ಎಂದು ಪ್ರಸಿದ್ಧವಾಗಿದೆ. ಆದರೆ ಮಕ್ಕದ ಆ ಶತ್ರುಗಳು ಈ ಒಪ್ಪಂದವನ್ನು ಮುರಿದರು. ಹಝ್ರತ್ ಪೈಗಂಬರರು(ಸ) ಕ್ರಿ.ಶ. 629 ಡಿಸೆಂಬರ್ ತಿಂಗಳಿನಲ್ಲಿ ಹತ್ತುಸಾವಿರ ಶಿಷ್ಯರೊಂದಿಗೆ ಮಕ್ಕದ ಕಡೆಗೆ ದಂಡಯಾತ್ರೆ ನಡೆಸಲು ನಿರ್ಬಂಧಿತರಾದರು. ಮಕ್ಕದಲ್ಲಿದ್ದ ಶತ್ರುಗಳಿಗೆ ಇಷ್ಟು ಹಿರಿದಾದ ಸೈನ್ಯವನ್ನು ಎದುರಿಸುವ ಶಕ್ತಿ ಇರಲಿಲ್ಲ, ಹಝ್ರತ್ ಪೈಗಂಬರರು(ಸ) ಯಾವುದೇ ಹೋರಾಟ ಬಯಸಲೂ ಇಲ್ಲ. ಇಸ್ಲಾಮಿನ ಶತ್ರುಗಳು ತಾವು ಸೋತಿರುವುದಾಗಿ ಹೇಳಿ ಶರಣಾಗತರಾದರು. ಆಗ ಹಝ್ರತ್ ಪೈಗಂಬರರು(ಸ) ಶತ್ರುಗಳೊಂದಿಗೆ ಕೇಳಿದರು: "ಏಕದೇವನನ್ನು ಆರಾಧಿಸುವ ಬಡಜನರಿಗೆ ನೀವು ಮಾಡಿದ ದೌರ್ಜನ್ಯ ಮತ್ತು ಹಿಂಸಾಚಾರಗಳಿಗೆ ನಾನು ಹೇಗೆ ಪ್ರತೀಕಾರ ಮಾಡಬೇಕು?" ಆಗ ಮಕ್ಕದ ಆ ವಿರೋಧಿಗಳು ಹೇಳಿದರು: "ಪ್ರವಾದಿ ಯೂಸುಫ್(ಅ) ತನ್ನ ಸಹೋದರರೊಂದಿಗೆ ವರ್ತಿಸಿದ ರೀತಿಯಲ್ಲಿ ನೀವು ನಮ್ಮೊಂದಿಗೆ ವರ್ತಿಸುವಿರೆಂದು ಪ್ರತೀಕ್ಷಿಸುತ್ತೇವೆ." ಆಗ ಹಝ್ರತ್ ಪೈಗಂಬರರು(ಸ) ಘೋಷಿಸಿದರು: "ಅಲ್ಲಾಹನಾಣೆ, ಇಂದು ನಿಮ್ಮ ವಿರುದ್ಧ ಯಾವುದೇ ಪ್ರತೀಕಾರ ಮಾಡುವುದಿಲ್ಲ. ಹೋಗಿರಿ, ನೀವು ಸ್ವತಂತ್ರರಾಗಿರುವಿರಿ."

ಅಲ್ಲಾಹ್! ಅಲ್ಲಾಹ್! ಹದಿಮೂರು ವರ್ಷಗಳ ಕಾಲ ದೌರ್ಜನ್ಯ ಸಹಿಸಿದ ನಂತರ ಪ್ರತೀಕಾರ ಮಾಡುವ ಸಂದರ್ಭ ದೊರೆತಾಗ ತಕ್ಷಣ ಕ್ಷಮಿಸಿದರು.

## ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮಾನವರೆಲ್ಲರೊಂದಿಗೆ ಹೊಂದಿದ್ದ ಪ್ರೀತಿ ಮತ್ತು ಸಹಾನುಭೂತಿ

ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಲೋಕದ ಎಲ್ಲ ಜನರಿಗೆ ಉತ್ತಮ ಮಾದರಿಯನ್ನಾಗಿ ಮಾಡಿರುವನೆಂದು ನಮ್ಮ ವಿಶ್ವಾಸವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**ಲಖದ್ ಕಾನ ಲಕುಮ್ ಫೀ ರಸೂಲಿಲ್ಲಾಹಿ ಉಸ್‌ವತುನ್ ಹಸನ**

"ನಿಸ್ಸಂದೇಹವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕರಲ್ಲಿ ಒಂದು ಉತ್ತಮವಾದ ಮಾದರಿ ಇದೆ." (33:22)

ಹಝ್ರತ್ ಪೈಗಂಬರರು(ಸ) ಮಾನವರೊಂದಿಗೆ ನೈಜ ಸಹಾನುಭೂತಿ ಮತ್ತು ಪ್ರೀತಿ ಹೊಂದಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರವಾದಿಯಾಗಿ ಅಲ್ಲಾಹನಿಂದ ನೇಮಿಸಲ್ಪಡುವ ಮೊದಲು ಬೇರೆ ಕೆಲವು ಜನರೊಂದಿಗೆ ಸೇರಿ, "ನಾವು ಯಾವಾಗಲೂ ಹಕ್ಕುದಾರರಿಗೆ ಅವರ ಹಕ್ಕುಗಳನ್ನು ಪಡೆಯಲು ಸಹಾಯ ಮಾಡುವೆವು; ದೌರ್ಜನ್ಯಗಾರರನ್ನು ದೌರ್ಜನ್ಯದಿಂದ ತಡೆಯುವೆವು" ಎಂದು ಪ್ರತಿಜ್ಞೆ ಮಾಡಿದ್ದರು. ಈ ಪ್ರತಿಜ್ಞೆಯನ್ನು ಚರಿತ್ರೆಯಲ್ಲಿ "ಹಿಲ್‌ಫುಲ್ ಫುಝೂಲ್" ಎಂದು ಕರೆಯಲಾಗಿದೆ. ಕೆಲವು ವರದಿಗಳ ಪ್ರಕಾರ, ಈ ಪ್ರತಿಜ್ಞೆ ಮಾಡುವ ಪ್ರಸ್ತಾಪ ಮೊದಲು ಮಾಡಿದವರು ಫಝ್ಲ್ ಎಂಬ ಹೆಸರನ್ನು ಹೊಂದಿದವರಾಗಿದ್ದರು. ಆದುದರಿಂದ ಈ ಪ್ರತಿಜ್ಞೆ "ಹಿಲ್‌ಫುಲ್ ಫುಝೂಲ್" ಎಂಬ ಹೆಸರಿನಲ್ಲಿ ಪ್ರಸಿದ್ಧವಾಯಿತು.

(ರೌಝುಲ್ ಅನಿಫ್ ಇಮಾಮ್ ಸುಹೈಲಿ – ಸಂಪುಟ 1 ಪುಟ 11. ಸೀರತ್ ಖಾತಮುನ್ನಬಿಯ್ಯೀನ್‌ನಿಂದ ಉಲ್ಲೇಖಿಸಲ್ಪಟ್ಟಿದ್ದು)

ಹಝ್ರತ್ ಪೈಗಂಬರರು(ಸ) ಅಲ್ಲಾಹನಿಂದ ಪ್ರವಾದಿಯಾಗಿ ನೇಮಿಸಲ್ಪಡುವ ಮೊದಲು ಈ ಪ್ರತಿಜ್ಞೆಯನ್ನು ಮಾಡಿದ್ದರೂ, ಪ್ರವಾದಿಯಾದ ನಂತರ ಸಹ ಈ ಪ್ರತಿಜ್ಞೆಯನ್ನು ಈಡೇರಿಸಿದರು ಮತ್ತು ದೌರ್ಜನ್ಯ ಪೀಡಿತರಾದವರಿಗೆ ಯಾವಾಗಲೂ ಸಹಾಯ ನೀಡಿದರು. ಚರಿತ್ರೆಯಲ್ಲಿ ಒಂದು ಘಟನೆಯನ್ನು ವಿವರಿಸಲಾಗಿದೆ: ಅರಾಶನೆಂಬವನು ಮಕ್ಕದಲ್ಲಿ ಕೆಲವು ಒಂಟೆಗಳನ್ನು ಮಾರಾಟ ಮಾಡಲು ತಂದಾಗ, ಅಬೂ ಜಹಲನು ಅವನ ಒಂಟೆಗಳನ್ನು ಖರೀದಿಸಿ ಅದರ ಬೆಲೆ ನೀಡಲಿಲ್ಲ. ಅವನು ಮಕ್ಕದ ಗಣ್ಯರಿಗೆ ದೂರಿತ್ತಾಗ, ಅವರು ಪರಿಹಾಸ ಮಾಡಲು ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಹೋಗಿ ದೂರು ನೀಡಲು ಹೇಳಿದರು. ಆ ಸಮಯದಲ್ಲಿ ಮಕ್ಕದ ಖುರೈಶಿಗಳು ಮತ್ತು ವಿಶಿಷ್ಟವಾಗಿ ಅಬೂ ಜಹಲನು ಹಝ್ರತ್ ಪೈಗಂಬರನ್ನು(ಸ) ತೀವ್ರವಾಗಿ ವಿರೋಧಿಸುತ್ತಿದ್ದರು. ಹೀಗಿದ್ದರೂ ಹಝ್ರತ್ ಪೈಗಂಬರರು(ಸ) ದೌರ್ಜನ್ಯ ಪೀಡಿತನಿಗೆ ಸಹಾಯ ಮಾಡಲು ನಿರ್ಧರಿಸಿದರು. ಅವರು ಅಬೂಜಹಲನ ಮನೆಗೆ ಹೋಗಿ ಅರಾಶನಿಗೆ ಹಣವನ್ನು ನೀಡಲು ಹೇಳಿದರು. ಅಬೂಜಹಲನು ಹಝ್ರತ್ ಪೈಗಂಬರರನ್ನು(ಸ) ನೋಡಿದ ಕೂಡಲೆ ಭಯಭೀತನಾಗಿ ಮನೆಯೊಳಗೆ ಹೋಗಿ ಹಣವನ್ನು ತಂದು ಅರಾಶನಿಗೆ ಕೊಟ್ಟನು. ಈ ರೀತಿ ಹಝ್ರತ್ ಪೈಗಂಬರರು(ಸ) ದೌರ್ಜನ್ಯ

ಪೀಡಿತನಿಗೆ ಸಹಾಯ ಮಾಡುವ ಅತ್ಯುನ್ನತ ಉದಾಹರಣೆ ಸ್ಥಾಪಿಸಿದರು.

ಇಂದಿನ ಕಾಲದಲ್ಲಿ ಸಹ ಲಕ್ಷಾಂತರ ಜನರ ನ್ಯಾಯಬದ್ಧ ಹಕ್ಕುಗಳನ್ನು ಅಕ್ರಮಿಗಳಾದ ಜನರು ಅಪಹರಿಸುತ್ತಿದ್ದಾರೆ. ಹಝ್ರತ್ ಪೈಗಂಬರರ(ಸ) ನಡೆವಳಿಕೆ ನಮಗೆ ನೀಡುವ ಪಾಠವೇನೆಂದರೆ, ನ್ಯಾಯವಾದ ರೀತಿಯಲ್ಲಿ ನಮ್ಮ ಸಾಮರ್ಥ್ಯವನ್ನು ಬಳಸಿಕೊಂಡು ದೌರ್ಜನ್ಯ ಪೀಡಿತರಿಗೆ ನೆರವು ನೀಡಬೇಕು. ದೌರ್ಜನ್ಯಗಾರನನ್ನು ದೌರ್ಜನ್ಯದಿಂದ ತಡೆಯಬೇಕು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ:

**ಉನ್‌ಸುರ್ ಅಖಾಕ ಝಾಲಿಮನ್ ಅವ್ ಮಝ್‌ಲೂಮನ್**

"ನೀನು ನಿನ್ನ ಸಹೋದರನಿಗೆ ಸಹಾಯ ಮಾಡು – ಅವನು ದೌರ್ಜನ್ಯಗಾರನಾಗಿದ್ದರೆ ಅಥವಾ ದೌರ್ಜನ್ಯ ಪೀಡಿತನಾಗಿದ್ದರೆ." ವಾಸ್ತವಿಕ ವಿಷಯವೇನೆಂದರೆ, ನಾವು ಲೋಕದಲ್ಲಿ ನಿಜವಾಗಿಯೂ ಶಾಂತಿಯನ್ನು ಸ್ಥಾಪಿಸಲು ಇಚ್ಛಿಸುವುದಾದರೆ ಇಸ್ಲಾಮ್ ಧರ್ಮದ ಉಪದೇಶ ಪ್ರಕಾರ ನಾವು ದೌರ್ಜನ್ಯ ಪೀಡಿತ ಜನಾಂಗಗಳಿಗೆ ಅವರ ಹಕ್ಕುಗಳನ್ನು ದೊರಕಿಸಿ ಕೊಡಲು ಸಹಾಯ ಮಾಡಬೇಕು. ಹೀಗೆ ಮಾಡದಿದ್ದರೆ ಅಶಾಂತಿಯನ್ನು ಲೋಕದಿಂದ ನಿವಾರಿಸಲು ಸಾಧ್ಯವಾಗಲಾರದು.

ಮನುಷ್ಯರಲ್ಲಿ ಅತ್ಯಂತ ಬಡವರೂ ಬಲಹೀನರೂ ಆಗಿರುವವರೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಪ್ರೀತಿಯಿಂದ ವರ್ತಿಸಿದರು ಮತ್ತು ಅವರೊಂದಿಗೆ ಪ್ರೀತಿಯಿಂದ ವರ್ತಿಸಲು ಮುಸ್ಲಿಮರಿಗೆ ಆಜ್ಞಾಪಿಸಿದರು.

ಒಂದು ಘಟನೆ ಚರಿತ್ರೆಯಲ್ಲಿ ವರದಿಯಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಝಾಹಿರ್ ಎಂಬ ಹೆಸರಿನ ವ್ಯಕ್ತಿ ಮುಸ್ಲಿಮನಾದನು. ಗ್ರಾಮವಾಸಿಯಾದ ಅವನು ಅತ್ಯಂತ ಬಡವನಾಗಿದ್ದನು ಮತ್ತು ಅವನ ರೂಪ ಜನರ ದೃಷ್ಟಿಯಲ್ಲಿ ಕುರೂಪವಾಗಿತ್ತು. ಸಾಮಾನ್ಯ ಜನರು ಅವನನ್ನು ಕಾಣಲು ಇಷ್ಟಪಡುತ್ತಿರಲಿಲ್ಲ. ಒಮ್ಮೆ ಆ ಬಡವ್ಯಕ್ತಿ ಮದೀನದ ಪೇಟೆಯಲ್ಲಿ ಧಾನ್ಯ ಮಾರುತ್ತಾ ಇದ್ದನು. ಅವನು ಬೆವರು ಮತ್ತು ಧೂಳಿನಿಂದ ಆವರಿಸಲ್ಪಟ್ಟಿದ್ದನು.

ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಹೃದಯವನ್ನು ಎಲ್ಲ ಮನುಷ್ಯರೊಂದಿಗೆ ಪ್ರೀತಿ ಮತ್ತು ವಾತ್ಸಲ್ಯಭರಿತವಾಗಿ ವರ್ತಿಸುವಂತೆ ಮಾಡಿದ್ದನು. ಹಝ್ರತ್ ಪೈಗಂಬರರು(ಸ) ಝಾಹಿರನನ್ನು ಕಂಡಾಗ ಆತನ ಬಗ್ಗೆ ಸಹಾನುಭೂತಿ ಹೊಂದಿ ಆತನ ಹಿಂದೆ ಹೋಗಿ ಆತನ ಕಣ್ಣುಗಳನ್ನು ತನ್ನ ಕೈಗಳಿಂದ ಮುಚ್ಚಿದರು. ಆಗ ಝಾಹಿರ್ ಮೃದುವಾದ ಆ ಕೈಗಳನ್ನು ಚುಂಬಿಸಿದರು. ತನ್ನನ್ನು ಪ್ರೀತಿಸುವವರು ಹಝ್ರತ್ ಪೈಗಂಬರರ(ಸ) ಹೊರತು ಬೇರೆ ಯಾರಾಗಲು ಸಾಧ್ಯ ಎಂದು ಝಾಹಿರ್ ಯೋಚಿಸುತ್ತಿದ್ದರು. ಹಝ್ರತ್ ಪೈಗಂಬರರು(ಸ) ನಸುನಗುತ್ತಾ ತನ್ನ ಕೈಗಳನ್ನು ತೆಗೆದು ಹೇಳಿದರು: "ನನ್ನ ಈ ಗುಲಾಮನನ್ನು ಯಾರು ಖರೀದಿಸುವರು?" ಆಗ ಝಾಹಿರ್ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನನ್ನಂತಹವನನ್ನು ಯಾರೂ ಖರೀದಿಸಲಾರರು! ಆಗ ಹಝ್ರತ್ ಪೈಗಂಬರರು(ಸ) ಭಾವೋದ್ವೇಗದಿಂದ ಹೇಳಿದರು: "ನೀವು ಹಾಗೆ ಹೇಳಬೇಡಿರಿ. ನಿಮ್ಮನ್ನು ಖರೀದಿಸಿದವನು ಸಿಂಹಾಸನಾರೂಢ ಅಲ್ಲಾಹನೇ ಆಗಿದ್ದಾನೆ."

ಓ ಅಲ್ಲಾಹನ ಸಂದೇಶವಾಹಕರೇ, ಅಲ್ಲಾಹನು ತಮಗೆ ಅಗಣಿತ ಅನುಗ್ರಹಗಳನ್ನೂ ವರದಾನಗಳನ್ನೂ ದಯಪಾಲಿಸಲಿ. ಒಬ್ಬ ಬಡ ಮನುಷ್ಯನನ್ನು ನಿಮ್ಮ ಎದೆಗಪ್ಪಿಕೊಂಡು ಬಡ ಮನುಷ್ಯನಿಗೆ ಎಂತಹ ಗೌರವ ನೀಡಿದಿರೆಂದರೆ ಅದಕ್ಕೆ ಸಮಾನವಾದ ಉದಾಹರಣೆ ಕಂಡುಹಿಡಿಯಲು ಅಸಾಧ್ಯವಾಗಿದೆ. ಹಝ್ರತ್ ಪೈಗಂಬರರು(ಸ) ಮನುಷ್ಯರೊಂದಿಗೆ ಪ್ರೀತಿಯಿಂದ ವರ್ತಿಸುವ ಬಗ್ಗೆ ತನ್ನ ಅನುಯಾಯಿಗಳಿಗೆ ಶಾಶ್ವತವಾದ ಪಾಠ ಕಲಿಸಿದರು. ಹಝ್ರತ್ ಪೈಗಂಬರರ(ಸ) ಈ ಉತ್ತಮ ನಡೆವಳಿಕೆಯನ್ನು ಅನುಷ್ಠಾನಕ್ಕೆ ತಂದು ಕೋಟಿಗಟ್ಟಲೆ ಮುಸ್ಲಿಮರು ಮಾನವರನ್ನು ಪ್ರೀತಿಸುವ ರೀತಿಯನ್ನು ಅವರಿಂದ ಕಲಿತುದರಿಂದ ಮಾನವರನ್ನು ಪ್ರೀತಿಸುತ್ತಿದ್ದಾರೆ. ಆ ಕಾಲಘಟ್ಟದಲ್ಲಿ ದೊಡ್ಡ ದೊಡ್ಡ ಗೋತ್ರಗಳ ಮತ್ತು ಕುಟುಂಬಗಳ ಜನರು ಗುಲಾಮರನ್ನೂ ಬಡಜನರನ್ನೂ ಮೃಗಗಳಿಗಿಂತ ಕೀಳಾಗಿ ಕಾಣುತ್ತಿದ್ದರು. ಹಝ್ರತ್ ಪೈಗಂಬರರು(ಸ) ಸಹ ಅರಬ್ ದೇಶದ ಗೌರವಾನ್ವಿತ ಖುರೈಶಿ ಗೋತ್ರಕ್ಕೆ ಸೇರಿದವರಾಗಿದ್ದರು. ಆದರೆ ಅವರು ಒಬ್ಬ ಬಡ ಕುರೂಪಿ ಮನುಷ್ಯನನ್ನು ತನ್ನ ಎದೆಗೊತ್ತಿ ಹಿಡಿದು ಲೋಕದ ಜನರಿಗೆ ಮಾನವೀಯತೆಗೆ ಮತ್ತು ಮಾನವನಿಗೆ ಗೌರವ ನೀಡುವ ಬಗ್ಗೆ ಅತ್ಯುತ್ತಮ ಪಾಠ ಕಲಿಸಿದರು. ಒಬ್ಬ ಅಹ್ಮದೀ ಕವಿ ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹೇಬ್(ರ) ಒಂದು ಪದ್ಯದಲ್ಲಿ ಎಷ್ಟು ಚೆನ್ನಾಗಿ ಹೇಳಿದ್ದಾರೆ:

**ಮಹಬ್ಬತ್ ಸೆ ಗಾಯಿಲ್ ಕಿಯಾ ಆಪ್‌ನೇ**

**ದಲಾಯಿಲ್ ಸೆ ಖಾಯಿಲ್ ಕಿಯಾ ಆಪ್‌ನೇ**

**ಜಹಾಲತ್ ಕೊ ಝಾಯಿಲ್ ಕಿಯಾ ಆಪ್‌ನೇ**

**ಶರೀಅತ್ ಕೊ ಕಾಮಿಲ್ ಕಿಯಾ ಆಪ್‌ನೇ**

**ಬಯಾನ್ ಕರ್‌ದಿಯೇ ಸಬ್ ಹಲಾಲೋ ಹರಾಮ್**

**ಅಲೈಕ ಸ್ಸಲಾತು ಅಲೈಕ ಸ್ಸಲಾಮ್.**

ತಾವು ಪ್ರೀತಿಯಿಂದ ಗಾಯಗೊಳಿಸಿದಿರಿ

ತಾವು ಸಾಕ್ಷ್ಯಾಧಾರಗಳಿಂದ ಒಪ್ಪುವಂತೆ ಮಾಡಿದಿರಿ

ತಾವು ಅಜ್ಞಾನವನ್ನು ಅಳಿಸಿದಿರಿ

ತಾವು ಶರೀಅತನ್ನು ಪರಿಪೂರ್ಣಗೊಳಿಸಿದಿರಿ

ತಾವು ಧರ್ಮಬದ್ಧ ಮತ್ತು ನಿಷಿದ್ಧವಾದ ಎಲ್ಲವುಗಳನ್ನೂ ವಿವರಿಸಿದಿರಿ

ತಮ್ಮ ಮೇಲೆ ಅಲ್ಲಾಹನ ಶುಭಾಶೀರ್ವಾದಗಳು, ತಮ್ಮ ಮೇಲೆ ಅಲ್ಲಾಹನ ಶಾಂತಿ ವರ್ಷಿಸಲಿ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದರು: "ಅಲ್ಲಾಹನು ಪುನರುತ್ಥಾನದ ದಿನ ಹೀಗೆ ಪ್ರಶ್ನಿಸುವನು: ಓ ಆದಮ್ ಪುತ್ರ (ಎಂದರೆ ಓ ಮನುಷ್ಯ) ನಾನು (ಅಲ್ಲಾಹನು) ರೋಗಿಯಾಗಿದ್ದೆನು. ನೀನು ನನ್ನ ರೋಗದ ಸ್ಥಿತಿ ತಿಳಿಯಲು ಸಂದರ್ಶಿಸಲಿಲ್ಲ. ಆಗ ಮನುಷ್ಯನು ಹೀಗೆ ಉತ್ತರ ಹೇಳುವನು: ನಾನು ನಿನ್ನ ರೋಗ ಸ್ಥಿತಿಯನ್ನು ತಿಳಿಯಲು ಸಂದರ್ಶಿಸಲಿಕ್ಕೆ ಹೇಗೆ ಸಾಧ್ಯ? ನೀನು ಸಕಲ ರೋಗಗಳ ಪ್ರಭುವಾಗಿರುವೆ. ಆಗ ಅಲ್ಲಾಹನು ಹೇಳುವನು: ನನ್ನ ದಾಸನೊಬ್ಬ

ರೋಗಿಯಾಗಿದ್ದಾಗ ನೀನು ಅವನ ರೋಗದ ಸ್ಥಿತಿಯನ್ನು ತಿಳಿಯಲು ಸಂದರ್ಶಿಸಲಿಲ್ಲ. ನೀನು ಅವನ ರೋಗದ ಸ್ಥಿತಿಯನ್ನು ತಿಳಿಯಲು ಸಂದರ್ಶಿಸುತ್ತಿದ್ದರೆ ನನ್ನನ್ನು ಅವನ ಬಳಿ ಕಾಣುತ್ತಿದ್ದೆ. ಅಲ್ಲಾಹನು ಪುನಃ ಹೇಳುವನು: ಓ ಮನುಷ್ಯ, ನಾನು ನಿನ್ನಿಂದ ಆಹಾರ ಬೇಡಿದೆ. ಆದರೆ ನೀನು ನನಗೆ ಆಹಾರ ನೀಡಲಿಲ್ಲ. ಆಗ ಮನುಷ್ಯನು ಉತ್ತರ ನೀಡುವನು: ಓ ನನ್ನ ಪ್ರಭು, ನಾನು ನಿನಗೆ ಹೇಗೆ ತಾನೆ ಆಹಾರ ನೀಡಬಲ್ಲೆ? ನೀನು ಸಕಲ ಲೋಕಗಳ ಪ್ರಭುವಾಗಿರುವೆ. ಆಗ ಅಲ್ಲಾಹನು ಹೇಳುವನು: ನಿನಗೆ ನೆನಪಿಲ್ಲವೇ? ನನ್ನ ದಾಸನೊಬ್ಬ ನಿನ್ನಿಂದ ಆಹಾರ ಯಾಚಿಸಿದಾಗ ನೀನು ಆಹಾರ ನೀಡಲಿಲ್ಲ. ನೀನು ಅವನಿಗೆ ಆಹಾರ ನೀಡುತ್ತಿದ್ದರೆ ಅವನ ಸಮೀಪ ನನ್ನನ್ನು ಕಾಣುತ್ತಿದ್ದೆ. ಅಲ್ಲಾಹನು ಪುನಃ ಹೇಳುವನು: ಓ ಮನುಷ್ಯ, ನಾನು ನಿನ್ನಿಂದ ನೀರನ್ನು ಕೇಳಿದೆ. ನೀನು ನನಗೆ ನೀರು ಕುಡಿಯಲು ಕೊಡಲಿಲ್ಲ. ಆಗ ಮನುಷ್ಯನು ಉತ್ತರ ನೀಡುವನು: ನಾನು ನಿನಗೆ ನೀರನ್ನು ಹೇಗೆ ನೀಡಬಲ್ಲೆ? ನೀನು ಸಕಲ ಲೋಕಗಳ ಪ್ರಭುವಾಗಿರುವೆ. ಅಲ್ಲಾಹನು ಹೇಳುವನು: ನನ್ನ ಒಬ್ಬ ದಾಸ ನಿನ್ನಿಂದ ನೀರನ್ನು ಬೇಡಿದನು. ನೀನು ಅವನಿಗೆ ಕುಡಿಯಲು ನೀರು ಕೊಡಲಿಲ್ಲ. ನೀನು ಅವನಿಗೆ ನೀರನ್ನು ಕೊಡುತ್ತಿದ್ದರೆ, ಅವನ ಸಮೀಪ ನನ್ನನ್ನು ಕಾಣುತ್ತಿದ್ದೆ."

(ಸಹೀಹ್ ಮುಸ್ಲಿಮ್ – ಕಿತಾಬುಲ್ ಬರ್ರ್, ವಸ್ಸಿಲ ವಲ್‌ಅದಬ್)

ಈ ಪರಿಶುದ್ಧ ಹದೀಸು ಎಲ್ಲ ಮನುಷ್ಯರೊಂದಿಗೆ ಹೃತ್ಪೂರ್ವಕ ಪ್ರೀತಿ, ಸಹಾನುಭೂತಿ ಮತ್ತು ಶುಭಾಕಾಂಕ್ಷೆಯ ಬಗ್ಗೆ ಪ್ರತಿಯೊಬ್ಬ ಮುಸ್ಲಿಮನಿಗೆ ಉಪದೇಶಿಸುತ್ತಿದೆ. ಈ ಹದೀಸಿನಲ್ಲಿ ಆವಶ್ಯಕತೆಯುಳ್ಳವನ ಆವಶ್ಯಕತೆ ಈಡೇರಿಸುವುದನ್ನು ತನ್ನ ಆವಶ್ಯಕತೆ ಈಡೇರಿಸಿದಂತೆ ಎಂದು ಅಲ್ಲಾಹನು ಹೇಳಿರುವನು. ಆವಶ್ಯಕತೆ ಇರುವ ಮನುಷ್ಯನ ಆವಶ್ಯಕತೆಗಳನ್ನು ಈಡೇರಿಸುವುದೇ ವಾಸ್ತವಿಕ ಮಾನವೀಯತೆ ಆಗಿದೆ.

ಮುಸ್ಲಿಮರು ತಮಗೆ ಅಲ್ಲಾಹನಿಂದ ದೊರೆತ ಸಾಧನ ಸಂಪತ್ತುಗಳನ್ನು ಬಳಸಿಕೊಂಡು ಮಾನವರ ಸೇವೆಯನ್ನು ಅವರೆಲ್ಲಿಯವರಾದರೂ ಮಾಡಿ, ರೋಗಿಗಳ, ಹಸಿವೆಯಿಂದ ಬಳಲುವವರ, ನೀರಿಗಾಗಿ ಹಂಬಲಿಸುವವರ ಕಷ್ಟಗಳನ್ನು ನಿವಾರಿಸಲು ಪ್ರಯತ್ನಿಸುವರಾದರೆ ಅವರು ಅಲ್ಲಾಹನಿಗೆ ಪ್ರಿಯರಾದವರಾಗುವರು ಮತ್ತು ಅವರು ಇಚ್ಛಿಸುವುದನ್ನೆಲ್ಲ ಅಲ್ಲಾಹನು ಅವರಿಗೆ ನೀಡುವನು.

ಇದೇ ತತ್ವದ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**ಇನ್ನ ಲಕ ಅಲ್ಲಾತಜೂಅ ಫೀಹಾ ವ ತಅ್‌ರಾ. ವ ಅನ್ನಕ ಲಾ ತಝ್ಮ ಉ ಫೀಹಾ ವಲಾ ತಝ್‌ಹಾ.**

"ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು. ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡ ನೀನು ತುತ್ತಾಗಲಾರೆ." (20:119, 120)

ಪವಿತ್ರ ಖುರ್‌ಆನ್ ಮೇಲಿನ ವಚನಗಳಲ್ಲಿ ಹೀಗೆ ಸೂಚಿಸುತ್ತದೆ: ನಿಜವಾದ ಸ್ವರ್ಗ ಸದೃಶ ಜೀವಿತದ ಚಿಹ್ನೆಗಳೇನೆಂದರೆ, ಓ ಮನುಷ್ಯ ನೀನು ಅಲ್ಲಿ ಹಸಿದಿರಲಾರೆ. ಆವಶ್ಯಕವಾದ ಉಡುಗೆ ತೊಡುಗೆಗಳು ನಿನಗೆ ಲಭ್ಯವಾಗದೆ ಇರಲಾರದು. ನೀನು ಚಳಿಯಿಂದ ನಡುಗಲಾರೆ, ನೀರಿಲ್ಲದೆ ದಾಹದಿಂದ ಬಳಲಲಾರೆ ಮತ್ತು ಬಿಸಿಲಿನ ಬೇಗೆಯಿಂದ ಕಷ್ಟಪಡಲಾರೆ.

ಇಸ್ಲಾಮ್ ಧರ್ಮ ಎಲ್ಲ ಮನುಷ್ಯರಿಗೆ ಮತ್ತು ವಿಶಿಷ್ಟವಾಗಿ ಮುಸ್ಲಿಮರಿಗೆ ಹೀಗೆ ಆಜ್ಞಾಪಿಸುತ್ತದೆ: ಅವರ ಸರಕಾರಗಳು ಮತ್ತು ಜನರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಕಡ್ಡಾಯವಾಗಿ ಮಾಡಬೇಕಾದುದೇನೆಂದರೆ, ಆಹಾರ, ಶುದ್ಧನೀರು, ಬಟ್ಟೆ ಮತ್ತು ವಾಸಿಸಲು ಮನೆಗಳ ವ್ಯವಸ್ಥೆಯನ್ನು ಏರ್ಪಡಿಸಬೇಕು.

ಮನುಷ್ಯರ ಈ ಆವಶ್ಯಕತೆಗಳನ್ನು ಈಡೇರಿಸಲು ಇಸ್ಲಾಮ್ ಝಕಾತ್ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ:

**ಇನ್ನಲ್ಲಾಹ ಖದ್ ಫರಝ ಅಲೈಹಿಮ್ ಸದಖತನ್**

**ತೂಖದು ಮಿನ್ ಅಗ್‌ನಿಯಾಯಿ ಹಿಮ್ ಫತುರದ್ದು**

**ಅಲಾ ಫುಖರಾಇಹಿಮ್.**

"ಅಲ್ಲಾಹನು ಝಕಾತನ್ನು ಕಡ್ಡಾಯಗೊಳಿಸಿದ್ದಾನೆ. ಅದನ್ನು ಶ್ರೀಮಂತರಿಂದ ತೆಗೆದುಕೊಂಡು ಬಡಜನರಿಗೆ ಹಂಚಿಕೊಡಲಾಗುವುದು."

(ಮಿಶ್ಕಾತ್, ಕಿತಾಬು ಝ್ಝಕಾತ್)

ಮಾನವೀಯತೆ ಮತ್ತು ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವುದರ ನಿಜವಾದ ಅರ್ಥವನ್ನು ಮೇಲೆ ಉಲ್ಲೇಖಿಸಿದ ರೀತಿಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಅನುಯಾಯಿಗಳಿಗೆ ಕಲಿಸಿದರು. ಆದರೆ ಅನಂತರದ ಕಾಲಘಟ್ಟಗಳಲ್ಲಿ ಮುಸ್ಲಿಮರು ಈ ತತ್ವಗಳನ್ನು ಸಂಪೂರ್ಣವಾಗಿ ಕಡೆಗಣಿಸಿದರು. ಅವರು ಇಸ್ಲಾಮ್ ಧರ್ಮವನ್ನು ಎಂತಹ ರೂಪದಲ್ಲಿ ಪ್ರಕಟಿಸಿದರೆಂದರೆ, ಅದರಲ್ಲಿ ಮಾನವರೊಂದಿಗೆ ಸಹಾನುಭೂತಿ ಮತ್ತು ಅವರಿಗೆ ಒಳಿತನ್ನು ಆಶಿಸುವ ಬಗ್ಗೆ ಯಾವ ಸ್ಥಾನವೂ ಇರುವುದಿಲ್ಲ. ಬಹುತೇಕ ಮುಸ್ಲಿಮ್ ಆಡಳಿತೆಗಾರರೂ ದೊರೆಗಳೂ ತಮ್ಮ ಸರಕಾರಗಳ ಮತ್ತು ಅಧಿಕಾರದ ಬಲಪಡಿಸುವಿಕೆ ಮತ್ತು ಬಾಳಿಕೆಗೋಸ್ಕರ ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ತಮ್ಮ ಪ್ರಜೆಗಳ ಹೃದಯಗಳಲ್ಲಿ ಭಯವನ್ನು ಉಂಟುಮಾಡುವುದು ಆವಶ್ಯಕವಾಗಿದೆ ಎಂದು ಭಾವಿಸಿದರು. ಈ ಅಧಿಕಾರಾರೂಢರಿಗೆ ಭಯಪಟ್ಟುಕೊಂಡು ಬಹಳ ಸಂಖ್ಯೆಯ ಮತಪಂಡಿತರು ಮತ್ತು ಕರ್ಮಶಾಸ್ತ್ರ ಪಂಡಿತರು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರ(ಸ) ನಡವಳಿಕೆಗಳನ್ನು ದೌರ್ಜನ್ಯಗಾರರ ಇಷ್ಟ ಪ್ರಕಾರ ವ್ಯಾಖ್ಯಾನಿಸಿ ಆ ರಾಜ್ಯಾಡಳಿತಗಾರರ ದೌರ್ಜನ್ಯಭರಿತ ಕೆಲಸಗಳನ್ನು ಬೆಂಬಲಿಸುತ್ತಿದ್ದರು. ಆದರೆ ವಾಸ್ತವಿಕವಾಗಿ ಆ ದೌರ್ಜನ್ಯಗಾರರ ವರ್ತನೆಗಳಿಗೆ ಇಸ್ಲಾಮಿನೊಂದಿಗೆ ದೂರದ ಸಂಬಂಧ ಕೂಡ ಇರಲಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಲ್ಲಾಹನು ಇಸ್ಲಾಮನ್ನು ಮಾನವರಿಗೋಸ್ಕರ ಅನುಗ್ರಹವನ್ನಾಗಿ ಮಾಡಿದ್ದನು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್(ಸ), ಪೈಗಂಬರರ ಶಿಷ್ಯರು, ಸಂತರು ಮತ್ತು ಸೂಫಿವರ್ಯರ ಮಾದರಿಯನ್ನು ಅನುಸರಿಸಿ, ಧರ್ಮವನ್ನು ಜನರಿಗೆ ಮೃದುವಾಗಿಯೂ ಪ್ರೀತಿಯಿಂದಲೂ ಬೋಧಿಸಲು ಆಜ್ಞಾಪಿಸಿದ್ದರು. ಅಲ್ಲಾಹನ ಹಕ್ಕುಗಳಿಗೆ ಸಂಬಂಧಿಸಿ ಮತ್ತು ಅಲ್ಲಾಹನ ಸೃಷ್ಟಿಗಳ ಹಕ್ಕುಗಳಿಗೆ ಸಂಬಂಧಿಸಿ ಇಸ್ಲಾಮಿನ ಆಧ್ಯಾತ್ಮಿಕ ಮತ್ತು ನೈತಿಕ ಉಪದೇಶಗಳು ಜನರ ಹೃದಯಗಳಲ್ಲಿ ಖಂಡಿತವಾಗಿಯೂ ಪ್ರಭಾವ ಬೀರುವುವು.

ಇಂದಿನ ಕಾಲಘಟ್ಟದಲ್ಲಿ ಅಲ್ಲಾಹನು ಇದೇ ಉದ್ದೇಶಕ್ಕೋಸ್ಕರ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು(ಅ) (1835 – 1908) ಮಸೀಹ್ ಮೌಊದ್ ಮತ್ತು ವಾಗ್ದತ್ತ ಮಹ್‌ದಿಯಾಗಿ ಕಳುಹಿಸಿದನು. ಅವರು ಹೀಗೆ ಹೇಳುತ್ತಾರೆ:

1. "ನನ್ನನ್ನು ದೇವನು ನೇಮಿಸಿದ್ದು ದೇವನ ಮತ್ತು ಅವನ ಸೃಷ್ಟಿಗಳ ಸಂಬಂಧದಲ್ಲಿ ಉಂಟಾಗಿರುವ ಮಾಲಿನ್ಯವನ್ನು ದೂರೀಕರಿಸಿ ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಪುನಃ ನಾನು ಸ್ಥಾಪಿಸಬೇಕೆಂದು ಮತ್ತು ಸತ್ಯವನ್ನು ಪ್ರಕಟಿಸಿ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಿ ಸೌಹಾರ್ದಕ್ಕೆ ಅಸ್ತಿಭಾರ ಹಾಕಬೇಕೆಂದು ಆಗಿದೆ."

(ಲೆಕ್ಚರ್ ಲಾಹೋರ್ – ಪುಟ 47)

2. "ದೇವನು ನನ್ನನ್ನು ಲೋಕಕ್ಕೆ ಕಳುಹಿಸಿದುದು ದಾರಿತಪ್ಪಿದ ಜನರನ್ನು ಸಹಿಷ್ಣುತೆ ಮತ್ತು ಮೃದುತ್ವದಿಂದ ಪರಿಶುದ್ಧ ಮಾರ್ಗದರ್ಶನದ ಕಡೆಗೆ ಸೆಳೆಯಲು ಮತ್ತು ನನಗೆ ನೀಡಲ್ಪಟ್ಟ ಪ್ರಕಾಶದ ಬೆಳಕಿನಲ್ಲಿ ಜನರನ್ನು ನೇರಮಾರ್ಗದಲ್ಲಿ ನಡೆಸಲಿಕ್ಕೆ ಆಗಿದೆ."

(ತಿರ್‌ಯಾಖುಲ್ ಖುಲೂಬ್ – ಪುಟ 13)

ಹಝ್ರತ್ ವಾಗ್ದತ್ತ ಮಸೀಹ್[ಅ] ಮೇಲೆ ಉಲ್ಲೇಖಿಸಿದ ಬರೆಹಗಳಿಂದ ಸ್ಪಷ್ಟವಾಗುವುದೇನೆಂದರೆ, ಅವರು ಇಂದಿನ ಕಾಲಘಟ್ಟದಲ್ಲಿ ಇಸ್ಲಾಮ್ ಧರ್ಮದ ಸಂದೇಶವನ್ನು ಸೌಹಾರ್ದತೆ, ಪ್ರೀತಿ, ನಿಷ್ಠೆ, ಸಹಿಷ್ಣುತೆ ಮತ್ತು ಮೃದುತ್ವದಿಂದ ಅನ್ಯರಿಗೆ ತಲಪಿಸಿದರು. ಇದೇ ರೀತಿಯನ್ನು ಅವರು ಸ್ಥಾಪಿಸಿದ ಅಹ್ಮದಿಯಾ ಸಂಘಟನೆ ಅನುಸರಿಸುತ್ತಿದೆ. ಇದರ ಫಲವಾಗಿ ಈಗ 206 ದೇಶಗಳಲ್ಲಿ ಕೋಟಿಗಟ್ಟಲೆ ಜನರು ಅಹ್ಮದಿಯಾ ಜಮಾಅತಿನ ಪ್ರಚಾರದ ಕಾರಣದಿಂದ ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸಿದ್ದಾರೆ.

ಹಝ್ರತ್ ವಾಗ್ದತ್ತ ಮಸೀಹರಿಗೆ[ಅ] ಮನುಷ್ಯನ ಬಗ್ಗೆ ಮತ್ತು ಮನುಷ್ಯತ್ವದ ಬಗ್ಗೆ ಇದ್ದ ಪ್ರೀತಿಯ ಭಾವನೆ ಅವರ ಬರಹಗಳಿಂದ ಸ್ಪಷ್ಟವಾಗುತ್ತದೆ. ಅದರ ಬಗ್ಗೆ ನಾಲ್ಕು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುತ್ತೇನೆ:

1. "ನಮ್ಮ ತತ್ವವೇನೆಂದರೆ: ಮಾನವರೆಲ್ಲರೊಂದಿಗೆ ಸಹಾನುಭೂತಿಯನ್ನು ತೋರಿಸಬೇಕು. ಒಬ್ಬನು ತನ್ನ ನೆರೆಹೊರೆಯ ಹಿಂದುವಿನ ಮನೆಗೆ ಬೆಂಕಿ ಹತ್ತಿದೆ ಎಂದು ಕಾಣುವಾಗ ಎದ್ದುನಿಂತು ಬೆಂಕಿ ನಂದಿಸಲು ಸಹಾಯಮಾಡುವುದಿಲ್ಲವಾದರೆ, ನಾನು ಸತ್ಯವಾಗಿ ಹೇಳುತ್ತೇನೆ– ಅವನು ನನ್ನ ಜಮಾಅತ್‌ಗೆ ಸೇರಿದವನಲ್ಲ. ಒಬ್ಬ ಕ್ರೈಸ್ತನನ್ನು ಯಾರೋ ಒಬ್ಬನು ಕೊಲ್ಲುವುದನ್ನು ನಮ್ಮ ಶಿಷ್ಯರಲ್ಲಿ ಒಬ್ಬನು ಕಂಡಾಗ, ಅವನನ್ನು ಕೊಲೆಗಾರನಿಂದ ರಕ್ಷಿಸಲು ಪ್ರಯತ್ನ ಮಾಡುವುದಿಲ್ಲವಾದರೆ ನಾನು ಸತ್ಯವಾಗಿ ಹೇಳುತ್ತೇನೆ – ಅವನು ನಮ್ಮೊಂದಿಗೆ ಸೇರಿದವನಲ್ಲ." (ಸಿರಾಜೆ ಮುನೀರ್ – ಪುಟ 28 – ರೂಹಾನಿ ಖಝಾಇನ್ ಸಂಪುಟ 12)

2. "ನಾನು ಎಲ್ಲ ಮುಸ್ಲಿಮರೊಂದಿಗೆ, ಹಿಂದುಗಳೊಂದಿಗೆ ಮತ್ತು ಆರ್ಯ ಸಮಾಜಿಗಳೊಂದಿಗೆ ಹೇಳಲು ಬಯಸುತ್ತೇನೆ – ಲೋಕದಲ್ಲಿ ಯಾರನ್ನೂ ನನ್ನ ಶತ್ರುಗಳೆಂದು ನಾನು ಪರಿಗಣಿಸುವುದಿಲ್ಲ. ತಾಯಿ ತನ್ನ ಮಕ್ಕಳನ್ನು ಪ್ರೀತಿಸುವಂತೆ ಅಥವಾ ಅದಕ್ಕೆ ಮಿಗಿಲಾಗಿ ನಾನು ಮಾನವರನ್ನೆಲ್ಲ ಪ್ರೀತಿಸುತ್ತೇನೆ. ಸತ್ಯವು ಕೊಲ್ಲಲ್ಪಡುವಂತಹ ಮಿಥ್ಯ ನಂಬಿಕೆಗಳ ಮಾತ್ರ ನಾನು ಶತ್ರುವಾಗಿದ್ದೇನೆ. ಮನುಷ್ಯರೊಂದಿಗೆ ಸಹಾನುಭೂತಿ ನನಗೆ ಕಡ್ಡಾಯವಾಗಿದೆ. ಸುಳ್ಳು, ಬಹುದೇವಾರಾಧನೆ, ದೌರ್ಜನ್ಯ, ಪ್ರತಿಯೊಂದು ಕೆಟ್ಟ ಕೆಲಸ, ಅನ್ಯಾಯ ಮತ್ತು ದುರ್ಗುಣಗಳ ಬಗ್ಗೆ ಜಿಗುಪ್ಸೆ ನನ್ನ ತತ್ವವಾಗಿದೆ."
(ಅರ್ಬಈನ್ ಕ್ರಮಾಂಕ 1 – ರೂಹಾನಿ ಖಝಾಇನ್–ಸಂಪುಟ 17 ಪುಟ 344)

3. "ಇನ್‌ಸಾನ್ ಎಂಬ ಪದ ಉನ್‌ಸಾನ್‌ನಿಂದ ಬಂದಿದೆ. (ಉನ್‌ಸಾನ್ ಎಂದರೆ ಎರಡು ಉನ್ಸ್‌ಗಳು) ಮನುಷ್ಯನಿಗೆ ಎರಡು ಉನ್ಸ್ (ಪ್ರೀತಿ) ಇವೆ. ಒಂದು ದೇವನೊಂದಿಗೆ, ಇನ್ನೊಂದು ಮಾನವರೊಂದಿಗೆ ಪ್ರೀತಿ. ಒಬ್ಬ ಮನುಷ್ಯನಲ್ಲಿ ಈ ಎರಡು ಗುಣಗಳಿದ್ದರೆ ಅವನು ಇನ್‌ಸಾನ್ ಆಗುತ್ತಾನೆ. ಇದನ್ನೇ ಮನುಷ್ಯನ ಮೆದುಳು ಎನ್ನಲಾಗುತ್ತಿದೆ. ಇಂತಹ ಜನರನ್ನೇ ಉಲುಲ್ ಅಲ್‌ಬಾಬ್ (ಬುದ್ಧಿಶಾಲಿಗಳು) ಎನ್ನಲಾಗುತ್ತಿದೆ. ಹೀಗೆ ಆಗದಿದ್ದರೆ ಪ್ರಯೋಜನವಿಲ್ಲ. ಸಾವಿರಾರು ವಾದಗಳನ್ನು ಮಾಡಿದರೂ ಅಲ್ಲಾಹನ ಸಮೀಪ, ಅವನ ಸಂದೇಶವಾಹಕರ ಸಮೀಪ, ಅವನ ದೂತರ ಸಮೀಪ ಅಂತಹವನ ಸ್ಥಾನ ಕೀಳು ಆಗಿದೆ." (ಮಲ್‌ಫೂಝಾತ್ – ಭಾಗ ಪುಟ 416)

4. "ವಾಗ್ದತ್ತ ಮಸೀಹರ ಕಾಲಘಟ್ಟದಲ್ಲಿ (ಅವರ ಇನ್ನೊಂದು ಹೆಸರು ಮಹ್‌ದಿ ಎಂದೂ ಆಗಿದೆ) ಎಲ್ಲ ಜನಾಂಗಗಳಿಗೆ ಇಸ್ಲಾಮಿನ ಅನುಗ್ರಹಗಳನ್ನು ಸಾಬೀತುಮಾಡಿ ತೋರಿಸಲಾಗುವುದು. ಇಸ್ಲಾಮ್ ಧರ್ಮ ಅನುಗ್ರಹಭರಿತ ಧರ್ಮವಾಗಿದೆ. ಹಿಂದೆ ಹೇಳಲ್ಪಟ್ಟ ಹಾಗೆ ಆ ಕಾಲಘಟ್ಟವು ಲೋಕದಲ್ಲಿ ಸೌಹಾರ್ದದ ಅನುಗ್ರಹವು ಹರಡುವ ಕಾಲಘಟ್ಟವಾಗಿದೆ." (ಖುತ್‌ಬ ಇಲ್‌ಹಾಮಿಯ್ಯ – ರೂಹಾನಿ ಖಝಾಇನ್ – ಸಂಪುಟ 16 ಪುಟ 24)

ಅಹ್ಮದಿಯಾ ಸಂಘಟನೆಯ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್[ರ] (1889–1965) ಮಾನವರೊಂದಿಗೆ ತನ್ನ ಪ್ರೀತಿಯನ್ನು ಸೂಚಿಸುತ್ತಾ ಹೀಗೆ ಒಂದು ಪದ್ಯದಲ್ಲಿ ಹೇಳುತ್ತಾರೆ:

**ಬತಾವೂಂ ತುಮ್ಹೇಂ ಕ್ಯಾ ಕೆ ಕ್ಯಾ ಚಾಹ್ತಾ ಹೂಂ**

**ಹೂಂ ಬಂದ ಮಗರ್ ಮ್ಯೆಂ ಖುದಾ ಚಾಹ್ತಾ ಹೂಂ**

**ಮುಝೇ ಬ್ಯೆರ್ ಹರ್‌ಗಿಝ್ ನಹೀಂ ಹ್ಯೆ ಕಿಸೀಸೆ**

**ಮ್ಯೆಂ ದುನ್‌ಯಾ ಮೇಂ ಸಬ್ ಕಾ ಭಲಾ ಚಾಹ್ತಾ ಹೂಂ.**

ನಾನೇನು ಬಯಸುತ್ತೇನೆಂದು ನಿಮಗೆ ಹೇಳಲೇನು?
ನಾನು ದಾಸನಾಗಿದ್ದೇನೆ, ಆದರೆ ನಾನು ದೇವನನ್ನು
ಬಯಸುತ್ತೇನೆ.
ನನಗೆ ಖಂಡಿತವಾಗಿಯೂ ಯಾರೊಂದಿಗೂ ವೈರತ್ವ ಇಲ್ಲ
ಲೋಕದಲ್ಲಿ ಎಲ್ಲ ಜನರಿಗೆ ಒಳಿತನ್ನು ನಾನು ಬಯಸುತ್ತೇನೆ.

ಅಹ್ಮದಿಯಾ ಸಂಘಟನೆಯ ತೃತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್[ರಹ್] (1909–1982) ಮಾನವರೊಂದಿಗೆ ತನ್ನ ಪ್ರೀತಿಯನ್ನು ಸೂಚಿಸುತ್ತಾ ಅಹ್ಮದಿಯಾ ಸಂಘಟನೆಗೆ ಈ ಧ್ಯೇಯ ವಾಕ್ಯ ನೀಡಿದರು:

LOVE FOR ALL, HATRED FOR NONE

ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ.

ಅಹ್ಮದಿಯಾ ಸಂಘಟನೆಯ ಚತುರ್ಥ ಖಲೀಫರಾಗಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್[ರಹ್] ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

**ಯೆ ಮುಹಬ್ಬತೋಂ ಕಾ ಲಶ್‌ಕರ್ ಜೋ ಕರೇಗಾ ಫತಹ್ ಖೈಬರ್**

**ಝರಾ ತೇರೇ ಬುಗ್‌ಝೊ ನಫ್‌ರತ್ ಕೆ ಹಿಸಾರ್‌ತಕ್ ತೋ ಪಹುಂಚೇ**

ಈ ಪ್ರೀತಿಯ ಸೈನ್ಯ ಶತ್ರುವನ್ನು ಜಯಿಸುವುದು.

ನಿನ್ನ ದ್ವೇಷ ಅಸೂಯೆಯ ಕೋಟೆಯ ತನಕ ತಲಪಲಿ

ಅಹ್ಮದಿಯಾ ಸಂಘಟನೆಯ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ನಸ್ಸರಹುಲ್ಲಾಹು ನಸ್‌ರನ್ ಅಝೀಝು – ಅಲ್ಲಾಹನು ಅವರಿಗೆ ಬಲಿಷ್ಠವಾದ ಸಹಾಯ ದಯಪಾಲಿಸಲಿ.)

ಜಮಾಅತ್‌ಗೆ ಉಪದೇಶಿಸುತ್ತಾ ಹೇಳಿದರು:

LOVE FOR HONESTY

AND HATRED FOR DISHONESTY

ಪ್ರಾಮಾಣಿಕತೆಯೊಂದಿಗೆ ಪ್ರೀತಿ

ಅಪ್ರಮಾಣಿಕತೆಯೊಂದಿಗೆ ದ್ವೇಷ

## ವಿನಂತಿ

ಕೊನೆಯದಾಗಿ ಅಹ್ಮದಿಯಾ ಜಮಾಅತಿಗೆ ಸೇರದ ಮುಸ್ಲಿಮರೊಂದಿಗೆ ವಿನಂತಿಸುವುದೇನೆಂದರೆ, ಇಸ್ಲಾಮ್ ಧರ್ಮ ತನ್ನ ಅನುಯಾಯಿಗಳೊಂದಿಗೆ ಅನ್ಯ ಧರ್ಮದ ಜನರೊಂದಿಗೆ ಪ್ರೀತಿ, ಸಹಾನುಭೂತಿ ಮತ್ತು ಪ್ರಾಮಾಣಿಕತೆಯಿಂದ ವರ್ತಿಸಲು ಉಪದೇಶಿಸುತ್ತದೆ. ಈ ಕಾಲಘಟ್ಟದಲ್ಲಿ ಈ ಭಾವನೆಗಳ ಪ್ರಕಟಣೆ ಅತ್ಯಂತ ಆವಶ್ಯಕವಾಗಿದೆ. ಈ ಕಾಲಘಟ್ಟದ ಆವಶ್ಯಕತೆ ಏನೆಂದರೆ, ಅನ್ಯ ಧರ್ಮೀಯರ ಹೃದಯಗಳಲ್ಲಿ ಇಸ್ಲಾಮ್ ಬಗ್ಗೆ ಹುಟ್ಟಿರುವ ತಪ್ಪು ಗ್ರಹಿಕೆಗಳನ್ನು ನಿಮ್ಮ ಉತ್ತಮ ಸ್ವಭಾವ ಗುಣಗಳ ಮೂಲಕ ನಿವಾರಿಸಬೇಕು. ಮುಸ್ಲಿಮರು ಹೀಗೆ ವರ್ತಿಸದಿದ್ದರೆ, ತಿಳಿದು ಅಥವಾ ತಿಳಿಯದೆ ಅನ್ಯರನ್ನು ಇಸ್ಲಾಮಿನ ಶಾಂತಿದಾಯಕ ಉಪದೇಶಗಳಿಂದ ದೂರಸರಿಸುವವರಾಗಿ ನೀವು ಪರಿಣಮಿಸಿ ಅಲ್ಲಾಹನ ಕೋಪಕ್ಕೆ ಗುರಿಯಾಗುವಿರಿ. ಅಲ್ಲಾಹನು ಹೀಗೆ ಮಾಡದಿರಲಿ.

ಮುಸ್ಲಿಮೇತರ ಸ್ನೇಹಿತರೊಂದಿಗೆ, ಎಂದರೆ ಅನ್ಯಧರ್ಮಗಳಿಗೆ ಸೇರಿದವರೊಂದಿಗೆ ನಾನು ವಿನಂತಿಸುವುದೇನೆಂದರೆ, ಪವಿತ್ರ ಖುರ್‌ಆನ್ ಮತ್ತು ತನ್ನ ನಡೆವಳಿಕೆ ಮೂಲಕ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ತೋರಿಸಿಕೊಟ್ಟ ಇಸ್ಲಾಮ್ ಧರ್ಮ ಮಾತ್ರ ನೈಜ ಇಸ್ಲಾಮ್ ಆಗಿದೆ. ಅದು ಮಾತ್ರ ಅನುಸರಣೆಗೆ ಯೋಗ್ಯವಾಗಿದೆ. ಯಾರಾದರೂ ಝೈದ್, ಬಕ್ರ್, ಉಮರ್ ಎಂಬ ಹೆಸರು ಇರಿಸಿಕೊಂಡು ಹಝ್ರತ್ ಪೈಗಂಬರರ ನಡೆವಳಿಕೆ ಪ್ರಕಾರ ನಡೆಯದಿದ್ದರೆ ಅವನ ವರ್ತನೆ ನೈಜ ಇಸ್ಲಾಮ್ ಅಲ್ಲ. ಅದು ಬೇರೆ ಏನೋ ಆಗಿದೆ. ನೀವು ಅವನನ್ನು ಇಸ್ಲಾಮಿನ ಪ್ರತಿನಿಧಿ ಎಂದು ಗಣಿಸಬಾರದು.

ಇಂದಿನ ಕಾಲಘಟ್ಟದಲ್ಲಿ ಇಸ್ಲಾಮನ್ನು ಅದರ ನೈಜ ರೂಪದಲ್ಲಿ ಅಹ್ಮದಿಯಾ ಸಂಘಟನೆಯ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಲೋಕದ ಮುಂದೆ ಇರಿಸಿದರು. ನೀವು ಅದನ್ನು ಅಧ್ಯಯನ ಮಾಡಿರಿ. ನಮ್ಮ ನಂಬಿಕೆ ಪ್ರಕಾರ ಈ ಧರ್ಮ ತತ್ವಗಳ ಪ್ರಕಾರ ನಡೆದು ಸುಲಭವಾಗಿ ನಮ್ಮ ಸೃಷ್ಟಿಕರ್ತನ ಪ್ರೀತಿಯನ್ನು ಗಳಿಸಬಹುದಾಗಿದೆ ಮತ್ತು ನಮ್ಮ ಜೀವಿತದ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಬಹುದಾಗಿದೆ. ಇಸ್ಲಾಮ್ ಧರ್ಮದ ವಾಸ್ತವಿಕತೆಯನ್ನು ವಿವರಿಸುತ್ತಾ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೇಳಿದರು:

"ಇಸ್ಲಾಮ್ ಬಹಳ ಉನ್ನತ ತತ್ವಗಳನ್ನು ಹೊಂದಿದೆ. ಒಬ್ಬನು ಮುಸ್ಲಿಮನೆಂದು ಕರೆಯಲ್ಪಡಬೇಕಾದರೆ ಅವನು ತನ್ನನ್ನು, ತನ್ನ ಎಲ್ಲ ಶಕ್ತಿಗಳೊಂದಿಗೆ, ತನ್ನ ಎಲ್ಲ ಆಶಾಭಿಲಾಷೆಗಳೊಂದಿಗೆ ಮತ್ತು ಎಲ್ಲ ನಿರ್ಧಾರಗಳೊಂದಿಗೆ ಅಲ್ಲಾಹನಿಗೆ ವಹಿಸಿಕೊಡಬೇಕು. ಅವನು ತನ್ನ ಎಲ್ಲ ಅಹಂಭಾವಗಳನ್ನೂ ಅದರೊಂದಿಗೆ ಸೇರಿಕೊಂಡವುಗಳನ್ನೂ ಕೈಬಿಟ್ಟು ಅಲ್ಲಾಹನ ಮಾರ್ಗದಲ್ಲಿ ತನ್ನನ್ನು ನಡೆಸುವವನಾಗಬೇಕು. ಅವನ ನಿರ್ಲಕ್ಷ್ಯತೆಯ ಜೀವಿತದಲ್ಲಿ ಒಂದು ಕ್ರಾಂತಿ ಉಂಟಾಗಬೇಕು. ಅವನ ದುಷ್ಪ್ರೇರಕ ಆತ್ಮವು ಅದರ ಎಲ್ಲ ಆಶಾಭಿಲಾಷೆಗಳೊಂದಿಗೆ ನಾಶವಾಗಬೇಕು. ಅನಂತರ ಅಲ್ಲಾಹನ ಮಾರ್ಗದಲ್ಲಿ ಒಳಿತನ್ನು ಮಾಡುವ ಜೀವಿತವನ್ನು ಹೊಸದಾಗಿ ಗಳಿಸಬೇಕು. ಅದು ಎಂತಹ ಪರಿಶುದ್ಧ ಜೀವಿತವಾಗಬೇಕೆಂದರೆ, ಅದರಲ್ಲಿ ಸೃಷ್ಟಿಕರ್ತನಿಗೆ ವಿಧೇಯತೆ ಮತ್ತು ಸೃಷ್ಟಿಗಳ ಬಗ್ಗೆ ಸಹಾನುಭೂತಿ ಹೊರತು ಬೇರೇನೂ ಇರಲಾರದು."

(ಆಯಿನ ಕಮಾಲತೆ ಇಸ್ಲಾಮ್– ರೂಹಾನಿ ಖಝಾಇನ್ – ಸಂಪುಟ 5 ಪುಟ 60–61)

ನಾನು ಪ್ರಾರ್ಥಿಸುತ್ತೇನೆ – ಇಸ್ಲಾಮ್ ಧರ್ಮದ ವಾಸ್ತವಿಕ ತತ್ವಗಳನ್ನು ಅರಿತುಕೊಂಡು ಸೃಷ್ಟಿಕರ್ತನಿಗೆ ವಿಧೇಯತೆ ಮತ್ತು ಸೃಷ್ಟಿಗಳಿಗೆ ಸಹಾನುಭೂತಿ ತೋರಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ. ಆಮೀನ್.

# ಇನ್‌ಸಾನಿಯತ್ ಝಿಂದಾಬಾದ್

# ಮಾನವೀಯತೆ ಚಿರಕಾಲ ಬಾಳಲಿ

# ಇಸ್ಲಾಮ್ ಧರ್ಮದಲ್ಲಿ ಮಹಿಳೆಯ ಸ್ಥಾನ

**1987ರ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ) ಲಂಡನ್‌ನಲ್ಲಿ ಮಿರ್ಝಾ ತಾಹಿರ್ ಅಹ್ಮದ್ (ಅಹ್ಮದಿಯಾ ಚತುರ್ಥ ಖಲೀಫ) ಮಹಿಳೆಯರನ್ನು ಸಂಬೋಧಿಸಿ ಮಾಡಿದ ಭಾಷಣ.**



ಪ್ರಾಸ್ತಾವಿಕ ಪ್ರಾರ್ಥನೆಗಳ ನಂತರ ಹಝ್‌ರತ್ ಖಲೀಫತುಲ್ ಮಸೀಹ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳನ್ನು ಓದಿದರು:

**ಅರ್ರಿಜಾಲು ಖವ್ವಾಮೂನ ಅಲನ್ನಿಸಾಇ ಬಿಮಾ ಫಝ್ಝಲಲ್ಲಾಹು ಬಅ್‌ಝಹುಮ್ ಅಲಾ ಬಅ್‌ಝಿನ್ ವ ಬಿಮಾ ಅನ್‌ಫಖೂ ಮಿನ್ ಅಮ್‌ವಾಲಿಹಿಮ್ ಫಸ್ಸಾಲಿಹಾತು ಖಾನಿತಾತುನ್ ಹಾಫಿಝಾತುನ್ ಲಿಲ್‌ಗೈಬಿ ಬಿಮಾ ಹಫಿಝುಲ್ಲಾಹು ವಲ್ಲಾತೀ ತಖಾಫೂನ ನುಶೂಝಹುನ್ನ ಫಇಝೂಹುನ್ನ ವಹ್‌ಜುರೂಹುನ್ನ ಫೀ ಮಝಾಜಿಇ ವಝ್‌ರಿಬೂಹುನ್ನ ಫ ಇನ್ ಅತಅ್‌ನಕುಮ್ ಫಲಾ ತಬ್‌ಗೂ ಅಲೈಹಿನ್ನ ಸಬೀಲಾ ಇನ್ನಲ್ಲಾಹ ಕಾನ ಅಲಿಯ್ಯನ್ ಕಬೀರಾ.**

"ಪುರುಷರು ಸ್ತ್ರೀಯರ ರಕ್ಷಾಧಿಕಾರಿಗಳಾಗಿದ್ದಾರೆ ಅಲ್ಲಾಹನು ಅವರ ಪೈಕಿ ಕೆಲವರಿಗೆ ಬೇರೆ ಕೆಲವರಿಗಿಂತ (ಪುರುಷರಿಗೆ ಸ್ತ್ರೀಯರಿಗಿಂತ) ಕೆಲವು ಮೇಲ್ಮೆಯನ್ನು ಕೊಟ್ಟಿರುವುದರಿಂದಲೂ ಅವರು ತಮ್ಮ ಧನವನ್ನು ಖರ್ಚು ಮಾಡುವುದರಿಂದಲೂ. ಆದ್ದರಿಂದ ವಿಧೇಯತೆ ತೋರಿಸುವವರೂ ಅಲ್ಲಾಹನು ತಾಕೀತು ಮಾಡಿದ ರೀತಿಯಲ್ಲಿ ರಹಸ್ಯಗಳನ್ನು ಕಾಯ್ದುಕೊಳ್ಳುವವರೂ ಸಚ್ಚರಿತ ಸ್ತ್ರೀಯರಾಗಿದ್ದಾರೆ. ಸ್ತ್ರೀಯರು ಅವಿಧೇಯತೆ ತೋರಿಸುವರೆಂದು ನಿಮಗೆ ಸಂದೇಹವಿದ್ದರೆ (ಮೊದಲಿಗೆ) ಅವರನ್ನು ಉಪದೇಶಿಸಿರಿ. (ಅದು ಫಲಕಾರಿಯಾಗದಿದ್ದರೆ) ಅವರಿಂದ ಬೇರ್ಪಟ್ಟು ಶಯನ ಮಾಡಿರಿ. (ಆ ಬಳಿಕವೂ ಅನುಸರಿಸದಿದ್ದರೆ) ಅವರನ್ನು ದಂಡಿಸಿರಿ. ಆ ಮೇಲೆ ಅವರು ನಿಮಗೆ ವಿಧೇಯತೆ ತೋರಿಸಿದರೆ ಅವರ ಮೇಲೆ ಬೇರೆ ಕ್ರಮವನ್ನೇನೂ ಕೈಗೊಳ್ಳಬೇಡಿರಿ. ನಿಸ್ಸಂದೇಹವಾಗಿಯೂ ಅಲ್ಲಾಹನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ." (4:35)

ಕಳೆದ ವರ್ಷ ನಾನು ಮಹಿಳೆಯರನ್ನು ಸಂಬೋಧಿಸಿ "ಇಸ್ಲಾಮ್ ಮತ್ತು ಮಹಿಳೆ" ಎಂಬ ವಿಷಯದಲ್ಲಿ ಮಾತನಾಡಿದ್ದೆನು. ಈ ವಿಷಯದ ಬಗ್ಗೆ ಅನೇಕ ವಿಚಾರಗಳನ್ನು ವಿವರಿಸಲಿಕ್ಕಿದ್ದರೂ ಸಮಯದ ಅಭಾವದಿಂದ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಮುಂದಿನ ವರ್ಷ ನಾನು ಈ ವಿಷಯವನ್ನು (ಇನ್‌ಶಾಅ ಅಲ್ಲಾಹ್ – ಅಲ್ಲಾಹನು ಇಚ್ಛಿಸಿದರೆ) ಮುಂದುವರಿಸುವೆನೆಂದು ವಾಗ್ದಾನ ಮಾಡಿದ್ದೆನು. ನಾನು ಈ ದಿನ ಆಯ್ಕೆ ಮಾಡಿದ ಪವಿತ್ರ ಖುರ್‌ಆನ್ ವಚನದಲ್ಲಿ ಸೂಚಿಸಲಾದ ಎರಡು ವಿಚಾರಗಳು ಹೇಗಿವೆ ಎಂದರೆ ಅವುಗಳ ಬಗ್ಗೆ ಪಾಶ್ಚಿಮಾತ್ಯರು ತೀವ್ರವಾಗಿ ಆಕ್ಷೇಪಿಸುತ್ತಾ ಇದ್ದಾರೆ. ಮಹಿಳೆಯರಿಗೆ ಸಂಬಂಧಿಸಿ ಇಸ್ಲಾಮಿನ ಉಪದೇಶಗಳನ್ನು ಲೋಕದ ಮುಂದೆ ಇರಿಸಿದಾಗ ಬಹುತೇಕ ಸಂದರ್ಭಗಳಲ್ಲಿ ಪವಿತ್ರ ಖುರ್‌ಆನಿನ ಈ ವಚನದಲ್ಲಿ ಸೂಚಿಸಲಾದ ಎರಡು ವಿಚಾರಗಳನ್ನು ಎತ್ತಿ ಹಿಡಿದು ಆಕ್ಷೇಪಿಸಲಾಗುತ್ತಿದೆ. ಈ ಎರಡು ವಿಚಾರಗಳನ್ನು ಲೋಕದ ಮುಂದಿರಿಸಿ ಇಸ್ಲಾಮ್ ಧರ್ಮವು ಮಹಿಳೆಯರಿಗೆ ಅಂಗೀಕಾರಾರ್ಹವಲ್ಲವೆಂದು ವಾದಿಸಲಾಗುತ್ತಿದೆ. ಏಕೆಂದರೆ ಅವರ ವಾದದ ಪ್ರಕಾರ ಇಸ್ಲಾಮ್ ಮಹಿಳೆಯರ ಮೇಲೆ ದೌರ್ಜನ್ಯ ಮಾಡುವುದನ್ನು ಬೆಂಬಲಿಸುತ್ತದೆ ಮತ್ತು ದೌರ್ಜನ್ಯ ನಡೆಸುವ ಬಗ್ಗೆ ಸ್ವತಃ ಉಪದೇಶಿಸಿದೆ. ಮಹಿಳೆಯರಿಗೆ ಸಂಬಂಧಿಸಿ ಕೆಲವು ವಿಷಯಗಳನ್ನು ಕಳೆದ ವರ್ಷ ನಾನು ವಿವರಿಸಿದ್ದೆನು. ಉಳಿದ ವಿಷಯಗಳನ್ನು ಈಗ ನಿಮ್ಮ ಮುಂದೆ ಇರಿಸುತ್ತೇನೆ.

ಇಸ್ಲಾಮ್ ವಿರುದ್ಧ ಮಾಡುವ ಮೊದಲ ಆಕ್ಷೇಪವೇನೆಂದರೆ, ಪವಿತ್ರ ಖುರ್‌ಆನ್‌ನಲ್ಲಿ "ಅರ್ರಿಜಾಲು ಖವ್ವಾಮೂನ ಅಲನ್ನಿಸಾಇ" ಪುರುಷರನ್ನು ಸ್ತ್ರೀಯರ ಮೇಲೆ ಖವ್ವಾಮ್ ಮಾಡಲಾಗಿದೆ. ಖವ್ವಾಮ್ ಮಾಡಲಾಗಿದೆ ಎಂದರೆ ಅಧಿಕಾರ ಹೊಂದಿದವರನ್ನಾಗಿ ಮಾಡಲಾಗಿದೆ ಎಂದು ಕೆಲವರು ಅರ್ಥ ಹೇಳುತ್ತಾರೆ. ಅಲ್ಲಾಹನು ಸ್ತ್ರೀಯರ ಮೇಲೆ ಪುರುಷರಿಗೆ ಎಲ್ಲ ವಿಧ ಶ್ರೇಷ್ಠತೆ ನೀಡಿದ್ದಾನೆಂದು ಹೇಳುತ್ತಾರೆ. ಪಾಶ್ಚಾತ್ಯರು ಹೀಗೆ ಆಕ್ಷೇಪಿಸುತ್ತಾರೆ: ಅಲ್ಲಾಹನು ಪುರುಷರನ್ನು ಎಲ್ಲ ರೀತಿಯಲ್ಲೂ ಶ್ರೇಷ್ಠವಾಗಿ ಸೃಷ್ಟಿಸಿದ್ದಾನೆಂದು ಖುರ್‌ಆನ್‌ನಿಂದ ತಿಳಿಯುತ್ತದೆ. ಆದುದರಿಂದ ಸ್ತ್ರೀಯ ಮೇಲೆ ಅಧಿಕಾರ ಜಾರಿಗೊಳಿಸುವ ಹಕ್ಕನ್ನು ಪುರುಷನು ಹೊಂದಿದ್ದಾನೆ. ಆದರೆ ವಾಸ್ತವಿಕವಾಗಿ ಈ ಎರಡು ಅಭಿಪ್ರಾಯಗಳೂ ತಪ್ಪಾಗಿವೆ.

**ಖವ್ವಾಮೂನ್** ಎಂಬ ಶಬ್ದದ ಅರ್ಥವೇನೆಂದರೆ, ಸ್ಥಿತಿಗತಿಗಳನ್ನು ಸುಧಾರಣೆ ಮಾಡುವವ, ವಕ್ರತೆಗಳನ್ನು ಸರಿಪಡಿಸಿ ನೇರಗೊಳಿಸುವವ, ಸಮಾಜದ ವಕ್ರತೆಗಳನ್ನು ತಿದ್ದುವ ಜವಾಬ್ದಾರಿ ವಹಿಸುವವ.

ಪುರುಷರನ್ನು ಖವ್ವಾಮೂನ್ ಎಂದು ಹೇಳಿದುದರ ಅರ್ಥ, ಮಹಿಳೆಯರನ್ನು ಸುಧಾರಣೆ ಮಾಡುವ ಪ್ರಥಮ ಜವಾಬ್ದಾರಿ ಪುರುಷರ ಮೇಲಿದೆ ಎಂದಾಗಿದೆ. ಹೆಂಗಸರು ಬಿಗಡಾಯಿಸಿ ಅವರಲ್ಲಿ ವಕ್ರ ನಡತೆ ಪ್ರಾರಂಭವಾದರೆ, ಅವರ ಕುಟುಂಬ ಜೀವಿತವನ್ನು ನಾಶಗೊಳಿಸುವಂತಹ ಸ್ವತಂತ್ರ ನಡತೆ ಅವರಲ್ಲಿ ಕಂಡು ಬಂದರೆ ಸ್ತ್ರೀಯರ ಮೇಲೆ ದೋಷಾರೋಪ ಮಾಡುವ ಮೊದಲು ಪುರುಷರು ಸ್ವತಃ ಆತ್ಮಾವಲೋಕನ

ನಡೆಸಬೇಕು. ಏಕೆಂದರೆ, ಅಲ್ಲಾಹನು ಅವರನ್ನು ಸ್ತ್ರೀಯರ ಮೇಲ್ವಿಚಾರಕರನ್ನಾಗಿ ಮಾಡಿರುವನು. ಪುರುಷರು ತಮ್ಮ ಕೆಲವು ಜವಾಬ್ದಾರಿಗಳನ್ನು ಈಡೇರಿಸದ ಕಾರಣದಿಂದಲೇ ಮಹಿಳೆಯರಲ್ಲಿ ಇಂತಹ ಸ್ಥಿತಿ ಉಂಟಾಗಿದೆ.

ಅಲ್ಲಾಹನು ಈ ವಚನದಲ್ಲಿ ಹೇಳಿರುವ ಇನ್ನೊಂದು ವಿಷಯವೇನೆಂದರೆ: ಸೃಷ್ಟಿಸಲಾದ ಜೀವಿಗಳಲ್ಲಿ ಅಲ್ಲಾಹನು ಕೆಲವು ವೈಶಿಷ್ಟ್ಯಗಳನ್ನು ಇರಿಸಿದ್ದಾನೆ. ಅವು ಬೇರೆ ಸೃಷ್ಟಿಗಳಲ್ಲಿ ಕಂಡು ಬರುವುದಿಲ್ಲ. ಕೆಲವರಿಗೆ ಬೇರೆ ಕೆಲವರಿಗಿಂತ ಮೇಲ್ಮೆ ಇದೆ. ಪುರುಷನನ್ನು ಸ್ತ್ರೀಯರ ಮೇಲೆ "ಖವ್ವಾಮ್" ಆಗಿ ಮಾಡಿದುದು ಅವನ ಒಂದು ಶ್ರೇಷ್ಠತೆಯ ಕಾರಣದಿಂದಾಗಿದೆ. ಈ ದೃಷ್ಟಿಯಿಂದ ನೋಡಿದರೆ ಖವ್ವಾಮ್ ಪದದ ಅರ್ಥ ಶಕ್ತಿಶಾಲಿ ಎಂದಾಗಿದೆ. ವಾಸ್ತವಿಕತೆಯು ಸಹ ಹೀಗೆಯೇ ಆಗಿದೆ. ಮಹಿಳೆಯರನ್ನು ಕೋಮಲ ಪ್ರಕೃತಿ ಹೊಂದಿದವರೆಂದು ಗಣಿಸಲಾಗಿದೆ. ಪಾಶ್ಚಿಮಾತ್ಯರು ಸಹ ಹೀಗೆಯೇ ಹೇಳುತ್ತಾರೆ. ಮಹಿಳೆಯಲ್ಲಿ ಒಂದು ರೀತಿಯ ಮೃದುತ್ವವಿರುತ್ತದೆ. ಪುರುಷನಿಗೆ ಸ್ತ್ರೀಗಿಂತ ಹೆಚ್ಚು ದೇಹಶಕ್ತಿ ನೀಡಲಾಗಿದೆ. ಇದು ವಾಸ್ತವಿಕ ವಿಷಯವಲ್ಲದೆ ಇರುತ್ತಿದ್ದರೆ ಮಹಿಳೆ ಆಟಗಾರ್ತಿಯರ ಮತ್ತು ಪುರುಷ ಆಟಗಾರರ ಸ್ಪರ್ಧೆ ಬೇರೆ ಬೇರೆ ಆಗುತ್ತಿರಲಿಲ್ಲ. ಪುರುಷರು ಮತ್ತು ಮಹಿಳೆಯರು ಸಮಾನರಾಗಿದ್ದರೆ ಪುರುಷರು ಮತ್ತು ಮಹಿಳೆಯರು ಒಟ್ಟಿಗೆ ಓಡುವ ನ್ಯಾಯಬದ್ಧ ಸ್ಪರ್ಧೆ ನಡೆಸಬೇಕು. ಪುರುಷರ ಮುಷ್ಟಿಯುದ್ಧ ಸ್ತ್ರೀಪಟುಗಳೊಂದಿಗೆ ಏರ್ಪಡಿಸಬೇಕು. ಪುರುಷರ ಹಾಕಿ ಟೀಮ್ ಮಹಿಳೆಯರ ಹಾಕಿ ಟೀಮ್‌ನೊಂದಿಗೆ ಸ್ಪರ್ಧಿಸಬೇಕು. ಪುರುಷರ ಕ್ರಿಕೆಟ್ ಟೀಮ್ ಮಹಿಳೆಯರ ಕ್ರಿಕೆಟ್ ಟೀಮ್‌ನೊಂದಿಗೆ ಆಡಬೇಕು. ಇದೇ ರೀತಿ ಪುರುಷರ ಲಾಂಗ್‌ಜಂಪ್, ಜವೆಲಿನ್‌ತ್ರೋ ಮತ್ತಿತರ ಆಟಗಳು ಸ್ತ್ರೀ ಸ್ಪರ್ಧಿಗಳ ವಿರುದ್ಧವೇರ್ಪಡಿಸಬೇಕು. ಪುರುಷ ಮತ್ತು ಸ್ತ್ರೀ ಸಮಾನತೆಯ ಆಧುನಿಕ ವಿಚಾರ ಇದನ್ನು ಆವಶ್ಯಪಡುವುದೇ? ಇಲ್ಲವಾದರೆ ಅವರು ಒಪ್ಪಿಕೊಳ್ಳಬೇಕು – ಪುರುಷರಿಗೆ ಮಹಿಳೆಯರ ಮೇಲೆ ಸೃಷ್ಟಿಯಲ್ಲಿ ಶ್ರೇಷ್ಠತೆ ಇದೆ ಎಂದು. ಯಾರಾದರೂ ಪವಿತ್ರ ಖುರ್‌ಆನನ್ನು ಅಲ್ಲಗಳೆಯಲು ಬಯಸುವರಾದರೆ ಕೇವಲ ಮಾತಿನಲ್ಲಿ ಅಲ್ಲಗಳೆದರೆ ಸಾಕಾಗಲಾರದು. ಅವರು ಕೃತಿ ಮೂಲಕ ಅದನ್ನು ಅಲ್ಲಗಳೆಯಬೇಕು.

ಪುರುಷನಿಗೆ ಮಹಿಳೆಯರ ಮೇಲ್ವಿಚಾರಣೆ ನಡೆಸುವ ಹೊಣೆಗಾರಿಕೆ ಹೊರಿಸಲು ಇನ್ನೊಂದು ಕಾರಣವೇನೆಂದರೆ, ಪುರುಷನು ಮನೆಯ ಆವಶ್ಯಕತೆಗಳನ್ನು ಈಡೇರಿಸಿಕೊಡಬೇಕಾದುದು ಅವನ ಕರ್ತವ್ಯವಾಗಿದೆ. ಹಣವನ್ನು ಸಂಪಾದಿಸುವವನಿಗೆ, ಕುಟುಂಬದ ಪೋಷಣೆ ಮಾಡುವವನಿಗೆ ಒಂದು ಶ್ರೇಷ್ಠ ಸ್ಥಾನ ಇದೆ ಎಂಬುದು ಸ್ಪಷ್ಟವಾದ ವಿಷಯವಾಗಿದೆ. ಪುರುಷ ಮತ್ತು ಮಹಿಳೆಯ ವಿಷಯ ಬಿಡಿರಿ. ಅನ್ಯ ದೇಶದಿಂದ ನೆರವು ಪಡೆಯುವ ದೇಶ ತನಗೆ ನೆರವು ನೀಡುವ ದೇಶದ ಮುಂದೆ ತಲೆತಗ್ಗಿಸಿ ವರ್ತಿಸುತ್ತದೆ. ನೆರವು ನೀಡುವ ದೇಶಕ್ಕೆ ಶ್ರೇಷ್ಠತೆ ಲಭಿಸುತ್ತದೆ.

ಇಂದಿನ ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಪುರುಷ ಮತ್ತು ಮಹಿಳೆ ಇಬ್ಬರೂ ಸಂಪಾದನೆ ಮಾಡಿ ಮನೆಖರ್ಚನ್ನು ನಿಭಾಯಿಸುತ್ತಾರೆ. ಯಾರು ಹೆಚ್ಚು ಸಂಪಾದನೆ ಮಾಡುತ್ತಾನೋ ಕಡಿಮೆ ಸಂಪಾದನೆ ಮಾಡುವವರು ಅವನನ್ನು ಅವಲಂಬಿಸಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ಇಸ್ಲಾಮೀ ಉಪದೇಶಗಳ ಅರ್ಥ ತಿಳಿಯುತ್ತದೆ.

ಪಶ್ಚಿಮದ ದೇಶಗಳಲ್ಲಿ ಮಹಿಳೆಯರ ಮೇಲೆ ಸಾಧಾರಣವಾಗಿ ನಡೆಸಲಾಗುವ ಒಂದು ದೌರ್ಜನ್ಯವೇನೆಂದರೆ, ಪತಿಪತ್ನಿಯರಿಬ್ಬರು ಸಂಪಾದನೆ ಮಾಡುತ್ತಿದ್ದರೂ ಮನೆಯ ಜವಾಬ್ದಾರಿ ಮಹಿಳೆಯ ಮೇಲಿರುತ್ತದೆ. ಅವಳು ಮಕ್ಕಳ ಪೋಷಣೆ ಮಾಡಬೇಕಾಗುತ್ತದೆ. ಅವಳು ಸಂಪಾದನೆ ಮಾಡಲು ಕಷ್ಟಪಡುವುದರೊಂದಿಗೆ ಮನೆಗೆಲಸ ಮಾಡುವ ಇನ್ನೊಂದು ಹೆಚ್ಚಿನ ಭಾರ ಅವಳ ಮೇಲೆ ಹೊರಿಸಲಾಗುತ್ತಿದೆ.

ಇಸ್ಲಾಮಿನ ಆರ್ಥಿಕ ವ್ಯವಸ್ಥೆ ಹೇಗಿದೆ ಎಂದರೆ, ಮಹಿಳೆ ಕೆಲಸಮಾಡಿ ಸಂಪಾದಿಸಲು ಬಯಸುವಳಾದರೆ ಆಕೆಗೆ ಹಾಗೆ ಮಾಡಲು ಅನುಮತಿ ಇದೆ. ಆದರೆ ಪತ್ನಿ ಸಂಪಾದಿಸಿದ ಹಣದ ಕಡೆಗೆ ಪತಿ ಲಾಲಸೆಯಿಂದ ನೋಡಬಾರದು. ಅವಳ ಸಂಪಾದನೆಯಲ್ಲಿ ಪಾಲನ್ನು ಪಡೆಯಲು ಪ್ರಯತ್ನಿಸಬಾರದು. ಪತ್ನಿ ಸ್ವಂತ ಇಷ್ಟದಿಂದ ಬೇಕಾದರೆ ಪತಿಗೆ ಕೊಡಬಹುದು. ಆದರೆ ಆಕೆಯ ಸಂಪಾದನೆ ಆಕೆಯ ಸ್ವಂತ ಸ್ವತ್ತಾಗಿದೆ. ಅವಳು ಸಂಪಾದಿಸಿದ ಹಣವನ್ನು ತನ್ನ ತಂದೆ ತಾಯಿಗೆ ಅಥವಾ ಸಹೋದರ ಸಹೋದರಿಯರಿಗೆ ಕೊಡಬಹುದು ಅಥವಾ ದಾನಧರ್ಮವಾಗಿ ನೀಡಬಹುದು. ಅದರ ಬಗ್ಗೆ ಪತಿ ಆಕ್ಷೇಪ ಮಾಡಲು ಅಧಿಕಾರವಿಲ್ಲ. ಪತಿ ಪತ್ನಿಯ ಖರ್ಚಿನ ಜವಾಬ್ದಾರಿಯನ್ನೂ ಮಕ್ಕಳ ಖರ್ಚಿನ ಜವಾಬ್ದಾರಿಯನ್ನೂ ಪತ್ನಿ ಸಂಪಾದನೆ ಮಾಡುವವಳಾಗಿದ್ದರೂ ವಹಿಸಬೇಕು.

ಮೇಲಿನ ಕಾರಣದಿಂದ ಪುರುಷನಿಗೆ ಶ್ರೇಷ್ಠಸ್ಥಾನ ನೀಡಲಾಗಿದೆ. ಶ್ರೇಷ್ಠತೆಯೊಂದಿಗೆ ಹೊಣೆಗಾರಿಕೆಗಳನ್ನೂ ಬಹಳ ಹೆಚ್ಚು ಹೊರಿಸಲಾಗಿದೆ. ಮಹಿಳೆಯರಿಗೆ ಇಂತಹ ಶ್ರೇಷ್ಠತೆ ಬೇಕಾಗಿದ್ದರೆ ಅವರು ಅದನ್ನು ನಿಸ್ಸಂಶಯವಾಗಿಯೂ ಪಡೆದುಕೊಳ್ಳಬಹುದು. ಯಾವ ಪುರುಷನೂ ಆಕ್ಷೇಪಿಸಲಾರನು. ನೀವು ಮನೆ ನಡೆಸುವ ಜವಾಬ್ದಾರಿ ವಹಿಸಿರಿ, ನಮ್ಮನ್ನು ಸ್ವತಂತ್ರರಾಗಿ ಬಿಡಿರಿ ಎಂದು ಪುರುಷರು ಮಹಿಳೆಯರೊಂದಿಗೆ ಹೇಳುವರು.

ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಆಹಾರ ಒದಗಿಸುವ ಹೊಣೆಗಾರಿಕೆ ಯಾರ ಮೇಲಿದೆಯೋ ಆತನಿಗೆ ಸಹಜವಾಗಿ ಒಂದು ಶ್ರೇಷ್ಠತೆ ಇರುತ್ತದೆ. ಇದೊಂದು ವಾಸ್ತವಿಕ ಸನ್ನಿವೇಶವಾಗಿದೆ. ಇದರ ಬಗ್ಗೆ ಯಾರಿಗೂ ಆಕ್ಷೇಪಕ್ಕೆ ಎಡೆಯಿರುವುದಿಲ್ಲ.

ಈ ವಚನದಲ್ಲಿ "ವಿಧೇಯತೆ ತೋರಿಸುವವರೂ ಅಲ್ಲಾಹನು ತಾಕೀತು ಮಾಡಿದ ರೀತಿಯಲ್ಲಿ ರಹಸ್ಯಗಳನ್ನು ಕಾಯ್ದುಕೊಳ್ಳುವವರೂ ಸಚ್ಚರಿತ ಸ್ತ್ರೀಯರಾಗಿದ್ದಾರೆ" ಎಂದು ಹೇಳಿ ನಿಲ್ಲಿಸಲಾಗಿದೆ. ಅಂತಹ ಸ್ತ್ರೀಯರ ಬಗ್ಗೆ ಬೇರೆ ಏನೂ ಹೇಳಿಲ್ಲ. ಅವರ ಬಗ್ಗೆ ಏನು ಆಜ್ಞೆ ಇದೆ ಎಂದು ಹೇಳದೆ ಕೂಡಲೇ ಅವಿಧೇಯತೆ ತೋರಿಸುವ ಸ್ತ್ರೀಯರ ಬಗ್ಗೆ ಪ್ರಸ್ತಾಪ ಪ್ರಾರಂಭಿಸಲಾಗಿದೆ. ಇದು ಪವಿತ್ರ ಖುರ್‌ಆನಿನ ಪ್ರತಿಪಾದನೆಯ ರೀತಿಯಾಗಿದೆ. ಇದು ಬಹಳ ಆಕರ್ಷಕ ರೀತಿಯಾಗಿದೆ. ಯಾವ ವಿಷಯವನ್ನು ಬಹಳ ಗಂಭೀರವಾಗಿ ಪ್ರತಿಪಾದಿಸಲು ಬಯಸುತ್ತಿದೆಯೋ ಅದರ ಬಗ್ಗೆ ಗಮನ ಹರಿಸಲು ಬಯಸುತ್ತಿದೆಯೋ ಆ ವಿಷಯವನ್ನು ಪ್ರಾರಂಭಿಸಿ ಅದನ್ನು ಮುಗಿತಾಯದ ಹಂತಕ್ಕೆ ತರದೆ ಬಿಟ್ಟು ಬಿಡಲಾಗುತ್ತಿದೆ. ಇದರ ಮೂಲಕ ಹೀಗೆ ಸೂಚಿಸಲಾಗುತ್ತಿದೆ: ನೀವು ನಿಮ್ಮ ಪತ್ನಿಯರ ಕಡೆಗೆ ನೋಡಿರಿ. ಅವರ ಹಕ್ಕುಗಳ ಕಡೆಗೆ ಗಮನಹರಿಸಿರಿ. ಅವರನ್ನು ಗೌರವಿಸುವ ಬಗ್ಗೆ ಶ್ರದ್ಧೆಹರಿಸಿರಿ. ನೀವು ಅವರಿಂದ ಪ್ರತೀಕ್ಷಿಸುವ ಎಲ್ಲವನ್ನೂ ಅವರು ನಿಮಗೋಸ್ಕರ ಮಾಡುತ್ತಾರೆ. ಅವರು ನಿಮ್ಮಿಂದ ಪ್ರತೀಕ್ಷಿಸುವುದನ್ನು ನೀವು ಈಡೇರಿಸಿಕೊಡದ ಪರಿಸ್ಥಿತಿ ಉಂಟಾಗಬಾರದು.

ಆದುದರಿಂದ ಈ ವಚನದಲ್ಲಿ ಈ ವಿಷಯವನ್ನು ಮುಂದುವರಿಸದೆ ಬಿಡಲಾಗಿದೆ. ಏಕೆಂದರೆ ಇದರಿಂದ ಅನೇಕ ರೀತಿಯ ಪರಿಣಾಮಗಳು ಹೊರಹೊಮ್ಮಬಹುದಾಗಿದೆ. ಇದು ಪವಿತ್ರ ಖುರ್‌ಆನಿನ ಒಂದು ಪ್ರತಿಪಾದನೆಯ ರೀತಿಯಾಗಿದೆ.

ಈ ವಚನದ ಮುಂದಿನ ಭಾಗದಲ್ಲಿ ಹೀಗೆ ಸೂಚಿಸಲಾಗಿದೆ: ನೀವು ಪತ್ನಿಯರಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಿ ಕೊಟ್ಟರೂ ಕೆಲವು ಪತ್ನಿಯರು ಅವಿಧೇಯರಾಗುತ್ತಾರೆ. ಕೆಲವರು ತಮ್ಮ ಪತಿಯ ಮೇಲೆ ಕೈ ಎತ್ತಲು ಸಹ ಹಿಂಜರಿಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ನಿಮ್ಮ ಪತ್ನಿ ವಿದ್ರೋಹಕರವಾಗಿ ವರ್ತಿಸಿದರೆ ಅದಕ್ಕೆ ಪ್ರತಿಕ್ರಿಯೆಯಾಗಿ ನೀವು ಸಹ ವಿದ್ರೋಹಕರವಾಗಿ ವರ್ತಿಸಬಾರದು. ಪತಿ ಕೈಗೊಳ್ಳಬೇಕಾದ ಮೂರು ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ. ಆಕ್ಷೇಪಿಸುವವರು ಅವುಗಳ ಕಡೆಗೆ ನೋಡುವುದೇ ಇಲ್ಲ.

ಪತ್ನಿ ವಿದ್ರೋಹಕರ ಕೃತ್ಯ ಮೊದಲು ಪ್ರಾರಂಭಿಸಿದರೆ ಅವಳು ಪತಿಯ ಮೇಲೆ ಕೈ ಎತ್ತಲು ಕೂಡ ಮುಂದಾಗುವುದಾದರೆ ಪತಿ ಸಹ ಅದಕ್ಕೆ ಪ್ರತಿಕ್ರಿಯೆಯಾಗಿ ತನಗಿಷ್ಟ ಬಂದಂತೆ ಮಾಡಲು ಸ್ವತಂತ್ರನಾಗ ಬೇಕಾಗಿದೆ. ಆದರೆ ಪವಿತ್ರ ಖುರ್‌ಆನ್ ಇದನ್ನು ಅನುಮತಿಸುವುದಿಲ್ಲ. ಮಹಿಳೆಯರ ಕೋಮಲ ಪ್ರಕೃತಿ ಮತ್ತು ಬಲಹೀನತೆಗಳನ್ನು ಗಮನಿಸಿ ಇಸ್ಲಾಮ್ ಹೀಗೆ ಹೇಳುತ್ತದೆ: ಅವರಿಗೆ ಉಪದೇಶ ನೀಡಿರಿ. ನೀವು ಶಕ್ತಿಶಾಲಿಗಳಾದ ಕಾರಣ ಅಲ್ಲಾಹನು ನಿಮಗೆ ಶ್ರೇಷ್ಠತೆಯನ್ನು ನೀಡಿದ್ದಾನೆ. ನೀವು ಧೈರ್ಯ ತೋರಿಸಿರಿ. ಮೊದಲು ಅವರಿಗೆ ಉಪದೇಶಿಸಿರಿ. ಆದರೆ ಉಪದೇಶ ಫಲಕಾರಿಯಾಗದಿದ್ದರೆ ನೀವು ಸ್ವಲ್ಪ ಕಾಲ ಅವರನ್ನು ನಿಮ್ಮ ಹಾಸಿಗೆಯಿಂದ ಬೇರ್ಪಡಿಸಿರಿ.

ಹಾಸಿಗೆಯಲ್ಲಿ ಮಹಿಳೆಯರನ್ನು ಬೇರ್ಪಡಿಸಿ ಮಲಗುವುದು ಏಕಮುಖದ ಶಿಕ್ಷೆಯೆಂದು ಯೋಚಿಸುವುದು ತಿಳಿಗೇಡಿತನವಾಗಿದೆ. ಪತ್ನಿ ಬೇರೆಯಾಗಿ ಮಲಗುವಾಗ ಕೆಲವು ಪತ್ನಿಯರು ಪತಿಯಿಂದ ತಮಗೆ ವಿಮೋಚನೆ ದೊರೆತ ಬಗ್ಗೆ ಕೃತಜ್ಞತೆಯರ್ಪಿಸಿ ಸಂತೋಷ ಪಡಲೂ ಬಹುದಾಗಿದೆ. ಆದರೆ ಪತಿ ತನ್ನ ವೈವಾಹಿಕ ಹಕ್ಕುಗಳಿಂದ ವಂಚಿತನಾಗುವಾಗ ಅವನಿಗೆ ಪತ್ನಿಗಿಂತ ಹೆಚ್ಚು ಶಿಕ್ಷೆ ಲಭಿಸಿದಂತಾಗುತ್ತದೆ.

ಪವಿತ್ರ ಖುರ್‌ಆನ್ ಮೇಲಿನಂತೆ ಉಪದೇಶ ನೀಡುವ ಮೂಲಕ ಪುರುಷನ ಸಿಟ್ಟನ್ನು ತಗ್ಗಿಸುತ್ತದೆ ಮತ್ತು ಸಹನೆದೋರಲು ನಿರ್ಬಂಧಿಸುತ್ತದೆ. ಈ ವಿಧಾನಗಳನ್ನು ಬಳಸಿದರೂ ಪತ್ನಿ ತನ್ನ ನಡತೆಯಲ್ಲಿ ಸುಧಾರಣೆ ಮಾಡದೆ ತನ್ನ ವಿದ್ರೋಹವನ್ನು ಮುಂದುವರಿಸುವುದಾದರೆ ಮತ್ತು ಅವಳು ಪತಿಯ ಮೇಲೆ ಕೈಯೆತ್ತಲು ಸಹ ಮುಂದುವರಿಯುವುದಾದರೆ – ಪವಿತ್ರ ಖುರ್‌ಆನ್ ಬಳಸಿದ ನುಶೂಝ್ ಎಂಬ ಪದದಲ್ಲಿ ಇದು ಸಹ ಸೇರಿದೆ – ಇಂತಹ ಪರಿಸ್ಥಿತಿಯಲ್ಲಿ ನ್ಯಾಯವು ಆವಶ್ಯಪಡುವುದು ಏನನ್ನು? ಪುರುಷನು ಸಹ ಸ್ವಲ್ಪ ಮಟ್ಟಿಗೆ ಕಠಿಣವಾಗಿ ವರ್ತಿಸಿ ಪತ್ನಿ ಸಭ್ಯಳಾಗಿ ವರ್ತಿಸಲು ನಿರ್ಬಂಧಿತಳನ್ನಾಗಿ ಮಾಡಬೇಕು.

ಪತ್ನಿಯರನ್ನು ದಂಡಿಸುವ ಬಗ್ಗೆ ನೀಡಲಾದ ಅನುಮತಿಯನ್ನು ಕಠಿಣ ಷರತ್ತುಗಳಿಗೆ ಒಳಪಡಿಸಿ ಸೀಮಿತಗೊಳಿಸಲಾಗಿದೆ. ಪತ್ನಿಗೆ ಶಿಕ್ಷೆ ನೀಡುವಾಗ ಮುಖಕ್ಕೆ ಹೊಡೆಯಬಾರದು ಎಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಉಪದೇಶಿಸಿರುವರು. ಅವಳ ಶರೀರದ ಇತರ ಭಾಗಗಳಲ್ಲೂ ಹೊಡೆತದ ಚಿಹ್ನೆ ಎದ್ದು ಕಾಣದ ಹಾಗೆ ಹೊಡೆಯಬೇಕೆಂದು ಸಹ ಅವರು ಹೇಳಿದ್ದಾರೆ. ಯಾವ ರೀತಿ ಮಕ್ಕಳಿಗೆ ಮೃದುವಾಗಿ ಹೊಡೆಯಲಾಗುತ್ತಿದೆಯೋ ಅದೇ ರೀತಿ ಸಾಧ್ಯವಿರುವಷ್ಟು ಮೃದುವಾಗಿ ಹೊಡೆಯಲು ಹೇಳಲಾಗಿದೆ. ನಮ್ಮ ದೈನಂದಿನ ಅನುಭವದಿಂದ ತಿಳಿಯುವುದೇನೆಂದರೆ, ಬಹಳ ಜೋರಾಗಿ ಚಿವುಟಿದರೂ ಅದರ ಗುರುತು ಕಾಣಿಸುತ್ತದೆ. ಬೆತ್ತದಿಂದ ಹೊಡೆದರೆ ಬಹಳ ಆಳವಾದ ಚಿಹ್ನೆ ಕಂಡುಬರುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಎರಡು ವಿಧಗಳ ಪರಿಣಾಮಗಳನ್ನೂ ನಿವಾರಿಸಿದ್ದಾರೆ.

ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಹೀಗೆ ಹೇಳಲಾಗಿದೆ:

**"ತಾಯಿಯನ್ನು ಅವಳ ಮಗುವಿನ ಕಾರಣದಿಂದ ಪೀಡಿಸಬಾರದು. ತಂದೆಯನ್ನು ಸಹ ಅವನ ಮಗುವಿನ ಕಾರಣದಿಂದ ಪೀಡಿಸಬಾರದು."**

(2:234)

ವಿವಾಹ ವಿಚ್ಛೇದನದ ನಂತರ ತಾಯಿಗೆ ಅವಳ ಮಗುವಿನ ಕಾರಣದಿಂದ ಕಷ್ಟಕೊಡಬಾರದೆಂದೂ ತಂದೆಗೆ ಸಹ ಅವನ ಮಗುವಿನ ಕಾರಣದಿಂದ ಕಷ್ಟಕೊಡಬಾರದೆಂದೂ ಆಜ್ಞಾಪಿಸಲಾಗಿದೆ. ಈ ಉಪದೇಶ ಇಬ್ಬರನ್ನು ಸಮಾನವಾಗಿ ಕಾಣುತ್ತದೆ.

## ವಿವಿಧ ಧರ್ಮಗಳಲ್ಲಿ ಮತ್ತು ಜನಾಂಗಗಳಲ್ಲಿ ಮಹಿಳೆಯ ಬಗ್ಗೆ ಉಪದೇಶಗಳು

ಇಸ್ಲಾಮಿನ ಈ ಉಪದೇಶಗಳ ಎದುರಿಗೆ ಬೇರೆ ಜನಾಂಗಗಳ ಮತ್ತು ಧರ್ಮಗಳ ಉಪದೇಶಗಳು ಹೇಗಿವೆ ಎಂದು ನೋಡೋಣ.

ಮೊದಲನೆಯದಾಗಿ, ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಪಾಶ್ಚಿಮಾತ್ಯ ಲೋಕದಲ್ಲಿ ಈ ವಿಷಯಕ್ಕೆ ಸಂಬಂಧಿಸಿ ಚರ್ಚೆ ನಡೆಯುವಾಗ ಸಾಮಾನ್ಯವಾಗಿ ಒಂದು ತಪ್ಪು ಮಾಡಲಾಗುತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಇಸ್ಲಾಮಿನ ಎದುರಿಗೆ ಪ್ರಸ್ತಾಪಿಸಲಾಗುತ್ತಿದೆ. ಆದರೆ ವಾಸ್ತವಿಕತೆ ಏನೆಂದರೆ, ಪಾಶ್ಚಿಮಾತ್ಯ ಸಂಸ್ಕೃತಿ ಎಂಬುದು ಒಂದು ಧರ್ಮವಲ್ಲ. ಆದರೆ ಇಸ್ಲಾಮ್ ಒಂದು ಧರ್ಮವಾಗಿದೆ. ಶ್ರೇಷ್ಠತೆಯ ಬಗ್ಗೆ ವಾದಿಸುವುದಾದರೆ ಪವಿತ್ರ ಖುರ್‌ಆನಿನ ಎದುರಿಗೆ ಬೈಬಲಿನ ಉಪದೇಶಗಳ ಶ್ರೇಷ್ಠತೆಯನ್ನು ತೋರಿಸಬೇಕು. ಬೈಬಲನ್ನು ಆಧಾರವಾಗಿಟ್ಟುಕೊಂಡು ಯಹೂದಿ ಧರ್ಮದ ಶ್ರೇಷ್ಠತೆ, ಕ್ರೈಸ್ತ ಧರ್ಮದ ಶ್ರೇಷ್ಠತೆ ಬಗ್ಗೆ ಪ್ರತಿಪಾದಿಸುವುದು ಸೂಕ್ತವಾಗುವುದು. ಆದರೆ ಧರ್ಮದ ಉಪದೇಶಗಳ ಎದುರಿಗೆ ಸಂಸ್ಕೃತಿಯ ಮಾತು ಹೇಳುವುದು ಅಸಂಬದ್ಧವಾಗುತ್ತದೆ. ಆದರೆ ನಾನು ಈ ವಿಚಾರದ ಬಗ್ಗೆ ಸಹ ಮುಂದೆ ಪ್ರಸ್ತಾಪಿಸುವೆನು. ನಾನು ನಿಮಗೆ ಮೊತ್ತಮೊದಲು ಹೇಳಲು ಬಯಸುವುದೇನೆಂದರೆ, ಯಾವುದಾದರೂ ಅನ್ಯಧರ್ಮದ ವ್ಯಕ್ತಿ ನಿಮ್ಮ ಮುಂದೆ ಇಸ್ಲಾಮಿನ ಉಪದೇಶಗಳ ಬಗ್ಗೆ ದೂಷಣೆ ಮಾಡುವುದಾದರೆ ನೀವು ಮೊತ್ತಮೊದಲು ಆ ವ್ಯಕ್ತಿಯ ಧಾರ್ಮಿಕ ಗ್ರಂಥದಿಂದ ಮಹಿಳೆಗೆ ಸಂಬಂಧಿಸಿ ನೀಡಿದ ಉಪದೇಶಗಳನ್ನು ಇಸ್ಲಾಮ್ ನೀಡಿದ ಉಪದೇಶಗಳ ಜೊತೆ ಸಮತೋಲನ ನಡೆಸಬೇಕು.

ಇದರ ಮೊದಲು ಮಹಿಳೆಯರಿಗೆ ಸಂಬಂಧಿಸಿ ಇಸ್ಲಾಮ್ ಧರ್ಮದ ಉಪದೇಶಗಳನ್ನು ವಿವಿಧ ನಿಟ್ಟಿನಿಂದ ವಿವರಿಸಲಾಗಿದೆ. ಇತರ ಧರ್ಮಗಳು ಇದರ ಬಗ್ಗೆ ಏನು ಹೇಳುತ್ತವೆ ಎಂದು ನೋಡೋಣ.

ಬೈಬಲ್ ಹೇಳುತ್ತದೆ:

"ಪತ್ನಿ ತನ್ನ ಗಂಡನಿಗೆ ಹೆದರುತ್ತಾ ಇರಬೇಕು"

ಬೈಬಲಿನಲ್ಲಿ ಇನ್ನೊಂದು ಕಡೆ ಹೀಗೆ ಹೇಳಲಾಗಿದೆ:

"ಅವನು ನಿನ್ನ ಒಡೆಯನಾಗುವನು" (ಆದಿಕಾಂಡ 3:16)

ಯಾವ ಆರೋಪಗಳನ್ನು ಪವಿತ್ರ ಖುರ್‌ಆನಿನ ಮೇಲೆ ಹೊರಿಸಲಾಗುತ್ತಿದೆಯೋ ಆ ಆರೋಪಗಳಿಗೆ ಬೈಬಲ್ ಸಹ ಗುರಿಯಾಗುತ್ತದೆ ಎಂಬುದು ಸಾಬೀತಾಗುತ್ತದೆ. ಅಧಿಕಾರ ಚಲಾಯಿಸುವುದು ಕೆಟ್ಟ ಕೆಲಸವಾಗಿದ್ದರೆ ಬೈಬಲ್ ಸ್ವತಃ ಅದಕ್ಕೆ ಅಸ್ತಿಭಾರ ಹಾಕಿತೆಂದು ಸ್ಪಷ್ಟವಾಗುತ್ತದೆ.

ಹೊಸ ಒಡಂಬಡಿಕೆಯ ಸುವಾರ್ತೆಗಳ ಬಗ್ಗೆ ಹೇಳುವುದಾದರೆ ಅದರಲ್ಲಿ ಹೀಗೆ ಇದೆ:

"ಉಪದೇಶ ಮಾಡುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವುದಿಲ್ಲ, ಅವರು ಮೌನವಾಗಿರಬೇಕು." (I ತಿಮೊಥೆಯನಿಗೆ 2:12)

ಮಹಿಳೆಯರು ಉಪದೇಶ ಮಾಡಬಾರದೆಂಬ ಆಜ್ಞೆಯನ್ನು ಎಲ್ಲ ಉಪದೇಶಗಳಿಗೂ ಅನ್ವಯಿಸಲಾಯಿತು. ಧಾರ್ಮಿಕ ಉಪದೇಶ ಮಾತ್ರವಲ್ಲ, ಬೇರೆ ಯಾವುದೇ ವಿದ್ಯೆ ಆಕೆ ಕಲಿಸುವಂತಿಲ್ಲ. ಪುರುಷನ ಮೇಲೆ ಅಧಿಕಾರ ಚಲಾಯಿಸುವುದನ್ನು ಮಾತ್ರವಲ್ಲ, ಆಕೆಯ ನಾಲಗೆಯನ್ನೂ ಬಂಧಿಸಲಾಯಿತು. "ಅವರು ಮೌನವಾಗಿರಬೇಕು" ಎಂದು ಆಜ್ಞಾಪಿಸಲಾಯಿತು. ಈ ಆಜ್ಞೆ ಕೊಡದಿರುತ್ತಿದ್ದರೆ ಚೆನ್ನಾಗಿತ್ತು. ಮಹಿಳೆಯರಿಗೆ ಮಾತನಾಡಲು ತುಂಬಾ ಆಸಕ್ತಿ ಇರುತ್ತದೆ. ಹೀಗಿರುವಾಗ ಅವರ ನಾಲಗೆಯನ್ನು ಮಾತು ಬರದವರ ಹಾಗೆ ಮಾಡುವುದರಲ್ಲಿ ಯಾವ ನ್ಯಾಯವಿದೆ?

ಮಹಿಳೆಯರ ಬಗ್ಗೆ ಹೀಗೆ ಸಹ ಹೇಳಲಾಗಿದೆ:

"ಅವರು ಅಧೀನದಲ್ಲಿರಬೇಕು" (I ಕೊರಿಂಥದವರಿಗೆ 14:34)

ಈ ಬಗ್ಗೆ ಕ್ರೈಸ್ತ ಲೋಕವು ಈ ಉಪದೇಶವನ್ನು ರದ್ದುಗೊಳಿಸಿತು ಎಂದು ಹೇಳಬೇಕಾಯಿತು.

## ಹಿಂದೂ ಧರ್ಮದಲ್ಲಿ ಮಹಿಳೆಯರ ಬಗ್ಗೆ ಉಪದೇಶಗಳು

ಹಿಂದೂ ಧರ್ಮದ ಪ್ರಕಾರ ಹೆಣ್ಣು ಮಗುವು ಜನಿಸುವುದು ಅಪಶಕುನ ಎಂದು ಗಣಿಸಲಾಗಿತ್ತು. ಅರಬಿಗಳು ಹೆಣ್ಣು ಶಿಶುಗಳನ್ನು ಜೀವಂತವಾಗಿ ಹೂಳುತ್ತಿದ್ದ ಹಾಗೆ ಪುರಾತನ ಕಾಲದಲ್ಲಿ ಹಿಂದುಗಳಲ್ಲೂ ಈ ಆಚಾರ ಜಾರಿಯಲ್ಲಿತ್ತೆಂದು ಹಿಂದು ಗ್ರಂಥಗಳ ಅಧ್ಯಯನದಿಂದ ತಿಳಿದುಬರುತ್ತದೆ. ಉತ್ತಮ ಕುಲದ ಜನರು ಹೆಣ್ಣು ಶಿಶುಗಳನ್ನು ಹುಟ್ಟಿದ ಕೂಡಲೆ ಕೊಲ್ಲುತ್ತಿದ್ದರು. ಹೆಣ್ಣನ್ನು ಮದುವೆ ಮಾಡಿಕೊಡಲು ಆಕೆಯ ಸಮ್ಮತಿ ಆವಶ್ಯಕವಾಗಿರಲಿಲ್ಲ. ವಿಧವೆಯರ ಬಗ್ಗೆ ಅವರ ಆಚಾರ ಹೇಗಿತ್ತೆಂದರೆ, ಒಬ್ಬಾಕೆ ಚಿಕ್ಕ ಪ್ರಾಯದಲ್ಲಿ ವಿಧವೆಯಾದರೂ ಆಕೆಗೆ ಪುನರ್ ವಿವಾಹಕ್ಕೆ ಅನುಮತಿ ಇರಲಿಲ್ಲ. ಆಕೆ ತನ್ನ ತಲೆ ಬೋಳಿಸಿ, ಸದಾ ಬಿಳಿ ಬಟ್ಟೆ ಧರಿಸಬೇಕಾಗಿತ್ತು. ಅವಳು ಅನಂತರ ಬಣ್ಣದ ವಸ್ತ್ರ ಧರಿಸುವ ಅನುಮತಿ ಇರಲಿಲ್ಲ. ಯಾವುದೇ ಮದುವೆಗೆ ವಿಧವೆ ಹೋಗುವ ಹಾಗಿರಲಿಲ್ಲ. ಅವಳು ಎಂದಾದರೂ ಮದುವೆಗೆ ಹೋದರೆ ವಧುವಿನ ಸಮೀಪ ಹೋಗುವಂತಿರಲಿಲ್ಲ. ವಿಧವೆ ಸ್ವತಃ ಆಹಾರ ಬೇಯಿಸಿ ತಿನ್ನಬೇಕಾಗಿತ್ತು. ಬೇರೆ ಯಾರೂ ಆಕೆಗೆ ಅನ್ನ ಬೇಯಿಸಿ ಕೊಡಬಾರದಾಗಿತ್ತು. ಇವುಗಳಲ್ಲದೆ ಬೇರೆ ಅನೇಕ ದೌರ್ಜನ್ಯಗಳನ್ನು ಆಕೆಯ ಮೇಲೆ ನಡೆಸಲಾಗುತ್ತಿತ್ತು. ಕೊನೆಗೆ ಅತ್ಯಂತ ಘೋರ ದೌರ್ಜನ್ಯ ಅವರ ಮೇಲೆ ನಡೆಸಲಾಗುತ್ತಿತ್ತು. ಹಿಂದೂ ವಿಧವೆ ತನ್ನ ಪತಿಯ ಚಿತೆಗೆ ಹಾರಿ ಭಸ್ಮವಾಗಬೇಕೆಂದು ಆಜ್ಞಾಪಿಸಲಾಗುತ್ತಿತ್ತು. ಹಿಂದೂ ವಿಧವೆಯ ಜೀವಿತ ಎಷ್ಟು ಕಷ್ಟಕರವಾಗಿತ್ತೆಂದರೆ ಅದಕ್ಕಿಂತ ಸುಡಲ್ಪಟ್ಟು ಸಾಯುವುದೇ ಉತ್ತಮವೆಂದು ಗಣಿಸಲಾಗುತ್ತಿತ್ತು.

ಮನುಸ್ಮೃತಿ ಮಹಿಳೆಯನ್ನು ಪ್ರಾಣಿಗಿಂತ ಕೀಳೆಂದು ಉಪದೇಶಿಸುತ್ತದೆ. ಆಕೆಗೆ ವಾರೀಸು ಹಕ್ಕು ಇರುವುದಿಲ್ಲ. ಇವುಗಳಲ್ಲದೆ ಬೇರೆ ಆಚಾರಗಳೂ ಮಹಿಳೆಯರಿಗೆ ಸಂಬಂಧಿಸಿ ಇವೆ. ಇಲ್ಲಿ ಅವುಗಳ ಪ್ರಸ್ತಾಪ ಕೂಡ ಉಚಿತವಲ್ಲ. ಈ ಉಪದೇಶಗಳಿಂದ ಪ್ರಭಾವಿತನಾಗಿ ಹಿಂದೂ ಕವಿ ತುಲಸೀದಾಸ ಹೀಗೆ ಬರೆದನು:

"ಶೂದ್ರ, ಡೋಲು, ಜಾನುವಾರುಗಳು ಮತ್ತು ಮಹಿಳೆ ಇವರನ್ನು ಹೊಡೆಯುತ್ತಾ ಇದ್ದರೆ ಮಾತ್ರ ಸರಿಯಾಗಿರುತ್ತದೆ."

## ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಮಹಿಳೆಯರೊಂದಿಗೆ ವರ್ತನೆ

ಕೆಲವು ದೊಡ್ಡ ಧರ್ಮಗಳ ಉಪದೇಶಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ ನಂತರ ಪಾಶ್ಚಿಮಾತ್ಯ ನಾಗರಿಕತೆ ಮತ್ತು ಸಂಸ್ಕೃತಿ ಬಗ್ಗೆ ವಿವರಿಸುತ್ತೇನೆ:

ಪಾಶ್ಚಿಮಾತ್ಯರಿಗೆ ತಮ್ಮ ಸಂಸ್ಕೃತಿ ಬಗ್ಗೆ ಬಹಳ ಅಭಿಮಾನವಿದೆ. ಅವರು ಮಹಿಳೆಯರಿಗೆ ಪಾಶ್ಚಿಮಾತ್ಯ ಸಂಸ್ಕೃತಿ ಇಸ್ಲಾಮೀ ಸಂಸ್ಕೃತಿಗಿಂತ ಬಹಳ ಉತ್ತಮವಾಗಿದೆ ಎಂದು ಹೇಳುತ್ತಾರೆ. ಹದಿನಾಲ್ಕು ನೂರು ವರ್ಷಗಳ ಹಿಂದೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಹೃದಯಕ್ಕೆ ಅವತೀರ್ಣಗೊಂಡ ಉಪದೇಶಗಳ ಬಗ್ಗೆ ಆಕ್ಷೇಪಿಸಿ ಅದಕ್ಕೆದುರಾಗಿ ಇಂದಿನ ಕಾಲದ ಪಾಶ್ಚಿಮಾತ್ಯ ಉಪದೇಶಗಳನ್ನು ಇರಿಸುತ್ತಾರೆ. ಅವರು ಬಹಳ ಸಂತೋಷದಿಂದ ಹೇಳುತ್ತಾರೆ – ನಾವು ಈಗ ಮಹಿಳೆಯ ಬಗ್ಗೆ ಏನು ಹೇಳುತ್ತೇವೋ ಹದಿನಾಲ್ಕು ನೂರು ವರ್ಷಗಳ ಹಿಂದೆ ನಿಮಗೆ ಅವುಗಳ ಬಗ್ಗೆ ತಿಳಿದಿರಲಿಲ್ಲ. ಅವರು ಈ ರೀತಿ ಇಸ್ಲಾಮಿನ ಉಪದೇಶಗಳೊಂದಿಗೆ ಹೋಲಿಸಿ ಹೇಳಲು ಪ್ರಯತ್ನಿಸುತ್ತಾರೆ. ಆದರೆ ಅವರ ವಾದಗಳನ್ನು ಸಂಪೂರ್ಣವಾಗಿ ಅಲ್ಲಗಳೆಯುವ ವಾಸ್ತವಿಕ ಘಟನೆಗಳನ್ನು ನಾನು ನಿಮ್ಮ ಮುಂದೆ ಇರಿಸುತ್ತೇನೆ.

ಹದಿನಾಲ್ಕು ನೂರು ವರ್ಷಗಳ ಹಿಂದೆ ಇಸ್ಲಾಮ್ ಧರ್ಮವು ಮಹಿಳೆಯರ ಬಗ್ಗೆ ಯಾವ ಉಪದೇಶ ನೀಡಿತ್ತೋ ಇಂದಿನ ಯುರೋಪು ಅದರ ಪಾದವನ್ನು ಸ್ಪರ್ಶಿಸುವ ಮಟ್ಟಿಗೆ ಕೂಡ ಭಾಗ್ಯ ಗಳಿಸಲಿಲ್ಲ. ನಾನು ಹೀಗೆ ವಾದಿಸುವಾಗ ಪಾಶ್ಚಿಮಾತ್ಯರ ಸ್ವಂತ ಮಾತುಗಳಲ್ಲಿಯೇ ಎಂತಹ ವಾಸ್ತವಿಕಾಂಶಗಳನ್ನು ಬಹಿರಂಗ ಪಡಿಸುವೆನೆಂದರೆ, ಅವುಗಳನ್ನು ಅಲ್ಲಗಳೆಯಲು ಯಾರಿಗೂ ಸಾಧ್ಯವಿಲ್ಲ.

ಮೊದಲಿಗೆ ನಾನು "ರಿಪೋರ್ಟ್ ಆಫ್ ನೋರ್‌ತಂಬರ್‌ಲೇಂಡ್ ಏಂಡ್ ಟೈನಿಸೈಡ್ ಕೌನ್ಸಿಲ್ ಆಫ್ ಸೋಶಿಯಲ್ ಸರ್ವಿಸಸ್ 1915" (Report of Northumberland & Tyneside Council of Social Services 1915, Page 84) ಇದರಿಂದ ಉಲ್ಲೇಖಿಸುತ್ತೇನೆ. ಅದರಲ್ಲಿ ಹೀಗೆ ಬರೆಯಲಾಗಿದೆ – 1915ರಲ್ಲಿ ಒಂದು ನಿಯಮವು ಒಬ್ಬ ಮಜಿಸ್ಟ್ರೇಟ್‌ನ ತೀರ್ಪು ಪ್ರಕಾರ ಜಾರಿಗೊಂಡಿತು. ಆ ತೀರ್ಪಿನಲ್ಲಿ ಹೀಗೆ ಹೇಳಲಾಗಿತ್ತು: ಜಗಳ ಮಾಡುವ ಪತ್ನಿಗೆ ಪತಿ ಹೊಡೆಯಬಹುದು.

ಇಸ್ಲಾಮ್ ಹೇಳಿದುದು ಇದನ್ನೇ ಆಗಿದೆ. ಆದರೆ ಅದು ಅದನ್ನು

ಅನೇಕ ಷರತ್ತುಗಳಿಗೆ ಒಳಪಡಿಸಿತ್ತು. ಇಸ್ಲಾಮಿನ ಆಜ್ಞೆ ಬಗ್ಗೆ ಪಾಶ್ಚಿಮಾತ್ಯರು ಬಹಳ ಕೋಲಾಹಲ ನಡೆಸುತ್ತಾರೆ. ಆದರೆ ಅವರು ಪತಿ ಪತ್ನಿಗೆ ಹೊಡೆಯಬಹುದೆಂಬುದಕ್ಕೆ ನಿಗದಿಪಡಿಸಿದ ಷರತ್ತು ಬಹಳ ವಿಚಿತ್ರವಾಗಿದೆ. 1915ರಲ್ಲಿ ಅವರು ವಿಧಿಸಿದ ಷರತ್ತು ಹೀಗಿದೆ: ಯಾವ ಬೆತ್ತದಿಂದ ಮಹಿಳೆಗೆ ಹೊಡೆಯಬಹುದೋ ಆ ಬೆತ್ತದ ದಪ್ಪ ಹೊಡೆಯುವವನ ಉಂಗುಷ್ಟದ ದಪ್ಪಕ್ಕಿಂತ ಹೆಚ್ಚಾಗಿರಬಾರದು. ಎಷ್ಟು ಸಲ ಹೊಡೆಯಬೇಕು, ಎಲ್ಲೆಲ್ಲಿ ಹೊಡೆಯಬೇಕು, ಎಲ್ಲಿ ಹೊಡೆಯಬಾರದು, ಯಾವ ಯಾವ ಜಾಗರೂಕತೆಗಳನ್ನು ವಹಿಸಬೇಕು – ಇವುಗಳ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ. ಇಲ್ಲಿರುವ ರೈತರ ಉಂಗುಷ್ಟ ಬಹಳ ದಪ್ಪಗಾಗಿರುತ್ತದೆ ಎಂದು ನಿಮಗೆ ತಿಳಿದಿದೆ. ಉಂಗುಷ್ಟದಷ್ಟು ದಪ್ಪವಿರುವ ಬೆತ್ತದಿಂದ ಹೊಡೆದರೆ ಮಹಿಳೆಯ ಗತಿ ಏನಾಗಬಹುದು! ಇದರ ಬಗ್ಗೆ ದೂರು ನೀಡುವುದಾದರೆ, ನ್ಯಾಯಾಲಯ ಮಾಡಬಹುದಾದುದು ಇಷ್ಟೇ – ಹೊಡೆಯುವವನ ಉಂಗುಷ್ಟದ ದಪ್ಪ ಮತ್ತು ಬೆತ್ತದ ದಪ್ಪ ಸರಿಹೊಂದುವಂತಿದೆಯೋ ಎಂಬುದನ್ನು ಮಾತ್ರ ಪರಿಶೀಲಿಸಬಹುದು.

ಈ ನಿಯಮ ಹೀಗೆಯೇ ಜಾರಿಯಲ್ಲಿತ್ತು. ಇತ್ತೀಚೆಗೆ, ಎಂದರೆ 1970ರಲ್ಲಿ ಮಹಿಳೆಯರು ಮನೆಗಳಲ್ಲಿ ದೌರ್ಜನ್ಯ ನಡೆಯುವ ವಿರುದ್ಧ ಹೋರಾಟ ಪ್ರಾರಂಭಿಸಿದರು. ಇಂಗ್ಲೆಡಿನ ಜನರಿಗೆ ಸುಸಂಸ್ಕೃತಿಯನ್ನು ಕಲಿಸಲು ಪ್ರಯತ್ನಿಸಿದರು. 1970ರಲ್ಲಿ ಅವರ ಪ್ರಯತ್ನ ಪ್ರಾರಂಭವಾಯಿತು. 1973ರ ತನಕ ಅವರ ಪ್ರಯತ್ನಗಳ ಫಲವೇನಾಯಿತೆಂಬುದರ ಬಗ್ಗೆ ಒಂದು ವರದಿಯನ್ನು ಉಲ್ಲೇಖಿಸುತ್ತೇನೆ. ಆ ವರದಿ 1983ರಲ್ಲಿ ಮುದ್ರಿತವಾದುದು. ಅದರಲ್ಲಿ ಹೀಗೆ ಹೇಳಲಾಗಿದೆ: 1973ರ ಒಂದು ಸರ್ವೇಕ್ಷಣ ವರದಿ ಪ್ರಕಾರ ಬ್ರಿಟನ್‌ನಲ್ಲಿ ಪ್ರತಿ ವರ್ಷ 27 ಸಾವಿರ ಮೊಕದ್ದಮೆಗಳು ಪತಿ ತನ್ನ ಪತ್ನಿಗೆ ತೀವ್ರವಾಗಿ ಹೊಡೆದು ಗಾಯಗೊಳಿಸಿದ ಬಗ್ಗೆಯಾಗಿದ್ದವು. (Marital Violence: The Community Response by Boxkwski Muxch and Walker Taxistock Publication)

ಮಹಿಳೆಯರ ಚಳುವಳಿಗಳಿಂದ ಸಮಾಜದಲ್ಲಿ ಯಾವ ಪರಿವರ್ತನೆಯೂ ಉಂಟಾಗಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಇನ್ನೊಂದು ಸರ್ವೇಕ್ಷಣದ ಪ್ರಕಾರ ಈ ಸಂಖ್ಯೆ ಎಷ್ಟೋ ಹೆಚ್ಚಾಗಿತ್ತು ಎಂದು ತಿಳಿಯುತ್ತದೆ. ಅದರ ಪ್ರಕಾರ ಸಂಖ್ಯೆ ಎರಡು ಲಕ್ಷಕ್ಕೆ ಹತ್ತಿರವಾಗಿತ್ತು. ಈ ಸಂಖ್ಯೆ ಕೂಡ ಪೂರ್ಣವಾಗಿದೆ ಎಂದು ಹೇಳಲಾಗದೆಂದು ಸಹ ಸೂಚಿಸಲಾಗಿದೆ. ಏಕೆಂದರೆ ಬಹುತೇಕ ಮಹಿಳೆಯರು ಹೊಡೆತಕ್ಕೊಳಗಾದರೂ ನಾಚಿಕೆಯಿಂದ ಮೌನವನ್ನವಲಂಬಿಸುತ್ತಾರೆ. ಸಂಶೋಧನೆ ನಡೆಸುವವರಿಗೆ ತಮ್ಮ ಪತಿ ಹೊಡೆಯುತ್ತಾರೆಂದು ಅವರು ಬಹಿರಂಗಪಡಿಸುವುದಿಲ್ಲ.

ಪಾರ್ಲಿಮೆಂಟ್ ಸಿಲೆಕ್ಟ್ ಕಮಿಟಿಯ ವರದಿಯಲ್ಲಿ ಹೀಗೆ ಹೇಳಲಾಗಿದೆ: ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಸರಿಯಾದ ಸಂಖ್ಯೆಯ ಅಂದಾಜು ಮಾಡುವುದು ಕಷ್ಟಕರವಾಗಿದೆ. 1977ರಲ್ಲಿ ಬ್ರಿಸ್ಟೋಲ್ ಪ್ರದೇಶದಲ್ಲಿ ಮಹಿಳೆಯರು ತಮ್ಮ ಪತಿಯಂದಿರು ತಮ್ಮನ್ನು ಹೊಡೆದ ಬಗ್ಗೆ ಪೊಲೀಸರಿಗೆ ನೀಡಿದ ದೂರುಗಳ ಸಂಖ್ಯೆ ಐದು – ಆರು ಸಾವಿರದಷ್ಟಾಗಿತ್ತು.

1974ರಲ್ಲಿ ಎರಿನ್ ಪಿಜ್ಜಿ "Scream Quietly or the Neighbours will hear" (ಮೌನವಾಗಿ ಚೀರಾಟ ನಡೆಸಿರಿ, ಇಲ್ಲದಿದ್ದರೆ ನೆರೆಹೊರೆಯವರು ಆಲಿಸುವರು) ಎಂಬ ಒಂದು ಪುಸ್ತಕವನ್ನು ಬರೆದು ಪೆಂಗ್ವಿನ್ ಮೂಲಕ ಪ್ರಕಟಿಸಿದನು. ಈ ಪುಸ್ತಕದಲ್ಲಿ ಮಹಿಳೆಯರು ಅನುಭವಿಸುವ ದೌರ್ಜನ್ಯಗಳ ದುಃಖದಾಯಕ ಕಥೆಗಳಿವೆ. ಒಬ್ಬ ಮಹಿಳೆಯ ಅನುಭವ ಹೀಗಿದೆ: ಆಕೆಗೆ ಪದೇ ಪದೇ ಹೊಡೆದು ಎಲುಬುಗಳನ್ನು ಮುರಿದು ಹಾಕಲಾಯಿತು. ಹೊತ್ತಿಸಿದ ಸಿಗರೇಟು ಮೂಲಕ ಅವಳ ಚರ್ಮವನ್ನು ಸುಟ್ಟುಹಾಕಲಾಗಿದ್ದು ಅಸಂಖ್ಯಾತ ಅಪಾಯಕರ ಗಾಯಗಳನ್ನು ಆಕೆ ಹೊಂದಿದ್ದಳು. ಅವುಗಳ ಪೂರ್ಣ ವಿವರಣೆ ನಾನು ನೀಡಲಾರೆ. ಆ ಪುಸ್ತಕ ನೋಡಬಯಸುವವರು ನೋಡಬಹುದು. ಅದರಲ್ಲಿ ಅನೇಕ ನೋವನ್ನುಂಟುಮಾಡುವ ಘಟನೆಗಳನ್ನು ವಿವರಿಸಲಾಗಿದೆ. ಶರಾಬಿನ ಬಾಟ್ಲಿಗಳನ್ನು ಮಹಿಳೆಯರ ತಲೆಗೆ ಹೊಡೆದು ಒಡೆದು ಹಾಕುವುದು ಮತ್ತು ಮಹಿಳೆಯರನ್ನು ಕಟ್ಟಿಹಾಕಿ ಹೊತ್ತಿಸಿದ ಸಿಗರೇಟಿನಿಂದ ಚರ್ಮವನ್ನು ಸುಡುವುದು ಇದರಲ್ಲಿ ಸೇರಿವೆ. ಇವುಗಳು ಹಿಂದಿನ ಕಾಲದ ಘಟನೆಗಳಲ್ಲ. ಈಗ ಸಹ ಅನೇಕ ಕಾರ್ಮಿಕರ ಮನೆಗಳಲ್ಲಿ ಹೀಗೆಯೇ ಸಂಭವಿಸುತ್ತಾ ಇದೆ.

1976ರಲ್ಲಿ ಪ್ರಥಮ ಬಾರಿ ಬ್ರಿಟನಿನಲ್ಲಿ ಗೃಹ ದೌರ್ಜನ್ಯದ ಬಗ್ಗೆ ನಿಯಮವು ಜಾರಿಗೊಂಡಿತು. ಈ ಹೊಸ ನಿಯಮ ಜಾರಿಗೊಳ್ಳುವ ತನಕ 1915ರ ನಿಯಮ ರದ್ದುಗೊಂಡಿರಲಿಲ್ಲ. 1976ರಲ್ಲಿ 1915ರ ನಿಯಮಗಳನ್ನು ಸ್ಪಷ್ಟವಾಗಿ ರದ್ದುಗೊಳಿಸಲಾಯಿತು. 1981ರಲ್ಲಿ ಈ ನಿಯಮ ಬೀರಿದ ಪ್ರಭಾವಗಳ ಬಗ್ಗೆ ಪರಿಶೀಲಿಸಲಾಯಿತು. ವಾಫೇ (Wafe) ಎಂಬ ಸಂಶೋಧನೆಯ ಸಂಸ್ಥೆ ಈ 1976ರ ನಿಯಮ ಮಹಿಳೆಯರಿಗೆ ಪ್ರಯೋಜನಕರವಾಗಲಿಲ್ಲ ಎಂದು ವರದಿ ನೀಡಿತು. ಅದರಲ್ಲಿ ಹೀಗೆ ಹೇಳಲಾಗಿತ್ತು: ಪತಿ ವಾಸ್ತವಿಕವಾಗಿಯೂ ಮಿತಿಮೀರಿ ದೌರ್ಜನ್ಯಗಾರನಾಗಿದ್ದಾನೆಂದು ಸಾಬೀತುಪಡಿಸುವ ತನಕ ನ್ಯಾಯಾಧೀಶರು ಪತಿಯನ್ನು ಮನೆಯಿಂದ ಹೊರಗೆ ಹಾಕಲು ಅನುಮತಿ ನೀಡುತ್ತಿರಲಿಲ್ಲ. ಪತಿಯನ್ನು ಮನೆಯಿಂದ ಹೊರಗೆ ಹಾಕಿದರೆ ಸರಕಾರಕ್ಕೆ ಸಮಸ್ಯೆ ತಲೆದೋರುತ್ತಿತ್ತು. ಅವನು ವಸತಿ ವಿರಹಿತನಾಗಿ ಗಣಿಸಲ್ಪಡುತ್ತಿದ್ದನು ಮತ್ತು ಸ್ಥಳೀಯ ಸಂಸ್ಥೆಗಳು ಅವನಿಗೆ ವಸತಿ ಏರ್ಪಡಿಸಿ ಕೊಡಬೇಕಾಗುತ್ತಿತ್ತು. ಈ ಸಂಶೋಧನೆಯ ಸಂಸ್ಥೆ 656 ಮಹಿಳೆಯರನ್ನು ಸಂದರ್ಶಿಸಿತು. ಅವರಲ್ಲಿ ಶೇಕಡ 64 ಜನರು ಹೀಗೆ ಹೇಳಿದರು: ತಮ್ಮ ಪತಿಯಂದಿರು ತಮಗೆ ಹೊಡೆದ ಬಗ್ಗೆ ದೂರು ನೀಡಿದಾಗ ಪೊಲೀಸರು ದೂರುಗಳಿಗೆ ಗಮನ ನೀಡಲಿಲ್ಲ. ಅವರು ಹೇಳಿದರು: ಮನೆ ಜಗಳಗಳ ಬಗ್ಗೆ ನಾವು ಹಸ್ತಕ್ಷೇಪ ಮಾಡಲಾರೆವು. ಶೇಕಡಾ 36 ಮಹಿಳೆಯರು ಹೀಗೆ ಹೇಳಿದರು: ನಾವು ಪೊಲೀಸರನ್ನು ಕರೆದರೂ ಅವರು ನಮಗೆ ಪತಿ ಹೊಡೆದ ಬಗ್ಗೆ ನಂಬಲೇ ಇಲ್ಲ. ಈ ವರದಿಯಲ್ಲಿ ಹೀಗೆ ಸಹ ಹೇಳಲಾಗಿದೆ: ಬಹುತೇಕ ಪೊಲೀಸರು ಪುರುಷರಾದುದರಿಂದ ಅವರು ಪುರುಷರಿಗೆ ಸಹಾಯ ಮಾಡುತ್ತಾರೆ ಮತ್ತು ಮಹಿಳೆಯ ಕೂಗನ್ನು ಆಲಿಸುವುದಿಲ್ಲ.

1987 ಜೂನ್ ದಿನಾಂಕ 12ರ ಸೌತ್ ಲಂಡನ್ ಪ್ರೆಸ್ ಎಂಬ ಪತ್ರಿಕೆಯಲ್ಲಿ ಹೀಗೆ ವರದಿಯಾಗಿದೆ: ಒಬ್ಬ ತಂದೆ ತನ್ನ ಒಂದು ವಯಸ್ಸಿನ ಹೆಣ್ಣು ಶಿಶುವಿನ ತಲೆಗೆ ಎಷ್ಟು ಹೊಡೆದನೆಂದರೆ, ತಲೆ ಎಲುಬು ಮುರಿದು ಹೋಯಿತು. ಆ ಮಗು ಜೀವಮಾನವಿಡೀ ಅಂಧೆಯಾಗಿ ಜೀವಿಸಬೇಕಾದೀತು ಎಂದು ಡಾಕ್ಟರ್‌ಗಳು ಹೇಳುತ್ತಾರೆ. ಆ ಮಗುವಿಗೆ ಅಪಸ್ಮಾರ ಮತ್ತಿತರ ರೋಗಗಳು ಬಾಧಿಸಿವೆ. ಅವು ಜೀವಿತಾದ್ಯಂತ ಮುಂದುವರಿಯುವುವು.

1987 ಜೂನ್ ದಿನಾಂಕ 20ರ ಟೈಮ್ಸ್ ಪತ್ರಿಕೆಯಲ್ಲಿ ಹೀಗೆ ವರದಿಯಾಗಿದೆ: ಐದು ವರ್ಷದ ಮಗಳನ್ನು ತಂದೆ ಬಲಾತ್ಕಾರಸಂಗಕ್ಕೆ ಗುರಿಪಡಿಸಿದನು. ಒಂದು ವರದಿಯ ದೂರು ದಾಖಲಾದ ಪ್ರಕಾರ ಇಂತಹ ಹೆಣ್ಣುಮಕ್ಕಳ ಸಂಖ್ಯೆ 1986ರಲ್ಲಿ ಹತ್ತುಸಾವಿರದಷ್ಟಿತ್ತು. ಈ ಹೆಣ್ಣು ಮಕ್ಕಳು ಹದಿನೈದು ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರು. ಅವರಲ್ಲಿ ಬಹುತೇಕ ಹೆಣ್ಣುಮಕ್ಕಳು ನಾನು ಈ ಮೊದಲು ಹೇಳಿದಂತಹ ಲೈಂಗಿಕ ದೌರ್ಜನ್ಯಕ್ಕೆ ಗುರಿಯಾದವರಾಗಿದ್ದರು. 1985ರ ತನಕ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಇಂತಹ ದೌರ್ಜನ್ಯ ಶೇಕಡ 42ರಷ್ಟು ವೃದ್ಧಿಯಾಯಿತು. ಇದು ನಿಯಮ ಜಾರಿಗೊಂಡ ನಂತರ ಮತ್ತು ಮಹಿಳೆಯರ ಚಳುವಳಿ ಪ್ರಾರಂಭವಾದ ನಂತರದ ಸ್ಥಿತಿಯಾಗಿದೆ. (ಇಸ್ಲಾಮೀ ದೇಶಗಳಲ್ಲಿ ಅನೇಕ ಕೆಟ್ಟಕೆಲಸಗಳು ನಡೆಯುತ್ತಿವೆಯಾದರೂ ಇಂತಹ ಭಯಾನಕ ಅಪರಾಧಗಳು ನೂರರಲ್ಲೊಂದು ಅಂಶ ಕೂಡ ಕಾಣಿಸುವುದಿಲ್ಲ). ಚಿಕ್ಕ ಪ್ರಾಯದ ಹುಡುಗಿಯರ ಮೇಲೆ ತಂದೆ ತಾಯಿ ನಡೆಸುವ ದೌರ್ಜನ್ಯಗಳು ಬೇರೆಯೇ ಇವೆ. ಈ ವಿಷಯ ಮಹಿಳೆಯರಿಗೆ ಸಂಬಂಧಿಸಿರುವುದರಿಂದ ನಾನು ಚಿಕ್ಕ ಹೆಣ್ಣು ಮಕ್ಕಳ ಬಗ್ಗೆ ಮಾತ್ರ ವಿವರಣೆ ನೀಡಿರುತ್ತೇನೆ.

N.S.P.C.C. ಎಂಬ ಸಂಸ್ಥೆ ನೀಡಿದ ವರದಿ ಪ್ರಕಾರ ಈ ಅಪರಾಧಗಳು ಪ್ರತಿ ವರ್ಷ ಹಿಂದಿನ ವರ್ಷಕ್ಕಿಂತ ಇಮ್ಮಡಿಯಾಗುತ್ತಾ ಇದೆ. ಇದರ ಅರ್ಥವೇನೆಂದರೆ, ಕೆಲವು ವರ್ಷಗಳ ನಂತರ ಮಹಿಳೆಯರು ಮತ್ತು ಮುಗ್ಧ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆಸದಂತಹ ಮನೆ ಯಾವುದಾದರೂ ಇದೆಯೋ ಎಂದು ಹುಡುಕಬೇಕಾಗಿ ಬರಬಹುದು. (ಟೈಮ್ಸ್ 20-06-1987)

ಲಂಡನಿನ "ದಿ ಇಂಡಿಪೆಂಡೆಂಟ್" ಪತ್ರಿಕೆ 1987 ಜೂನ್ 30ರ ಸಂಚಿಕೆಯಲ್ಲಿ ಹೀಗೆ ವರದಿ ಮಾಡಿದೆ: N.S.P.C.C. ವರದಿ ಪ್ರಕಾರ ಹಿಂದಿನ ವರ್ಷ ಲೈಂಗಿಕ ಪೀಡನೆಗಳಿಗೆ ತುತ್ತಾದ ಮಕ್ಕಳ ಸಂಖ್ಯೆ ಶೇಕಡ 137ರಷ್ಟು ವೃದ್ಧಿಯಾಗಿದೆ. ಪ್ರತಿ ವರ್ಷ ಎರಡು ಪಟ್ಟು ಅಪರಾಧಗಳು ಹೆಚ್ಚಾಗುತ್ತವೆ ಎಂದು ಬೇರೆ ವರದಿಗಳಲ್ಲಿ ಪ್ರಸ್ತಾಪಿತವಾಗಿದೆಯಾದರೂ ಈ ಪತ್ರಿಕೆಯ ವರದಿ ಪ್ರಕಾರ ಅದು ಎರಡು ಪಟ್ಟಿಗಿಂತ ಹೆಚ್ಚಾಗಿವೆ. ಇದರಲ್ಲಿ ಶೇಕಡಾ ಎಂಬತ್ತು ಅಪರಾಧಗಳು ಹುಡುಗಿಯರ ಮೇಲೆ ನಡೆದುದರಿಂದ ಉಳಿದ ಶೇಕಡ 57ರಷ್ಟು ಅಪರಾಧ ಹುಡುಗರ ಮೇಲೆ ನಡೆಸಲಾಗಿದೆ. (ಗಾರ್ಡಿಯನ್ 7-7-1987)

ಈ ದೇಶದಲ್ಲಿ ವಿವಾಹ ವಿಚ್ಛೇದನೆಯ ಬಗ್ಗೆ ಹೇಳುವುದಾದರೆ, ಮಧ್ಯಮ ವರ್ಗದ ವಿದ್ಯಾಭ್ಯಾಸ ಗಳಿಸಿದ ಮತ್ತು ಚೆನ್ನಾಗಿ ತಿನ್ನುವ ಕುಡಿಯುವ ಜನರಲ್ಲಿ ಶೇಕಡ 32 ಮಹಿಳೆಯರು ನ್ಯಾಯಾಲಕ್ಕೆ ಹೋಗಿ ತಮ್ಮ ಪತಿಯಂದಿರು ಬಹಳ ದೌರ್ಜನ್ಯ ಮಾಡುತ್ತಾರೆ, ಹೊಡೆಯುತ್ತಾರೆ ಎಂದು ಸಾಬೀತುಪಡಿಸಿ ವಿವಾಹ ವಿಚ್ಛೇದನ ಪಡೆದರು. ಕಾರ್ಮಿಕ ವರ್ಗದ ಜನರಲ್ಲಿ ಈ ಸಂಖ್ಯೆ ಶೇಕಡ 40 ಆಗಿದೆ. (Marital Violence - Taxistock Publication 1983)

ಮೇಲೆ ಬರೆದುದು ನ್ಯಾಯಾಲಯಗಳಿಗೆ ಮೊರೆಹೊಕ್ಕ ಮಹಿಳೆಯರ ಸಂಖ್ಯೆಯಾಗಿದೆ. ಅನೇಕ ಮಹಿಳೆಯರು ನ್ಯಾಯಾಲಯಕ್ಕೆ ಹೋಗಿಲ್ಲ. ಆದುದರಿಂದ ದೌರ್ಜನ್ಯಕ್ಕೆ ತುತ್ತಾದ ಈ ಮಹಿಳೆಯರ ಸಂಖ್ಯೆ ನ್ಯಾಯಾಲಯದ ಅಂಕೆ ಸಂಖ್ಯೆಗಳಲ್ಲಿ ಕಾಣಿಸಲಾರದು.

ಈ ರಿಪೋರ್ಟ್‌ನಲ್ಲಿ ಮಹಿಳೆಯರು ಹೀಗೆ ಹೇಳಿದುದಾಗಿ ಉಲ್ಲೇಖಿಸಲಾಗಿದೆ: "ನಮ್ಮ ದೌರ್ಜನ್ಯ ಪೀಡಿತ ಜೀವಿತ ಈಗ ಬದಲಾಗಲಾರದು. ನಮ್ಮ ಸ್ಥಿತಿ ಹೇಗಿದೆ ಎಂದರೆ, ನಮ್ಮ ಮಕ್ಕಳ ಸ್ಥಿತಿ ಹೇಗಿದೆ ಎಂದರೆ, ಈ ಸ್ಥಿತಿ ಹೇಗಿದ್ದರೂ ಹೀಗೆಯೇ ಮುಂದುವರಿಯುತ್ತಾ ಹೋಗುವುದು." ಒಬ್ಬ ಸಮಾಜ ಸೇವಕ ಮನೆಗಳನ್ನು ಸಂದರ್ಶಿಸಿ ವರದಿ ನೀಡುವಾಗ ಒಬ್ಬ ಮಹಿಳೆ ಹೀಗೆ ಹೇಳಿದಳು: "ನನ್ನ ಪತಿ ನನಗೆ ನನ್ನ ಜೀವಿತವೆಲ್ಲ ಹೊಡೆಯುತ್ತಾ ಇದ್ದಾನೆ. ನಾನು ಮೊದಲ ಬಾರಿ ಗರ್ಭಿಣಿಯಾದಾಗ ನನ್ನ ಪತಿ ಬೇರೆಯವರೊಂದಿಗೆ ಹೊರಗೆ ಹೋಗಿ ಮದ್ಯ ಕುಡಿದು ಬಂದು ನನ್ನನ್ನು ಹೊಡೆಯಲು ತೊಡಗಿದನು........ ಈ ರೀತಿ ಪ್ರತಿದಿನ ನಡೆಯುತ್ತಿತ್ತು. ಒಮ್ಮೆ ಅವನು ನನ್ನ ಭುಜವನ್ನು ಹಿಡಿದು ನನ್ನ ತಲೆಯನ್ನು ಗೋಡೆಗೆ ಬಡಿಯತೊಡಗಿದನು. ನಾನು ಪ್ರಜ್ಞಾಶೂನ್ಯಳಾದೆ. ಅಲ್ಲಿಂದ ನನ್ನನ್ನು ಎಳೆದುಕೊಂಡು ಹೋಗಿ ನೀರಿನ ಟ್ಯಾಪ್ ಕೆಳಗೆ ಇರಿಸಿ ತಣ್ಣೀರನ್ನು ತಲೆಗೆ ಸುರಿದನು. ನನಗೆ ಪ್ರಜ್ಞಾವಸ್ಥೆ ಉಂಟಾದಾಗ ಪುನಃ ನನ್ನ ಭುಜವನ್ನು ಹಿಡಿದು ನನ್ನ ತಲೆಯನ್ನು ಗೋಡೆಗೆ ಬಡಿಯತೊಡಗಿದನು. ನಾನು ಪುನಃ ಪ್ರಜ್ಞಾಶೂನ್ಯಳಾದೆ." ಅವಳೊಂದಿಗೆ, ಅವಳೇಕೆ ಇಂತಹ ಪತಿಯನ್ನು ಬಿಡುವುದಿಲ್ಲ ಎಂದು ವಿಚಾರಿಸಿದಾಗ ಹೇಳಿದಳು: "ನಾನು ಮಕ್ಕಳನ್ನು ಕರೆದುಕೊಂಡು ಎಲ್ಲಿಗೆ ಹೋಗಲಿ?" ಸರಕಾರದ ಸಮಾಜಸೇವೆ ಸಂಸ್ಥೆಗೆ ಹೋಗಲು ಆಕೆಗೆ ಸೂಚಿಸಿದಾಗ, ಆಕೆ ಹೇಳಿದಳು: "ನಾನು ಅದಕ್ಕೆ ಪ್ರಯತ್ನಿಸಿದ್ದೆ. ಆದರೆ ಅವರು ನನ್ನ ದೂರನ್ನು ಗಮನಿಸದೆ ಮನೆಗೆ ಹಿಂದಿರುಗಲು ಉಪದೇಶಿಸಿದರು." ಈ ಮಹಿಳೆಯ ಬಗ್ಗೆ ಎಲ್ಲ ಸ್ಥಳೀಯ ಸಂಸ್ಥೆಗಳೊಂದಿಗೆ ಹೇಳಿ ಆಕೆಗೆ ಸಹಾಯ ನೀಡಲು ಆ ಸಮಾಜ ಸೇವಕ ಅಭ್ಯರ್ಥಿಸಿದಾಗ ಅವರು ಹೇಳಿದರು: "ಆಕೆ ಮನೆಯಿಂದ ಹೊರಟರೆ ವೋಲಂಟರಿ ಹೋಮ್‌ಲೆಸ್ (ಸ್ವಯಂ ನಿರ್ಧಾರ ಪ್ರಕಾರ ಮನೆಬಿಟ್ಟವಳು) ಎಂದು ಗಣಿಸಲ್ಪಡುವಳು. ಅಂತಹ ವ್ಯಕ್ತಿಗಳಿಗೆ ಸಹಾಯ ದೊರಕಲಾರದು." ಇಂತಹ ಪರಿಸ್ಥಿತಿಯಲ್ಲಿ ಆ ಅಸಹಾಯಕ ಮಹಿಳೆ ಏನು ಮಾಡಬೇಕು. ಆಕೆ ಮನೆಯಲ್ಲಿಯೇ ಇದ್ದು ತನ್ನ ಗಂಡನ ವಿರುದ್ಧ ಮೊಕದ್ದಮೆ ಹೂಡಬೇಕೋ? ಅಥವಾ ಸಮಾಜ ಸೇವಾ ಸಂಸ್ಥೆಗೆ ಹೋಗಬೇಕೋ? ಆಕೆಯ ಗಂಡ ಎಷ್ಟು ದೌರ್ಜನ್ಯ ಮಾಡುವವನೆಂದರೆ ಅವನು ಇನ್ನಷ್ಟು ಹೆಚ್ಚು ಹಿಂಸಿಸಲಾರನೆ? (Scream Quietely or the Neighbours will hear)

ಅಮೇರಿಕದಲ್ಲಿ ಪ್ರಕಟವಾದ ಸರ್ವೇಕ್ಷಣೆಗಳು ಸಹ ಯಾವುದೇ ರೀತಿಯಲ್ಲಿ ಉತ್ತಮವಾಗಿಲ್ಲ. ಶೇಕಡ 41ರಷ್ಟು ಮಹಿಳೆಯರನ್ನು ಮದುವೆಯ ನಂತರ ಮೊದಲಿನ ಆರು ತಿಂಗಳಲ್ಲಿ ಹೊಡೆಯಲಾಯಿತು. ಶೇಕಡ 18ರಷ್ಟು ಮಹಿಳೆಯರನ್ನು ಮದುವೆಯ ಒಂದು ವರ್ಷದ ನಂತರ ಹೊಡೆಯಲು ಪ್ರಾರಂಭಿಸಲಾಯಿತು. ಶೇಕಡಾ 25ರಷ್ಟು ಹೆಂಗಸರನ್ನು ಮದುವೆಯ ಎರಡು ವರ್ಷದ ನಂತರ ಹೊಡೆಯಲು ಪ್ರಾರಂಭಿಸಲಾಯಿತು. ಇಸ್ಲಾಮ್ ವಿರುದ್ಧ ಅಮೇರಿಕ ಬಹಳ ಉತ್ಸಾಹದಿಂದ ಆಕ್ಷೇಪ ಮಾಡುತ್ತಾ ಇರುತ್ತದೆ. ಇಸ್ಲಾಮ್ ಮಾಡುವ ದೌರ್ಜನ್ಯಗಳ ಚಲಚ್ಚಿತ್ರಗಳನ್ನು ಪ್ರದರ್ಶಿಸುತ್ತಾ ಇರುತ್ತದೆ. ಅದರ ಸ್ವಂತ ಸ್ಥಿತಿ ಹೇಗಿದೆ ಎಂದರೆ ಶೇಕಡಾ 84ರಷ್ಟು ಮಹಿಳೆಯರು ಮದುವೆಯ ನಂತರ ಒಂದರಿಂದ ಎರಡು ವರ್ಷಗಳೊಳಗೆ ಪತಿಯಂದಿರ ದೌರ್ಜನ್ಯಗಳಿಗೆ ಗುರಿಯಾಗುತ್ತಾರೆ. (Dobash and Dobash 1979 ನೋಡಿರಿ)

## ಮಹಿಳೆಯರೊಂದಿಗೆ ಉತ್ತಮ ವರ್ತನೆಯ ಬಗ್ಗೆ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಆದರ್ಶ

ಯಾವ ಧರ್ಮದ ವಿರುದ್ಧ ದೋಷಾರೋಪ ಮಾಡಲಾಗುತ್ತಿದೆಯೋ ಆ ಧರ್ಮದ ಪ್ರವಾದಿಯ ಆದರ್ಶಮಯ ವರ್ತನೆಗಳನ್ನು ನೋಡಿರಿ. ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ(ಸ) ಇಸ್ಲಾಮ್ ಧರ್ಮದ ತತ್ವಗಳು ಅವತೀರ್ಣಗೊಂಡಿದ್ದುವು. ಆ ಧರ್ಮ ತತ್ವಗಳನ್ನು ಅವರು ಹೇಗೆ ಮನವರಿಕೆ ಮಾಡಿಕೊಂಡರು, ಹೇಗೆ ಅವುಗಳನ್ನು ಕಾರ್ಯಗತಗೊಳಿಸಿದರು, ಅವುಗಳನ್ನು ತನ್ನ ದಾಸರಲ್ಲಿ ಹೇಗೆ ಜಾರಿಗೊಳಿಸಿದರು ನೋಡಿರಿ. ಅವು ಇಸ್ಲಾಮ್ ಧರ್ಮ ತತ್ವಗಳಾಗಿದ್ದುವು. ಅವುಗಳ ವಿರುದ್ಧ ಹೇಗೆ ತಾನೆ ಯಾರಿಗಾದರೂ ಆಕ್ಷೇಪಿಸಲು ಸಾಧ್ಯ?

ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಮಹಿಳೆಯರಿಗೆ ಕಷ್ಟ ಉಂಟಾಗುವುದನ್ನು ಸಹಿಸುತ್ತಿರಲಿಲ್ಲ. ಒಮ್ಮೆ ಒಂದು ಒಂಟೆಯನ್ನು ವೇಗವಾಗಿ ಓಡಿಸುತ್ತಾ ಇರುವುದನ್ನು ಕಂಡಾಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ಗಾಜನ್ನು ಒಡೆದು ಹೋಗದಂತೆ ಜಾಗ್ರತೆವಹಿಸಿರಿ. ನೀವು ಓಡಿಸುತ್ತಿರುವ ಒಂಟೆಯ ಮೇಲೆ ಮಹಿಳೆಯರು ಕುಳಿತಿದ್ದಾರೆ. ನೀವು ವೇಗವಾಗಿ ಓಡಿಸಿದರೆ ಅವರಿಗೆ ಗಾಯವಾಗಬಹುದು." (ಮುಸ್ಲಿಮ್)

ಗಾಜಿನ ಸಾಮಗ್ರಿಗಳು ತುಂಬಿಸಿದ ಪೊಟ್ಟಣದ ಮೇಲೆ "Glass With Care" – ಗಾಜಿದೆ, ಜಾಗ್ರತೆವಹಿಸಿರಿ. ಎಂದು ಬರೆದುದನ್ನು ನೀವು ಕಾಣುತ್ತೀರಿ. ಹದಿನಾಲ್ಕುನೂರು ವರ್ಷಗಳ ಹಿಂದೆ ಪೈಗಂಬರ್(ಸ) ಮಹಿಳೆಯರ ಬಗ್ಗೆ ಇದೇ ನುಡಿಗಟ್ಟನ್ನು ಆವಿಷ್ಕರಿಸಿದ್ದರು. ಮಹಿಳೆಯರ ಬಗ್ಗೆ ಇಷ್ಟು ಜಾಗ್ರತೆ ವಹಿಸುವ ಮನೋಭಾವ ಹೊಂದಿದ್ದ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಮಹಿಳೆಯರಿಗೆ ಹಿಂಸೆ ನೀಡುವುದನ್ನು ಪ್ರತಿಪಾದಿಸಿದ್ದರೆಂದು ಆರೋಪಿಸುವುದು ಬಹಳ ದೊಡ್ಡ ಅಕ್ರಮ ಕೃತ್ಯವಾಗಿದೆ.

ಒಮ್ಮೆ ಹಝ್‌ರತ್ ಪೈಗಂಬರ್(ಸ) ತನ್ನ ಪತ್ನಿ ಹಝ್‌ರತ್ ಸಫಿಯಾರೊಂದಿಗೆ(ರ) ಒಂಟೆಯಲ್ಲಿ ಸವಾರಿ ಮಾಡುತ್ತಾ ಹೋಗುತ್ತಿದ್ದಾಗ ಒಂಟೆ ಮುಗ್ಗರಿಸಿ ನೆಲಕ್ಕೆ ಬಿತ್ತು. ಎಲ್ಲರೂ ಹಝ್‌ರತ್ ಪೈಗಂಬರರ(ಸ) ಸಮೀಪಕ್ಕೆ ಓಡಿ ಬಂದರು. ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ಅಲ್‌ಮರ್‌ಅತು ಅಲ್‌ಮರ್‌ಅತು" – ನನ್ನ ಬಗ್ಗೆ ಯೋಚನೆ ಬಿಡಿರಿ. ಮಹಿಳೆಯನ್ನು ಲಕ್ಷಿಸಿರಿ. ಇಂಗ್ಲಿಷರು ಲೇಡೀಸ್ ಫಸ್ಟ್ (ಮಹಿಳೆಯರು ಮೊದಲು) ಎಂದು ಹೇಳುವ ಪ್ರಯೋಗವನ್ನು ಮೊತ್ತ ಮೊದಲಿಗೆ ಜಾರಿಗೆ ತಂದುದು ಹಝ್‌ರತ್ ಪೈಗಂಬರರೇ(ಸ) ಆಗಿದ್ದಾರೆ.

ಹಝ್‌ರತ್ ಪೈಗಂಬರರು(ಸ) ತನ್ನ ಪತ್ನಿಯರಿಂದ ಯಾವುದೇ ಕಹಿ ಮಾತನ್ನು ಆಲಿಸಬೇಕಾಗಿ ಬಂದಿರಲಿಲ್ಲ ಎಂದು ಹೇಳಲಿಕ್ಕಾಗದು. ಆದರೆ ಅಂತಹ ಸಂದರ್ಭಗಳಲ್ಲಿ ಹಝ್‌ರತ್ ಪೈಗಂಬರರ(ಸ) ಪ್ರತಿಕ್ರಿಯೆ ಒರಟಾಗಿರಲಿಲ್ಲ. ಅದು ಮೃದುವಾದ ಪ್ರತಿಕ್ರಿಯೆಯಾಗಿತ್ತು. ಕೆಲವು ಸಾರಿ ಸತ್ಯವಿಶ್ವಾಸಿಗಳ ಮಾತೆಯರಾದ ಹಝ್‌ರತ್ ಪೈಗಂಬರರ(ಸ) ಪತ್ನಿಯರಿಂದ ಎಂತಹ ವರ್ತನೆ ಸಂಭವಿಸಿತೆಂದರೆ ಅದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

"ಓ ಪ್ರವಾದಿ, ನಿನ್ನ ಪತ್ನಿಯರೊಡನೆ ಹೇಳು: "ನೀವು ಐಹಿಕ ಜೀವನವನ್ನೂ ಅದರ ಆಡಂಭರವನ್ನೂ ಬಯಸುವಿರಾದರೆ ಬನ್ನಿರಿ, ನಾನು ನಿಮಗೇನಾದರೂ ಪರಿಹಾರ ಧನ ನೀಡಿ ಯಥೋಚಿತವಾದ ರೀತಿಯಲ್ಲಿ ನಿಮ್ಮನ್ನು ಬಿಟ್ಟು ಬಿಡುವೆನು." (33:29)

ಪವಿತ್ರ ಖುರ್‌ಆನಿನ ಈ ವಚನದಿಂದ ತಿಳಿದು ಬರುವುದೇನೆಂದರೆ; ಪೈಗಂಬರರ ಪತ್ನಿಯಂದಿರು ವಿವಾಹ ವಿಚ್ಛೇದನಕ್ಕೆ ಬಯಸುವರಾದರೆ ಅವರಿಗೆ ತಲಾಖ್ ನೀಡುವುದು ಅನುಮತನೀಯ. ಅಲ್ಲಾಹನು ಹಝ್‌ರತ್ ಪೈಗಂಬರರಿಗೆ ಉಪದೇಶಿಸಿದನು – ಎಲ್ಲ ಪತ್ನಿಯಂದಿರನ್ನು ಕರೆ. ಅವರೊಡನೆ ಹೇಳು: ಇದೇ ಬೇಡಿಕೆಯನ್ನು ನೀವು ಮುಂದುವರಿಸಿಕೊಂಡು ಹೋಗುವುದಾದರೆ, ನೀವು ಮನೆಯ ವಾತಾವರಣವನ್ನು ಹಾಳುಮಾಡುವ ಅಗತ್ಯವಿಲ್ಲ. ನಾನು ನಿಮಗೆ ಸಂಪತ್ತು ನೀಡಿ ನಿಮ್ಮನ್ನು ಬಿಟ್ಟುಬಿಡುವೆನು. ನಂತರ ನೀವು ನನ್ನೊಂದಿಗೆ ಜೀವಿಸಬಾರದು. ಏಕೆಂದರೆ, ನನ್ನ ಜವಾಬ್ದಾರಿಕೆಗಳನ್ನು ನಿಭಾಯಿಸಲು ನಾನು ಒಂದು ವಿಶೇಷ ರೀತಿಯ ಜೀವನ ನಡೆಸಲು ನಿರ್ಬಂಧಿತನಾಗಿದ್ದೇನೆ. ಆದರೆ ಉತ್ತಮ ರೀತಿಯಲ್ಲಿ ಬದುಕಬೇಕೆಂಬ ನಿಮ್ಮ ಹಕ್ಕನ್ನು ನಾನು ತಡೆಯುವುದಿಲ್ಲ. ನೀವು ಬಯಸುವಿರಾದರೆ ನಾನು ನಿಮಗೆ ಸಂಪತ್ತು ನೀಡುತ್ತೇನೆ. ಕ್ರೋಧಗೊಳ್ಳುವ ಅಗತ್ಯವಿಲ್ಲ. ನೀವು ನನ್ನಿಂದ ಬಿಟ್ಟುಹೋಗಬಹುದು.

ಪವಿತ್ರ ಖುರ್‌ಆನ್ ಇನ್ನೊಂದು ಘಟನೆಯನ್ನು ಸಹ ವಿವರಿಸುತ್ತದೆ. ಒಮ್ಮೆ ಒಂದು ರಹಸ್ಯವನ್ನು ತನ್ನ ಒಬ್ಬ ಪತ್ನಿಗೆ ಹಝ್‌ರತ್ ಪೈಗಂಬರ್(ಸ) ಹೇಳಿದ್ದರು. ಆ ಪತ್ನಿ ಆ ರಹಸ್ಯವನ್ನು ಬೇರೆಯವರಿಗೆ ತಿಳಿಸಿದರು. ಆಗ ಹಝ್‌ರತ್ ಪೈಗಂಬರರು ಯಾವುದೇ ರೀತಿಯ ಕಟುಮಾತುಗಳನ್ನಾಡಲಿಲ್ಲ; ಹೊಡೆಯುವುದು ಬಿಡಿ. ಅವರು ತನ್ನ ಪತ್ನಿಯೊಂದಿಗೆ, "ನೀನು ನಾನು ಹೇಳಿದ ರಹಸ್ಯವನ್ನು ಬಹಿರಂಗಪಡಿಸಿದೆ" ಎಂದು ಮಾತ್ರ ಹೇಳಿದರು. ಆಗ ಆ ಪತ್ನಿ ಕೇಳಿದರು: ಈ ವಿಷಯವನ್ನು ನಿಮಗೆ ಯಾರು ತಿಳಿಸಿದರು? ಆಗ ಹಝ್‌ರತ್ ಪೈಗಂಬರರು(ಸ) ಹೇಳಿದರು: ಸರ್ವಜ್ಞನೂ ಎಲ್ಲವನ್ನು ಅರಿಯುವವನೂ ಆದ ಅಲ್ಲಾಹನು ನನಗೆ ತಿಳಿಸಿದನು. (ಪವಿತ್ರ ಖುರ್‌ಆನ್ 66:4)

ಪುನಃ ಹೀಗೆ ಹೇಳಲಾಯಿತು: "ನೀವಿಬ್ಬರೂ (ರಹಸ್ಯ ಹೇಳಿದವಳೂ ರಹಸ್ಯ ಆಲಿಸಿದವಳೂ) ಪಶ್ಚಾತ್ತಾಪಪಟ್ಟು ಅಲ್ಲಾಹನೆಡೆಗೆ ಮರಳುವುದಾದರೆ ಅದು ನಿಮಗೆ ಉತ್ತಮವಾಗಿರುವುದು. ನಿಜವಾಗಿಯೂ ನಿಮ್ಮಿಬ್ಬರ ಹೃದಯಗಳು (ಈಗಾಗಲೇ ತಪ್ಪಿನೆಡೆಗೆ) ಬಾಗಿವೆ. ಆದರೆ ನೀವಿಬ್ಬರೂ ಪ್ರವಾದಿಗೆ ವಿರುದ್ಧವಾಗಿ ಪರಸ್ಪರ ಬೆಂಬಲಿಸುವುದಾದರೆ (ತಿಳಿದುಕೊಳ್ಳಿರಿ) ಅಲ್ಲಾಹನು ಅವರ (ಪ್ರವಾದಿಯ) ಮಿತ್ರನಾಗಿದ್ದಾನೆ. ಜಿಬ್ರೀಲ್ ಮತ್ತು ಸತ್ಯವಿಶ್ವಾಸಿಗಳ ಪೈಕಿಯ ಸಜ್ಜನರು ಸಹ. ಅಷ್ಟೇ ಅಲ್ಲ ದಿವ್ಯದೂತರು ಅವರ ಬೆಂಬಲಿಗರೂ ಆಗಿದ್ದಾರೆ."

ಅವರು (ಪ್ರವಾದಿ) ನಿಮ್ಮ ವಿವಾಹ ವಿಚ್ಛೇದನೆ ಮಾಡಿದರೆ ನಿಮ್ಮ ಬದಲಿಗೆ ನಿಮಗಿಂತ ಉತ್ತಮರಾದ ಪತ್ನಿಯರನ್ನು ಅವರಿಗೆ ಅವರ ಪ್ರಭು ನೀಡಲೂ ಬಹುದು – ಅಲ್ಲಾಹನಿಗೆ ಶರಣಾಗುವ, ಸತ್ಯವಿಶ್ವಾಸಿನಿಯರಾದ, ವಿಧೇಯರಾದ, ಪಶ್ಚಾತ್ತಾಪದಿಂದ ಅಲ್ಲಾಹನ ಕಡೆಗೆ ಬಾಗುವ, ನಿಷ್ಠೆಯಿಂದ ಆರಾಧಿಸುವ, ವ್ರತಾನುಷ್ಠಾನ ಮಾಡುವ ವಿಧವೆಯರಾದ ಅಥವಾ ಕನ್ಯೆಯರಾದ ಪತ್ನಿಯರನ್ನು. (ಪವಿತ್ರ ಖುರ್‌ಆನ್ 66:5,6)

ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಮಹಿಳೆಯರನ್ನು ಹೀನ ಸ್ಥಿತಿಯಿಂದ ಮೇಲೆತ್ತಿ ಅತ್ಯಂತ ವೈಭವಶಾಲಿ ಉನ್ನತ ಸ್ಥಾನಕ್ಕೆ

ತಲಪಿಸಿದರು. ಇದರ ಪರಿಣಾಮವಾಗಿ ಅರಬಿ ಸಮಾಜದಲ್ಲಿ ಮೂಲಭೂತ ಪರಿವರ್ತನೆಗಳು ಉಂಟಾದುವು. ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅಲ್ಲಾಹನು ಪರಿಶುದ್ಧವಾದ ಉಪದೇಶಗಳನ್ನು ನೀಡಿದನು. ಅವರು ಆ ಉಪದೇಶಗಳನ್ನು ಅನುಸರಿಸಿ ಪರಿಶುದ್ಧ ಮಾದರಿಯನ್ನು ತೋರಿಸಿಕೊಟ್ಟರು. ಅದರ ಪರಿಣಾಮವಾಗಿ ಅರಬ್ ದೇಶದಲ್ಲಿ ಒಂದು ಹೊಸ ಸಮಾಜ ನಿರ್ಮಿತವಾಯಿತು. ಮಹಿಳೆಯರು ತಮ್ಮನ್ನು ಪುರುಷರಿಗೆ ಸಮಾನರೆಂದು ಗಣಿಸಿ ತಮ್ಮ ಹಕ್ಕುಗಳನ್ನು ಸಮಾನತೆಯಿಂದ ಪಡೆದುಕೊಂಡರು. ಅದರ ಮೊದಲು ಒಬ್ಬ ಮಹಿಳೆ ತನ್ನ ಪಿತನ ಎದುರಿಗೆ ನಿಂತು ತನ್ನ ಹಕ್ಕುಗಳನ್ನು ಆವಶ್ಯಪಡುವುದು ಅಥವಾ ಬೇರೆ ಯಾರದಾದರೂ ಎದುರಿಗೆ ನಿಂತು ತನ್ನ ಹಕ್ಕುಗಳನ್ನು ಆವಶ್ಯಪಡುವುದು ಊಹಿಸಲು ಸಹ ಸಾಧ್ಯವಿರಲಿಲ್ಲ. ಮಹಿಳೆ ದೌರ್ಜನ್ಯಕ್ಕೆ ಗುರಿಯಾಗುತ್ತಿದ್ದಳು. ಆಕೆಯನ್ನು ವಾರೀಸುದಾರಿಕೆಯಲ್ಲಿ ಹಂಚುವ ಸಾಮಗ್ರಿಯಾಗಿ ಗಣಿಸಲಾಗುತ್ತಿತ್ತು.

ಹಝ್‌ರತ್ ಮುಹಮ್ಮದ್ ಪೈಗಂಬರಿಗೆ(ಸ) ಮೇಲೆ ಬರೆದ ಪವಿತ್ರ ಖುರ್‌ಆನ್ ವಚನ ಅವತೀರ್ಣಗೊಂಡಾಗ ಅವರು ಸ್ವಲ್ಪಕಾಲ ತಮ್ಮ ಪತ್ನಿಯರಿಂದ ಬೇರೆಯಾಗಿ ವಾಸಿಸಲು ತೊಡಗಿದರು – ಪತ್ನಿಯಂದಿರು ಏಕಾಂತದಲ್ಲಿ ಚೆನ್ನಾಗಿ ಯೋಚಿಸಲು ಸಂದರ್ಭ ಸಿಗಲೆಂದು. ಆ ಸಮಯದಲ್ಲಿ ಹಝ್‌ರತ್ ಪೈಗಂಬರರ(ಸ) ಪತ್ನಿಯರ ತಂದೆ ತಾಯಂದಿರಿಗೆ ಈ ವಿಷಯದ ಬಗ್ಗೆ ತಿಳಿದಾಗ ಅವರು ತಮ್ಮ ಪುತ್ರಿಯರ ಬಳಿಗೆ ಉಪದೇಶಿಸಲು ಹೋದರು. ಹಝ್‌ರತ್ ಅಬೂಬಕರ್(ರ) ಮತ್ತು ಹಝ್‌ರತ್ ಉಮರ್‌ರವರ(ರ) ಬಗ್ಗೆ ವಿಶಿಷ್ಟವಾಗಿ ತಿಳಿಯುತ್ತದೆ. ಹಝ್‌ರತ್ ಅಬೂಬಕರ್(ರ) ಹಝ್‌ರತ್ ಆಯಶಾರಿಗೂ ಹಝ್‌ರತ್ ಉಮರ್(ರ) ಹಝ್‌ರತ್ ಹಫ್‌ಸರಿಗೂ ಬುದ್ಧಿಹೇಳಲು ಪ್ರಯತ್ನಿಸಿದರು. ಅನಂತರ ಅವರಿಬ್ಬರೂ ಹಝ್‌ರತ್ ಉಮ್ಮು ಸಲ್ಮಾರವರ ಬಳಿಗೆ ಹೋದಾಗ ಉಮ್ಮು ಸಲ್ಮಾ ಹೇಳಿದರು: ಇಲ್ಲಿ ನಿಮಗೆ ಏನು ಕೆಲಸವಿದೆ? ಹಝ್‌ರತ್ ಪೈಗಂಬರರು(ಸ) ನಮ್ಮ ಬಗ್ಗೆ ಚೆನ್ನಾಗಿ ತಿಳಿದಿದ್ದಾರೆ. ನೀವು ಯಾವುದಾದರೂ ವಸ್ತುವಿನಿಂದ ನಮ್ಮನ್ನು ತಡೆಯಲು ಬಯಸುವುದಾದರೆ ನೀವು ಹಾಗೆ ಮಾಡಬಹುದು. ನಾವು ಹಝ್‌ರತ್ ಪೈಗಂಬರರೊಂದಿಗೆ(ಸ) ನಮ್ಮ ಆವಶ್ಯಕತೆಗಳನ್ನು ಹೇಳದಿದ್ದರೆ ಬೇರೆ ಯಾರೊಂದಿಗೆ ಹೇಳಬೇಕು? ನಿಮ್ಮ ಪತ್ನಿಯರಿಗೆ ಸಂಬಂಧಿಸಿದ ವಿಷಯದಲ್ಲಿ ಅವರು ಹಸ್ತಕ್ಷೇಪ ಮಾಡುವುದನ್ನು ನೀವು ಇಷ್ಟ ಪಡುವಿರೋ? ಇಷ್ಟಪಡುವುದಿಲ್ಲವಾದರೆ ನೀವು ಇಲ್ಲಿಂದ ಹೊರಟು ಹೋಗಿರಿ. ಹಝ್‌ರತ್ ಪೈಗಂಬರ್(ಸ) ಮತ್ತು ಅವರ ಪತ್ನಿಯರ ಮಧ್ಯೆ ಹಸ್ತಕ್ಷೇಪ ಮಾಡಲು ನಿಮಗೆ ಯಾವ ಅಧಿಕಾರವೂ ಇಲ್ಲ. (ಮುಸ್ಲಿಮ್)

ಇಸ್ಲಾಮಿಗೆ ಮೊದಲು ಒಬ್ಬ ಮಹಿಳೆ ಎದ್ದುನಿಂತು ಪುರುಷನನ್ನು ಸಂಬೋಧಿಸಿ ಈ ರೀತಿ ಹೇಳುವಳು ಎಂದು ಊಹಿಸಲು ಕೂಡ ಯಾವನೇ ಅರಬಿಗೆ ಸಾಧ್ಯವಿರಲಿಲ್ಲ.

ಒಮ್ಮೆ ಒಂದು ವಿಷಯದ ಕುರಿತು ಹಝ್‌ರತ್ ಉಮರ್(ರ) ತನ್ನ ಪತ್ನಿಯೊಂದಿಗೆ ಅಭಿಪ್ರಾಯ ವ್ಯತ್ಯಾಸ ಹೊಂದಿದರು. ಅವರ ಪತ್ನಿ ಹಝ್‌ರತ್ ಆತಿಖ, ನಮಾಝ್ ಬಗ್ಗೆ ಬಹಳ ಆಸಕ್ತಿ ಹೊಂದಿದವರಾಗಿದ್ದರು. ಮಸ್‌ಜಿದ್‌ಗೆ ಹೋಗಿ ಸಾಮೂಹಿಕ ನಮಾಝ್ ಮಾಡುವ ಅಭ್ಯಾಸ ಆಕೆ ಮಾಡಿಕೊಂಡಿದ್ದರು. ಆಕೆಗೆ ಸಾಮೂಹಿಕ ನಮಾಝ್ ಮಾಡದಿರಲು ಸಾಧ್ಯವಿರಲಿಲ್ಲ. ಮಹಿಳೆ ಐದು ಹೊತ್ತು ನಮಾಝ್‌ಗೆ ಮಸ್‌ಜಿದ್‌ಗೆ ಹೋಗುವುದು ಕಡ್ಡಾಯವಾಗಿಲ್ಲವಾದರೂ ಆಕೆ ಹೋಗುತ್ತಾ ಇದ್ದರೆ ಮನೆಯ ಆವಶ್ಯಕತೆಗಳನ್ನು ಈಡೇರಿಸುವುದು ಹೇಗೆ? ಹಝ್‌ರತ್ ಉಮರ್(ರ) ಸ್ವಲ್ಪ ಸಮಯ ಏನೂ ಮಾತನಾಡದೆ ಇದ್ದು ಸ್ವಲ್ಪ ದಿನಗಳ ನಂತರ ಹೇಳಿದರು: ನಿನ್ನ ನಮಾಝ್ ಸಾಕಷ್ಟಾಯಿತು. ಮನೆಯಲ್ಲಿ ನಮಾಝ್ ಮಾಡಲು ಅನುಮತಿ ಇರುವಾಗ ಮಸ್‌ಜಿದ್‌ಗೆ ಏಕೆ ಹೋಗುತ್ತಿರುವೆ? ಅಲ್ಲಾಹನಾಣೆ, ನಿನ್ನ ಈ ಕೆಲಸ ನನಗೆ ಇಷ್ಟವಿಲ್ಲ. ಆಗ ಪತ್ನಿ ಹೇಳಿದರು: "ಅಲ್ಲಾಹನಾಣೆ, ನಾನು ಮಸ್‌ಜಿದ್‌ಗೆ ಹೋಗಬಾರದು ಎಂದು ನೀವು ನನಗೆ ಆಜ್ಞೆ ನೀಡುವ ತನಕ ನಾನು ಮಸ್‌ಜಿದ್‌ಗೆ ಹೋಗುತ್ತಾ ಇರುವೆನು." ಆದರೆ ಮಸ್‌ಜಿದ್‌ಗೆ ಹೋಗಬೇಡವೆಂದು ಪತ್ನಿಗೆ ಆಜ್ಞೆ ನೀಡುವ ಧೈರ್ಯ ಹಝ್‌ರತ್ ಉಮರ್‌ರಿಗೆ(ರ) ಇರಲಿಲ್ಲ. ಹಝ್‌ರತ್ ಉಮರರ ಪತ್ನಿ ಕೊನೆಗಾಲದ ತನಕ ತನ್ನ ಅಭ್ಯಾಸ ಬಿಡಲಿಲ್ಲ. ಅವರು ಮಸ್‌ಜಿದ್‌ಗೆ ಹೋಗಿ ಐದುಹೊತ್ತು ನಮಾಝ್ ಮಾಡುತ್ತಾ ಇದ್ದರು.

(ಸಹೀಹ್ ಬುಖಾರಿ)

ಒಂದು ಹದೀಸಿನಲ್ಲಿ ಹಝ್‌ರತ್ ಅಬ್ದುಲ್ಲಾ ಬಿನ್ ಉಮರ್ ಹೀಗೆ ಹೇಳುತ್ತಾರೆ: "ನಾವು ನಮ್ಮ ಮನೆಗಳಲ್ಲಿ ನಮ್ಮ ಮಹಿಳೆಯರೊಂದಿಗೆ ನಿಸ್ಸಂಕೋಚದಿಂದ ಮಾತನಾಡಲು ಹೆದರುತ್ತಿದ್ದೆವು. ಅವರು ಅದರ ಬಗ್ಗೆ ದೂರು ಹೇಳುವರೋ ಎಂದು ನಾವು ಭಯಪಡುತ್ತಿದ್ದೆವು."

(ಬುಖಾರಿ)

ಅರಬ್ ದೇಶದ ಮಹಿಳೆ ಈ ಸ್ಥಿತಿಗೆ ತಲಪಿದ್ದಳು. ಜೀವಂತವಾಗಿ ಹೂಳಡಲ್ಪಡುತ್ತಿದ್ದವಳು, ಗುಲಾಮರಿಗಿಂತ ಕೀಳಾಗಿ ಗಣಿಸಲ್ಪಡುತ್ತಿದ್ದವಳು ಇಂತಹ ಉನ್ನತ ಸ್ಥಾನಕ್ಕೆ ತಲಪಿದಳು. ಆ ಕಾಲದಲ್ಲಿ ಅರಬ್ ದೇಶದ ಮಹಿಳೆ ಅತ್ಯಂತ ದೌರ್ಜನ್ಯ ಪೀಡಿತಳಾಗಿದ್ದಳು. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಆಕೆಯನ್ನು ಹೀನ ಸ್ಥಿತಿಯಿಂದ ಮೇಲೆತ್ತಿ ಎಷ್ಟು ಉನ್ನತ ಸ್ಥಾನಕ್ಕೆ ತಲಪಿಸಿದರು!

ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಜೀವಿತಾದ್ಯಂತ ಯಾವುದೇ ಮಹಿಳೆಯ ಮೇಲೆ ಕೈ ಎತ್ತಿರಲಿಲ್ಲ. ಯಾವುದೇ ಮಗುವಿನ ಮೇಲೆ ಕೈ ಎತ್ತಿರಲಿಲ್ಲ. ಯಾವುದೇ ಗುಲಾಮನ ಮೇಲೆ ಕೈ ಎತ್ತಲಿಲ್ಲ. ಆದುದರಿಂದ ಇದರಿಂದ ಒಂದು ಅಂಶವು ಬೆಳಕಿಗೆ ಬರುತ್ತಿದೆ. ಹಝ್‌ರತ್ ಪೈಗಂಬರರಿಗೆ(ಸ), "ಅವರಿಗೆ ಹೊಡೆಯಿರಿ" ಎನ್ನುವ ಆಜ್ಞೆ ಅವತೀರ್ಣವಾದುದು ಅವರ ಹೃದಯದ ಅಭಿಲಾಷೆ ಪ್ರಕಾರವಾಗಿರಲಿಲ್ಲ. ಅದು ಏಕದೇವನ ಸಂದೇಶವಾಗಿತ್ತು. ಯಾರ ಹೃದಯದ ಸ್ಥಿತಿ ಹೇಗಿತ್ತೆಂದರೆ, ಅವರು ತನ್ನ ಜೀವಿತದಲ್ಲಿ ತನ್ನ ಗುಲಾಮರೊಂದಿಗೆ, ತನ್ನ ಅಧೀನವಿರುವವರೊಂದಿಗೆ, ತನ್ನ ಶತ್ರುಗಳೊಂದಿಗೆ, ಆ ಜನರು ಅನ್ಯಾಯದಿಂದ ವರ್ತಿಸುತ್ತಿದ್ದರೂ ಅವಿಧೇಯರಾಗಿದ್ದರೂ ಆ ಜನರ ವಿರುದ್ಧ ಕಟುಶಬ್ದ ಕೂಡ ಹೊರಡಿಸುತ್ತಿರಲಿಲ್ಲ, ಅಂತಹ ಮಹಾನುಭಾವರು "ಅವರಿಗೆ ಹೊಡೆಯಿರಿ" ಎಂದು ಮಹಿಳೆಯರ ಬಗ್ಗೆ ಯೋಚಿಸಲು ಕೂಡ ಸಾಧ್ಯವಿರಲಿಲ್ಲ.

ಆದುದರಿಂದ ಮನುಷ್ಯರ ಪ್ರಕೃತಿ ಬಗ್ಗೆ ತಿಳಿದಿರುವ ಅಲ್ಲಾಹನಿಗೆ ಗೊತ್ತಿದೆ: ಕೆಲವು ಮನೆಗಳಲ್ಲಿ ಮಹಿಳೆಯರು ಹೇಗೆ ವರ್ತಿಸುತ್ತಾರೆಂದರೆ, ತಮಗೆ ಮಿತಿಮೀರಿ ವರ್ತಿಸುವಾಗ ಶಿಕ್ಷೆ ದೊರಕಲಾರದು ಎಂಬ ಭರವಸೆ ಇದ್ದರೆ ಅವರು ನಿರ್ಭಯರಾಗಿ ಮಿತಿಮೀರಿ ವರ್ತಿಸಲು ಪ್ರಾರಂಭಿಸುತ್ತಾರೆ. ಆದುದರಿಂದ ಅಲ್ಲಾಹನೇ ಈ ಶಿಕ್ಷೆಯನ್ನು ವಿಧಿಸಿರುವನು. ವೈಯಕ್ತಿಕವಾಗಿ ಹಝ್‌ರತ್ ಪೈಗಂಬರರ(ಸ)

ಮನೋಭಾವಕ್ಕೆ ಇದು ವಿರುದ್ಧವಾಗಿತ್ತು. ಇದರ ಬಗ್ಗೆ ಹಝ್‌ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ:

"ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಎಲ್ಲ ವಿಷಯಗಳಲ್ಲೂ ಪರಿಪೂರ್ಣ ಮಾದರಿ ಆಗಿದ್ದಾರೆ. ಅವರ ಜೀವಿತವನ್ನು ನೋಡಿರಿ – ಅವರು ಮಹಿಳೆಯರೊಂದಿಗೆ ಹೇಗೆ ವರ್ತಿಸುತ್ತಿದ್ದರೆಂದು. ಮಹಿಳೆಯ ವಿರುದ್ಧ ನಿಲ್ಲುವವನು ಹೇಡಿಯೂ ನಪುಂಸಕನೂ ಆಗಿದ್ದಾನೆ. ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಜೀವಿತವನ್ನು ಅಧ್ಯಯನ ಮಾಡಿ ಅವರು ಎಂತಹ ಸುಸ್ವಭಾವಿಯಾಗಿದ್ದರು ಎಂದು ನೀವು ತಿಳಿದುಕೊಳ್ಳಿರಿ. ಅವರು ಬಹಳ ಗಾಂಭೀರ್ಯ ಹೊಂದಿದವರಾಗಿದ್ದರೂ ಒಬ್ಬ ಬಲಹೀನ ಮಹಿಳೆ ಅವರನ್ನು ನಿಲ್ಲಿಸಿ ಮಾತನಾಡಲು ಆರಂಭಿಸುತ್ತಿದ್ದರೆ ಆಕೆ ಮಾತನ್ನು ನಿಲ್ಲಿಸುವ ತನಕ ಆಕೆಯ ಮಾತಿಗೆ ಕಿವಿಗೊಡುತ್ತಾ ನಿಲ್ಲುತ್ತಿದ್ದರು."

(ಮಲ್‌ಫೂಝಾತ್ ಸಂಪುಟ 4, ಪುಟ 44)

ಇದು ಹಝ್‌ರತ್ ಪೈಗಂಬರರು(ಸ) ಮನವರಿಕೆ ಮಾಡಿಕೊಂಡ ಇಸ್ಲಾಮಿನ ಉಪದೇಶದ ಪ್ರಾಯೋಗಿಕ ರೂಪವಾಗಿದೆ. ಹಝ್‌ರತ್ ಪೈಗಂಬರರ ನಡೆವಳಿಕೆಗೆ ವಿರುದ್ಧವಾಗಿ ಪವಿತ್ರ ಖುರ್‌ಆನಿನ ಬಗ್ಗೆ ಅಭಿಪ್ರಾಯ ಸೂಚಿಸುವ ಅಧಿಕಾರ ಯಾರಿಗೂ ಇರುವುದಿಲ್ಲ. ಹಝ್‌ರತ್ ಪೈಗಂಬರರು(ಸ) ತೋರಿಸಿಕೊಟ್ಟ ಜೀವಿತ ಶೈಲಿ ಪವಿತ್ರ ಖುರ್‌ಆನಿನ ವ್ಯಾಖ್ಯಾನವಾಗಿದೆ. ಅದರ ಮೂಲಕವೇ ಇಸ್ಲಾಮಿನ ಉಪದೇಶವೇನೆಂಬುದರ ಬಗ್ಗೆ ತೀರ್ಮಾನ ಆಗುವುದು.

ಹಝ್‌ರತ್ ವಾಗ್ದತ್ತ ಮಸೀಹ್(ಅ) ಈ ಕಾಲಘಟ್ಟದಲ್ಲಿ ಹಝ್‌ರತ್ ಪೈಗಂಬರರ(ಸ) ಕನ್ನಡಿಯಲ್ಲಿ ಈ ಉಪದೇಶಗಳನ್ನು ಕಂಡರು. ಆ ಕನ್ನಡಿಯಿಂದಲೇ ಅದನ್ನು ಮನವರಿಕೆ ಮಾಡಿಕೊಂಡರು.

ಹಝ್‌ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳಿದರು:

"ನಾನು ಯಾವಾಗಲಾದರೊಮ್ಮೆ ಆಕಸ್ಮಿಕವಾಗಿ ನನ್ನ ಪತ್ನಿಯೊಂದಿಗೆ ಸ್ವಲ್ಪಮಟ್ಟಿಗೆ ಕಠಿಣವಾಗಿ ವರ್ತಿಸಿದರೆ ನನ್ನ ಶರೀರ ನಡುಗಲು ತೊಡಗುತ್ತದೆ. ನಾನು ಯೋಚಿಸುತ್ತೇನೆ – ಒಬ್ಬ ಮಹಿಳೆಯನ್ನು ನೂರಾರು ಮೈಲು ದೂರದಿಂದ ತಂದು ಅಲ್ಲಾಹನು ನನ್ನ ವಶಕ್ಕೆ ನೀಡಿರುವನು. ನಾನು ಕಠಿಣವಾಗಿ ವರ್ತಿಸಿದುದು ಪ್ರಾಯಶಃ ಪಾಪದೋಷ ಉಂಟುಮಾಡುವುದು. ಆಗ ನಾನು ನನ್ನ ಪತ್ನಿಯೊಂದಿಗೆ ಹೇಳುತ್ತೇನೆ: ನೀವು ನನ್ನ ಬಗ್ಗೆ ನಮಾಝ್‌ನಲ್ಲಿ ಪ್ರಾರ್ಥಿಸಿರಿ. ನನ್ನ ವರ್ತನೆ ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿದ್ದರೆ ನನ್ನನ್ನು ಅವನು ಕ್ಷಮಿಸಲಿ. ನಾವು ಯಾವುದಾದರೂ ದೌರ್ಜನ್ಯ ಕೃತ್ಯ ತೊಡಗುವುದರ ಬಗ್ಗೆ ನಾನು ಹೆದರುತ್ತೇನೆ."

(ಫತಾವಾ ಅಹ್ಮದಿಯಾ ಭಾಗ–2, ಪುಟ 38)

ಹಝ್‌ರತ್ ವಾಗ್ದತ್ತ ಮಸೀಹರ(ಅ) ಮಾದರಿ ಜೀವಿತದ ವಿಷಯಗಳು ಇಂದಿನ ತನಕ ನಮ್ಮ ಮನೆಗಳಲ್ಲಿ ಜೀವಂತವಾಗಿ ಇವೆ. ಇದು ಹಳೆಯ ಮಾತೇನೂ ಅಲ್ಲ. ಹಝ್‌ರತ್ ವಾಗ್ದತ್ತ ಮಸೀಹ್(ಅ) ತಮ್ಮ ಪತ್ನಿಯೊಂದಿಗೆ ವರ್ತಿಸುತ್ತಿದ್ದ ರೀತಿ ಅದೆಷ್ಟು ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಭರಿತವಾಗಿತ್ತೆಂದರೆ, ಇಂದು ಲೋಕದಲ್ಲಿ "ನಾನು ನನ್ನ ಪತ್ನಿಯೊಂದಿಗೆ ಬಹಳ ಉತ್ತಮವಾಗಿ ವರ್ತಿಸುತ್ತೇನೆ" ಎಂದು ವಾದಿಸುವ ಅತ್ಯಂತ ಉತ್ತಮ ಮನುಷ್ಯನು ಸಹ ಆ ನಡತೆಯ ಸಮೀಪಕ್ಕೆ ಕೂಡ ತಲಪಲು ಸಾಧ್ಯವಿಲ್ಲ. ಇದು ಬಹಳ ಸೂಕ್ಷ್ಮ ಅಂಶವಾಗಿದೆ. ಯಾರ ಮೇಲೆ ದೌರ್ಜನ್ಯ ನಡೆಸಲಾಗಿದೆಯೋ ಆಕೆ ಪ್ರಾರ್ಥಿಸದಿದ್ದರೆ ದೇವನಿಂದ ಕ್ಷಮೆಯು ಲಭಿಸಲಾರದು. ದೌರ್ಜನ್ಯ ಪೀಡಿತೆಯು ಕ್ಷಮಿಸುವುದು ಆವಶ್ಯಕವಾಗಿದೆ. ಹಝ್‌ರತ್ ವಾಗ್ದತ್ತ ಮಸೀಹ್(ಅ) ಹೇಳಿದುದು ಆಕಸ್ಮಿಕವಾಗಿ ಯೋಚಿಸದೆ ಹೇಳಿದ ಮಾತೇನೂ ಅಲ್ಲ. ಅದು ಅಲ್ಲಾಹನ ಬಗ್ಗೆ ಜ್ಞಾನ ಗಳಿಸಿದ ಮಹಾನುಭಾವರ ಮಾತುಗಳು ಆಗಿವೆ. ಅದರಲ್ಲಿ ನಮಗೆ ಬಹಳ ದೊಡ್ಡದಾದ ಉಪದೇಶ ಅಡಕವಾಗಿದೆ. ನೀವು ಯಾರದಾದರೂ ವಿರುದ್ಧವಾಗಿ ಅನ್ಯಾಯದಿಂದ ವರ್ತಿಸಿದರೆ ನೀವು ಅವರಿಂದ ಕ್ಷಮೆಯನ್ನು ಕೇಳುವುದು ಆವಶ್ಯಕವಾಗಿದೆ. ಲೋಕದಲ್ಲಿ ಬಹಳ ದೌರ್ಜನ್ಯಗಳು ನಡೆಯುತ್ತಾ ಇವೆ. ದೌರ್ಜನ್ಯ ಮನುಷ್ಯನ ವಿರುದ್ಧ ಮಾಡಿ ಕ್ಷಮೆಯನ್ನು ಅಲ್ಲಾಹನಿಂದ ಕೇಳಿಕೊಳ್ಳುತ್ತಾ ಇದ್ದಾರೆ. ಅಲ್ಲಾಹನಿಂದಲೂ ಕ್ಷಮೆಯನ್ನು ಕೇಳುವುದು ಆವಶ್ಯಕವಾಗಿದೆ. ಏಕೆಂದರೆ ಅವನ ಉಪದೇಶಗಳಿಗೆ ವಿರುದ್ಧವಾಗಿ ವರ್ತಿಸಲಾಗುತ್ತಿದೆ. ಆದರೆ ಯಾರ ವಿರುದ್ಧ ದೌರ್ಜನ್ಯ ಮಾಡಲಾಗಿದೆಯೋ ಆ ವ್ಯಕ್ತಿಯಿಂದ ಕ್ಷಮೆಯನ್ನು ಬೇಡಿಕೊಳ್ಳುವ ತನಕ ಮನುಷ್ಯನು ವಾಸ್ತವಿಕವಾಗಿ ಕ್ಷಮಿಸಲ್ಪಡಲು ಅರ್ಹನಾಗುವುದಿಲ್ಲ.

## ಪರದೆಯ ಉದ್ದೇಶ ಲಕ್ಷ್ಯಗಳು

ಪರದೆಯ ಬಗ್ಗೆ ಉಪದೇಶಗಳು, ಅದರ ಬಗ್ಗೆ ಆಕ್ಷೇಪಗಳು ಇವುಗಳ ಬಗ್ಗೆ ನಾನು ಪದೇ ಪದೇ ಅನೇಕ ಸಲ ವಿವರಿಸಿರುತ್ತೇನೆ. ಆದುದರಿಂದ ನಾನು ಈಗ ಅದರ ಬಗ್ಗೆ ಸವಿಸ್ತಾರವಾಗಿ ಪ್ರತಿಪಾದಿಸದೆ ಅದರ ಉದ್ದೇಶ ಲಕ್ಷ್ಯಗಳೇನು, ಇಸ್ಲಾಮೀ ಪರದೆ ಹೇಗಿರಬೇಕು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ಕೆಲವು ಅಂಶಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ.

ಮೊದಲನೆಯದು ದೃಷ್ಟಿಗಳ ಪರದೆಯಾಗಿದೆ. ಅದರ ಬಗ್ಗೆ ಒತ್ತಿಹೇಳಲಾಗಿದೆ. ಈ ಪರದೆ ಪುರುಷ ಮತ್ತು ಮಹಿಳೆ ಸಮಾನವಾಗಿ ಅನುಷ್ಠಿಸಬೇಕಾದುದಾಗಿದೆ. ಮಹಿಳೆಯರಿಗೆ ವಿಶಿಷ್ಟವಾಗಿ ನೀಡಿದ ಉಪದೇಶವೇನೆಂದರೆ, ಅಲ್ಲಾಹನು ಅವರನ್ನು ಸುಂದರಿಯರನ್ನಾಗಿಯೂ ಆಕರ್ಷಣೆ ಹೊಂದಿರುವವರನ್ನಾಗಿ ಮಾಡಿರುವನು ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಆದುದರಿಂದ ಮಹಿಳೆ ಸ್ವಲ್ಪವಾದರೂ ತನ್ನ ಸೌಂದರ್ಯವನ್ನು ಪ್ರಕಟಿಸುವುದಾದರೆ, ತನ್ನ ಅಂಗಾಂಗಳನ್ನು ಮರೆಮಾಡಲು ಜಾಗರೂಕತೆಯಿಂದ ವರ್ತಿಸದಿದ್ದರೆ ಪುರುಷರು ದಾರಿತಪ್ಪಿ ಹೋಗುವರು. ಆದುದರಿಂದ ಪುರುಷರ ಮೇಲೆ ದಯೆದೋರಬೇಕು ಮತ್ತು ತಮ್ಮನ್ನು ಪರದೆಗೊಳಪಡಿಸಿ ನಡೆಯಬೇಕು ಹಾಗೂ ತಮ್ಮ ಸೌಂದರ್ಯವನ್ನು ರಕ್ಷಿಸಬೇಕು.

ಚಾದರ ಹೊದಲಾದುವುಗಳನ್ನು ಬಳಸುವ ಬಗ್ಗೆ ಹಝ್‌ರತ್ ವಾಗ್ದತ್ತ ಮಸೀಹ್(ಅ) "ಇಸ್ಲಾಮ್ ಧರ್ಮ ತತ್ವಜ್ಞಾನ"ದಲ್ಲಿ ವಿವರಿಸಿದ್ದಾರೆ. ಈ ಕಾಲಘಟ್ಟದ ಜನರಿಗೆ ಈ ವಿಷಯವನ್ನು ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ.

ವೃದ್ಧೆಯರನ್ನು ಪರದೆಯಿಂದ ಇಸ್ಲಾಮ್ ಮುಕ್ತರನ್ನಾಗಿ ಮಾಡಿದೆ. ಅಂದರೆ, ಯಾರ ಮೇಲೆ ಕೆಟ್ಟ ದೃಷ್ಟಿ ಬೀಳುವ ಪ್ರಶ್ನೆಯೇ ಉದಿಸುವುದಿಲ್ಲವೋ ಅವರು ಪರದೆ ಅನುಷ್ಠಿಸಬೇಕಾಗಿಲ್ಲ. ಕೆಲಸ ಮಾಡುವ ಸ್ತ್ರೀಯರನ್ನು ಮತ್ತು ಪರಿಚಾರಿಕೆಯರನ್ನು ಅವರ ಕೆಲಸಕ್ಕೆ ಅನುಗುಣವಾಗಿ ಪರದೆಯನ್ನು ಅನುಷ್ಠಿಸುವ ಸ್ವಾತಂತ್ರ್ಯವನ್ನು ನೀಡಿದೆ.

ಹಝ್‌ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ:

"ಪರದಾ ವ್ಯವಸ್ಥೆಯ ಉದ್ದೇಶ ಸ್ತ್ರೀಯರನ್ನು ಕೈದಿಗಳಂತೆ ಮನೆಯೊಳಗಿರಿಸಬೇಕೆಂದಲ್ಲ. ಅದು ಇಸ್ಲಾಮಿಕ ಅಧ್ಯಾಪನೆಗಳ ಕುರಿತು ಅರಿವಿಲ್ಲದ ಅಜ್ಞರ ಅಭಿಪ್ರಾಯವಾಗಿದೆ. ಆದರೆ ಇಸ್ಲಾಮ್ ನಿರ್ದೇಶಿಸುವ ಪರದಾ ಪದ್ಧತಿಯ ಉದ್ದೇಶ ಸ್ತ್ರೀ ಪುರುಷರ ಸ್ವಚ್ಛಂದವಾದ ಪರಸ್ಪರ ವೀಕ್ಷಣೆ ಮತ್ತು ಸೌಂದರ್ಯ ಪ್ರದರ್ಶನವನ್ನು ತಡೆಯುವುದಾಗಿದೆ. ಈ ವ್ಯವಸ್ಥೆ ಸ್ತ್ರೀ – ಪುರುಷ ಈರ್ವರಿಗೂ ಗುಣಕರವಾಗಿದೆ. ದರ್ಶನ ಯೋಗ್ಯವಾದುದನ್ನು ನೋಡುವುದು ಹಾಗೂ ಅನುಚಿತ ಸಂದರ್ಭಗಳಲ್ಲಿ ದೃಷ್ಟಿಗಳನ್ನು ಕೆಳಗೆ ತಿರುಗಿಸುವುದಕ್ಕೆ ಅರಬಿ ಭಾಷೆಯಲ್ಲಿ ಗ್‌ಲ್ಲುಲ್ ಬಸರ್ (ನೋಟವನ್ನು ಅಧೋಮುಖವಾಗಿರಿಸುವುದು) ಎಂದು ಹೇಳುತ್ತಾರೆ." ("ಇಸ್ಲಾಮ್ ಧರ್ಮ ತತ್ವಜ್ಞಾನ" ಪುಟ 37)

ಉದ್ದೇಶಿಸದೆ ದೃಷ್ಟಿಗೆ ಗೋಚರಿಸಿದರೆ ಅದು ಇಸ್ಲಾಮೀ ತತ್ವಗಳಿಗೆ ವಿರುದ್ಧವಾಗದು. ಏಕೆಂದರೆ ಗ್‌ಲ್ಲುಲ್ ಬಸರ್‌ನಲ್ಲಿ ಇದು ಸಹ ಸೇರಿದೆ.

ಈ ಕಾಲಘಟ್ಟದಲ್ಲಿ ಪರದೆಗೆ ಸಂಬಂಧಿಸಿದ ಉಪದೇಶ ಅನುಷ್ಠಾನಕ್ಕೆ ಯೋಗ್ಯವಲ್ಲ; ಏಕೆಂದರೆ ಹದಿನಾಲ್ಕು ನೂರು ವರ್ಷಗಳಲ್ಲಿ ಲೋಕದ ಸ್ಥಿತಿ ಬದಲಾಗಿದೆ ಎಂಬ ಅಭಿಪ್ರಾಯದ ಬಗ್ಗೆ ಹಝ್ರತ್ ವಾಗ್ದತ್ತ ಮಸೀಹರ(ಅ) ಒಂದು ಉಪದೇಶವನ್ನು ನಿಮ್ಮ ಮುಂದೆ ಇರಿಸುತ್ತೇನೆ:

"ಓ ಪ್ರಿಯರೇ, ಅಲ್ಲಾಹನೇ ನಿಮ್ಮ ಹೃದಯಗಳಿಗೆ ಸಂದೇಶ ನೀಡಲಿ. ನೀವು ಪರದೆಯನ್ನು ಬಿಡುವಂತಹ ಸಮಯ ಇದಲ್ಲ." ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುವುದೇನೆಂದರೆ, ಈ ಕಾಲಘಟ್ಟವು ಪರದೆಯ ವಿಷಯದಲ್ಲಿ ನಿರ್ಲಕ್ಷ್ಯತೆ ಹೊಂದುವ ಕಾಲವಲ್ಲ. ಅವರು ಮುಂದುವರಿದು ಹೇಳುತ್ತಾರೆ: "ನೀವು ಹೀಗೆ ಮಾಡುವಿರಾದರೆ (ಪರದೆಯನ್ನು ನಿರ್ಲಕ್ಷಿಸುವಿರಾದರೆ) ನೀವು ಒಂದು ವಿಷ ಬೀಜವನ್ನು ಸಮುದಾಯದಲ್ಲಿ ಹರಡುವಿರಿ. ಈ ಕಾಲಘಟ್ಟವು ಎಂತಹದ್ದೆಂದರೆ ಬೇರೆ ಯಾವುದೇ ಕಾಲಘಟ್ಟದಲ್ಲಿಯೂ ಪರದೆಯ ಸಂಪ್ರದಾಯ ಜಾರಿಗೊಳ್ಳದೆ ಇರುತ್ತಿದ್ದರೂ ಈ ಕಾಲಘಟ್ಟದಲ್ಲಿ ಆವಶ್ಯಕವಾಗಿ ಅದು ಇರಲೇಬೇಕಾಗಿದೆ. ಏಕೆಂದರೆ ಇದು ಕಲಿಯುಗವಾಗಿದೆ. ಲೋಕದಲ್ಲಿ ಕೆಡುಕು, ದುರಾಚಾರ, ದುರ್ವರ್ತನೆಗಳು ಮತ್ತು ಮದ್ಯಪಾನವು ವ್ಯಾಪಕವಾಗಿ ಇವೆ. ಹೃದಯಗಳಲ್ಲಿ ನಾಸ್ತಿಕವಾದದ ಯೋಚನೆಗಳು ಹರಡುತ್ತಾ ಇವೆ. ದೇವನ ಆಜ್ಞೆಗಳ ಬಗ್ಗೆ ಗೌರವ ಭಾವನೆ ಹೃದಯಗಳಿಂದ ಹೊರಟು ಹೋಗುತ್ತಾ ಇದೆ. ಭಾಷಣಗಳಲ್ಲಿ ಎಲ್ಲವೂ ಇವೆ. ಅವು ತರ್ಕಶಾಸ್ತ್ರ ಮತ್ತು ದರ್ಶನ ಶಾಸ್ತ್ರಗಳನ್ನು ಒಳಗೊಂಡಿರುತ್ತವೆ. ಆದರೆ ಹೃದಯ ಆಧ್ಯಾತ್ಮಿಕತೆಯಿಂದ ವಿರಹಿತವಾಗಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಬಡ ಕುರಿಗಳನ್ನು ತೋಳಗಳಿರುವ ಕಾಡುಗಳಲ್ಲಿ ಬಿಟ್ಟು ಬಿಡುವುದು ಹೇಗೆ ತಾನೆ ಸರಿಯಾಗುವುದು?" (ಲೆಕ್ಚರ್ ಲಾಹೋರ್ ಪುಟ 37)

ನನ್ನೊಂದಿಗೆ ಪರದೆಗೆ ಸಂಬಂಧಿಸಿ ಪದೇ ಪದೇ ಪ್ರಶ್ನೆ ಕೇಳುತ್ತಿರುವ ಪುರುಷರಿಗೂ ಮಹಿಳೆಯರಿಗೂ ಇದಕ್ಕಿಂತ ಉತ್ತಮ ಉತ್ತರವನ್ನು ನಾನು ಕೊಡಲಾರೆನು. ಪರದೆಯ ಬಗ್ಗೆ ಜಮಾಅತ್ ಒಂದು ಕಾರ್ಯ ಸೂಚಿಯನ್ನು ತಯಾರಿಸಬೇಕೆಂದು ನಾನು ಪದೇ ಪದೇ ಉಪದೇಶಿಸುತ್ತಾ ಇರುತ್ತೇನೆ. ಅದರ ಉದ್ದೇಶವೇನೆಂದರೆ, ನಾನು ಉಲ್ಲೇಖಿಸಿದ ಹಝ್ರತ್ ವಾಗ್ದತ್ತ ಮಸೀಹರ(ಅ) ಹೇಳಿಕೆಯಲ್ಲಿರುವ ಚೈತನ್ಯವನ್ನು ಜಮಾಅತ್ ಜಾರಿಗೊಳಿಸಬೇಕೆಂದು ನಾನು ಬಯಸುತ್ತೇನೆ. ಇಂದಿನ ಸ್ಥಿತಿ ಬಹಳ ಕೊಳಕಾಗಿದೆ. ಅಹ್ಮದಿಯರ ಯಾವ ಮನೆಗಳಲ್ಲಿ ಪರದೆಯನ್ನು ನಿರ್ಲಕ್ಷಿಸಲಾಗಿದೆಯೋ ಅವುಗಳಲ್ಲಿ ಕೆಲವು ಮನೆಗಳಿಂದ ತಾಯಂದಿರು ಅಳುತ್ತಾ ನನ್ನ ಬಳಿಗೆ ಬರುತ್ತಾರೆ. "ನಮ್ಮ ಮಗಳು ನಮ್ಮ ಕೈ ಬಿಟ್ಟುಹೋದಳು, ನಮಗೆ ಹೀಗೆ ಅನ್ಯಾಯವಾಯಿತು, ನಮಗೆ ಹಾಗೆ ಅನ್ಯಾಯವಾಯಿತು" ಎಂದು ಪ್ರಲಾಪಿಸುತ್ತಾರೆ. ಸಮಾಜದ ಸ್ಥಿತಿ ಬಹಳ ಕೊಳಕಾಗಿದೆ. ಬಹಳ ಭಯಾನಕ ಅಪರಾಧಗಳು ನಡೆಯುತ್ತಿವೆ. ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಮೂರು, ನಾಲ್ಕು ವರ್ಷ ಪ್ರಾಯದ ಹೆಣ್ಣುಮಕ್ಕಳ ಮೇಲೆ ಕೈಎತ್ತುವ ಸಮಾಜದಲ್ಲಿ ಪರದೆಯನ್ನು ರಕ್ಷಿಸದಿದ್ದರೆ ನೀವು ನಿಮ್ಮ ಹೆಣ್ಣುಮಕ್ಕಳನ್ನು ಹೇಗೆತಾನೆ ಸುರಕ್ಷಿತರೆಂದು ಗಣಿಸಬಲ್ಲಿರಿ?

## ಬಹುಭಾರ್ಯತ್ವ

ಬಹುಭಾರ್ಯತ್ವದ ಬಗ್ಗೆ ಇಸ್ಲಾಮೀ ನಿಯಮಗಳು ಪಾಶ್ಚಿಮಾತ್ಯ ದೇಶಗಳಲ್ಲಿ ವಿಶಿಷ್ಟವಾಗಿ ಚರ್ಚಿಸಲ್ಪಡುತ್ತವೆ. ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ಹೊಂದಲು ಇಸ್ಲಾಮ್ ಅನುಮತಿಸಿ ಬಹಳ ಅನ್ಯಾಯ ಮಾಡಿದೆ ಎಂದೂ ಈ ಅನುಮತಿ ಪುರುಷನಿಗೆ ನೀಡಿದರೂ ಸ್ತ್ರೀಗೆ ನೀಡಿಲ್ಲವೆಂದೂ ಆಕ್ಷೇಪಿಸಲಾಗುತ್ತದೆ.

ನಾನು ನಿಮ್ಮ ಮುಂದೆ ಪವಿತ್ರ ಖುರ್‌ಆನಿನ ವಚನವನ್ನು ಇರಿಸುತ್ತೇನೆ. ಈ ಅನುಮತಿ ಏಕೆ ನೀಡಲಾಯಿತು. ಯಾರ ಷರತ್ತುಗಳನ್ನು ವಿಧಿಸಿ ಅನುಮತಿ ನೀಡಲಾಯಿತೆಂದು ನೀವು ಅದರ ಮೂಲಕ ತಿಳಿದುಕೊಳ್ಳಬಹುದು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಅನಾಥರ ವಿಚಾರದಲ್ಲಿ ನ್ಯಾಯ ಪಾಲಿಸಲಾರಿರೆಂದು ನಿಮಗೆ ಭಯವಿದ್ದರೆ ನಿಮಗೆ ಉಚಿತವೆನಿಸುವ (ಬೇರೆ) ಸ್ತ್ರೀಯರ ಪೈಕಿ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ನೀವು ವಿವಾಹ ಮಾಡಿಕೊಳ್ಳಿರಿ. ಆದರೆ ನ್ಯಾಯ ಪಾಲಿಸಲಾರಿರೆಂದು ನಿಮಗೆ ಭಯವಿದ್ದರೆ ಒಬ್ಬಳನ್ನು (ಮಾತ್ರ ವಿವಾಹವಾಗಿರಿ); ಅಥವಾ ನಿಮ್ಮ ಅಧೀನದಲ್ಲಿರುವ ದಾಸಿಯರಿಂದ (ವಿವಾಹ ಮಾಡಿಕೊಳ್ಳಿರಿ). ನೀವು ಅನ್ಯಾಯವಾಗಿ ವರ್ತಿಸದಿರಲು ಅತಿ ನಿಕಟವಾದ ಮಾರ್ಗ ಇದೇ ಆಗಿದೆ.

"ಸ್ತ್ರೀಯರಿಗೆ ಅವರ ವಿವಾಹ ಧನ (ಮಹರ್)ವನ್ನು ಆತ್ಮ ಸಂತೋಷದಿಂದ ನೀಡಿರಿ. ನಂತರ, ಅವರು ಸ್ವಇಚ್ಛೆಯಿಂದ ಅದರಿಂದೇನಾದರೂ ನಿಮಗೆ ಬಿಟ್ಟುಕೊಟ್ಟರೆ, ಅದನ್ನು ನೀವು ಸಂತೋಷದಿಂದ ಅನುಭೋಗಿಸಿರಿ." (4:4, 5)

ನಾಲ್ಕು ಮಹಿಳೆಯರನ್ನು ಮದುವೆ ಆಗುವ ಅನುಮತಿಗೆ ಸಂಬಂಧಿಸಿ ವಿವಿಧ ಷರತ್ತುಗಳಿವೆ. ಅವುಗಳನ್ನು ನಾನು ವಿವರಿಸುವೆನು. ಮೊದಲನೆಯ ಷರತ್ತೇನೆಂದರೆ, ಅನಾಥರ ಮಧ್ಯೆ ನ್ಯಾಯ ನಿಷ್ಠೆಯಿಂದ ವರ್ತಿಸಲು ಸಾಧ್ಯವಾಗುವುದಿಲ್ಲವಾದರೆ ಈ ಅನುಮತಿ ಸಿಗುತ್ತದೆ. ಇದರ ಅರ್ಥ ಪ್ರಾಯಶಃ ಹೀಗೆ ಒಬ್ಬ ಅನಾಥೆ ನಿಮ್ಮ ಮನೆಯಲ್ಲಿರುವಾಗ ನ್ಯಾಯಯುತವಾಗಿ ಆಕೆಯೊಂದಿಗೆ ವರ್ತಿಸಲು ಅಸಾಧ್ಯವಾಗುವ ಅಪಾಯ ತಲೆದೋರುವುದಾದರೆ ನೀವು ಆಕೆಯನ್ನು ವಿವಾಹವಾಗಿ ಆಕೆಯೊಂದಿಗೆ ಗೌರವ ಪೂರ್ಣವಾಗಿ ವರ್ತಿಸಿರಿ. ಈ ಅನುಮತಿ ನೀಡಿದ ನಂತರ ಹೀಗೆ ಹೇಳಲಾಯಿತು: ನೀವು ಒಂದಕ್ಕಿಂತ ಹೆಚ್ಚು ಮದುವೆಯಾದ ನಂತರ ಪತ್ನಿಯರ ಮಧ್ಯೆ ನ್ಯಾಯಪಾಲನೆ ಮಾಡಲಾರಿರೆಂದು ನಿಮಗೆ ತೋಚುವುದಾದರೆ ನೀವು ಒಂದೇ ವಿವಾಹವಾಗಬೇಕು.

ಇಂದಿನ ಕಾಲದಲ್ಲಿ ಲೋಕದಲ್ಲಿ ನಾನು ನೋಡಿದ ಮಟ್ಟಿಗೆ ನನಗೆ ಕಂಡುಬಂದುದೇನೆಂದರೆ, ಒಂದಕ್ಕಿಂತ ಹೆಚ್ಚು ಮದುವೆಯಾದ ಮುಸ್ಲಿಮ್ ತನ್ನ ಇಬ್ಬರು ಪತ್ನಿಯರ ಮಧ್ಯೆ ನ್ಯಾಯಪಾಲನೆ ಮಾಡಿದುದು ಬಹಳ ಅಪೂರ್ವವಾಗಿದೆ. ಕೆಲವರು ಇಸ್ಲಾಮಿನ ಧಾರ್ಮಿಕ ನಿಯಮಗಳ ಅನುಮತಿಯ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ವಿವಾಹವಾಗುತ್ತಾರಾದರೂ ಅವರು ಇಸ್ಲಾಮೀ ತತ್ವಗಳನ್ನು ಅನುಸರಣೆ ಮಾಡುವುದಿಲ್ಲ. ಅವರು ಆ ತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಾರೆ. ನನಗೆ ತಿಳಿದು ಬಂದಿರುವುದೇನೆಂದರೆ, ಅನೇಕರು ಒಂದಕ್ಕಿಂತ ಹೆಚ್ಚು ವಿವಾಹವಾದ ನಂತರ ಮೊದಲನೆಯ ಪತ್ನಿಯನ್ನು ತೂಗು ಹಾಕಿದ ಹಾಗೆ ಬಿಟ್ಟು ಬಿಡುತ್ತಾರೆ. ಆ ಪತ್ನಿಯ ಮನೆಯನ್ನು ಇಣುಕಿ ಕೂಡ ನೋಡುವುದಿಲ್ಲ.

ನಮ್ಮ ಒಬ್ಬ ಸ್ನೇಹಿತರು ಹಿಂದೂಸ್ತಾನದಿಂದ ಬಂದು ಜಾಹೀರಾತು ನೀಡಿದರು. ಅದರಲ್ಲಿ ಹೀಗೆ ಬರೆದಿತ್ತು: ನಾನು ವಿವಾಹಿತನು. ನನಗೆ ಇಷ್ಟು ಮಕ್ಕಳಿದ್ದಾರೆ. ಆದರೆ ನನಗೆ ಎರಡನೆಯ ವಿವಾಹವಾಗುವ ಇಚ್ಛೆ ಇದೆ. ಯುರೋಪಿನ (ಪ್ರತ್ಯೇಕವಾಗಿ ಜರ್ಮನಿಯ) ಯಾವುದಾದರೂ ಮಹಿಳೆ ನನ್ನನ್ನು ವಿವಾಹವಾಗಲು ಸಿದ್ಧಳಾಗುವುದಾದರೆ – ಜರ್ಮನಿಯಲ್ಲಿ ಅನೇಕ ಮಹಿಳೆಯರು ಯುದ್ಧದ ನಂತರ ಮದುವೆಯಾಗದೆ ಒಂಟಿಯಾಗಿ ಜೀವಿಸುತ್ತಾ ಇರುವುದರಿಂದ ಅವರಲ್ಲಿ ಯಾರಾದರೂ ವಿವಾಹವಾಗಲು ಸಿದ್ಧಳಾಗುವುದಾದರೆ – ಈ ಜಾಹೀರಾತಿಗೆ ಉತ್ತರ ಬರೆಯಬೇಕು. ಈ ಜಾಹೀರಾತಿಗೆ ಉತ್ತರವಾಗಿ ಸಾವಿರಾರು ಪತ್ರಗಳು ಲಭಿಸಿದುವು. ಅವುಗಳನ್ನು ಪರಿಶೀಲಿಸಲು ಒಬ್ಬ ಸೆಕ್ರೆಟರಿಯನ್ನು ನೇಮಿಸಬೇಕಾಯಿತು. ಆ ವ್ಯಕ್ತಿ ಹಾಲೆಂಡಿನ ನಮ್ಮ ಮಿಶನ್ ಹೌಸಿನಲ್ಲಿ ವಾಸಿಸುತ್ತಿದ್ದರು. ಆ ಕಾಲದಲ್ಲಿ ಅಲ್ಲಿದ್ದ ನಮ್ಮ ಮಿಶನರಿ ನನಗೆ ಈ ವಿಷಯವನ್ನು ನಗುತ್ತಾ ವಿವರಿಸಿದ್ದರು. ಆ ಕಾಲದಲ್ಲಿ ಪತ್ರಗಳನ್ನು ಅನೇಕ ಚೀಲಗಳಲ್ಲಿ ತುಂಬಿಸಿ ತರಲಾಗುತ್ತಿತ್ತು ಎಂದು ಅವರು ಹೇಳುತ್ತಾರೆ. ಜಾಹೀರಾತಿಗೆ ಉತ್ತರ ಬರೆದ ಎಲ್ಲ ಮಹಿಳೆಯರಿಗೆ ಜಾಹೀರಾತು ನೀಡಿದ ವ್ಯಕ್ತಿ ವಿವಾಹಿತ, ಅವರಿಗೆ ಪತ್ನಿ ಮತ್ತು ಮಕ್ಕಳಿದ್ದಾರೆಂದು ತಿಳಿದಿತ್ತು. ಎರಡನೆಯ ಮದುವೆಗೋಸ್ಕರ ಜಾಹೀರಾತು ನೀಡಿದುದು ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿತ್ತು. ಎರಡನೆಯ ಪತ್ನಿಗೆ ಪ್ರಥಮ ಪತ್ನಿಗೆ ಸಮಾನವಾದ ಹಕ್ಕುಗಳನ್ನು ನೀಡಲಾಗುವುದೆಂದು ಸ್ಪಷ್ಟಪಡಿಸಲಾಗಿತ್ತು. ಹೀಗಿದ್ದರೂ ಸಾವಿರಾರು ಮಹಿಳೆಯರು ಎರಡನೆಯ ಪತ್ನಿಯಾಗಲು ಸಿದ್ಧರಾದರು. ಇದರಿಂದ ಹೀಗೆ ಸಾಬೀತಾಗುತ್ತದೆ: ಪಾಶ್ಚಿಮಾತ್ಯ ಮಹಿಳೆಯರಿಗೆ ಇಸ್ಲಾಮೀ ತತ್ವಗಳ ಬಗ್ಗೆ ಆಕ್ಷೇಪವಿರಬಹುದು. ಆದರೆ ಸ್ವತಃ ಆವಶ್ಯಕತೆ ಇರುವಾಗ ಅವರು ಈ ತತ್ವ ಪ್ರಕಾರ ವರ್ತಿಸಲು ಸಿದ್ಧರಾಗುತ್ತಾರೆ.

ನಾನು ಹಿಂದೆ ಹೇಳಿದಂತೆ, ಇಂದಿನ ನಾಗರಿಕತೆಯ ಬಹುತೇಕ ಕಷ್ಟ ಪರಿಸ್ಥಿತಿಗಳಿಗೆ ಕಾರಣ ಇಸ್ಲಾಮಿನ ಈ ಉಪದೇಶವನ್ನು ನಿರಾಕರಿಸಿದುದಾಗಿದೆ. ಎರಡು ಪರಿಹಾರ ಮಾರ್ಗಗಳಲ್ಲಿ ಈ ಪರಿಹಾರ ಮಾರ್ಗವನ್ನು ಅವಲಂಬಿಸುವುದಿಲ್ಲವಾದರೆ ಇನ್ನೊಂದು ಪರಿಹಾರ ಮಾರ್ಗದ ಬಗ್ಗೆ ಯೋಚಿಸಿರಿ. ಬಹಳ ಸಂಖ್ಯೆಯಲ್ಲಿ ಮಹಿಳೆಯರು ಮದುವೆಯಾಗದೆ ಇದ್ದರೆ ಅವರು ಈಗಿನ ಸ್ವತಂತ್ರ ಸಮಾಜದಲ್ಲಿ ತಮ್ಮ ಲೈಂಗಿಕ ಆಶೆಗಳನ್ನು ಈಡೇರಿಸಿಕೊಳ್ಳಬೇಕಾಗುತ್ತದೆ. ಅಂತಹ ಮಹಿಳೆಯರು ವಿವಾಹಿತರಾದ ಪುರುಷರೊಂದಿಗೆ ತಮ್ಮ ಸಂಬಂಧ ಸ್ಥಾಪಿಸುತ್ತಾರೆ. ಆಗ ಆ ವ್ಯಕ್ತಿಯ ಪತ್ನಿಗೆ ಸವತಿಯ ಕಷ್ಟ ಉಂಟಾಗುವುದಿಲ್ಲ. ನ್ಯಾಯದ ದೃಷ್ಟಿಯಲ್ಲಿ ಗಂಡ ತನ್ನವನೇ ಆಗಬೇಕೆಂದು ಮಾತ್ರ ಆಕೆ ಬಯಸುತ್ತಾಳೆ. ಆದರೆ ಯಾವ ವಿವಾಹಿತ ಪುರುಷನಿಗೆ ತರುಣಿಯರ ಸಂಬಂಧ ಉಂಟಾಗುತ್ತದೆಯೋ ಅವನು ತನ್ನ ಪತ್ನಿಗೆ ಮಾತ್ರ ಸೇರಿದವನಾಗಿರುವುದಿಲ್ಲ. ವಿವಾಹಿತ ಪತ್ನಿಯ ಮನೆಯು ಮುರಿದು ಹೋಗುತ್ತದೆ.

ಈ ವಿಷಯದ ಬಗ್ಗೆ ಚರ್ಚಿಸುವಾಗ ಕೆಲವು ಪ್ರಶ್ನೆ ಕೇಳುವ ಪತ್ರಕರ್ತೆಯರು ಹೀಗೆ ಪ್ರಶ್ನಿಸುತ್ತಾರೆ: "ಮಹಿಳೆಗೂ ಇಂತಹ ಅನುಮತಿ ಸಿಗಬೇಕಾಗಿದೆಯಲ್ಲವೇ?" ಆಗ ನಾನು ಅವರಿಗೆ ಹೀಗೆ ಮನವರಿಕೆ ಮಾಡಿಕೊಡುತ್ತೇನೆ: ನೀವು ನೋಡಿರಿ, ಒಟ್ಟಿಗೆ ಎರಡು ಅನುಮತಿಗಳನ್ನು ನೀಡಲು ಸಾಧ್ಯವಿಲ್ಲ. ಪುರುಷರ ಸಂಖ್ಯೆ ಕಡಿಮೆಯಾಗುತ್ತಾ ಇರುತ್ತದೆ ಎಂದೂ ಮಹಿಳೆಯರ ಸಂಖ್ಯೆ ವರ್ಧಿಸುತ್ತಾ ಇದೆ ಎಂದೂ ಸಾಬೀತಾಗಿದೆ. ಮಹಿಳೆಯರಿಗೆ ಅನುಮತಿ ನೀಡಿದರೆ ಬಹಳ ಆಪತ್ಕರವಾಗುತ್ತಿತ್ತು. ಗಂಡಸರ ಸಂಖ್ಯೆ ಕಡಿಮೆ ಇರುವಾಗ ಮಹಿಳೆಯರು ನಾಲ್ಕು ನಾಲ್ಕು ವಿವಾಹವಾಗಲು ತೊಡಗಿದರೆ ಬಹಳ ಸಂಖ್ಯೆಯ ಮಹಿಳೆಯರು ಮದುವೆಯಾಗದೆ ಬಾಕಿಯಾಗಿ ಉಳಿಯುವರು. ಆಗ ಸಮಾಜದಲ್ಲಿ ಬಹಳ ದೊಡ್ಡ ವಿಪತ್ತು ಬಂದೆರಗುವುದು.

ನ್ಯಾಯ ಪಾಲನೆಯ ದೃಷ್ಟಿಯಲ್ಲಿ ಪುರುಷನಿಗೂ ಮಹಿಳೆಗೂ ಈ ಅನುಮತಿ ನೀಡಬೇಕಾಗಿತ್ತು ಎಂದು ಯಾರಾದರೂ ಹೇಳಿದರೆ ನಾನು ಹೀಗೆ ಉತ್ತರ ನೀಡುತ್ತೇನೆ: ನೀವು ಈ ವಿಷಯದ ಬಗ್ಗೆ ಲೆಕ್ಕಾಚಾರ ಮಾಡಿ ನೋಡಿರಿ. ಒಬ್ಬಳು ತನ್ನ ಗಂಡನೊಂದಿಗೆ ಬೇರೆ ಮೂವರು ಗಂಡಂದಿರನ್ನು ವಿವಾಹವಾದುದಾಗಿ ಊಹಿಸಿರಿ. ಆ ಮೂವರು ಗಂಡಂದಿರಲ್ಲಿ ಪ್ರತಿಯೊಬ್ಬರು ಮೂರು ಮೂರು ಮಹಿಳೆಯರನ್ನು ವಿವಾಹವಾಗುತ್ತಾರೆ. ಆ ಮೂರು ಮೂರು ಮಹಿಳೆಯರು ಬೇರೆ ಮೂರು ಮೂರು ಪುರುಷರನ್ನು ಮದುವೆಯಾಗುತ್ತಾರೆ. ಆ ಮೂರು ಮೂರು ಗಂಡಂದಿರು ಬೇರೆ ಮೂರು ಮೂರು ಹೆಂಗಸರನ್ನು ವಿವಾಹವಾಗುತ್ತಾರೆ. ಆಗ ದೇಶವಿಡೀ ಒಂದು ಮದುವೆಯಾದ ಕುಟುಂಬದ ಹಾಗಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಪ್ರಶ್ನೆ ತಲೆದೋರುತ್ತದೆ. ಮಕ್ಕಳು ಯಾವ ಗಂಡನದು? ಮಕ್ಕಳ ಪಾಲನೆ ಪೋಷಣೆಯ ಖರ್ಚಿಗೆ ಯಾರು ಹೊಣೆಗಾರ? ವಿವಾಹ ವಿಚ್ಛೇದನೆಯ ಜಗಳಗಳು ಪರಿಹಾರವಾಗುವುದು ಹೇಗೆ? ಆಸ್ತಿಗಳನ್ನು ಹಂಚುವುದು ಹೇಗೆ? ಮಹಿಳೆಯರಿಗೆ ಬಹುಭರ್ತೃತ್ವಕ್ಕೆ ಅನುಮತಿ ಏಕೆ ಸಿಗುವುದಿಲ್ಲ ಎಂಬುದು ಒಂದು ತಿಳಿಗೇಡಿತನದ ಪ್ರಶ್ನೆಯಾಗಿದೆ. ಅದರಿಂದುಂಟಾಗುವ ಸಮಸ್ಯೆಗೆ ಪರಿಹಾರ, ಪ್ರಶ್ನೆ ಕೇಳುವವರು ಕೂಡ ಸೂಚಿಸಲು ಸಮರ್ಥರಾಗಲಾರರು. ಆದುದರಿಂದ ಇಸ್ಲಾಮಿನ ಉಪದೇಶದಿಂದ ದೂರಸರಿದು ಹೋಗಲು ಸಾಧ್ಯವಾಗದು.

ಅಲ್ಲಾಹನು ಅವತೀರ್ಣಗೊಳಿಸಿದ ಉಪದೇಶಗಳು ಭಾವೋದ್ವೇಗಗಳನ್ನು ಆಧರಿಸಿಯಲ್ಲ, ಮನುಷ್ಯನ ಪ್ರಕೃತಿಗೆ ಅನುಸಾರವಾಗಿಯೂ ಅವನ ಆವಶ್ಯಕತೆಗಳನ್ನು ಉದ್ದೇಶಿಸಿಯೂ ಎಲ್ಲ ಕಾಲಗಳಿಗೂ ಅನ್ವಯಿಸುವಂತಹದೂ ಆಗಿವೆ. ಶಾಂತಿಯ ಕಾಲಕ್ಕೂ ಯುದ್ಧದ ಕಾಲಕ್ಕೂ ಅವು ಅನುಗುಣವಾಗಿವೆ. ಪುರುಷರನ್ನು ದೌರ್ಜನ್ಯದಿಂದ ತಡೆಯಲು ಷರತ್ತುಗಳನ್ನು ವಿಧಿಸಿ ಒಂದಕ್ಕಿಂತ ಹೆಚ್ಚು ಮದುವೆ ಆಗುವ ಅನುಮತಿ ನೀಡಿರುವುದು ಅದು ಸಾರ್ವತ್ರಿಕವಾಗಿ ಜಾರಿಗೊಳ್ಳಬೇಕಾದ ನಿಯಮದ ರೂಪದಲ್ಲಿ ಅಲ್ಲ. ಅಲ್ಲಾಹನು ಅದನ್ನು ಸಾರ್ವತ್ರಿಕ ನಿಯಮವೆಂದು ಘೋಷಿಸಿದ್ದರೆ ಅದು ಅಲ್ಲಾಹನ ಚಾಣ್ಮೆಗೆ ವಿರುದ್ಧವಾಗುತ್ತಿತ್ತು. ಪುರುಷರೆಲ್ಲರೂ ಎರಡೆರಡು, ಮೂರು ಮೂರು,

ನಾಲ್ಕು ನಾಲ್ಕು ವಿವಾಹವಾಗಬಹುದೆಂದು ಹೇಳಿ ಪುರುಷರ ಮತ್ತು ಮಹಿಳೆಯರ ಜನಸಂಖ್ಯೆ ಹೆಚ್ಚುಕಡಿಮೆ ಸಮಾನ ಸಂಖ್ಯೆಯಲ್ಲಿರುವಂತೆ ನೋಡಿಕೊಂಡಿರುವುದು ಹೇಗೆ ತಾನೆ ಸರಿಯಾಗಲು ಸಾಧ್ಯ? ಆದುದರಿಂದ ತಿಳಿಯುವುದೇನೆಂದರೆ, ಈ ಅನುಮತಿ ಎಲ್ಲರಿಗೂ ಅನ್ವಯಿಸುವಂತಹದ್ದಲ್ಲ. ಈ ಅನುಮತಿ ನಾನು ಇದರ ಮೊದಲು ವಿವರಿಸಿದ ವಿಶಿಷ್ಟ ಪರಿಸ್ಥಿತಿಗಳಿಗೆ ಮಾತ್ರ ಮತ್ತು ವಿಧಿಸಲಾದ ಷರತ್ತುಗಳಿಗೆ ಅಧೀನವಾಗಿ ಮಾತ್ರ ನೀಡಿದುದಾಗಿದೆ.

ಯುದ್ಧಗಳ ಕಾರಣದಿಂದಲ್ಲದೆ ಬೇರೆ ಆವಶ್ಯಕತೆಗಳು ಸಹ ತಲೆದೋರಬಹುದು. ಅವುಗಳ ಬಗ್ಗೆ ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದುದನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೇಳಿದರು:

"ನಮಗೆ ಅಲ್ಲಾಹನಿಂದ ತಿಳಿದಿರುವುದನ್ನು ನಾವು ಸಂಕೋಚವಿಲ್ಲದೆ ವಿವರಿಸುತ್ತೇವೆ. ಹೆಚ್ಚು ಮಹಿಳೆಯರನ್ನು ವಿವಾಹವಾಗಲು ಪವಿತ್ರ ಖುರ್‌ಆನ್ ಅನುಮತಿ ನೀಡಿರುವುದು ನೀವು ನಿಮ್ಮನ್ನು ಭಯಭಕ್ತಿಯೊಂದಿಗೆ ಸ್ಥಿರವಾಗಿರಿಸುವುದಕ್ಕೆ, ಸಾತ್ವಿಕವಾದ ಮಕ್ಕಳನ್ನು ಪಡೆಯಲು, ಸಂಬಂಧಿಕರ ಮೇಲ್ವಿಚಾರಣೆ ಮಾಡಲು ಮತ್ತು ಅವರ ಹಕ್ಕುಗಳನ್ನು ಈಡೇರಿಸಿ, ಪುಣ್ಯಗಳಿಸಲಿಕ್ಕೋಸ್ಕರವಾಗಿದೆ. ನಿಮ್ಮ ಆವಶ್ಯಕತೆಗಳಿಗೆ ಅನುಸಾರವಾಗಿ ಒಂದು, ಎರಡು, ಮೂರು, ನಾಲ್ಕು ತನಕ ವಿವಾಹವಾಗಲು ಅನುಮತಿಸಲಾಗಿದೆ. ಆದರೆ ಅವರ ಮಧ್ಯೆ ನೀವು ನ್ಯಾಯಪಾಲನೆ ಮಾಡದಿದ್ದರೆ ಅದು ದೇವನಿಗೆ ಅವಿಧೇಯತೆ ತೋರಿಸಿದಂತಾಗುವುದು. ನೀವು ಪುಣ್ಯಕ್ಕೆ ಬದಲಾಗಿ ಶಿಕ್ಷೆಯನ್ನು ಅನುಭವಿಸುವಿರಿ. ಒಂದು ಪಾಪ ಕೃತ್ಯವನ್ನು ದ್ವೇಷಿಸಿದ ಕಾರಣ ಇನ್ನೊಂದು ಪಾಪ ಕೃತ್ಯ ಮಾಡಲು ಸಿದ್ಧರಾದಂತಾಗುವುದು." (ಮಲ್‌ಫೂಝಾತ್ – ಲಂಡನ್ ಮುದ್ರಣ–ಭಾಗ 7, ಪುಟ 64–65)

ಬಹುಪತ್ನಿಯರನ್ನು ಹೊಂದುವುದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ವಿಧಿಸಿರುವ ಇನ್ನೊಂದು ಷರತ್ತು ಹೀಗಿದೆ:

"ನೀವು ಎಷ್ಟೇ ಬಯಸಿದರೂ ಪತ್ನಿಯರ ಮಧ್ಯೆ ನಿಮಗೆ ಸಮತೋಲನೆ ಪಾಲಿಸಲು ಸಾಧ್ಯವಿಲ್ಲ. ಅಂತೂ ನೀವು (ಒಬ್ಬಳ ಕಡೆಗೆ) ಸಂಪೂರ್ಣವಾಗಿ ವಾಲಿಕೊಂಡಿರಬಾರದು. (ಅದರ ಪರಿಣಾಮವಾಗಿ) ಮತ್ತೊಬ್ಬಳನ್ನು ನೀವು ಜೋಲಾಡುವ ಸ್ಥಿತಿಯಲ್ಲಿ ಬಿಟ್ಟುಬಿಟ್ಟಂತಾಗುವುದು." (4:130)

ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಪ್ರೀತಿಸುವುದರಲ್ಲಿ ಸಮಾನತೆ ತೋರಿಸುವುದು ಸಾಧ್ಯವಿಲ್ಲ. ಏಕೆಂದರೆ ಹೃದಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಮನುಷ್ಯನು ಹಸ್ತಕ್ಷೇಪ ನಡೆಸಲಾರನು. ಪವಿತ್ರ ಖುರ್‌ಆನ್ ಹೇಳುವುದು ಹೀಗೆ: ಒಬ್ಬ ಪತ್ನಿಯನ್ನು ಹೆಚ್ಚಿಗೆ ಪ್ರೀತಿಸುವುದಾದರೂ ಇನ್ನೊಬ್ಬಳನ್ನು ಕಡಿಮೆ ಪ್ರೀತಿಸುವುದಾದರೂ ಅವರೊಂದಿಗೆ ಬಾಹ್ಯ ವ್ಯವಹಾರದಲ್ಲಿ ನ್ಯಾಯಪಾಲನೆ ಮಾಡಬೇಕು; ಸಮಾನವಾಗಿ ವರ್ತಿಸಬೇಕು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಈ ವಿಷಯವಾಗಿ ಆದರ್ಶಮಯವಾಗಿ ವರ್ತಿಸಿದರು. ಅವರ ಜೀವಿತದ ಕೊನೆಯ ಘಟ್ಟದಲ್ಲಿ ಅವರು ಬಹಳ ಬಲಗುಂದಿದವರಾದಾಗ ಪ್ರತಿಯೊಬ್ಬ ಪತ್ನಿಯ ಮನೆಗೆ ಸರದಿಯ ಪ್ರಕಾರ ಹೋಗಲು ಸಾಧ್ಯವಿರದಿದ್ದಾಗ ಅವರನ್ನು ಆರೈಕೆ ಮಾಡಲು ಸಾಧ್ಯವಿಲ್ಲದ ಪತ್ನಿಯರಿಂದ ಅನುಮತಿ ಪಡೆದು ತಮ್ಮನ್ನು ಆರೈಕೆ ಮಾಡಲು ಸಾಧ್ಯವಿರುವ ಪತ್ನಿಯರ ಮನೆಗಳಿಗೆ ಹೋಗತೊಡಗಿದರು. ಕೊನೆಗೆ ಎಲ್ಲ ಪತ್ನಿಯರ ಅನುಮತಿ ಪಡೆದು ಒಬ್ಬ ಪತ್ನಿಯ ಮನೆಯಲ್ಲಿಯೇ ಇರತೊಡಗಿದರು. (ಬುಖಾರಿ)

## ಬೈಬಲ್ ಮತ್ತು ಬಹುಪತ್ನಿತ್ವ

ಇಸ್ಲಾಮ್ ಧರ್ಮದ ಮೇಲೆ ಆಕ್ಷೇಪ ಮಾಡುವ ಅನ್ಯ ಧರ್ಮದ ಜನರು ತಮ್ಮ ಧರ್ಮಗ್ರಂಥಗಳನ್ನು ಪರಿಶೀಲಿಸುವುದಾದರೆ ಅವರ ಆಕ್ಷೇಪಕ್ಕೆ ವಿರುದ್ಧವಾಗಿ ಕಂಡುಬರುತ್ತದೆ.

ಹಝ್ರತ್ ಮೂಸಾ (ಮೋಶೆ) ಪ್ರವಾದಿಯ ಧರ್ಮಶಾಸ್ತ್ರ ಬಹುಪತ್ನಿತ್ವಕ್ಕೆ ಬಹಿರಂಗ ಅನುಮತಿ ನೀಡಿದೆ. (ಧರ್ಮೋಪದೇಶ ಕಾಂಡ 21:15, I ಅರಸುಗಳು 11:3, ನೋಡಿರಿ.)

ಇವುಗಳನ್ನು ನೋಡಿದರೆ ಬಹುಪತ್ನಿತ್ವಕ್ಕೆ ಬಹಿರಂಗ ಅನುಮತಿಯೊಂದಿಗೆ ನ್ಯಾಯಪಾಲನೆಯ ಯಾವ ಷರತ್ತನ್ನೂ ವಿಧಿಸದುದನ್ನೂ ನೋಡಿ ನೀವು ಆಶ್ಚರ್ಯಗೊಳ್ಳುವಿರಿ. ಯಾವ ಪ್ರವಾದಿಗೆ ಮಹತ್ವಪೂರ್ಣ ಗೌರವ ನೀಡಲಾಗುತ್ತಿದೆಯೋ, ಯಾರ ಮೂಲಕ ಅನಂತರ ಪ್ರವಾದಿತ್ವದ ಸರಪಳಿ ಜಾರಿಗೊಂಡಿತ್ತೋ, ಯಾರ ಮುಂದಿನ ಪೀಳಿಗೆಯಿಂದ ಅವರು ಹೇಳುವ ವಿಮೋಚಕ ಜನಿಸಿದರೋ, ಆ ಮಹಾನ್ ಪ್ರವಾದಿ ಹಝ್ರತ್ ಇಬ್ರಾಹೀಮ್ (ಅಬ್ರಾಹಾಮ)ರಿಗೆ(ಅ) ಒಂದಕ್ಕಿಂತ ಹೆಚ್ಚು ಪತ್ನಿಯರು ಇದ್ದುದಾಗಿ ನಿಮಗೆ ತಿಳಿದಿದೆ. (ಆದಿಕಾಂಡ 16:3–4; 25:1 ನೋಡಿರಿ). ಇದೇ ರೀತಿ ಪ್ರವಾದಿ ಹಝ್ರತ್ ಯಾಕೂಬ್ (ಯಾಕೋಬ)ರಿಗೆ(ಅ) ಒಬ್ಬರಿಗಿಂತ ಹೆಚ್ಚು ಪತ್ನಿಯರಿದ್ದರು. (ಆದಿಕಾಂಡ 29:23–24, 30:2, 3, 4, 9, 10, ಸಮುವೇಲನು 3:2–5; 5:13) ಇವುಗಳಲ್ಲಿ ಪ್ರವಾದಿ ಹಝ್ರತ್ ದಾವೂದ್ (ದಾವೀದ್)ರ(ಅ) ಪತ್ನಿಯರ ಸಂಖ್ಯೆ 99 ಎಂದು ಸೂಚಿಸಿ ಅವರಿಗೆ ನೂರನೇ ಪತ್ನಿ ಹೊಂದುವ ಆಶೆ ಇದ್ದುದಾಗಿ ಬರೆದಿದೆ. ದೇವರು ಅದನ್ನು ತಡೆದನೆಂದೂ ಇಲ್ಲದಿದ್ದರೆ ಅವರು ತಡೆಯಲ್ಪಡುತ್ತಿರಲಿಲ್ಲವೆಂದೂ ಉಲ್ಲೇಖಿಸಲಾಗಿದೆ. ಬೈಬಲ್ ಪುರುಷರ ಪೌರುಷವನ್ನು ಈ ರೀತಿ ವರ್ಣಿಸುವಾಗ ಬೈಬಲಿನೊಂದಿಗೆ ಸಂಬಂಧ ಹೊಂದಿ ಅದನ್ನು ಗೌರವಿಸುವವನು ನಾಲ್ಕು ಪತ್ನಿಯರ ಅನುಮತಿ ಬಗ್ಗೆ ಆಕ್ಷೇಪಿಸಲು ಖಂಡಿತ ಅಧಿಕಾರ ಹೊಂದುವುದಿಲ್ಲ. ಇದು ನ್ಯಾಯ ಮತ್ತು ಭಕ್ತಿಗೆ ವಿರುದ್ಧವಾಗಿದೆ. ಪ್ರವಾದಿ ಹಝ್ರತ್ ಸುಲೈಮಾನ್‌ರ(ಅ)

## ಹಿಂದೂ ಧರ್ಮದಲ್ಲಿ ಬಹುಪತ್ನಿತ್ವ

ಹಿಂದುಗಳು ಸಹ ಬಹುಪತ್ನಿತ್ವದ ಬಗ್ಗೆ ಬಹಳ ಆಕ್ಷೇಪಮಾಡುತ್ತಾರೆ. ಆದರೆ ಶ್ರೀಕೃಷ್ಣರನ್ನು ಹಲವರು ಪತ್ನಿಯರನ್ನು ಹೊಂದಿರುವವರನ್ನಾಗಿ ವರ್ಣಿಸಲಾಗಿದೆ. ಹಲವಾರು ಹಿಂದೂ ಮಹಾಪುರುಷರು ಬಹುಪತ್ನಿಯರನ್ನು ಹೊಂದಿದ್ದರೆಂದು ಹಿಂದೂಗಳ ಧಾರ್ಮಿಕ ಗ್ರಂಥಗಳಿಂದ ತಿಳಿಯುತ್ತದೆ. (ಮನು ಧರ್ಮಶಾಸ್ತ್ರ ಅಧ್ಯಾಯ 9, ಶ್ಲೋಕ 122, 149, 184 ನೋಡಿರಿ). ಲಾಲಾ ಲಜ್‌ಪತ್‌ರಾಯ್ ತನ್ನ ಗ್ರಂಥವಾದ "ಶ್ರೀಕೃಷ್ಣ ಮಹಾರಾಜ್ ಜೀ" ಇದರಲ್ಲಿ ಹೀಗೆ ಬರೆದಿದ್ದಾರೆ: ಶ್ರೀಕೃಷ್ಣಜಿಯವರು ಬಹುಪತ್ನಿಯರನ್ನು ಹೊಂದಿದ್ದರು. (ಪುಟ 97, 98)

## ಕ್ರೈಸ್ತ ಧರ್ಮದಲ್ಲಿ ಬಹುಪತ್ನಿತ್ವ

ಯೇಸು ಮಸೀಹರು ಬೈಬಲಿನ ನಿಯಮಗಳನ್ನು ರದ್ದುಗೊಳಿಸಿರಲಿಲ್ಲ. ಆದುದರಿಂದ ಕ್ರೈಸ್ತರು ಈ ನಿಯಮ ರದ್ದಾಗಿದೆ

ಎಂದು ಹೇಳಲಿಕ್ಕಾಗದು: ಯೇಸು ಮಸೀಹರು ಹೀಗೆ ಹೇಳಿದ್ದರು: "ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ; ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ." (ಮತ್ತಾಯ 5:17)

ಯೇಸು ಕ್ರಿಸ್ತರು ವಿವಾಹದ ಬಗ್ಗೆ ಆಜ್ಞೆ ನೀಡದುದನ್ನು ಮತ್ತು ಅವರು ವರ್ತಿಸಿದ ನೀತಿಯನ್ನು ನೋಡುವುದಾದರೆ ಕ್ರೈಸ್ತರಿಗೆ ಒಂದು ಮದುವೆ ಕೂಡ ಆಗಲು ಅನುಮತಿ ಇಲ್ಲ. ಕ್ರೈಸ್ತ ಪುರುಷರು ಮದುವೆಯನ್ನು ಸಂಪೂರ್ಣವಾಗಿ ವರ್ಜಿಸಬೇಕಾಗಿದೆ.

ಕ್ರೈಸ್ತರು ಇನ್ನೊಂದು ವಿಷಯವನ್ನು ಯೋಚಿಸಬೇಕು. ಅವರ ಅಭಿಪ್ರಾಯ ಪ್ರಕಾರ ಒಬ್ಬ ಪುರುಷ ಒಂದಕ್ಕಿಂತ ಹೆಚ್ಚು ಪತ್ನಿಯನ್ನು ಹೊಂದಬಾರದು ಎಂದು ಹೇಳುತ್ತಿರುವಾಗ ಯೇಸು ಕ್ರಿಸ್ತರ ಮಾತೆಯ ಬಗ್ಗೆ ಅವರು ಇಬ್ಬರು ಪತಿಯರನ್ನು ಹೊಂದಿದ್ದರೆಂದು ಹೇಳುತ್ತಾರೆ. ಒಬ್ಬ ಪತಿ ದೇವನು (ಹಾಗೆ ಹೇಳುವುದರಿಂದ ಅಲ್ಲಾಹನು ನಮಗೆ ಅಭಯನೀಡಲಿ – ನಊಝುಬಿಲ್ಲಾಹ್ ಮಿನ್ ಧಾಲಿಕ). ಅವರ ಗರ್ಭದಲ್ಲಿ ಹುಟ್ಟಿದ ಮಗು ದೇವನದೆಂದು ಅವರು ಹೇಳುತ್ತಾರೆ. ದೇವನು ಹಝ್ರತ್ ಮರ್‌ಯಮ್ (ಮರಿಯ)ರಿಗೆ ವಿವಾಹ ವಿಚ್ಛೇದನೆ ನೀಡಿದ ಬಳಿಕ ಅವರು ಯೂಸುಫ್ (ಯೋಸೇಫ)ರನ್ನು ವಿವಾಹವಾದರೆಂದು ಕ್ರೈಸ್ತರ ಯಾವ ಪುಸ್ತಕದಲ್ಲೂ ಬರೆದಿರುವುದಾಗಿ ನಾವು ಕಾಣುವುದಿಲ್ಲ. ಆದುದರಿಂದ ಕ್ರೈಸ್ತರು ಹೀಗೆ ಹೇಳಬೇಕು: ಪುರುಷರು ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ಹೊಂದಬಾರದು; ಆದರೆ ಮಹಿಳೆ ಇಬ್ಬರು ಗಂಡಂದಿರನ್ನು ಹೊಂದಬಹುದು. ಆದುದರಿಂದ ಕ್ರೈಸ್ತರಿಗೆ ಇಸ್ಲಾಮಿನ ಬಗ್ಗೆ ಆಕ್ಷೇಪವಿದ್ದರೆ ಮೊದಲು ತಮ್ಮ ಧರ್ಮದ ಉಪದೇಶ ಪ್ರಕಾರ ವರ್ತಿಸಿ ತೋರಿಸಿಕೊಡಬೇಕು. ಅವರು ಒಂದು ಮದುವೆ ಕೂಡ ಆಗಬಾರದು. ತಮ್ಮ ಧರ್ಮದ ಉಪದೇಶಗಳನ್ನು ನೋಡದೆ, ತಮ್ಮ ಧಾರ್ಮಿಕ ಗ್ರಂಥಗಳನ್ನು ಅಧ್ಯಯನ ಮಾಡದೆ ಅಥವಾ ಅವುಗಳನ್ನು ಕಡೆಗಣಿಸಿ ಇಸ್ಲಾಮ್ ವಿರುದ್ಧ ಆಕ್ಷೇಪ ಮಾಡಲು ಧೈರ್ಯಪಡುವುದು ಅವರ ಉದ್ಧಟತನವಾಗಿದೆ. ನಾವು ವಿಷಯವನ್ನು ಮನವರಿಕೆ ಮಾಡಿಕೊಡಲು ಈ ಎಲ್ಲ ವಿಷಯಗಳನ್ನು ಪ್ರಸ್ತಾಪಿಸಿದ್ದೇವೆ. ನಮ್ಮ ವರ್ತನೆಯ ಈ ರೀತಿಯನ್ನು ಇಂಗ್ಲಿಷ್ ಭಾಷೆಯ ನಾಣ್ಣುಡಿಯಲ್ಲಿ ಹೀಗೆ ವಿವರಿಸಲಾಗಿದೆ:

PHYSICIAN HEAL THYSELF

ವೈದನೇ ಮೊದಲು ನಿನ್ನನ್ನು ಚಿಕಿತ್ಸೆಮಾಡು.

ಒಂದು ಆಶ್ಚರ್ಯಕರ ವಿಷಯವೇನೆಂದರೆ, ಇಸ್ಲಾಮಿನ ಬಹುಪತ್ನಿತ್ವದ ಉಪದೇಶದ ಬಗ್ಗೆ ಆಕ್ಷೇಪಿಸುವ ಇತರ ಎಲ್ಲ ಧರ್ಮದ ಜನರು ಒಂದು ವಿಷಯವನ್ನು ಮರೆತುಬಿಡುತ್ತಾರೆ. ಇಸ್ಲಾಮ್ ಮಾತ್ರ ಪತ್ನಿಯರ ಸಂಖ್ಯೆಯನ್ನು ಕಡಿಮೆಮಾಡಿ ಕಡ್ಡಾಯಗೊಳಿಸಿದೆ. ಇತರ ಧರ್ಮಗಳು ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಲು ಅನುಮತಿ ನೀಡಿವೆ. ಅವರ ಪ್ರವಾದಿಗಳು ಮತ್ತು ದೈವಿಕ ಜನರು ಎಂತಹ ಮಾದರಿ ತೋರಿಸಿದರೆಂದರೆ, ಅದರಲ್ಲಿ ಪತ್ನಿಯರ ಸಂಖ್ಯೆಯ ಬಗ್ಗೆ ನಿರ್ಬಂಧವು ಕಾಣಿಸುವುದಿಲ್ಲ. ಇತರ ಧರ್ಮಗಳ ಬಗ್ಗೆ ಹೇಳುವುದಾದರೆ, ಅವರು ಇಷ್ಟವಿರುವಷ್ಟು ಪತ್ನಿಯರನ್ನು ಹೊಂದಬಹುದು ಮತ್ತು ಪತ್ನಿಯರ ಮಧ್ಯೆ ನ್ಯಾಯಪಾಲನೆಯ ಷರತ್ತನ್ನೂ ವಿಧಿಸಲಿಲ್ಲ. ಆದರೆ ಪವಿತ್ರ ಖುರ್‌ಆನ್ ಷರತ್ತುಗಳನ್ನು ವಿಧಿಸಿ ಬಹುಪತ್ನಿತ್ವಕ್ಕೆ ಅನುಮತಿ ನೀಡಿತು. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತಮ್ಮ ನಡೆವಳಿಕೆಯಿಂದ ಪರಿಶುದ್ಧ ಮಾದರಿ ತೋರಿಸಿಕೊಟ್ಟರು.

ಯಾರಾದರೂ ಮಹಿಳೆ ತನ್ನ ಪತಿ ಇಸ್ಲಾಮೀ ಉಪದೇಶದ ನೆವನ ಹೇಳಿ ತನ್ನ ಸ್ವಾರ್ಥ ಆಶಾಭಿಲಾಷೆಗಳಿಗೋಸ್ಕರ ಎರಡನೆಯ ಮದುವೆ ಆಗುತ್ತಾನೆಂದು ಭಯಪಡುವುದಾದರೆ ಅಂತಹ ಮಹಿಳೆಗೆ ಹಝ್ರತ್ ವಾಗ್ದತ್ತ ಮಸೀಹ್[ಅ] ಒಂದು ಪರಿಹಾರ ಮಾರ್ಗವನ್ನು ಹೀಗೆ ಸೂಚಿಸಿದ್ದಾರೆ:

"ಇಸ್ಲಾಮ್ ಧರ್ಮದಲ್ಲಿ ನಾಲ್ಕು ಪತ್ನಿಯರನ್ನು ಹೊಂದುವ ಅನುಮತಿ ನೀಡಲಾಗಿದ್ದರೂ ಯಾರ ಮೇಲೆಯೂ ಬಲಾತ್ಕಾರ ಹೇರಬಾರದು (ಎಂದರೆ ಪುರುಷನ ಮೇಲೆ ಅಥವಾ ಮಹಿಳೆಯ ಮೇಲೆ). ಇದರ ಬಗ್ಗೆ ಮಹಿಳೆಯರಿಗೆ ಚೆನ್ನಾಗಿ ತಿಳಿದಿದೆ. ಆದುದರಿಂದ ಒಬ್ಬ ಮುಸ್ಲಿಮ್ ಮಹಿಳೆ ಮದುವೆಯಾಗಲು ಬಯಸುವಾಗ ತನ್ನ ಭಾವೀ ಪತಿ ಯಾವುದೇ ಸ್ಥಿತಿಯಲ್ಲಿಯೂ ದ್ವಿತೀಯ ವಿವಾಹವಾಗಲಾರನೆಂದು ಅವನಿಂದ ವಾಗ್ದಾನವನ್ನು ಪಡೆಯಬೇಕು. ಮದುವೆಗೆ ಮೊದಲು ಇಂತಹ ಷರತ್ತನ್ನು ವಿಧಿಸುವುದಾದರೆ ಇಂತಹ ಪತ್ನಿಯ ಪತಿ ದ್ವಿತೀಯ ಪತ್ನಿಯನ್ನು ಹೊಂದುವುದಾದರೆ ಅವನು ವಾಗ್ದಾನದ ಉಲ್ಲಂಘನೆಯ ಅಪರಾಧಿಯಾಗಿ ಗಣಿಸಲ್ಪಡುವನು".

(ಚಶ್ಮಯೆ ಮಅರಿಫತ್)

ಆದರೆ ಈ ಉಪಾಯವನ್ನು ತಪ್ಪಾಗಿ ಬಳಸಬಾರದು. ಆವಶ್ಯಕತೆಯು ವಾಸ್ತವಿಕವಾಗಿದ್ದರೆ ಅಂತಹ ಸಂದರ್ಭಗಳಲ್ಲಿ ಅದರ ವಿರುದ್ಧ ಮುಖ ತಿರುಗಿಸಬಾರದು. ಇಸ್ಲಾಮೀ ತತ್ವಕ್ಕೆ ವಿರುದ್ಧವಾಗಿ ವರ್ತಿಸಬಾರದು. ದ್ವಿತೀಯ ವಿವಾಹವಾಗಲು ಅನುಮತಿಸಬಹುದಾದ ಒಂದು ಆವಶ್ಯಕತೆ ಮಕ್ಕಳು ಆಗಿದ್ದಾರೆ. ಮಕ್ಕಳು ಆಗದಿರಲು ಕಾರಣ ಪತ್ನಿಯಾಗಿದ್ದರೆ ಅಂತಹ ಪತ್ನಿ ತನ್ನ ಪತಿ ದ್ವಿತೀಯ ವಿವಾಹವಾಗಲು ಅನುಮತಿ ನೀಡಬೇಕು. ಅದಕ್ಕೆ ಅವಳು ಸಮ್ಮತಿಸುವುದಿಲ್ಲವಾದರೆ ಖುಲಅ್ ಮೂಲಕ ವಿಚ್ಛೇದನ ಪಡೆಯಬಹುದು. ಮಕ್ಕಳಾಗದಿರಲು ಕಾರಣ ಪತಿಯಾಗಿದ್ದರೆ ಅವನು ದ್ವಿತೀಯ ವಿವಾಹವಾಗಲು ಯೋಗ್ಯ ಕಾರಣವಿರುವುದಿಲ್ಲ. ಅವನು ತನಗೆ ಸಂತಾನವಾಗುವುದಿಲ್ಲವೆಂದು ನೇರವಾದ ಮಾತು ಹೇಳಿ ದ್ವಿತೀಯ ವಿವಾಹವಾಗಲು ಬಯಸುವುದಾದರೆ, ಅವನ ವಿವಾಹ ಪ್ರಸ್ತಾಪವು ನಿರಾಕರಿಸಲ್ಪಡುವುದು.

ಮಕ್ಕಳ ಬಗ್ಗೆ ಪ್ರಸ್ತಾಪಿಸುವ ಯೋಚನೆ ನನಗೆ ಬಂದುದೇಕೆಂದರೆ, ಕೆಲವು ತಿಂಗಳ ಹಿಂದೆ ನಾನು ಖುತ್‌ಬದಲ್ಲಿ ಹೀಗೆ ಹೇಳಿದ್ದೆನು: ಅಹ್ಮದಿಯಾ ಜಮಾಅತ್ ತನ್ನ ಎರಡನೆಯ ಶತ ವರ್ಷದಲ್ಲಿ ಪ್ರವೇಶಿಸುತ್ತಿರುವಾಗ ನಮ್ಮ ಹೃದಯದಲ್ಲಿ ಅಲ್ಲಾಹನ ಮುಂದೆ ಪಾರಿತೋಷಕಗಳನ್ನು ಅರ್ಪಿಸಬೇಕೆಂದು ಆಶೆ ಇದೆ. ನಾವು ಧನತ್ಯಾಗಗಳನ್ನು ಮಾಡಿದ್ದೇವೆ. ಬೇರೆ ಅನೇಕ ತ್ಯಾಗ ಬಲಿದಾನಗಳನ್ನು ಮಾಡಿದ್ದೇವೆ. ಆತ್ಮ ಸುಧಾರಣೆಯ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದೇವೆ. ನಾವು ಎರಡನೆಯ ಶತಮಾನವನ್ನು ಪ್ರವೇಶಿಸುವಾಗ ನಾವು ಅಲ್ಲಾಹನ ಮುಂದೆ ಒಳಿತುಗಳನ್ನು ಪಾರಿತೋಷಕವಾಗಿ ತೆಗೆದುಕೊಂಡು ಹೋಗಲು ಸಿದ್ಧತೆಗಳನ್ನು ನಡೆಸಿದೆವು. ಇದಕ್ಕೆ ಸಂಬಂಧಿಸಿ ನಾನು ಯೋಚಿಸಿದೆ. ಇದು ಅಲ್ಲಾಹನ ಕಡೆಯಿಂದ ಪ್ರೇರಣೆ ಎಂದು ನಾನು ಭಾವಿಸುತ್ತೇನೆ. ನಾವು ನಮ್ಮ ಮಕ್ಕಳನ್ನು ಪಾರಿತೋಷಕವಾಗಿ ಅಲ್ಲಾಹನ ಸನ್ನಿಧಿಯಲ್ಲಿ ಅರ್ಪಿಸುವೆವು. ಮುಂದಿನ ಶತಮಾನದಲ್ಲಿ ಮನುಷ್ಯರ ಸುಧಾರಣೆಯ ಜವಾಬ್ದಾರಿ ವಹಿಸಲು

# ವಾಸ್ತವಿಕವಾಗಿ ಇಸ್ಲಾಮೀ ಜಿಹಾದ್ ಎಂದರೇನು?

* ಲೇಖಕ : ಮೌಲಾನ ಮುಹಮ್ಮದ್ ಕರೀಮುದ್ದೀನ್ ಶಾಹಿದ್

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

**ವ ಜಾಹಿದೂ ಫಿಲ್ಲಾಹಿ ಹಖ್ಖ ಜಿಹಾದಿಹೀ**
**ಹೂವಜ್‌ತಬಾಕುಮ್ ವಮಾಜಅಲ ಅಲೈಕುಮ್**
**ಫಿದ್ದೀನಿ ಮಿನ್ ಹರಿಜ. ಮಿಲ್ಲತ ಅಬೀಕುಮ್**
**ಇಬ್‌ರಾಹೀಮ. ಹೂವ ಸಮ್ಮಾಕುಮುಲ್ ಮುಸ್ಲಿಮೀನ**
**ಮಿನ್ ಖಬ್‌ಲು ವ ಫೀ ಹಾಧಾ ಲಿಯಕೂನರ್ರಸೂಲು**
**ಶಹೀದನ್ ಅಲೈಕುಮ್ ವತಕೂನೂ ಶುಹದಾಅ ಅಲನ್ನಾಸ್.**

"ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಬೇಕಾದ ರೀತಿಯಲ್ಲಿಯೇ ನೀವು ಜಿಹಾದ್ ಮಾಡಿರಿ. ಅವನೇ ನಿಮ್ಮನ್ನು ಆಯ್ಕೆಮಾಡಿದ್ದಾನೆ. ಅವನು ನಿಮಗೆ ಧರ್ಮಾಚರಣೆಯನ್ನು ಕ್ಲಿಷ್ಟಕರವನ್ನಾಗಿ ಮಾಡಲಿಲ್ಲ. ನಿಮ್ಮ ಪಿತಾಮಹನಾದ ಇಬ್‌ರಾಹೀಮರ ಧರ್ಮ. ಅವನು (ಅಲ್ಲಾಹನು) ಇದಕ್ಕೆ ಮುಂಚೆ ಮತ್ತು ಈ ಗ್ರಂಥದಲ್ಲಿ ನಿಮಗೆ 'ಮುಸ್ಲಿಮರು' ಎಂದು ಹೆಸರಿಟ್ಟಿರುವನು. ಈ ಸಂದೇಶವಾಹಕನು ನಿಮಗೆ ಸಾಕ್ಷಿಯಾಗಲಿಕ್ಕೂ ನೀವು ಮನುಷ್ಯಕುಲಕ್ಕೆ ಸಾಕ್ಷಿ ಆಗಲಿಕ್ಕೂ (ಹೀಗೆ ಮಾಡಲಾಗಿದೆ). (22:79)

ಭೀಕರವಾದ, ಉಗ್ರವಾದ ಮತ್ತು ಟೆರರಿಸಮ್‌ಗೆ ಯಾವುದೇ ಧರ್ಮವಿಲ್ಲ. ಭೀಕರವಾದಿ ಅಥವಾ ಉಗ್ರವಾದಿ ಹಿಂದೂ ಅಥವಾ, ಕ್ರೈಸ್ತ ಅಥವಾ, ಮುಸ್ಲಿಮ್ ಆಗಿರುವುದಿಲ್ಲ. ಭೀಕರವಾದಿಯು ಕೇವಲ ಭೀಕರವಾದಿಯಾಗಿರುತ್ತಾನೆ. ಏಕೆಂದರೆ ಹಿಂದೂ ಧರ್ಮ ಅಹಿಂಸೆಯ ಧರ್ಮವಾಗಿದೆ. ಅಹಿಂಸಾ ಪರಮೋಧರ್ಮ ಹಿಂದುಗಳ ಮೂಲತತ್ವವಾಗಿದೆ. ಕ್ರೈಸ್ತ ಧರ್ಮದ ಬಗ್ಗೆ ಹೇಳುವುದಾದರೆ, ಯೇಸುಕ್ರಿಸ್ತರು ತಮ್ಮ ಪರ್ವತ ಪ್ರಸಂಗದಲ್ಲಿ ಸ್ಪಷ್ಟವಾಗಿ ಹೀಗೆ ಹೇಳಿದರು: ನಿನ್ನ ಬಲಗೆನ್ನೆಗೆ ಯಾರಾದರೂ ಹೊಡೆದರೆ



ನಿನ್ನ ಎಡಗೆನ್ನೆಯನ್ನು ಅವನ ಕಡೆಗೆ ಒಡ್ಡು. ಎಂದರೆ ಅವನ ಮೇಲೆ ಆಕ್ರಮಣ ಮಾಡಬಾರದು ಮತ್ತು ಪ್ರತೀಕಾರ ಮಾಡಬಾರದು. ಇಸ್ಲಾಮ್ ಪ್ರಕೃತಿ ಧರ್ಮವಾಗಿದೆ. ಅದರ ಅರ್ಥ ಶಾಂತಿ ಮತ್ತು ಸೌಹಾರ್ದವಾಗಿದೆ. ಅದರ ಉಪದೇಶಗಳು ಪ್ರಕೃತಿ ನಿಯಮಗಳಿಗನುಸಾರವಾಗಿರುತ್ತದೆ. ಅದು ಪ್ರತಿಯೊಂದು ಸಂದರ್ಭದಲ್ಲಿಯೂ ಮೃದುವಾಗಿ ವರ್ತಿಸಬೇಕೆಂದು ಉಪದೇಶಿಸುವುದಿಲ್ಲ. ಪ್ರತಿಯೊಂದು ಸಂದರ್ಭದಲ್ಲಿ ಕಠಿಣವಾಗಿ ವರ್ತಿಸಬೇಕೆಂದೂ ಹೇಳುವುದಿಲ್ಲ. ಅದು ಮಧ್ಯ ಮಾರ್ಗವನ್ನು ಅವಲಂಬಿಸಲು ಉಪದೇಶಿಸುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಇದರ ಬಗ್ಗೆ ಹೀಗೆ ಹೇಳಿದ್ದಾನೆ:

**ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮಿಸ್‌ಲುಹಾ. ಫಮನ್ ಅಫಾ ವ ಅಸ್‌ಲಹ ಫ ಅಜ್‌ರುಹೂ ಅಲಲ್ಲಾಹಿ.**

---

*(ಹಿಂದಿನ ಪುಟದಿಂದ)*

ನಾವು ಮಕ್ಕಳನ್ನು ಜಮಾಅತಿನ ಸುಪರ್ದಿಗೆ ನೀಡುವೆವು. ಅವರನ್ನು ತರಬೇತಿಗೊಳಿಸಿ ಮುಂದಿನ ಶತಮಾನದಲ್ಲಿ ಜನರಿಗೆ ಇಸ್ಲಾಮಿನ ಸಂದೇಶವನ್ನು ತಲಪಿಸಲು ಅವರನ್ನು ಉಪಯೋಗಿಸಬೇಕು. ಆದುದರಿಂದ ನಾನು ಹೇಳಿದೆ – ಆ ಖುತ್‌ಬದ ನಂತರ ಮುಂದಿನ ಶತಮಾನದ ಆರಂಭದ ತನಕ ಹುಟ್ಟುವ ಮಕ್ಕಳನ್ನು ಅವರು ಹೆಣ್ಣಾಗಲಿ ಗಂಡಾಗಲಿ ಅಲ್ಲಾಹನ ಸನ್ನಿಧಾನದಲ್ಲಿ ಅರ್ಪಿಸುವುದಾಗಿ ಪ್ರತಿಜ್ಞೆಮಾಡಿರಿ ಎಂದು. ಅದು ಬಹಳ ಪ್ರಿಯಕರ ಪಾರಿತೋಷಕವಾಗುವುದು. ಮಕ್ಕಳಿಲ್ಲದವರಿಗೆ ಈ ಪ್ರತಿಜ್ಞೆಯ ಫಲಸ್ವರೂಪವಾಗಿ ಮಕ್ಕಳನ್ನು ಅಲ್ಲಾಹನು ಅನುಗ್ರಹಿಸಲೂ ಬಹುದು. ಇದಕ್ಕೆ ಸಂಬಂಧಿಸಿ ಕೆಲವು ವರದಿಗಳು ಬರಲು ಪ್ರಾರಂಭವಾಗಿವೆ. ಎಷ್ಟೋ ವರ್ಷಗಳಿಂದ ಮಕ್ಕಳಾಗದವರು ಈ ರೀತಿ ಪ್ರತಿಜ್ಞೆಮಾಡಿದಾಗ ಅವರ ಒಳ್ಳೆಯ ಆಶೆಯ ಅನುಗ್ರಹದಿಂದ ಅವರ ಮನೆಯಲ್ಲಿ ಮಕ್ಕಳು ಹುಟ್ಟುವ ಚಿಹ್ನೆಗಳು ಗೋಚರಿಸಿದುವು. ಆದುದರಿಂದ ನಾವು ಈ ವಿಷಯದ ಬಗ್ಗೆ ಸಾಧ್ಯವಿರುವಷ್ಟು ಕಾರ್ಯ ಪ್ರವೃತ್ತರಾಗಬೇಕು. ಮುಂದಿನ ಶತಮಾನದ ಆವಶ್ಯಕತೆಗಳನ್ನು ಈಡೇರಿಸಲು ನಮ್ಮ ಮಕ್ಕಳನ್ನು ಅರ್ಪಿಸಬೇಕು. ಈ ಪ್ರಸ್ತಾಪದ ಕಾರಣದಿಂದ ಕೆಲವು ಪುರುಷರಿಗೆ ನೆವನಗಳು ದೊರಕಿದುವು. ಅವರು ಹೇಳುತ್ತಾರೆ: ನಮಗೆ ಮಕ್ಕಳು ಇದ್ದಾರೆ. ಆದರೆ ನಾವು ಮುಂದಿನ ಶತಮಾನಕ್ಕೋಸ್ಕರ ಮಕ್ಕಳನ್ನು ಅರ್ಪಿಸಲಿಕ್ಕಾಗಿ ಇನ್ನೊಂದು ಮದುವೆ ಆಗಲು ಬಯಸುತ್ತೇವೆ. ಕೇವಲ ಎರಡು ವರ್ಷಗಳು ಬಾಕಿಯಾಗಿ ಉಳಿದಿವೆ. ನಮಗೆ ಮದುವೆಯಾಗಲು ಕೂಡಲೆ ಅನುಮತಿ ನೀಡಿರಿ. ನಾವು ನಮಗೆ ಹುಟ್ಟುವ ಮಕ್ಕಳನ್ನು ಇಸ್ಲಾಮಿನ ಸೇವೆಗೋಸ್ಕರ ಅರ್ಪಿಸುವೆವು. ನಾನು ಹೇಳಿದೆ: ನೀವು ಹೊಸದಾಗಿ ಮದುವೆಯಾಗಬೇಕಿಲ್ಲ. ಈಗ ಇರುವ ಮಕ್ಕಳನ್ನೇ ಜಮಾಅತಿನ ಸೇವೆಗೆ ಅರ್ಪಿಸಿರಿ. ಕೆಲವು ಪುರುಷರು ಮಹಿಳೆಯರನ್ನು ಒತ್ತಾಯಿಸಿದ ಕಾರಣ ಅವರು ಅನುಮತಿ ನೀಡಿದರು. ಇದು ಸಹ ಅಹ್ಮದಿ ಮಹಿಳೆಯ ಅದ್ಭುತ ವ್ಯಕ್ತಿತ್ವವಾಗಿದೆ. ಲೋಕದಲ್ಲಿ ಇಂತಹ ಉದಾಹರಣೆ ಕಾಣಿಸಲಾರದು. ಅವರು ದೇವನ ಪ್ರೀತಿಗೋಸ್ಕರ ಹೀಗೆ ಮಾಡಿದರು. ನಮಗೆ ಪಾರಿತೋಷಕ ನೀಡಲು ಸಾಧ್ಯವಿಲ್ಲ. ನಮ್ಮ ಪತಿ ಯುವತಿಯಾದ ಸಪತಿಯನ್ನು ತಂದು ಮಕ್ಕಳನ್ನು ಪಡೆದು ಜಮಾಅತಿಗೆ ಅರ್ಪಿಸಲಿ ಎಂದು ಅವರು ಬಯಸಿದರು. ಅವರ ತ್ಯಾಗ ಮನೋಭಾವ ಮತ್ತು ನಿಷ್ಠೆ ಗಮನಾರ್ಹವಾಗಿದೆ. ಆದರೆ ಪುರುಷರು ತಪ್ಪು ನೆವನ ಹೇಳಬಾರದು. ಒಂದು ಒಳ್ಳೆಯ ಪ್ರಸ್ತಾಪದಲ್ಲಿ ಕೆಟ್ಟ ಸಂಕಲ್ಪ ಹೊಂದಬಾರದು.

ಉಳಿದ ಭಾಗ ಇನ್‌ಶಾಅ ಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ) ಮುಂದೆ ವಿವರಿಸುವೆನು.

"ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಯಾರಾದರೂ ಕ್ಷಮೆ ನೀಡಿದರೆ (ಮತ್ತು ಅದರ ಪರಿಣಾಮವಾಗಿ) ಒಳಿತುಂಟಾದರೆ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ದೊರಕುವುದು". (42:41)

ಕೆಡುಕು ಅಥವಾ ಅಪರಾಧಕ್ಕೆ ಶಿಕ್ಷೆ ಅದಕ್ಕನುಸಾರವಾಗಿ ನೀಡಬಹುದು. ಆದರೆ ಶಿಕ್ಷೆ ನೀಡದೆ ಕ್ಷಮಿಸುವುದರಿಂದ ಸುಧಾರಣೆ ಉಂಟಾಗುವುದಾದರೆ ಕ್ಷಮಿಸುವುದು ಉತ್ತಮವಾಗಿದೆ. ಹಾಗೆ ಮಾಡಿದರೆ ಅಲ್ಲಾಹನು ಕ್ಷಮಿಸುವವನಿಗೆ ಉತ್ತಮ ಪ್ರತಿಫಲ ನೀಡುವನು.

ದೌರ್ಜನ್ಯ ಮತ್ತು ದೌರ್ಜನ್ಯಗಾರನನ್ನು ಎದುರಿಸದೆ ಇರುವುದು ಸಹ ಒಂದು ಅನ್ಯಾಯ ವರ್ತನೆಯಾಗಿದೆ. ಇದೇ ಕಾರಣದಿಂದ ಅಹಿಂಸೆಯನ್ನು ಅವಲಂಬಿಸಿದವರಾಗಿದ್ದರೂ ಶ್ರೀರಾಮಚಂದ್ರಜಿ ರಾವಣನ ವಿರುದ್ಧ ಯುದ್ಧ ಮಾಡಬೇಕಾಯಿತು. ಶ್ರೀಕೃಷ್ಣಜಿ ಕೌರವರ ವಿರುದ್ಧ ಹೋರಾಡಲು ಪಾಂಡವರಿಗೆ ಬೆಂಬಲ ನೀಡಿದರು ಮತ್ತು ಮಹಾಭಾರತದ ಯುದ್ಧದಲ್ಲಿ ಭಾಗವಹಿಸಿದರು. ಕ್ರೈಸ್ತರು ಬೈಬಲಿನ ಉಪದೇಶಗಳಿಗೆ ವಿರುದ್ಧವಾಗಿ ಅಸಂಖ್ಯಾತ ಕ್ರುಸೇಡ್ ಯುದ್ಧಗಳನ್ನು ಮಾಡಿದರು. ಆದರೆ ಯಾವ ಚರಿತ್ರೆಗಾರ, ವಿಮರ್ಶಕ ಅಥವಾ ಪತ್ರಕರ್ತ ಈ ಯುದ್ಧಗಳನ್ನು ಭೀಕರಕೃತ್ಯ ಎಂದಾಗಲಿ, ದೌರ್ಜನ್ಯ ಎಂದಾಗಲಿ ವರ್ಣಿಸುವುದಿಲ್ಲ. ಆದರೆ ಇಸ್ಲಾಮ್ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಶತ್ರುಗಳ ದೌರ್ಜನ್ಯ ಅತ್ಯಂತ ವರ್ಧಿಸಿದಾಗ ಅವರನ್ನು ಪ್ರತಿರೋಧಿಸಲು ಯುದ್ಧಮಾಡಿದುದನ್ನು ಮುಸ್ಲಿಮೇತರ ಚರಿತ್ರೆಗಾರರು, ವಿಮರ್ಶಕರು ಮತ್ತು ವಿಶಿಷ್ಟವಾಗಿ ಕ್ರೈಸ್ತರಾದ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ಆ ಯುದ್ಧಗಳನ್ನು ದೌರ್ಜನ್ಯವೆಂದೂ ಇಸ್ಲಾಮನ್ನು ಖಡ್ಗಬಲದಿಂದ ಹರಡಲು ಮಾಡಿದುದೆಂದೂ ಆಕ್ಷೇಪಿಸಿ ಇಸ್ಲಾಮ್ ಮತ್ತು ಮುಸ್ಲಿಮರನ್ನು ಅಪಕೀರ್ತಿಗೊಳಪಡಿಸಲು ಧಾರಾಳ ಪ್ರಯತ್ನ ಮಾಡಿದರು ಮತ್ತು ಈಗ ಸಹ ಹೀಗೆ ಮಾಡುತ್ತಿದ್ದಾರೆ. ಎಲ್ಲದಕ್ಕಿಂತ ಮಿಗಿಲಾದ ದುರದೃಷ್ಟಕರ ಮತ್ತು ಅನ್ಯಾಯಕರ ವರ್ತನೆ ಏನೆಂದರೆ ಮುಸ್ಲಿಮರ ಕೆಲವು ಪಂಡಿತರು ವಿರೋಧಿಗಳ ಈ ಘೋರ ಆರೋಪವನ್ನು ಅಂಗೀಕರಿಸಿ ಆಕ್ಷೇಪಗಾರರನ್ನು ಬೆಂಬಲಿಸಿ ಇಸ್ಲಾಮಿನ ಅವಿವೇಕಿ ಮಿತ್ರರಾಗುವ ಪಾತ್ರವಹಿಸುತ್ತಿದ್ದಾರೆ. ಆದುದರಿಂದ ಜಿಹಾದಿನ ವಾಸ್ತವಿಕತೆಯನ್ನು ವಿವರಿಸುವ ಮೊದಲು ಒಂದು ವಿಷಯವನ್ನು ಸ್ಪಷ್ಟಪಡಿಸುವುದು ಆವಶ್ಯಕವಾಗಿದೆ ಎಂದು ನಾನು ಹೇಳಲು ಬಯಸುತ್ತೇನೆ.

ಇಸ್ಲಾಮಿನ ಕೆಲವು ಮತಪಂಡಿತರ ಅಭಿಪ್ರಾಯ ಪ್ರಕಾರ, ಜಿಹಾದ್ ಎಂದರೆ ಮುಸ್ಲಿಮೇತರರನ್ನು ಖಡ್ಗಬಲದಿಂದ ಮುಸ್ಲಿಮರನ್ನಾಗಿ ಮಾಡಬೇಕೆಂದೇ ಆಗಿದೆ. ಮುಸ್ಲಿಮರ ಕೆಲವು ಹದೀಸ್ ಮತ್ತು ಫಿಖ್ಹ್ (ಕರ್ಮಶಾಸ್ತ್ರ) ಗ್ರಂಥಗಳಲ್ಲಿ ಹೀಗೆ ಬರೆದಿದೆ: ಅವಿಶ್ವಾಸಿಗಳನ್ನು ಕರೆದು ಅವರಿಗೆ ಇಸ್ಲಾಮಿನ ಬಗ್ಗೆ ವಿವರಿಸಿ ಅವರನ್ನು ಇಸ್ಲಾಮ್ ಧರ್ಮಕ್ಕೆ ಆಮಂತ್ರಿಸಬೇಕು. ಅವರು ಅದಕ್ಕೆ ಒಪ್ಪಿದರೆ ಉತ್ತಮ. ಆದರೆ ಅವರು ಒಪ್ಪದಿದ್ದರೆ ಅವರ ಅವಿಶ್ವಾಸದ ತೀವ್ರತೆ ಮತ್ತು ವಿಗ್ರಹಾರಾಧನೆಯ ಕಾರಣದಿಂದ ಅವರು ಹತ್ಯೆಗೊಳಿಸಲ್ಪಡಬೇಕು. (ಸಿಯಾನತುಲ್ ಇನ್‌ಸಾನ್ ಮತ್‌ಬಅ ಮುಸ್ತಫಾಯಿ ಲಾಹೋರ್ – 1873. ಪುಟ 232. ಲೇಖಕ : ವಲಿಯುಲ್ಲಾ ಸಾಹೇಬ್ ಲಾಹೋರಿ)

ಪ್ರಸಿದ್ಧ ಲೇಖಕ ಎಮ್. ಅಸ್ಲಮ್ ಹೀಗೆ ಬರೆಯುತ್ತಾರೆ:

"ಆಯಾ ಕಾಲದ ಖಲೀಫರ ಎಲ್ಲದಕ್ಕಿಂತಲೂ ಮುಖ್ಯ ಕೆಲಸ ಇಸ್ಲಾಮ್ ಧರ್ಮದ ಪ್ರಚಾರವಾಗಿತ್ತು. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಪವಿತ್ರ ಸಂದೇಶ ಅಲ್ಲಾಹನ ಸೃಷ್ಟಿಗಳಿಗೆ ತಲಪಿಸುವುದು ಮತ್ತು ಅವರನ್ನು ಇಸ್ಲಾಮ್ ಧರ್ಮಕ್ಕೆ ಆಮಂತ್ರಿಸುವುದು ಆ ಕೆಲಸವಾಗಿತ್ತು. ಯಾವುದಾದರೂ ಮುಸ್ಲಿಮೇತರ ದೊರೆಗೆ ಇಸ್ಲಾಮ್ ಧರ್ಮಕ್ಕೆ ಆಮಂತ್ರಣ ನೀಡುವಾಗ ಎರಡು ಷರತ್ತುಗಳನ್ನು ವಿಧಿಸಬೇಕು. ಮುಸ್ಲಿಮನಾಗು ಎಂದು ಅವನೊಂದಿಗೆ ಹೇಳಬೇಕು. ಅವನು ಅದಕ್ಕೆ ಒಪ್ಪುವುದಿಲ್ಲವಾದರೆ 'ಜಿಝಿಯಾ ತೆರಿಗೆ ನೀಡು' ಎಂದು ಹೇಳಬೇಕು. ಈ ಎರಡು ಷರತ್ತುಗಳನ್ನು ಅಂಗೀಕರಿಸುವುದಿಲ್ಲವಾದರೆ ಅಂತಹ ಉದ್ಧಟರನ್ನು ಧ್ವಂಸಗೊಳಿಸಲು ಇಸ್ಲಾಮಿನ ಮುಜಾಹಿದ್‌ಗಳಿಗೆ (ಹೋರಾಟಗಾರರಿಗೆ) ಆಜ್ಞೆ ಲಭಿಸುತ್ತದೆ. ಇದರ ಹೆಸರು ಜಿಹಾದ್ ಎಂದಾಗಿದೆ." (ಹಿಝ್‌ಬೆ ಮುಜಾಹಿದ್ – ಪುಟ 35)

ಜಮಾಅತೆ ಇಸ್ಲಾಮಿಯ ನಾಯಕ ಮೌಲವಿ ಅಬುಲ್ ಆಲಾ ಮೌದೂದಿ ಇದೇ ನಿಲುವನ್ನು ಹೊಂದಿದ್ದರು. ಅವರು ತನ್ನ ಗ್ರಂಥ "ಅಲ್ ಜಿಹಾದ್ ಫಿಲ್ ಇಸ್ಲಾಮ್"ನಲ್ಲಿ ಹೀಗೆ ಬರೆಯುತ್ತಾರೆ:

"ಪ್ರವಾದಿ[ಸ] 13 ವರ್ಷಗಳ ಕಾಲ ಅರಬರನ್ನು ಇಸ್ಲಾಮ್ ಧರ್ಮದ ಕಡೆಗೆ ಆಹ್ವಾನಿಸುತ್ತಾ ಇದ್ದರು. ಉಪದೇಶ ಮತ್ತು ಪ್ರವಚನದ ಅತ್ಯುತ್ತಮ ಪ್ರಭಾವಶಾಲಿ ಮಾರ್ಗಗಳನ್ನು ಕೈಗೊಂಡರು. ಬಲಿಷ್ಠ ಸಾಕ್ಷ್ಯಾಧಾರಗಳನ್ನು ನೀಡಿದರು. ಸ್ಪಷ್ಟವಾದ ಪುರಾವೆಗಳನ್ನು ಅವರ ಮುಂದಿಟ್ಟರು. ವಾಗ್ವೈಖರಿಯಿಂದ ಮತ್ತು ಪ್ರವಚನಗಳ ತೀವ್ರತೆಗಳಿಂದ ಹೃದಯಗಳಿಗೆ ಬಿಸಿ ಮುಟ್ಟಿಸಿದರು. ಬುದ್ಧಿಯನ್ನು ಬೆರಗುಗೊಳಿಸುವ ಅದ್ಭುತ ಕೃತ್ಯಗಳನ್ನು ಅಲ್ಲಾಹನ ಕಡೆಯಿಂದ ತೋರಿಸಿದರು. ತನ್ನ ಸುಸ್ವಭಾವ ಮತ್ತು ಪರಿಶುದ್ಧ ಜೀವಿತದ ಮೂಲಕ ಸಾತ್ವಿಕತೆಯ ಅತ್ಯುತ್ತಮ ಮಾದರಿಯನ್ನು ತೋರಿಸಿದರು. ಸತ್ಯವನ್ನು ಪ್ರಕಟಿಸಲು ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಅವಲಂಬಿಸಿದರು. ಅವರ ಸತ್ಯ, ಸೂರ್ಯ ಪ್ರಕಾಶದಂತೆ ಬೆಳಗುತ್ತಿದ್ದರೂ ಅವರ ಸಮುದಾಯದ ಜನರು ಅವರ ಆಹ್ವಾನವನ್ನು ನಿರಾಕರಿಸಿದರು.................... ಆದರೆ ಉಪದೇಶ ಮತ್ತು ಪ್ರವಚನಗಳು ನಿಷ್ಪ್ರಯೋಜಕವಾದಾಗ ಇಸ್ಲಾಮಿನ ಪ್ರವಾದಿ ಕೈಯಲ್ಲಿ ಖಡ್ಗ ಎತ್ತಿಕೊಂಡರು.......... ಆಗ ಹೃದಯಗಳಿಂದ ಕ್ರಮೇಣ ಕೆಡುಕು ಮತ್ತು ಉದ್ಧಟತನದ ತುಕ್ಕು ನೀಗಲು ತೊಡಗಿತು. ಅವರ ಪ್ರಕೃತಿಯಿಂದ ಹಾನಿಕಾರಕ ಅಂಶಗಳು ತನ್ನಿಂದ ತಾನೇ ಹೊರಟು ಹೋದುವು. ಆತ್ಮಗಳ ಕಶ್ಮಲ ದೂರಸರಿದುವು. ಇಷ್ಟು ಮಾತ್ರವಲ್ಲ, ಕಣ್ಣುಗಳಿಂದ ಪರದೆಗಳು ಸರಿದು ಸತ್ಯದ ಪ್ರಕಾಶವು ಸ್ಪಷ್ಟವಾಗಿ ಕಾಣಿಸಿತು. ಸತ್ಯವು ಪ್ರಕಟಗೊಂಡ ನಂತರವೂ ಅದರ ಮುಂದೆ ತಲೆಬಾಗುವುದನ್ನು ತಡೆಯುವಂತಹ ಅವರ ಕುತ್ತಿಗೆಗಳ ಗಡಸುತನ ಮತ್ತು ಅವರ ತಲೆಗಳಲ್ಲಿದ್ದ ಅಹಂಕಾರ ಬಾಕಿಯಾಗಿ ಉಳಿಯಲಿಲ್ಲ......... ಅರಬ್ ದೇಶದ ಹಾಗೆ ಬೇರೆ ದೇಶಗಳು ಸಹ ಇಸ್ಲಾಮ್ ಧರ್ಮವನ್ನು ಎಷ್ಟು ಬೇಗ ಸ್ವೀಕರಿಸಿದವು ಎಂದರೆ ಒಂದು ನೂರು ವರ್ಷಗಳೊಳಗೆ ಲೋಕದ ನಾಲ್ಕನೆಯ ಒಂದು ಭಾಗ ಮುಸಲ್ಮಾನರದಾಯಿತು. ಅದಕ್ಕೆ ಕಾರಣವೇನೆಂದರೆ, ಹೃದಯಗಳ ಮೇಲೆ ಆವರಿಸಿದ್ದ ಪರದೆಗಳನ್ನು ಇಸ್ಲಾಮಿನ ಖಡ್ಗ ಹರಿದು ಹಾಕಿತು."

(ಅಲ್ ಜಿಹಾದ್ ಫಿಲ್ ಇಸ್ಲಾಮ್ – ಪುಟ 137, 138)

ಇಸ್ಲಾಮ್ ಧರ್ಮದ ಪ್ರಚಾರ ಮತ್ತು ಪ್ರಸಾರ ಖಡ್ಗಬಲದಿಂದಾಯಿತು ಎಂದು ಪೂರ್ವಗ್ರಹ ಪೀಡಿತರಾದ ಮುಸ್ಲಿಮೇತರರು

ಮಾಡುತ್ತಿದ್ದ ಆಕ್ಷೇಪಗಳನ್ನು ಇಂತಹ ಉಗ್ರವಾದಿ ಮತಪಂಡಿತರು ಅಂಗೀಕರಿಸಿ ಸಾಮಾನ್ಯ ಮುಸ್ಲಿಮ್ ಜನತೆಗೆ "ಖಡ್ಗ ಎತ್ತದೆ ಇಸ್ಲಾಮ್ ಜಯಶಾಲಿಯಾಗಲಾರದು" ಎಂಬ ತಪ್ಪುಗ್ರಹಿಕೆ ಉಂಟಾಗುವಂತೆ ಮಾಡಿದರು. ಈ ಕಾರಣದಿಂದ ಲೋಕದಲ್ಲಿ ಇಸ್ಲಾಮ್ ಮತ್ತು ಮುಸ್ಲಿಮರನ್ನು ಭೀಕರವಾದಿ ಗುಂಪೆಂಬ ಅಪಕೀರ್ತಿಗೆ ಗುರಿ ಮಾಡಿದರು.

ಇಂತಹ ಮತಪಂಡಿತರು ಅಫ್‌ಘಾನಿಸ್ಥಾನದ ತಾಲಿಬಾನ್‌ಗೆ, ಪಾಕಿಸ್ತಾನ ಮತ್ತು ಭಾರತದ ದೇವ ಬಂದೀ, ವಹ್ಹಾಬಿ ಮತ್ತು ಜಮಾಅತೆ ಇಸ್ಲಾಮಿಗೆ ಸೇರಿದವರಾಗಿದ್ದು ಇಂದಿನ ಕಾಲದಲ್ಲಿ ನಡೆಯುತ್ತಿರುವ ಭೀಕರ ಕೃತ್ಯಗಳನ್ನು ಜಿಹಾದ್ ಎಂದು ಕರೆಯುತ್ತಾರೆ. ಆದರೆ ಈ ಭೀಕರ ಕೃತ್ಯಗಳಿಗೆ ಇಸ್ಲಾಮೀ ಜಿಹಾದ್‌ನೊಂದಿಗೆ ಯಾವ ಸಂಬಂಧವೂ ವಾಸ್ತವಿಕವಾಗಿ ಇರುವುದಿಲ್ಲ.

ಮೊತ್ತ ಮೊದಲು ಮನವರಿಕೆ ಮಾಡಿಕೊಳ್ಳಬೇಕಾದುದು ಏನೆಂದರೆ ಇಸ್ಲಾಮ್ ಧರ್ಮ ಬಲಾತ್ಕಾರವನ್ನು ಅನುಮತಿಸುವುದಿಲ್ಲ. ಅಭಿಪ್ರಾಯ ಸ್ವಾತಂತ್ರ್ಯ, ಮನಸ್ಸಾಕ್ಷಿ ಸ್ವಾತಂತ್ರ್ಯವನ್ನು ಇಸ್ಲಾಮ್ ಪ್ರತಿಪಾದಿಸುತ್ತದೆ. ಇಸ್ಲಾಮಿನ ಆರಂಭದ ಘಟ್ಟದಲ್ಲಿ ಶತ್ರುಗಳು ಜನರನ್ನು ಬಲಾತ್ಕಾರದಿಂದ ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸದಂತೆ ತಡೆಯುತ್ತಿದ್ದರು. ಆದರೆ ಇಸ್ಲಾಮ್ ಬಲಾತ್ಕಾರದಿಂದ ಮತಪರಿವರ್ತನೆ ಮಾಡುವುದನ್ನು ವಿರೋಧಿಸುತ್ತಿತ್ತು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

**ಖುಲಿಲ್ ಹಖ್ಖು ಮಿರ್‍ರಬ್ಬಿಕುಮ್ ಫಮನ್ ಶಾಅ ಫಲ್‌ಯೂಮಿನ್ ವ ಮನ್ ಶಾಅ ಫಲ್‌ಯಕ್‌ಫುರ್.**

"(ಓ ಪೈಗಂಬರ್) ಹೇಳು: 'ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.'" (18:30)

ಪವಿತ್ರ ಖುರ್‌ಆನಿನ ಈ ವಚನದಿಂದ ತಿಳಿಯುವುದೇನೆಂದರೆ, ಯಾರ ಮೇಲೆಯೂ ಬಲಾತ್ಕಾರ ಮಾಡಬಾರದು. ಪ್ರತಿಯೊಬ್ಬನು ತನ್ನ ಮನಸ್ಸಾಕ್ಷಿಗೆ ಕಿವಿಗೊಡಲು ಸ್ವಾತಂತ್ರ್ಯ ಹೊಂದಿದ್ದಾನೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ:

**ಲಾ ಇಕ್ರಾಹ ಫಿದ್ದೀನಿ ಖದ್‌ತ್ತ ಬಯ್ಯನರ್‍ರುಶ್‌ದು ಮಿನಲ್‌ಗ್ವಯ್ಯಿ**

"ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ" (2:257)

ಇಸ್ಲಾಮ್ ಮನಸ್ಸಾಕ್ಷಿ ಸ್ವಾತಂತ್ರ್ಯದ ಉಪದೇಶ ನೀಡುತ್ತದೆ. ಅದರೊಂದಿಗೆ ಮುಸ್ಲಿಮರು ಖಡ್ಗ ಪ್ರಯೋಗಿಸಿ ಯುದ್ಧಮಾಡಿದ ಸಂದರ್ಭವನ್ನು ಪರಿಶೀಲಿಸುವುದಾದರೆ, ಅವರ ಸ್ಥಿತಿ ಹೇಗಿತ್ತೆಂದರೆ, ಅವರು ಬಲಾತ್ಕಾರ ಪ್ರಯೋಗ ಮಾಡಿದ್ದರು ಎಂಬ ಅಭಿಪ್ರಾಯವನ್ನು ಅಲ್ಲಗಳೆಯುತ್ತದೆ. ಬೆರಳೆಣಿಕೆಯ ಕೆಲವು ಜನರ ವಿರುದ್ಧ ದೇಶವಾಸಿಗಳೆಲ್ಲ ಆಯುಧವೆತ್ತಿದ್ದರು. ಆ ಕಾಲದ ಮುಸ್ಲಿಮರ ಸ್ಥಿತಿ ಹೇಗಿತ್ತೆಂದರೆ, ಹೆದರಿಕೆಯ ಕಾರಣ ಅವರಿಗೆ ನಿದ್ರೆ ಬರುತ್ತಿರಲಿಲ್ಲ. ಅವರಿಗೆ ಸ್ವತಃ ಯುದ್ಧ ಪ್ರಾರಂಭಿಸುವ ಶಕ್ತಿಯೂ ಇರಲಿಲ್ಲ. ಅವರ ಈ ಸ್ಥಿತಿ ಸೂಚಿಸುವುದೇನೆಂದರೆ, ಮುಸ್ಲಿಮರು ಪ್ರಾರಂಭದಲ್ಲಿ ಮಾಡಿದ ಹೋರಾಟಗಳು ಪ್ರತಿರೋಧಾತ್ಮಕವಾಗಿದ್ದುವು. ಅವರು ಆತ್ಮರಕ್ಷಣೆಗೋಸ್ಕರ ಯುದ್ಧಮಾಡಿದರೇ ಹೊರತು ಆಕ್ರಮಣಗಾರರಾಗಿ ಯುದ್ಧಮಾಡಲಿಲ್ಲ.

ಇನ್ನೊಂದು ಗಮನಾರ್ಹ ವಿಷಯವೇನೆಂದರೆ, ಮುಸ್ಲಿಮರು ಆರಂಭ ಕಾಲದಲ್ಲಿ ಮಾಡಿದ ಯುದ್ಧಗಳು ಜನರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡಲು ಆಗಿದ್ದರೆ ಆ ರೀತಿ ಮುಸ್ಲಿಮರಾದವರ ಉದಾಹರಣೆ ಚರಿತ್ರೆಯಲ್ಲಿ ಉಲ್ಲೇಖಿತವಾಗುತ್ತಿತ್ತು. ಆದರೆ ಮುಸ್ಲಿಮೇತರನೊಬ್ಬನನ್ನು ಮುಸ್ಲಿಮನನ್ನಾಗಿ ಪರಿವರ್ತನೆ ಮಾಡಿದ ಒಂದು ಉದಾಹರಣೆ ಕೂಡ ನಮಗೆ ಚರಿತ್ರೆಯಲ್ಲಿ ದೊರಕುವುದಿಲ್ಲ, ಆದರೆ ನಮಗೆ ಈ ಕೆಳಗಿನಂತಹ ಉದಾಹರಣೆಗಳು ಸಿಗುತ್ತವೆ. ಯುದ್ಧ ನಡೆಯುತ್ತಿದ್ದಾಗ ಒಬ್ಬ ಬಹುದೇವಾರಾಧಕ ನಾನು ಮುಸ್ಲಿಮನಾಗುತ್ತೇನೆ ಎಂದು ಹೇಳಿದಾಗ ಮುಸ್ಲಿಮರು "ಈ ವ್ಯಕ್ತಿ ಹೆದರಿ ಮುಸ್ಲಿಮನಾಗಲು ಬಯಸುತ್ತಾನೆ. ಹೃತ್ಪೂರ್ವಕವಾಗಿ ಅಲ್ಲ" ಎಂದು ಹೇಳಿ ಅವನ ಹೇಳಿಕೆ ಅಂಗೀಕರಿಸದೆ ಅವನನ್ನು ಯುದ್ಧದಲ್ಲಿ ಕೊಂದರು. ಚರಿತ್ರೆಯಲ್ಲಿ ಹಝ್ರತ್ ಉಸಾಮ ಬಿನ್ ಝೈದ್‌ಗೆ ಸಂಬಂಧಿಸಿ ಇಂತಹ ಘಟನೆ ವರದಿಯಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮುಂದೆ ಈ ಘಟನೆಯನ್ನು ವರದಿ ಮಾಡಿದಾಗ ಅವರು ಬಹಳ ಕೋಪಗೊಂಡು ಕೇಳಿದರು:

ಹಲ್ಲಾ ಶಖಖ್‌ತ ಅನ್ ಖಲ್‌ಬಿಹೀ, ಹಲ್ಲಾ ಶಖಖ್‌ತ ಅನ್ ಖಲ್‌ಬಿಹೀ

"ನೀನು ಅವನ ಹೃದಯವನ್ನು ಸೀಳಿ ನೋಡಿದ್ದೀಯಾ?"
(ಮುಸ್ಲಿಮ್:ಕಿತಾಬುಲ್ ಈಮಾನ್)

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶಿಷ್ಯರು ಅವರೊಂದಿಗೆ ಹೊಂದಿದ್ದ ಪ್ರೀತಿ, ನಿಷ್ಠೆ ಮತ್ತು ಅವರಿಗೋಸ್ಕರ ಜೀವದಾನ ಮಾಡಲು ಸದಾಕಾಲ ಸಿದ್ಧತೆ ಮೊದಲಾದುವುಗಳಿಂದ ಸ್ಪಷ್ಟವಾಗುವುದೇನೆಂದರೆ, ಬಲಾತ್ಕಾರದಿಂದ ಮುಸ್ಲಿಮರಾದವರು ಹೀಗೆ ಆಗಲು ಸಾಧ್ಯವೇ ಇಲ್ಲ. ಶಿಷ್ಯರ ನಿಷ್ಠಾಪೂರ್ಣವಾದ ವಿಶ್ವಾಸ ಮತ್ತು ಬಲಿದಾನಗಳು ಸ್ಪಷ್ಟಪಡಿಸುವುದೇನೆಂದರೆ, ಅವರ ಹೃದಯಗಳನ್ನು ಹಝ್ರತ್ ಪೈಗಂಬರರು(ಸ) ಪ್ರೀತಿಯಿಂದ ಜಯಿಸಿದರೇ ಹೊರತು ಬಲಪ್ರಯೋಗಿಸಿ ಅಲ್ಲ.

ಮೌಲವಿ ಮೌದೂದಿ ಮತ್ತು ಅವರೊಂದಿಗೆ ಸಹಮತ ಹೊಂದಿದವರ ಅಭಿಪ್ರಾಯಗಳನ್ನು ಪರಿಶೀಲಿಸುವುದಾದರೆ ಮತ್ತು ಇಸ್ಲಾಮ್ ಖಡ್ಗ ಬಲದಿಂದ ಹರಡಿತು ಎಂದಾದರೆ ಯುದ್ಧಗಳ ಕಾಲದಲ್ಲಿ ಮುಸ್ಲಿಮರ ಸಂಖ್ಯೆ ವರ್ಧಿಸಬೇಕಿತ್ತು ಮತ್ತು ಶಾಂತಿಯ ಕಾಲದಲ್ಲಿ ಅವರ ಸಂಖ್ಯೆ ಕಡಿಮೆಯಾಗಬೇಕಾಗಿತ್ತು. ಆದರೆ ಚರಿತ್ರೆ ಇದಕ್ಕೆ ವಿರುದ್ಧವಾದ ಲೆಕ್ಕವನ್ನು ನಮ್ಮ ಮುಂದಿಡುತ್ತದೆ. ಇದರ ವಿವರಣೆ ಹೀಗಿದೆ:

ಮುಸ್ಲಿಮರು ಮಕ್ಕದ ಖುರೈಶಿಗಳ ವಿರುದ್ಧ ಹಿಜರಿ ಎರಡನೇ ವರ್ಷ ರಮಝಾನ್ ತಿಂಗಳಲ್ಲಿ ಬದ್ರ್ ರಣಾಂಗಣದಲ್ಲಿ ಹೋರಾಡಿದಾಗ ಅವರ ಸಂಖ್ಯೆ ಮುನ್ನೂರ ಹದಿಮೂರು ಆಗಿತ್ತು. ಇದು ಮುಸ್ಲಿಮರು ಮಾಡಿದ ಪ್ರಥಮ ಯುದ್ಧವಾಗಿತ್ತು. ಎರಡನೆಯ ಯುದ್ಧ ಮಕ್ಕದ ಶತ್ರುಗಳ ವಿರುದ್ಧ ಉಹುದ್ ಎಂಬಲ್ಲಿ ಹಿಜರಿ ಮೂರನೇ ವರ್ಷದ ಶವ್ವಾಲ್ ತಿಂಗಳಲ್ಲಿ ಮಾಡಿದಾಗ ಮುಸ್ಲಿಮರ ಸಂಖ್ಯೆ ಏಳುನೂರು ಆಗಿತ್ತು. ಮೂರನೆಯ ಯುದ್ಧ ಹಿಜರಿ ಐದನೆಯ ವರ್ಷದ ಶವ್ವಾಲ್ ತಿಂಗಳಲ್ಲಿ ಮದೀನದ ಹೊರವಲಯದಲ್ಲಿ ನಡೆಯಿತು. ಈ ಯುದ್ಧ ಅಹ್‌ಝಾಬ್ ಯುದ್ಧ ಎಂದೂ ಖಂದಕ್ ಯುದ್ಧ ಎಂದೂ ಪ್ರಸಿದ್ಧವಾಗಿದೆ. ಆಗ ಮುಸ್ಲಿಮರ ಸಂಖ್ಯೆ ಮೂರು ಸಾವಿರ ಆಗಿತ್ತು.

ಈ ಯುದ್ಧ ಮದೀನದ ಹೊರವಲಯದಲ್ಲಿ ನಡೆದುದರಿಂದ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರೆಂಬುದನ್ನು ನೆನಪಿಡಬೇಕಾಗಿದೆ. ಈ ಯುದ್ಧ ದೂರ ಪ್ರದೇಶದಲ್ಲಿ ನಡೆದಿದ್ದರೆ ಇಷ್ಟು ಸಂಖ್ಯೆಯ ಮುಸ್ಲಿಮರು ಅದರಲ್ಲಿ ಸೇರುತ್ತಿರಲಿಲ್ಲ. ಏಕೆಂದರೆ ಬಲಹೀನರೂ ಬಡವರೂ ಅದರಲ್ಲಿ ಸೇರಲು ಸಾಧ್ಯವಾಗುತ್ತಿರಲಿಲ್ಲ. ಮುಸ್ಲಿಮರು ಹಿಜರಿ ಆರನೇ ವರ್ಷದ ಧುಲ್‌ಖಅದ ತಿಂಗಳಲ್ಲಿ ಹುದೈಬಿಯಾ ಕಡೆಗೆ ಸಾಗಿದಾಗ ಅವರ ಸಂಖ್ಯೆ ಎರಡೂವರೆ ಸಾವಿರ ಆಗಿತ್ತು. ಹುದೈಬಿಯಾ ಸಂಧಿಯ ನಂತರ ಶಾಂತಿಯ ಕಾಲ ಘಟ್ಟವಾಗಿತ್ತು. ಅಂದಾಜು ಒಂದೂ ಮುಕ್ಕಾಲು ವರ್ಷಗಳ ಕಾಲ ಶಾಂತಿ ಸ್ಥಾಪಿತವಾಗಿತ್ತು. ಆ ಕಾಲಾವಧಿಯಲ್ಲಿ ಅಸಾಧಾರಣವಾಗಿ ಇಸ್ಲಾಮ್ ಅಭಿವೃದ್ಧಿಗೊಂಡಿತು. ಮಕ್ಕದ ಕಡೆಗೆ ಹಿಜರಿ ಎಂಟನೇ ವರ್ಷ ರಮಝಾನ್ ತಿಂಗಳಲ್ಲಿ ಮುಸ್ಲಿಮ್ ಸೈನ್ಯ ಸಾಗಿದಾಗ ಅವರ ಸಂಖ್ಯೆ ಹತ್ತು ಸಾವಿರವಾಗಿತ್ತು. ಈ ಸಂಖ್ಯೆಯ ಬಗ್ಗೆ ಚರಿತ್ರೆಗಾರರು ಒಮ್ಮತ ಹೊಂದಿದ್ದಾರೆ. ಇದರಿಂದ ತಿಳಿಯುವುದೇನೆಂದರೆ, ನಾಲ್ಕು-ಐದು ವರ್ಷಗಳ ಯುದ್ಧಕಾಲದಲ್ಲಿ ಮುಸ್ಲಿಮ್ ಸೈನಿಕರ ಸಂಖ್ಯೆ ಎರಡೂವರೆ ಸಾವಿರ ಅಥವಾ ಮೂರುಸಾವಿರವಾಗಿತ್ತು. ಆದರೆ ಒಂದೂ ಮುಕ್ಕಾಲು ವರ್ಷದ ಶಾಂತಿಯ ಕಾಲಾವಧಿಯಲ್ಲಿ ಈ ಸಂಖ್ಯೆ ಹತ್ತು ಸಾವಿರಕ್ಕೆ ತಲಪಿತು. ಇದರಿಂದ ಸ್ಪಷ್ಟವಾಗಿ ಸಾಬೀತಾಗುವುದೇನೆಂದರೆ, ಮುಸ್ಲಿಮರು ಯುದ್ಧ ಮಾಡಿದುದು ಬಲಾತ್ಕಾರದಿಂದ ಧರ್ಮಪ್ರಚಾರ ಮಾಡಲು ಅಲ್ಲ. ಯುದ್ಧಗಳು ಇಸ್ಲಾಮಿನ ಅಭಿವೃದ್ಧಿಯನ್ನು ತಡೆಗಟ್ಟುವವುಗಳಾಗಿದ್ದುವು. ಏಕೆಂದರೆ ಯುದ್ಧಗಳು ಕೊನೆಗೊಂಡಾಗ ಇಸ್ಲಾಮ್ ವೇಗವಾಗಿ ಹಬ್ಬಲು ತೊಡಗಿತು.

ಮುಸ್ಲಿಮರಿಗೆ ಯಾವ ಪರಿಸ್ಥಿತಿಯಲ್ಲಿ ಯಾವ ಜನರ ವಿರುದ್ಧ ಖಡ್ಗ ಬಳಸಿ ಜಿಹಾದ್ ಮಾಡಲು ಅನುಮತಿ ನೀಡಲಾಯಿತು, ಅನುಮತಿ ನೀಡಿದುದು ಯಾವ ಕಾರಣಗಳಿಂದ ಎಂಬುದನ್ನು ವಿಶದೀಕರಿಸಲು ಬಯಸುತ್ತೇನೆ.

ಜಿಹಾದ್ ಎಂಬ ಶಬ್ದದ ಮೂಲಪದ ಜುಹ್‌ದ್ ಆಗಿದೆ. ಅದರ ಅರ್ಥ ಕಠಿಣವಾಗಿ ಪ್ರಯತ್ನ ಮಾಡುವುದು ಎಂದಾಗಿದೆ. ಇದರ ಬಗ್ಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ವಾಗ್ದತ್ತ ಮಸೀಹ್ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೀಗೆ ಹೇಳುತ್ತಾರೆ:

"ಜಿಹಾದ್ ಶಬ್ದ ಜುಹ್‌ದ್ ಎಂಬ ಪದದಿಂದ ವ್ಯುತ್ಪತ್ತಿಯಾಗಿದೆ. ಅದರ ಅರ್ಥ ಕಠಿಣ ಪ್ರಯತ್ನ ಮಾಡುವುದು. ಈ ಪದವನ್ನು ಆಲಂಕಾರಿಕವಾಗಿ ಧಾರ್ಮಿಕ ಯುದ್ಧಗಳಿಗೆ ಬಳಸಲಾಗುತ್ತಿದೆ...... ಜಿಹಾದ್ ಮಾಡಲು ಇಸ್ಲಾಮ್‌ಗೆ ಆವಶ್ಯಕತೆ ಏಕೆ ಉಂಟಾಯಿತು? ಜಿಹಾದ್ ಎಂದರೇನು? ಇದಕ್ಕೆ ಉತ್ತರ ಬರೆಯಲು ಬಯಸುತ್ತೇನೆ.

"ಇಸ್ಲಾಮ್ ಧರ್ಮ ಜನಿಸಿದ ಕೂಡಲೆ ಬಹಳ ದೊಡ್ಡದೊಡ್ಡ ಕಷ್ಟಗಳನ್ನು ಎದುರಿಸಬೇಕಾಯಿತು. ಎಲ್ಲ ಜನಾಂಗಗಳು ಅದನ್ನು ವಿರೋಧಿಸಿದುವು. ಸಾಮಾನ್ಯವಾಗಿ ಸಂಭವಿಸುವುದೇನೆಂದರೆ, ಒಬ್ಬ ಪ್ರವಾದಿ ಅಥವಾ ಸಂದೇಶವಾಹಕ ದೇವರ ಕಡೆಯಿಂದ ಆಗಮಿಸುವಾಗ ಮತ್ತು ಆ ದೇವನಿಯುಕ್ತರ ಅನುಯಾಯಿಗಳ ಗುಂಪು ಬುದ್ಧಿವಂತರೂ ಸತ್ಯವಂತರೂ ಧೈರ್ಯವಂತರೂ ಆಗಿ ಅಭಿವೃದ್ಧಿ ಹೊಂದುವುದಾಗಿ ಜನರಿಗೆ ಕಾಣಿಸುವಾಗ ಅದರ ಬಗ್ಗೆ ಅವರ ವಿರೋಧಿ ಸಮುದಾಯಗಳ ಮತ್ತು ಪಂಗಡಗಳ ಹೃದಯದಲ್ಲಿ ಒಂದು ರೀತಿಯ ದ್ವೇಷ ಮತ್ತು ಅಸೂಯೆ ತಲೆದೋರುತ್ತದೆ. ................ ಈ ಕಾರಣಗಳಿಂದ ಹಝ್ರತ್ ಪೈಗಂಬರರ[ಸ] ಕಾಲದಲ್ಲಿ ಬಹುದೇವಾರಾಧಕರ, ಯಹೂದಿಯರ ಮತ್ತು ಕ್ರೈಸ್ತರ ಮತಪಂಡಿತರು ಸತ್ಯವನ್ನು ಅಂಗೀಕರಿಸುವುದರಿಂದ ವಂಚಿತರಾದರು ಮತ್ತು ಅವರು ಕಠಿಣವಾದ ಹಗೆತನವನ್ನು ಹೊಂದಿದರು. ............... ಅವರು ನೋವನ್ನುಂಟುಮಾಡುವ ರೀತಿಯಲ್ಲಿ ಮುಸ್ಲಿಮರಲ್ಲಿ ಹಲವರನ್ನು ಕೊಂದರು. ಹದಿಮೂರು ವರ್ಷಗಳ ದೀರ್ಘಾವಧಿ ಕಾಲದಲ್ಲಿ ಇದೇ ರೀತಿ ಅವರು ವರ್ತಿಸಿದರು. ದೇವನ ನಿಷ್ಠಾವಂತರಾದ ದಾಸರೂ ಮಾನವ ವರ್ಗಕ್ಕೆ ಅಭಿಮಾನವಾಗಿರುವವರೂ ಆಗಿದ್ದ ಅವರು ದುರ್ಜನರು ಮತ್ತು ಕ್ರೂರ ಮೃಗಗಳೋಪಾದಿಯಾಗಿದ್ದ ಜನರ ಖಡ್ಗಗಳಿಂದ ತುಂಡರಿಸಲ್ಪಟ್ಟರು. ಅನಾಥ ಮಕ್ಕಳು ಮತ್ತು ಬಡ ಮಹಿಳೆಯರು ಗಲ್ಲಿಗಳಲ್ಲಿ ವಧಿಸಲ್ಪಟ್ಟರು. ಇಂತಹ ಪರಿಸ್ಥಿತಿಯಲ್ಲೂ ಅಲ್ಲಾಹನು ಸ್ಪಷ್ಟವಾಗಿ ಆಜ್ಞಾಪಿಸಿದ್ದುದು ಕೆಡುಕನ್ನೂ ಖಂಡಿತವಾಗಿಯೂ ಎದುರಿಸಬಾರದು ಎಂದಾಗಿತ್ತು. ಆ ಹಿರಿಯ ಸತ್ಯವಂತರು ಈ ಆಜ್ಞೆ ಪಾಲಿಸಿದರು. ಅವರ ರಕ್ತದಿಂದ ಬಡಾವಣೆಗಳು ರಕ್ತಸಿಕ್ತವಾದರೂ ಅವರು ಧ್ವನಿ ಎತ್ತಲಿಲ್ಲ. ಅವರು ಬಲಿಮೃಗಗಳ ಹಾಗೆ ವಧಿಸಲ್ಪಟ್ಟರೂ ಅವರು ಆಹ್ ಎಂದು ಕೂಡ ಹೇಳಲಿಲ್ಲ. ಅಲ್ಲಾಹನ ಪರಿಶುದ್ಧ ಸಂದೇಶವಾಹಕರಿಗೆ (ಅವರ ಮೇಲೆ ಭೂಮ್ಯಾಕಾಶಗಳಿಂದ ಅಸಂಖ್ಯಾತ ಆಶೀರ್ವಾದ ಎರಗಲಿ.) ಪದೇ ಪದೇ ಕಲ್ಲು ಎಸೆದು ಅವರನ್ನು ರಕ್ತದಿಂದ ತೊಯ್ದುಹೋಗುವಂತೆ ಮಾಡಿದರು. ಸತ್ಯ ಮತ್ತು ಸ್ಥಿರತೆಯ ಪರ್ವತವಾಗಿದ್ದ ಹಝ್ರತ್ ಪೈಗಂಬರರು[ಸ] ಎಲ್ಲ ಕಷ್ಟಗಳನ್ನು ಹೃದಯ ವೈಶಾಲ್ಯದಿಂದ ಮತ್ತು ದೇವಸ್ನೇಹದಿಂದ ಸಹಿಸಿದರು. ಅವರ ಸಹನೆದೋರುವ ವಿನಯಭರಿತ ವರ್ತನೆಯಿಂದ ಶತ್ರುಗಳ ಉದ್ಧಟತನ ವರ್ಧಿಸುತ್ತಾ ಹೋಯಿತು. ಶತ್ರುಗಳು ಹಝ್ರತ್ ಪೈಗಂಬರರ ಅನುಯಾಯಿಗಳ ಪವಿತ್ರ ಸಂಘವನ್ನು ತಮ್ಮ ಬೇಟೆಯಾಗಿ ಭಾವಿಸಿದರು. ಆಗ ಭೂಮಿಯಲ್ಲಿ ದೌರ್ಜನ್ಯ ಮತ್ತು ನಿರ್ದಯತೆ ಮಿತಿ ಮೀರಬಾರದೆಂದು ಇಚ್ಛಿಸುವಂತಹ ದೇವನು ತನ್ನ ದೌರ್ಜನ್ಯ ಪೀಡಿತ ದಾಸರನ್ನು ಗಮನಿಸಿದನು. ಅವನ ಕೋಪ ದುರ್ಜನರ ವಿರುದ್ಧ ಪ್ರಜ್ವಲಿಸಿತು. ಅವನು ತನ್ನ ಪವಿತ್ರ ವಚನವಾದ ಪವಿತ್ರ ಖುರ್‌ಆನ್ ಮೂಲಕ ತನ್ನ ದೌರ್ಜನ್ಯ ಪೀಡಿತ ದಾಸರಿಗೆ ತಿಳಿಸಿದನು: ನಿಮ್ಮ ವಿರುದ್ಧ ಏನೆಲ್ಲ ನಡೆಯುತ್ತದೆ ಅದನ್ನು ನಾನು ನೋಡುತ್ತಿರುವೆನು. ನಾನು ಇಂದಿನಿಂದ ನಿಮಗೆ ಶತ್ರುಗಳನ್ನು ಎದುರಿಸಲು ಅನುಮತಿ ನೀಡುತ್ತೇನೆ. ನಾನು ಸರ್ವಶಕ್ತನಾಗಿದ್ದೇನೆ. ದೌರ್ಜನ್ಯಗಾರರನ್ನು ಶಿಕ್ಷಿಸದೆ ಬಿಟ್ಟುಬಿಡಲಾರೆನು. ಈ ಆಜ್ಞೆಗೆ ಬೇರೆ ಶಬ್ದಗಳಲ್ಲಿ ಜಿಹಾದ್ ಎಂದು ಹೆಸರಿಸಲಾಯಿತು." (ಗವರ್ನ್‌ಮೆಂಟ್ ಅಂಗ್ರೇಜಿ ಔರ್ ಜಿಹಾದ್)

ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ನು ಅಧ್ಯಯನ ಮಾಡಿದರೆ ಜಿಹಾದ್ ಎರಡು ರೀತಿಗಳಲ್ಲಿ ಎಂದು ತಿಳಿಯುತ್ತದೆ.

ಮೊದಲನೆಯದು: ಜಿಹಾದೆ ಕಬೀರ್ ಅಥವಾ ಜಿಹಾದೆ ಅಕ್‌ಬರ್.

ಎರಡನೆಯದು: ಜಿಹಾದೆ ಸಗೀರ್ ಅಥವಾ ಜಿಹಾದೆ ಅಸ್‌ಗರ್.

ಪವಿತ್ರ ಖುರ್‌ಆನ್ ಪ್ರಕಾರ ಜಿಹಾದೆ ಕಬೀರ್ (ದೊಡ್ಡ ಜಿಹಾದ್ ಇದಾಗಿದೆ): ಪವಿತ್ರ ಖುರ್‌ಆನಿನ ಉಪದೇಶಗಳನ್ನು ಪ್ರಚಾರ ಮಾಡುವುದು, ಅವುಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ಇತರರಿಂದ ಅನುಷ್ಠಾನಗೊಳಿಸುವುದು.

ಪವಿತ್ರ ಖುರ್‌ಆನಿನಲ್ಲಿ ಹೀಗೆ ಅಲ್ಲಾಹನು ಹೇಳುತ್ತಾನೆ:

**ವ ಜಾಹಿದ್ ಹುಮ್ ಬಿಹೀ ಜಿಹಾದನ್ ಕಬೀರ**

"(ಓ ಪೈಗಂಬರ್,) ನೀವು ಅವರ ವಿರುದ್ಧ ಅದರ (ಎಂದರೆ ಖುರ್‌ಆನ್) ಮೂಲಕ ಹೋರಾಡಿರಿ – ಬಲು ದೊಡ್ಡ ಹೋರಾಟ." (25:53)

ಇದರ ಅರ್ಥ ಪವಿತ್ರ ಖುರ್‌ಆನಿನ ಸಂದೇಶವನ್ನು ಪ್ರಚಾರ ಮಾಡಿರಿ ಎಂದು.

ಹದೀಸುಗಳನ್ನು ಅಧ್ಯಯನ ಮಾಡಿದರೆ ಜಿಹಾದ್ ಶಬ್ದದ ಬೇರೆ ಅರ್ಥಗಳೂ ತಿಳಿಯುತ್ತವೆ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು:

**ಅಫ್‌ಝಲುಲ್ ಜಿಹಾದ್ ಹಜ್ಜುನ್ ಮಬ್‌ರೂರ್**

"ಅತ್ಯುತ್ತಮ ಜಿಹಾದ್ ಅಲ್ಲಾಹನ ಅಂಗೀಕಾರಕ್ಕೆ ಪಾತ್ರವಾದ ಹಜ್ಜ್ ಆಗಿದೆ."

(ಬುಖಾರಿ ಕಿತಾಬುಲ್ ಜಿಹಾದ್ ವಸ್ಸೈರ್ ಬಾಬ್ ಫಝ್ಲುಲ್ ಜಿಹಾದ್)

ಇನ್ನೊಂದು ಹದೀಸ್ ಹೀಗಿದೆ:

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು:

**ಕಲಿಮತಹು ಹಖ್ಖಿನ್ ಇಂದ ಸುಲ್‌ತಾನಿನ್ ಜಾಯಿರಿನ್**

**ಅಲ್ ಜಿಹಾದುಲ್ ಅಕ್‌ಬರ್**

"ಎಲ್ಲದಕ್ಕಿಂತಲೂ ದೊಡ್ಡ ಜಿಹಾದ್ ದೌರ್ಜನ್ಯಗಾರನಾದ ದೊರೆಯ ಮುಂದೆ ಸತ್ಯ ಮತ್ತು ನ್ಯಾಯದ ಮಾತು ಹೇಳುವುದಾಗಿದೆ."

(ಮಿಶ್ಕಾತ್ ಮತ್ತು ನಸಾಯಿ)

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಒಂದು ಯುದ್ಧದಿಂದ ಮರಳಿ ಮದೀನಕ್ಕೆ ಬರುವಾಗ ಹೇಳಿದರು:

**ರಜಅ್‌ನಾ ಮಿನಲ್ ಜಿಹಾದಿಲ್ ಅಸ್‌ಗರಿ ಇಲಾ ಜಿಹಾದಿಲ್ ಅಕ್‌ಬರ್**

"ನಾವು ಚಿಕ್ಕ ಜಿಹಾದಿನಿಂದ (ಎಂದರೆ ಯುದ್ಧದಿಂದ) ದೊಡ್ಡ ಜಿಹಾದ್ ಕಡೆಗೆ ಮರಳುತ್ತಿದ್ದೇವೆ (ಎಂದರೆ ಧರ್ಮ ಸ್ಥಾಪನೆ, ಇಸ್ಲಾಮ್ ಧರ್ಮದ ಪ್ರಚಾರ, ಕರ್ಮಗಳ ಸುಧಾರಣೆ ಮೊದಲಾದುವುಗಳಲ್ಲಿ ಮಗ್ನರಾಗಲು ಮರಳಿ ಬರುತ್ತಿದ್ದೇವೆ.)"

(ರದ್ದುಲ್ ಮುಖ್ತಾರ್)

ಇಸ್ಲಾಮೀ ಸಾಂಕೇತಿಕ ಪದವಾದ ಜಿಹಾದ್ ಅಕ್‌ಬರ್ ಅಥವಾ ಜಿಹಾದೆ ಕಬೀರ್ (ದೊಡ್ಡ ಜಿಹಾದ್) ಇದರ ಅರ್ಥ ಧರ್ಮಸ್ಥಾಪನೆ ಎಂದಾಗಿದೆ. ಖಡ್ಗ ಬಳಸಿ ಮಾಡುವ ಯುದ್ಧ ಜಿಹಾದೆ ಅಸ್‌ಗರ್ ಎಂದರೆ ಚಿಕ್ಕ ಜಿಹಾದ್ ಎಂದು ಹೇಳಲಾಗಿದೆ.

ಜಿಹಾದ್ ಬಿಸ್ಸೈಫ್ ಎಂದರೆ ಖಡ್ಗ ಬಳಸುವ ಯುದ್ಧದ ಬಗ್ಗೆ ಅನುಮತಿ ನೀಡುವ ಪವಿತ್ರ ಖುರ್‌ಆನಿನ ವಚನ ಹಿಜರಿ ಎರಡನೆಯ ವರ್ಷ ಸಫರ್ ತಿಂಗಳ ದಿನಾಂಕ 12ರಂದು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣಗೊಂಡಿತು. ಅವರು ಮದೀನಕ್ಕೆ ಆಗಮಿಸಿ ಒಂದು ವರ್ಷ ಕಳೆದ ನಂತರ ಈ ವಚನ ಅವತೀರ್ಣಗೊಂಡಿತು. ಅದರಲ್ಲಿ ಹೀಗೆ ಹೇಳಲಾಗಿದೆ:

**ಉಧಿನ ಲಿಲ್ಲಧೀನ ಯುಖಾತಲೂನ ಬಿಅನ್ನಹುಮ್ ·**

**ಝುಲಿಮೂ ವ ಇನ್ನಲ್ಲಾಹ ಅಲಾ ನಸ್‌ರಿಹಿಮ್ ಲಖದೀರು**

**ನಿಲ್ಲಧೀನ ಉಖ್‌ರಿಜೂ ಮಿನ್ ದಿಯಾರಿಹಿಮ್ ಬಿಗೈರಿ ಹಖ್ಖಿನ್**

**ಇಲ್ಲಾ ಅನ್ ಯಖೂಲೂ ರಬ್ಬುನಲ್ಲಾಹು. ವ ಲವ್ ಲಾ**

**ದಫ್‌ಉಲ್ಲಾಹಿನ್ನಾಸ ಬಅಝುಹುಮ್ ಬಿಬಅ್‌ಝಿನ್ ಲಹುದ್ದಿಮತ್**

**ಸವಾಮಿಉ ವ ಬಿಯಉನ್‌ವ ಸಲಾವಾತುನ್ ವ ಮಸ್‌ಜಿದು**

**ಯುಧ್‌ಕರು ಫೀಹಸ್‌ಮುಲ್ಲಾಹಿ ಕಸೀರ ವ ಲ ಯನ್‌ಸುರನ್ನ**

**ಲ್ಲಾಹು ಮನ್ ಯನ್‌ಸುರುಹೂ. ಇನ್ನಲ್ಲಾಹ ಲಖವಿಯ್ಯುನ್**

**ಅಝೀಝ್.**

"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.

"'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚುಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪ ಶಾಲಿಯೂ ಆಗಿದ್ದಾನೆ." (22:40,41)

ಈ ವಚನಗಳಲ್ಲಿ ಇಸ್ಲಾಮೀ ಯುದ್ಧಗಳ ಉದ್ದೇಶ ಮತ್ತು ಖಡ್ಗ ಪ್ರಯೋಗಿಸುವ ಯುದ್ಧದ ಷರತ್ತುಗಳನ್ನು ವಿವರಿಸಲಾಗಿದೆ. ಈ ವಚನಗಳಿಂದ ನಾಲ್ಕು ವಿಷಯಗಳು ಸ್ಪಷ್ಟವಾಗುತ್ತವೆ:

ಒಂದು, ಯುದ್ಧ ಪ್ರಾರಂಭವಾದುದು ಮುಸ್ಲಿಮರಿಂದಲ್ಲ. ಮುಸ್ಲಿಮರ ಶತ್ರುಗಳು ಯುದ್ಧವನ್ನು ಪ್ರಾರಂಭಿಸಿದರು.

ಎರಡು, ಅವಿಶ್ವಾಸಿಗಳು ಮುಸ್ಲಿಮರ ಮೇಲೆ ಕಠಿಣವಾಗಿ ದೌರ್ಜನ್ಯ ಮಾಡುತ್ತಿದ್ದರು. ಅವರು ಮಾಡಿದ ದೌರ್ಜನ್ಯಗಳೇ ಯುದ್ಧಕ್ಕೆ ಕಾರಣವಾದುವು.

ಮೂರು, ಅವಿಶ್ವಾಸಿಗಳ ಉದ್ದೇಶ ಖಡ್ಗ ಬಲದಿಂದ ಇಸ್ಲಾಮನ್ನು ನಾಶಮಾಡುವುದಾಗಿತ್ತು.

ನಾಲ್ಕು, ಮುಸ್ಲಿಮರು ಯುದ್ಧಮಾಡಿದುದು ಆತ್ಮರಕ್ಷಣೆಗೋಸ್ಕರ. ಅದು ಪ್ರತಿರೋಧ ಯುದ್ಧವಾಗಿತ್ತು.

ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳು ಖಡ್ಗ ಪ್ರಯೋಗಿಸಿ ಮಾಡುವ ಯುದ್ಧಕ್ಕೆ ಅನುಮತಿ ನೀಡಿದ ಪ್ರಥಮ ವಚನಗಳಾಗಿವೆ. ಈ ವಚನಗಳು ಸ್ಪಷ್ಟವಾಗಿ ಹೇಳುವುದೇನೆಂದರೆ ಯುದ್ಧ ಪ್ರಾರಂಭಿಸಿದುದು ಅವಿಶ್ವಾಸಿಗಳಾಗಿದ್ದಾರೆ. ಅವರು ಖಡ್ಗ ಬಲದಿಂದ ಇಸ್ಲಾಮನ್ನು ನಾಶಮಾಡಲು ಬಯಸಿದ್ದರು. ಮುಸ್ಲಿಮರು ದೌರ್ಜನ್ಯ ಪೀಡಿತರಾಗಿದ್ದರು. ಮುಸ್ಲಿಮರು ತಮ್ಮ ಆತ್ಮರಕ್ಷಣೆಗೋಸ್ಕರ ಪ್ರತಿರೋಧಕ

ಯುದ್ಧವಾಡಿದರು. ಮುಸ್ಲಿಮೇತರರನ್ನು ಖಡ್ಗಬಲದಿಂದ ಮುಸ್ಲಿಮರನ್ನಾಗಿ ಪರಿವರ್ತಿಸುವ ಉದ್ದೇಶ ಅವರಿಗಿರಲಿಲ್ಲ.

ಬಹುದೇವಾರಾಧಕರ ಮತ್ತು ಮುಸ್ಲಿಮೇತರರ ವಿರುದ್ಧ ಕಠಿಣವಾಗಿ ವರ್ತಿಸಲು ಪವಿತ್ರ ಖುರ್‌ಆನ್ ನೀಡುತ್ತಿರುವ ಆಜ್ಞೆಗಳು ಮುಸ್ಲಿಮರನ್ನು ನಾಶಮಾಡಲು ಖಡ್ಗವೆತ್ತುವವರ ವಿರುದ್ಧ, ಮುಸ್ಲಿಮರ ಮೇಲೆ ದೌರ್ಜನ್ಯ ಮಾಡಿ ಅವರನ್ನು ಅವರ ನಿವಾಸಗಳಿಂದ ಹೊರಹಾಕುವವರ ವಿರುದ್ಧ ಮಾತ್ರ ನೀಡಿದ ಆಜ್ಞೆಗಳಾಗಿವೆ. ಪ್ರತಿಯೊಬ್ಬ ಬಹುದೇವಾರಾಧಕ, ಪ್ರತಿಯೊಬ್ಬ ಅವಿಶ್ವಾಸಿ, ಇಸ್ಲಾಮಿನ ಪ್ರತಿಯೊಬ್ಬ ಶತ್ರುವಿನ ವಿರುದ್ಧವಾಗಿ ಈ ಆಜ್ಞೆ ಖಂಡಿತವಾಗಿಯೂ ನೀಡಲಾಗಿಲ್ಲ. ನಾವು ಹೀಗೆ ಹೇಳುವುದು ಕೇವಲ ಇಸ್ಲಾಮನ್ನು ಸಮರ್ಥಿಸಲಿಕ್ಕಾಗಿ ಅಲ್ಲ. ಪವಿತ್ರ ಖುರ್‌ಆನ್ ಸ್ವತಃ ಬಹಳ ಸ್ಪಷ್ಟವಾಗಿ ಹೀಗೆ ಹೇಳಿದೆ:

**ಲಾ ಯನ್‌ಹಾಕುಮುಲ್ಲಾಹು ಅನಿಲ್ಲಧೀನ ಲಮ್**

**ಯುಖಾತಿಲೂಕುಮ್ ಫಿದ್ದೀನಿ ವ ಲಮ್ ಯುಖ್‌ರಿಜೂಕುಮ್**

**ಮಿನ್ ದಿಯಾರಿ ಕುಮ್ ಅನ್ ತಬರ್‍ರೂ ಹುಮ್ ವ ತುಖ್‌ಸಿತೂ**

**ಇಲೈಹಿಮ್ ಇನ್ನಲ್ಲಾಹ ಯುಹಿಬ್ಬುಲ್ ಮುಖ್‌ಸಿತೀನ್**

"ಧರ್ಮದ ಕಾರಣದಿಂದ ನಿಮ್ಮೊಡನೆ ಯುದ್ಧ ಮಾಡಿದವರೊಡನೆ ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಕ್ಕಟ್ಟಿದವರೊಡನೆ ನೀವು ಒಳಿತಿನಿಂದಲೂ ನ್ಯಾಯಯುತವಾಗಿಯೂ ವರ್ತಿಸುವುದನ್ನು ಅಲ್ಲಾಹನು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ನ್ಯಾಯ ಪಾಲಿಸುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ." (60:9)

ಪವಿತ್ರ ಖುರ್‌ಆನಿನ ಈ ವಚನ, ದ್ವೇಷಭರಿತ ಚರಿತ್ರೆಗಾರರು ಮತ್ತು ಮೌಲವಿ ಮೌದೂದಿಯ ಹಾಗಿರುವ ಮತಪಂಡಿತರು ಇಸ್ಲಾಮಿನ ಸುಂದರ ಮುಖಕ್ಕೆ ಹಾಕಿದ್ದ ಪರದೆಗಳನ್ನು ದೂರಸರಿಸುತ್ತದೆ ಮತ್ತು ಇಸ್ಲಾಮ್ ಧರ್ಮದ ಶಾಂತಿ ಸೌಹಾರ್ದ ಭರಿತ ತತ್ವವನ್ನು ಪ್ರಕಟಿಸುತ್ತದೆ. ಮುಸ್ಲಿಮರು ತಮ್ಮ ಸ್ವಂತ ಜನರೊಂದಿಗೆ ಮಾತ್ರವಲ್ಲ ಮುಸ್ಲಿಮೇತರರೊಂದಿಗೂ ಉತ್ತಮವಾಗಿ ವರ್ತಿಸಬೇಕೆಂದೂ ಪ್ರೀತಿ ವಿಶ್ವಾಸಗಳಿಂದ ಅವರನ್ನು ಕಾಣಬೇಕೆಂದೂ ಉಪದೇಶಿಸುತ್ತದೆ. ಪ್ರೀತಿಗೆ ಪ್ರತಿಯಾಗಿ ಪ್ರೀತಿಯಿಂದ ಉತ್ತರ ನೀಡಬೇಕೆಂದೂ ನ್ಯಾಯಪಾಲನೆ ಮಾಡಬೇಕೆಂದೂ ಮುಸ್ಲಿಮ್ ಮತ್ತು ಮುಸ್ಲಿಮೇತರರನ್ನು ಮಾನವರೆಂದು ಪರಿಗಣಿಸಿ ಪ್ರೀತಿಯಿಂದ ವರ್ತಿಸಬೇಕೆಂದೂ ಶತ್ರು ಮನೋಭಾವದಿಂದ ಮುಸ್ಲಿಮೇತರರನ್ನು ಕಾಣಬಾರದೆಂದೂ ಈ ವಚನ ನಿರ್ದೇಶಿಸುತ್ತದೆ.

ಒಂದು ಚಾರಿತ್ರಿಕ ಘಟನೆ ಪ್ರಸಿದ್ಧವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಒಂದು ಮರದ ಕೆಳಗೆ ಮಲಗಿ ವಿಶ್ರಾಂತಿ ಪಡೆಯುತ್ತಿದ್ದರು. ಅವರು ಒಬ್ಬಂಟಿಗನಾಗಿದ್ದುದನ್ನು ಕಂಡು ಒಬ್ಬ ಶತ್ರು ಅವರ ಮೇಲೆ ಖಡ್ಗ ಎತ್ತಿ ಕೇಳಿದನು: "ಈಗ ನಿಮ್ಮನ್ನು ಯಾರು ರಕ್ಷಿಸುವರು?" ಆಗ ಹಝ್ರತ್ ಪೈಗಂಬರ್[ಸ] "ಅಲ್ಲಾಹ್, ಅಲ್ಲಾಹ್, ಅಲ್ಲಾಹ್" ಎಂದು ಗಂಭೀರ ಧ್ವನಿಯಿಂದ ಹೇಳಿದಾಗ ಶತ್ರುವಿನ ಕೈಯಿಂದ ಖಡ್ಗ ಕೆಳಗೆ ಬಿತ್ತು. ಆಗ ಹಝ್ರತ್ ಪೈಗಂಬರ್[ಸ] ಆ ಖಡ್ಗ ತನ್ನ ಕೈಯಲ್ಲಿ ಎತ್ತಿಹಿಡಿದು ಕೇಳಿದರು: "ಈಗ ನಿನ್ನನ್ನು ಯಾರು ರಕ್ಷಿಸುವರು?" ಆ ಶತ್ರು ಹೇಳಿದನು: "ನೀವು ನನ್ನೊಂದಿಗೆ ಉತ್ತಮವಾಗಿ ವರ್ತಿಸಿರಿ." ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: ದೇವನೊಬ್ಬನೇ ಮತ್ತು ಮುಹಮ್ಮದ್ ಅವನ ಸಂದೇಶವಾಹಕ ಎಂದು ಸಾಕ್ಷ್ಯ ವಚನ ಉಚ್ಚರಿಸಲು ನೀನು ಸಿದ್ಧನಾಗಿರುವಿಯೋ? ಅಂದರೆ ನೀನು ಮುಸ್ಲಿಮ್ ಆಗುವಿಯೋ? ಅವನು ಹೇಳಿದನು: ನಾನು ಮುಸ್ಲಿಮನಾಗಲು ಸಿದ್ಧನಿಲ್ಲ. ಆದರೆ ನೀವು ನನ್ನ ಜೀವ ರಕ್ಷಣೆ ಮಾಡಿದರೆ ನಿಮ್ಮ ವಿರುದ್ಧ ಹೋರಾಡಲು ಇನ್ನು ಮುಂದೆ ಎಂದೂ ಬರಲಾರೆ.

ಹಝ್ರತ್ ಪೈಗಂಬರ್[ಸ] ಅವನನ್ನು ಕ್ಷಮಿಸಿ ಬಿಟ್ಟುಬಿಟ್ಟರು. ಅವನನ್ನು ಬಲಾತ್ಕಾರದಿಂದ ಮುಸ್ಲಿಮನನ್ನಾಗಿ ಮಾಡಲಿಲ್ಲ. (ಬುಖಾರಿ ಕಿತಾಬುಲ್ ಮಗಾಝಿ)

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಮಕ್ಕವನ್ನು ಜಯಶಾಲಿಯಾಗಿ ಪ್ರವೇಶಿಸಿದಾಗ ಒಬ್ಬನನ್ನು ಕೂಡ ಬಲಾತ್ಕಾರದಿಂದ ಮುಸ್ಲಿಮನನ್ನಾಗಿ ಮಾಡಲಿಲ್ಲ. ಅವರು ಸಾರ್ವತ್ರಿಕ ಕ್ಷಮಾದಾನ ಮಾಡಿದರು. ಇಸ್ಲಾಮಿನ ಕಠಿಣ ಶತ್ರುಗಳನ್ನು ಕೂಡ ಅವರು ನಿಸ್ಸಂಕೋಚವಾಗಿ ಕ್ಷಮಿಸಿದರು. ಅವರು ತಮ್ಮ ಬಹುದೇವಾರಾಧಕ ಧರ್ಮ ಅನುಷ್ಠಿಸಲು ಮತ್ತು ಮಕ್ಕದಲ್ಲಿ ಜೀವಿಸಲು ಅನುಮತಿ ನೀಡಿದರು.

ಹಝ್ರತ್ ಪೈಗಂಬರ್[ಸ] ಮದೀನದಲ್ಲಿ ದೊರೆಯಾಗಿದ್ದಾಗಲೂ ತನ್ನ ಮುಸ್ಲಿಮೇತರ ಪ್ರಜೆಗಳಿಗೆ ಮುಸ್ಲಿಮರಿಗೆ ಲಭಿಸಿದಂತಹ ಹಕ್ಕುಗಳನ್ನು ನೀಡಿದ್ದರು. ಅವರಿಗೆ ಧಾರ್ಮಿಕ ಸ್ವಾತಂತ್ರ್ಯವಿದೆ ಎಂದು ಪ್ರಕಟಿಸಿದರು. ಅವರ ಜೀವ, ಸಂಪತ್ತು, ಗೌರವ, ರಕ್ಷಿಸಲ್ಪಡುವುದೆಂದು ಘೋಷಿಸಿದರು. ಅನಂತರ ನಾಲ್ವರು ಖಲೀಫರು ಸಹ ಇದೇ ರೀತಿ ವರ್ತಿಸಿದರು.

ಕಳೆದ ಕೆಲವು ದಶಕಗಳಿಂದ ಲೋಕದಲ್ಲಿ ಭಯೋತ್ಪಾದಕ ದೌರ್ಜನ್ಯ ಕೃತ್ಯಗಳು ನಡೆಸಲ್ಪಡುತ್ತಿವೆ. ಇದೇ ರೀತಿಯ ಆಂತರಿಕ ಯುದ್ಧಗಳು ಕೆಲವು ದೇಶಗಳಲ್ಲಿ ನಡೆಯುತ್ತಿವೆ. ಈ ಕೃತ್ಯಗಳನ್ನು ಬಹುತೇಕ ಮುಸ್ಲಿಮ್ ಮತಪಂಡಿತರು ಮತ್ತು ವಿಶಿಷ್ಟವಾಗಿ ಪಾಕಿಸ್ತಾನಿ ಮುಲ್ಲಾಗಳು "ಜಿಹಾದ್" ಎಂದು ಹೆಸರಿಸುತ್ತಾರೆ. "ಜಿಹಾದ್" ಎಂಬ ಶಬ್ದವನ್ನು ಪಾಕಿಸ್ತಾನಿ ಮುಲ್ಲಾಗಳು ಎಷ್ಟು ತಪ್ಪಾಗಿ ಬಳಸುತ್ತಾರೆಂದರೆ ಪ್ರಾಯಶಃ ಬೇರೆ ಯಾರೂ ಎಂದೂ ಹೀಗೆ ಮಾಡಿರಲಿಲ್ಲ. ಅವರು ತಮ್ಮ ಸ್ವಂತ ಸರಕಾರದ ವಿರುದ್ಧ ಪ್ರತಿಭಟಿಸುವಾಗ ಸಹ ಹೀಗೆ ಘೋಷಣೆ ಮಾಡುತ್ತಾರೆ: "ನಾವು ಸರಕಾರದ ವಿರುದ್ಧ ಜಿಹಾದನ್ನು ಘೋಷಿಸುತ್ತೇವೆ."

ಆದರೆ ವಾಸ್ತವಿಕವಾಗಿ ಇಸ್ಲಾಮೀ ಜಿಹಾದ್, ಅದು ಜಿಹಾದ್ ಬಿಸ್ಸೈಫ್ (ಖಡ್ಗ ಬಳಸುವ ಜಿಹಾದ್) ಆಗಿದ್ದರೆ ಅದು ಮುಸ್ಲಿಮರ ವಿರುದ್ಧ ಯುದ್ಧವನ್ನು ಹೂಡುವ ಮುಸ್ಲಿಮೇತರರ ವಿರುದ್ಧ ಮಾಡಬೇಕಾದ ಯುದ್ಧವಾಗಿದೆ. ಮುಸ್ಲಿಮರ ವಿರುದ್ಧ ದೌರ್ಜನ್ಯ ಮಾಡುವವರು, ಮುಸ್ಲಿಮರನ್ನು ಮನೆಗಳಿಂದಲೂ ದೇಶಗಳಿಂದಲೂ ಹೊರಹಾಕುವವರು ಮತ್ತು ಇಸ್ಲಾಮನ್ನು ನಾಶಮಾಡಲು ಪ್ರಯತ್ನ ಮಾಡುವವರು – ಇಂತಹ ಜನರ ವಿರುದ್ಧ ಜಿಹಾದ್ ಮಾಡಬಹುದಾಗಿದೆ.

ಜಿಹಾದಿನ ಈ ಷರತ್ತುಗಳು ಈಡೇರದಿರುವಾಗ ಪ್ರತಿಯೊಂದು ಭಯೋತ್ಪಾದಕ ಕೃತ್ಯವನ್ನು ತಮ್ಮದೇ ಯೋಚನೆ ಪ್ರಕಾರ ಜಿಹಾದ್ ಎಂದೆನ್ನುವುದು ಬುದ್ಧಿವಂತಿಕೆಯಲ್ಲ; ಇದು ಇಸ್ಲಾಮ್ ಪ್ರಕಾರವೂ ಅಲ್ಲ.

ಇದೇ ಕಾರಣದಿಂದ ಅಹ್ಮದಿಯಾ ಜಮಾಅತಿನ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಜಿಹಾದ್ ಶಬ್ದದ ತಪ್ಪು ವ್ಯಾಖ್ಯಾನದ ವಿರುದ್ಧ ಧ್ವನಿ ಎತ್ತಿದರು. ಅವರು ಹೇಳಿದರು: ಇಂದಿನ

ಕಾಲದಲ್ಲಿ ಜಿಹಾದ್ ಪ್ರಾರಂಭಿಸಬಹುದಾದ ಷರತ್ತುಗಳು ಈಡೇರುವುದಿಲ್ಲವಾದುದರಿಂದ ಅನಾವಶ್ಯಕವಾಗಿ ಆಂಗ್ಲೇಯ ಸರಕಾರ ಅಥವಾ ಬೇರೆ ಯಾವುದೇ ಸರಕಾರದ ವಿರುದ್ಧ ಜಿಹಾದ್ ಘೋಷಿಸುವುದು ಅವಿವೇಕತನವಾಗಿದೆ. ಏಕೆಂದರೆ ನಾವು ಈ ಸರಕಾರದ ನೆರಳಿನಾಶ್ರಯದಲ್ಲಿ ಶಾಂತಿಯಿಂದ ಜೀವಿಸುತ್ತಿದ್ದೇವೆ. ಇಸ್ಲಾಮೀ ಆರಾಧನೆಗಳನ್ನು ನಿರ್ಭಯವಾಗಿ ಅನುಷ್ಠಿಸುತ್ತಿದ್ದೇವೆ. ಇಂತಹ ಸರಕಾರದ ವಿರುದ್ಧ ಜಿಹಾದ್ ಘೋಷಣೆ ಮಾಡುವುದು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಅವರು ಹೇಳಿದರು:

ಅಬ್ ಛೋಡ್‌ದೋ ಜಿಹಾದ್ ಕಾ ಅಯೆ ದೋಸ್ತೋ ಖಿಯಾಲ್
ದೀನ್ ಕೆ ಲಿಯೆ ಹರಾಮ್ ಹೈ ಅಬ್ ಜಂಗ್ ಔರ್ ಖಿತಾಲ್
ಫರ್‌ಮಾ ಚುಕಾ ಹೈ ಸಯ್ಯಿದೆ ಕೌನ್ಯೆನ್ ಮುಸ್ತಫಾ
ಈಸಾ ಮಸೀಹ್ ಜಂಗೋಂ ಕಾ ಕರ್‌ದೇಗಾ ಇಲ್‌ತಿವಾ.

"ಸ್ನೇಹಿತರೇ, ಜಿಹಾದ್ ಬಗ್ಗೆ ಯೋಚನೆ ಈಗ ಬಿಟ್ಟುಬಿಡಿರಿ. ಧರ್ಮಕ್ಕೋಸ್ಕರ ಯುದ್ಧ ಮಾಡುವುದು ಈಗ ನಿಷಿದ್ಧವಾಗಿದೆ. ಇಹಪರಲೋಕಗಳ ನಾಯಕ ಮುಹಮ್ಮದ್ ಮುಸ್ತಫಾ ಹೇಳಿದ್ದಾರೆ: ಈಸಾ ಮಸೀಹ್ ಯುದ್ಧಗಳನ್ನು ಸ್ಥಗಿತಗೊಳಿಸುವರು ಎಂದು."

ಅವರು ಹೀಗೆ ಸಹ ಹೇಳಿದರು: "ಕೆಲವು ಅವಿವೇಕಿಗಳು ಅಲ್‌ಮನಾರ್ ಪತ್ರಿಕೆಯ ಸಂಪಾದಕನ ಹಾಗೆ ನನ್ನ ವಿರುದ್ಧ ದೋಷಾರೋಪ ಮಾಡಿ ಹೇಳುತ್ತಾರೆ: ಈ ವ್ಯಕ್ತಿ ಆಂಗ್ಲೇಯರ ಅಧೀನದಲ್ಲಿರುವ ದೇಶದಲ್ಲಿರುವುದರಿಂದ ಜಿಹಾದನ್ನು ನಿಷಿದ್ಧಗೊಳಿಸುತ್ತಿದ್ದಾನೆ. ............ ಓ ಅವಿವೇಕಿಗಳೇ, ಆಲಿಸಿರಿ. ನಾನು ಸರಕಾರವನ್ನು ಮೆಚ್ಚಿಸಲು ಹೇಳುತ್ತಾ ಇಲ್ಲ. ವಾಸ್ತವಿಕ ವಿಷಯವೇನೆಂದರೆ, ಇಸ್ಲಾಮ್ ಧರ್ಮದ ವಿರುದ್ಧ ಮತ್ತು ಅನುಷ್ಠಾನ ಕರ್ಮಗಳ ವಿರುದ್ಧ ಹಸ್ತಕ್ಷೇಪ ಮಾಡದ ಮತ್ತು ತನ್ನ ಧರ್ಮ ಪ್ರಚಾರಕ್ಕೆ ನಮ್ಮ ವಿರುದ್ಧ ಖಡ್ಗ ಚಲಾಯಿಸದ ಸರಕಾರದ ವಿರುದ್ಧ ಧಾರ್ಮಿಕ ಯುದ್ಧ ಮಾಡುವುದು ಪವಿತ್ರ ಖುರ್‌ಆನ್ ಪ್ರಕಾರ ನಿಷಿದ್ಧವಾಗಿದೆ. ಏಕೆಂದರೆ ಈ ಸರಕಾರ ಯಾವುದೇ ಧಾರ್ಮಿಕ ಯುದ್ಧಮಾಡುತ್ತಾ ಇಲ್ಲ."

(ಕಿಶ್ತೀ ನೂಹ್ ಹಾಶಿಯ ಪುಟ - 68 ಪ್ರಥಮ ಮುದ್ರಣ)

ಇದೇ ರೀತಿ ಅವರು ಹೇಳಿದರು: "ಇಸ್ಲಾಮೀ ಶರೀಅತ್ ಸ್ಪಷ್ಟವಾಗಿ ಸೂಚಿಸುತ್ತದೆ ಮತ್ತು ಎಲ್ಲ ಮುಸ್ಲಿಮರು ಒಮ್ಮತ ಹೊಂದಿದ್ದಾರೆ ಮುಸ್ಲಿಮರು ಶಾಂತಿಯಿಂದಲೂ ಸ್ವಾತಂತ್ರ್ಯದಿಂದಲೂ ಜೀವಿಸುತ್ತಿರುವ ಮುಸ್ಲಿಮೇತರ ಸರಕಾರದ ವಿರುದ್ಧ ಜಿಹಾದ್ ಮಾಡುವುದು ನಿಷಿದ್ಧವಾಗಿದೆ ಎಂದು." (ನೂರುಲ್ ಹಖ್-ಭಾಗ 1 ಪುಟ 45 ಪ್ರಥಮ ಮುದ್ರಣ)

ಈ ಕಾರಣಗಳಿಂದ ಅವಿವೇಕಿಗಳಾದ ಮುಲ್ಲಾಗಳು ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಆಂಗ್ಲೇಯರ ಏಜೆಂಟ್ ಎಂದು ಕರೆದು ಹೀಗೆ ದೋಷಾರೋಪ ಮಾಡಿದರು -- ಇಸ್ಲಾಮೀ ಶರೀಅತ್ ವಿಧಿಸುವ ಆಜ್ಞೆಯನ್ನು ರದ್ದುಗೊಳಿಸಿ ಮುಸ್ಲಿಮರು ಜಿಹಾದ್ ಬಗ್ಗೆ ಹೊಂದಿರುವ ಉತ್ಸಾಹವನ್ನು ತಣ್ಣಗಾಗಿಸಲು ಪ್ರಯತ್ನ ಮಾಡಿದ್ದಾರೆಂದು.

ಆದರೆ ವಾಸ್ತವಿಕವಾಗಿ ಹಝ್ರತ್ ವಾಗ್ದತ್ತ ಮಸೀಹ್(ಅ) ಶರೀಅತ್ ವಿಧಿಸುವ ಜಿಹಾದನ್ನು ಖಂಡಿತವಾಗಿಯೂ ರದ್ದುಗೊಳಿಸಿಲ್ಲ. ಅವರು ಹೇಳಿದುದು ಹೀಗೆ: ಈಗ ಖಡ್ಗದ ಜಿಹಾದ್ ಮಾಡುವ ಷರತ್ತುಗಳು ಈಡೇರದೆ ಇರುವುದರಿಂದ ಮತ್ತು ನಮಗೆ ಧಾರ್ಮಿಕ ಸ್ವಾತಂತ್ರ್ಯ ಲಭಿಸಿರುವುದರಿಂದ ಈಗ ಜಿಹಾದನ್ನು ಸ್ಥಗಿತಗೊಳಿಸಲಾಗಿದೆ. ಎಂದರೆ ಮುಂದೂಡಲಾಗಿದೆ. ಮೇಲೆ ಉಲ್ಲೇಖಿಸಿದ ಪದ್ಯದಲ್ಲಿ ಬಳಸಲಾದ ಅಬ್ (ಈಗ) ಇಲ್‌ತಿವಾ (ಸ್ಥಗಿತ) ಎಂಬ ಪದಗಳು ಇದನ್ನೇ ಸೂಚಿಸುತ್ತದೆ.

ಮೇಲೆ ಉಲ್ಲೇಖಿಸಲಾದ ಹೇಳಿಕೆಗಳಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಹಝ್ರತ್ ವಾಗ್ದತ್ತ ಮಸೀಹ್(ಅ) ಜಿಹಾದ್ ನಿಷಿದ್ಧದ ಫತ್ವ, ನೀಡಿದುದು ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಪ್ರಕಾರವಾಗಿದೆ

ಆಂಗ್ಲೇಯ ಸರಕಾರದ ವಿರುದ್ಧ ಜಿಹಾದ್ ನಿಷಿದ್ಧ ಎಂಬ ಫತ್ವವನ್ನು ನೀಡಿದುದು ಹಝ್ರತ್ ವಾಗ್ದತ್ತ ಮಸೀಹ್(ಅ) ಮಾತ್ರವಲ್ಲ, ಬೇರೆ ಹಲವರು ಇಂತಹ ಫತ್ವ ನೀಡಿದ್ದಾರೆ.

ಹದಿಮೂರನೇ ಹಿಜರಿ ಶತಮಾನದ ಮುಜದ್ದಿದ್ ಹಝ್ರತ್ ಸಯ್ಯಿದ್ ಅಹ್ಮದ್ ಸಾಹೇಬ್ ಬರೇಲ್ವಿ, ಅವರ ಖಲೀಫ ಹಝ್ರತ್ ಇಸ್ಮಾಈಲ್ ಶಹೀದ್, ಮೌಲವಿ ನಝೀರ್ ಅಹ್ಮದ್ ದೆಹ್ಲವಿ, ತುರ್ಕಿಯ ಖಲೀಫತುಲ್ ಮುಸ್ಲಿಮೀನ್, 29 ಮುಸ್ಲಿಮ್ ಮತಪಂಡಿತರ ಫತ್ವ, ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ, ಅಹ್ಮದ್ ರಝಾಖಾನ್ ಬರೇಲ್ವಿ, ಸರ್ ಸಯ್ಯಿದ್ ಅಹ್ಮದ್ ಖಾನ್, ಮಕ್ಕದ ಮುಫ್ತಿಗಳು, ಮೌಲವಿ ಝಫರ್ ಅಲಿ ಖಾನ್ ಸಂಪಾದಕ ಝಮೀನ್‌ದಾರ್ ಪತ್ರಿಕೆ ಲಾಹೋರ್ ಮೊದಲಾದವರು ಇದೇ ರೀತಿಯ ಫತ್ವ ನೀಡಿದ್ದಾರೆ. ಆಂಗ್ಲೇಯ ಸರಕಾರದ ಅಧೀನದಲ್ಲಿ ಜೀವಿಸುತ್ತಿರುವ ಮುಸ್ಲಿಮರಿಗೆ ಧಾರ್ಮಿಕ ಶಾಂತಿ ಇರುವುದರಿಂದ ಹಿಂದುಸ್ಥಾನ ದಾರುಲ್‌ಹರ್‌ಬ್ (ಯುದ್ಧಕ್ಷೇತ್ರ) ಅಲ್ಲ. ಆದುದರಿಂದ ಆಂಗ್ಲೇಯರ ವಿರುದ್ಧ ಜಿಹಾದ್ ಮಾಡುವುದು ನಿಷಿದ್ಧ ಎಂದು ಅವರು ಹೇಳಿಕೆ ನೀಡಿದ್ದಾರೆ.

ಹಝ್ರತ್ ವಾಗ್ದತ್ತ ಮಸೀಹ್(ಅ) ಮತ್ತು ಅಹ್ಮದಿಯಾ ಜಮಾಅತ್ ವಿರುದ್ಧ ಜಿಹಾದ್ ರದ್ದುಗೊಳಿಸಿದ ಆರೋಪ ಹೊರಿಸಿ ಕುಫ್ರ್ (ಅವಿಶ್ವಾಸದ) ಫತ್ವ ನೀಡಿದ ಮುಲ್ಲಾಗಳು, ನೂರು ವರ್ಷಗಳ ನಂತರ ಈಗಿನ ಕಾಲಘಟ್ಟದ ಸ್ಥಿತಿ ಹೇಗಿದೆ ಎಂದರೆ ಈ ಮುಲ್ಲಾಗಳನ್ನು ಅಹ್ಮದಿಯತಿನ ನಿಲುವನ್ನು ಅಂಗೀಕರಿಸುವ ಸ್ಥಿತಿಗೆ ತಂದಿರುವುದು ಆಶ್ಚರ್ಯಕರವಾಗಿದೆ. 2001 ಸೆಪ್ಟೆಂಬರ್ ದಿನಾಂಕ 11ರಂದು ಅಮೇರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಮತ್ತು ಪೆಂಟಗನ್ ಕಟ್ಟಡಗಳಿಗೆ ವಿಮಾನಗಳನ್ನು ಡಿಕ್ಕಿ ಹೊಡೆದು ಧ್ವಂಸಗೊಳಿಸಿದುದರ ಪರಿಣಾಮವಾಗಿ ಸಾವಿರಾರು ಜನರಿಗೆ ಜೀವಹಾನಿ ಸಂಭವಿಸಿದ ನಂತರ ಕೆಲವು ಸಂಕುಚಿತ ಮನೋಭಾವದ ಮತಪಂಡಿತರು ಅದು ಜಿಹಾದೆಂದು ಘೋಷಿಸಿದರು. ಆದರೆ ಇತರ ಮುಸ್ಲಿಮರು ಸಂದರ್ಶನದಲ್ಲಿ ಮತ್ತು ಪತ್ರಿಕಾ ಹೇಳಿಕೆಗಳಲ್ಲಿ ಇಂದಿನ ತನಕ ಅವರು ಹೊಂದಿದ್ದ ನಿಲುವುಗಳಿಗೆ ಸಂಪೂರ್ಣ ವಿರುದ್ಧವಾಗಿ ಹೇಳಿಕೆ ನೀಡಿದರು. ಈಗ ಮುಸ್ಲಿಮರ ಮತಪಂಡಿತರು ಮತ್ತು ನಾಯಕರು ಹೇಳುತ್ತಾರೆ: "ಅವರು ಮಾಡಿದುದು ಜಿಹಾದ್ ಅಲ್ಲ, ಅಂತಹ ಜಿಹಾದ್ ಇಸ್ಲಾಮಿನಲ್ಲಿ ಇಲ್ಲ." ಹೀಗೆ ನೂರು ವರ್ಷಗಳ ನಂತರ ಮುಲ್ಲಾಗಳು ಹಝ್ರತ್ ವಾಗ್ದತ್ತ ಮಸೀಹ್(ಅ) ನೀಡಿದ ವ್ಯಾಖ್ಯಾನವನ್ನೇ ಜಿಹಾದ್‌ಗೆ ನೀಡುತ್ತಿದ್ದಾರೆ.

2002 ಡಿಸೆಂಬರ್ ದಿನಾಂಕ 4ರಂದು ಹೊಸದೆಹಲಿಯ ಜಾಮಿಅ ಮಿಲ್ಲಿಯ ಇಸ್ಲಾಮಿಯದ ಅರಬಿ ವಿಭಾಗದ ಅಧೀನದಲ್ಲಿ ಒಂದು ವಿಚಾರಗೋಷ್ಠಿ "ಇಸ್ಲಾಮ್ ಶಾಂತಿ ಮತ್ತು ಸುರಕ್ಷೆಯ ಧರ್ಮ" ಎಂಬ ಶೀರ್ಷಿಕೆಯಲ್ಲಿ ಜರಗಿತು. ಆ ಬಗ್ಗೆ ಯು.ಎನ್.ಐ. ವಾರ್ತಾ ಸಂಸ್ಥೆ

ಹೀಗೆ ವಾರ್ತೆ ನೀಡಿತು: ವಿಚಾರಗೋಷ್ಠಿಯಲ್ಲಿ ಮತಪಂಡಿತರು ಮತ್ತು ಬುದ್ಧಿಜೀವಿಗಳು ಹೀಗೆ ಹೇಳಿದರು – ಇಸ್ಲಾಮ್ ಶಾಂತಿ ಮತ್ತು ಸುರಕ್ಷೆಯ ಧರ್ಮವೆಂಬುದು ಒಂದು ಜಾಗತಿಕ ಸತ್ಯವಾಗಿದೆ. ಆದರೆ ಇಂದಿನ ಕಾಲದಲ್ಲಿ ಮುಸ್ಲಿಮರು ತಮ್ಮ ಕೃತಿ ಮತ್ತು ಮಾತುಗಳಲ್ಲಿ ಅದರ ಕೃತ್ಯ ರೂಪದ ಪುರಾವೆ ನೀಡಬೇಕಾಗಿದೆ. ಜಾಮಿಅ ಮಿಲ್ಲಿಯದ ವೈಸ್ ಚಾನ್ಸಿಲರ್ ಶಾಹಿದ್ ಮೆಹ್‌ದಿ ತನ್ನ ಅಧ್ಯಕ್ಷ ಭಾಷಣದಲ್ಲಿ ಬರ್ನಾರ್ಡ್ ಶಾರವರ ಪ್ರಸಿದ್ಧ ಹೇಳಿಕೆ "ಇಸ್ಲಾಮ್ ಲೋಕದ ಅತ್ಯುತ್ತಮ ಧರ್ಮವಾಗಿದೆ. ಆದರೆ ಅದರ ಅನುಯಾಯಿಗಳ ಬಗ್ಗೆ ಹಾಗೆ ಹೇಳಲು ಸಾಧ್ಯವಿಲ್ಲ" ಎಂಬುದನ್ನು ಉಲ್ಲೇಖಿಸುತ್ತಾ ಹೇಳಿದರು: ಮುಸ್ಲಿಮರು ಈ ವೈರುಧ್ಯವನ್ನು ದೂರೀಕರಿಸಬೇಕಾದುದು ಆವಶ್ಯಕವಾಗಿದೆ. ಇಂದು ಮುಸ್ಲಿಮರಲ್ಲಿ ಅಭಿಪ್ರಾಯ ವ್ಯತ್ಯಾಸಗಳು ಅತ್ಯಂತ ಹೆಚ್ಚಾಗಿವೆ ಮತ್ತು ಸಾಮಾನ್ಯ ಪ್ರಶ್ನೆಗಳ ಬಗ್ಗೆ ಸಹ ಫತ್ವಗಳು ಸಮೃದ್ಧಿಗೊಳ್ಳುತ್ತವೆ. ಫತ್ವಗಳ ಈ ಅರಾಜಕತೆಯನ್ನು ತಡೆಗಟ್ಟಬೇಕಾಗಿದೆ....... ಶಾಹಿದ್ ಮೆಹ್‌ದಿ ಹೀಗೆ ಸಹ ಹೇಳಿದರು: ಭಯೋತ್ಪಾದಕ ಕೃತ್ಯಗಳು ಈಗ ಜಾಗತಿಕವಾಗಿ ವರ್ಧಿಸಿವೆ. ಅವುಗಳನ್ನು ಎದುರಿಸಲು ಅವುಗಳ ಕಾರ್ಯ ವಿಧಾನ ಅರಿತುಕೊಳ್ಳಬೇಕಾಗಿದೆ..... ಪ್ರೊಫೆಸರ್ ಇಖ್‌ಬಾಲ್ ಅನ್‌ಸಾರಿ ತನ್ನ ಭಾಷಣದಲ್ಲಿ ಇಸ್ಲಾಮಿನಲ್ಲಿ ಶಕ್ತಿಯನ್ನು ಬಳಸುವ ವಿಧಾನಗಳ ಬಗ್ಗೆ ಸವಿಸ್ತಾರವಾಗಿ ವಿವರಣೆ ನೀಡಿದರು. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮಕ್ಕ ಜೀವಿತ ಕಾಲದ ಮತ್ತು ಮದೀನದ ಜೀವಿತಕಾಲದ ಘಟನೆಗಳನ್ನು ವಿವರಿಸುತ್ತಾ ಹೇಳಿದರು: ಯಾರದಾದರೂ ವಿರುದ್ಧ ಹೋರಾಡುವುದು ಕೇವಲ ಎರಡು ಸಂದರ್ಭಗಳಲ್ಲಿ ಅನುಮತಿಸಲಾಗಿದೆ. ಒಂದನೆಯದಾಗಿ, ಯಾರನ್ನಾದರೂ ಮನೆಯಿಂದ ಹೊರಹಾಕಿದಾಗ. ಎರಡನೆಯದಾಗಿ, ಒಬ್ಬ ದೌರ್ಜನ್ಯಗಾರ ಇನ್ನೊಬ್ಬನ ಮೇಲೆ ದೌರ್ಜನ್ಯ ಮಾಡಿದಾಗ. ಅವರು ಹೇಳಿದರು: ಇಸ್ಲಾಮ್ ಯುದ್ಧದ ಬಗ್ಗೆ ನಿಯಮಗಳನ್ನು ಮತ್ತು ನೈತಿಕ ತತ್ವಗಳನ್ನು ರೂಪಿಸಿದೆ. ಅವುಗಳನ್ನು ಪರಿಶೀಲಿಸಿದರೆ ಭಯೋತ್ಪಾದಕ ಕೃತ್ಯಗಳ ಇಂದಿನ ಸ್ವರೂಪ ಯಾವುದೇ ರೀತಿಯಲ್ಲೂ ಧರ್ಮಬದ್ಧವೆಂದು ಹೇಳಲು ಸಾಧ್ಯವಿಲ್ಲ. ("ಹಿಂದ್ ಸಮಾಚಾರ್" ದಿನಪತ್ರಿಕೆ – ಜಾಲಂಧರ್ 6–12–2002.)

ಇಂದಿನ ಕಾಲಘಟ್ಟ ಖಡ್ಗ ಬಳಸುವ ಜಿಹಾದಿನ ಕಾಲಘಟ್ಟವಲ್ಲ. ಧರ್ಮ ಪ್ರಚಾರ, ಶಾಂತ ರೀತಿಯಲ್ಲಿ ನಡೆಸುವ ಜಿಹಾದಿನ ಕಾಲಘಟ್ಟವಾಗಿದೆ. ಇದೇ ಕಾರಣದಿಂದ ಹಝ್ರತ್ ವಾಗ್ದತ್ತ ಮಸೀಹ್[ಅ] ಹೇಳಿದರು:

> ಯೆ ಹುಕ್‌ಮ್ ಸುನ್‌ಕೆ ಭೀ ಜೋ ಲಡಾಯೀ ಕೊ ಜಾಯೇಗಾ
>
> ಓ ಕಾಫಿರೋಂ ಸೆ ಸಖ್‌ತ್ ಹಝೀಮತ್ ಉಠಾಯೇಗಾ
>
> ತುಮ್ ಮೇ ಜಿಸ್ ಕೊ ದೀನೋ ದಿಯಾನತ್ ಸೆ ಹೈ ಪ್ಯಾರ್
>
> ಅಬ್ ಫರ್‌ಝ್ ಉಸ್ ಕಾ ಹೈ ಓ ದಿಲ್ ಕರ್‌ಕೆ ಉಸ್ತುವಾರ್
>
> ಲೋಗೋಂ ಕೊ ಯೆ ಬತಾಯೆ ಕೆ ವಖ್ತೆ ಮಸೀಹ್ ಹೈ
>
> ಅಬ್ ಜಂಗ್ ಔರ್ ಜಿಹಾದ್ ಹರಾಮ್ ಔರ್ ಖಬೀಹ್ ಹೈ
>
> ಹಮ್ ಅಪ್ನಾ ಫರ್‌ಝ್ ದೋಸ್ತೋ ಅಬ್ ಕರ್ ಚುಕೇ ಅದಾ
>
> ಅಬ್ ಭೀ ಅಗರ್ ನ ಸಮ್‌ಝೋ ತೋ ಸಮ್‌ಝಾಯೇಗಾ
>
> ಖುದಾ

"ಈ ಆಜ್ಞೆ ಆಲಿಸಿದ ನಂತರ ಸಹ ಯಾರು ಯುದ್ಧಕ್ಕೆ ಹೊರಡುತ್ತಾನೋ ಅವನು ಅವಿಶ್ವಾಸಿಗಳಿಂದ ತೀವ್ರ ಸೋಲು ಅನುಭವಿಸುವನು. ನಿಮ್ಮಲ್ಲಿ ಯಾರಿಗೆ ಧರ್ಮ ಮತ್ತು ಪ್ರಾಮಾಣಿಕತೆ ಬಗ್ಗೆ ಪ್ರೀತಿ ಇದೆಯೋ ಅವನಿಗೆ ಕಡ್ಡಾಯವಾಗಿದೆ – ಹೃದಯವನ್ನು ದೃಢಪಡಿಸಿಕೊಂಡು ಜನರಿಗೆ ಇದು ಮಸೀಹರ ಕಾಲವೆಂದು ಹೇಳಬೇಕು. ಈಗ ಯುದ್ಧ ಮತ್ತು ಜಿಹಾದ್ ನಿಷಿದ್ಧ ಮತ್ತು ಕೆಟ್ಟದು ಆಗಿದೆ. ಈಗ ನಾವು ನಮ್ಮ ಹೊಣೆಗಾರಿಕೆ ಈಡೇರಿಸಿದ್ದೇವೆ. ಈಗಲೂ ನೀವು ಮನವರಿಕೆ ಮಾಡದಿದ್ದರೆ ದೇವನು ಮನವರಿಕೆ ಮಾಡಿಕೊಡುವನು.

ಅಹ್ಮದಿಯಾ ಜಮಾಅತ್ ಜಿಹಾದ್ ಬಿಸ್ಸೈಫ್ ಬೆಂಬಲಿಸುವುದೇ ಇಲ್ಲ ಎಂದು ಇದರ ಅರ್ಥವಲ್ಲ. ಜಿಹಾದ್ ಮಾಡುವ ಆಜ್ಞೆ ಪೂರ್ಣವಾಗಿ ರದ್ದುಗೊಳಿಸಲಾಗಿದೆ ಎಂದು ಸಹ ನಾವು ಹೇಳುವುದಿಲ್ಲ. ಇಸ್ಲಾಮಿನ ಶತ್ರುಗಳು ಇಸ್ಲಾಮನ್ನು ಅಳಿಸಿ ಬಿಡಲು ಶಕ್ತಿ ಪ್ರಯೋಗ ಮಾಡಿದರೆ ಮತ್ತು ಆಯುಧ ಎತ್ತಿಕೊಂಡರೆ ಆಗ ಜಮಾಅತ್ ಅಹ್ಮದಿಯಾ ಖಡ್ಗ ಬಳಸುವ ಯುದ್ಧದಲ್ಲೂ ಭಾಗವಹಿಸುವುದು – ಇನ್ ಶಾಅ ಅಲ್ಲಾಹ್.

ಹಝ್ರತ್ ವಾಗ್ದತ್ತ ಮಸೀಹ್[ಅ] ಹೀಗೆ ಹೇಳಿದ್ದಾರೆ:

ವ ಅಮರುನಾ ಅನ್ ನಅ್‌ದು ಲಿಲ್‌ಕಾಫಿರೀನ ಕಮಾ ಯಅ್‌ದೂನ ಲನಾ ವಲಾ ನರ್‌ಫಉಲ್ ಹಿಸಾಮ ಖಬ್‌ಲ ಅನ್ ನುಖ್‌ತಿಲ ಬಿಲ್ ಹಿಸಾಮ್.

"ನಮಗೆ ಅಲ್ಲಾಹನ ಆಜ್ಞೆ ಹೀಗಿದೆ: ನಾವು ಅವಿಶ್ವಾಸಿಗಳೊಂದಿಗೆ ಅವರು ನಮ್ಮೊಂದಿಗೆ ವರ್ತಿಸುವ ರೀತಿಯಲ್ಲೇ ವರ್ತಿಸುವೆವು. ಅವರು ನಮ್ಮ ವಿರುದ್ಧ ಖಡ್ಗವೆತ್ತುವ ತನಕ ನಾವು ಸಹ ಖಡ್ಗ ಎತ್ತಲಾರೆವು."

(ಹಖೀಖತುಲ್ ಮಹ್‌ದಿ – ಪುಟ 28 ಪ್ರಥಮ ಮುದ್ರಣ)

ಇದೇ ರೀತಿ ಅವರು ಹೇಳುತ್ತಾರೆ:

"ಈ ಕಾಲಘಟ್ಟದಲ್ಲಿ ಜಿಹಾದ್ ಆಧ್ಯಾತ್ಮಿಕ ರೂಪ ಹೊಂದಿದೆ. ಈ ಕಾಲದ ಜಿಹಾದ್ ಇಸ್ಲಾಮಿನ ಪ್ರಚಾರಕ್ಕೋಸ್ಕರ ಪ್ರಯತ್ನಿಸುವುದಾಗಿದೆ. ವಿರೋಧಿಗಳ ಆಕ್ಷೇಪಗಳಿಗೆ ಉತ್ತರ ನೀಡಬೇಕು. ಇಸ್ಲಾಮ್ ಧರ್ಮದ ವೈಶಿಷ್ಟ್ಯಗಳನ್ನು ಲೋಕದಲ್ಲಿ ಹರಡಬೇಕು. ಅಲ್ಲಾಹನು ಲೋಕದಲ್ಲಿ ಬೇರೆ ರೂಪವನ್ನು ಪ್ರಕಟಿಸುವ ತನಕ ಜಿಹಾದ್ ಇದೇ ಆಗಿದೆ."

(ಬದ್ರ್ ಪತ್ರಿಕೆ 14–8–1902)

ಇಸ್ಲಾಮೀ ಜಿಹಾದ್ ವಾಸ್ತವಿಕವಾಗಿ ಜಿಹಾದ್ ಅಕ್‌ಬರ್ (ದೊಡ್ಡ ಜಿಹಾದ್) ಅಥವಾ ಜಿಹಾದ್ ಕಬೀರ್ ಆಗಿರುವ ಧರ್ಮಪ್ರಚಾರವಾಗಿದೆ. ಜಿಹಾದ್ ಅಸ್‌ಗರ್ (ಸಣ್ಣ ಜಿಹಾದ್) ಖಡ್ಗ ಬಳಸುವ ಯುದ್ಧವಾಗಿದೆ. ಅಹ್ಮದಿಯಾ ಜಮಾಅತಿನ ಪ್ರಥಮ ಕಾಲಘಟ್ಟದಲ್ಲಿ ಎಂದರೆ ಹಝ್ರತ್ ವಾಗ್ದತ್ತ ಮಸೀಹ್‌ರ[ಅ] ಕಾಲದಲ್ಲಿ ಅಹ್ಮದಿಯಾ ಜಮಾಅತ್ ಜಿಹಾದ್ ಅಕ್‌ಬರ್ ಎಂದರೆ ಇಸ್ಲಾಮ್ ಧರ್ಮ ಪ್ರಚಾರ ಮತ್ತು ಧರ್ಮ ಸ್ಥಾಪನೆ ಮಾಡಬೇಕಾಗಿತ್ತು. ಇದು ಬುಖಾರಿ ಶರೀಫಿನಲ್ಲಿರುವ ಹದೀಸು ಯದಉಲ್‌ಹರ್‌ಬ (ಯುದ್ಧವನ್ನು ಸ್ಥಗಿತಗೊಳಿಸುವರು) ಪ್ರಕಾರವಾಗಿತ್ತು. ಅಹ್ಮದಿಯಾ ಜಮಾಅತ್ ಈ ಜಿಹಾದೆ ಅಕ್‌ಬರ್ ಎಷ್ಟು ಭವ್ಯವಾಗಿ ಮಾಡಿತೆಂದರೆ ಲೋಕದಲ್ಲಿ ಬೇರೆ ಯಾವ ಜಮಾಅತ್‌ನಲ್ಲೂ ಇಂತಹ ಉದಾಹರಣೆ ದೊರಕಲಾರದು. ಒಬ್ಬ ಚಿಂತಕರಾದ ಚೌಧರಿ ಅಫ್‌ಝುಲ್ ಹಖ್ ಸಾಹೇಬರು ಈ ವಿಷಯವನ್ನು ಬಹಿರಂಗವಾಗಿ ಒಪ್ಪಿಕೊಂಡು ಹೀಗೆ ಬರೆದರು:

"ಆರ್ಯ ಸಮಾಜ ಸ್ಥಾಪಿಸಲ್ಪಡುವ ಮೊದಲು ಇಸ್ಲಾಮ್

ಜೀವರಹಿತ ದೇಹದ ಹಾಗಿತ್ತು. ಧರ್ಮ ಪ್ರಚಾರದ ಇಂದ್ರಿಯ ನಿಷ್ಕ್ರಿಯವಾಗಿತ್ತು. ಮುಸ್ಲಿಮರ ಬೇರೆ ಪಂಗಡಗಳಲ್ಲಿ ಧರ್ಮ ಪ್ರಚಾರದ ಉದ್ದೇಶ ಹೊಂದಿ ಯಾವುದೇ ಜಮಾಅತ್ ಸ್ಥಾಪಿತವಾಗಲಿಲ್ಲ. ಒಂದು ಹೃದಯ ಮುಸ್ಲಿಮರ ನಿರ್ಲಕ್ಷ್ಯದಿಂದ ಗಾಬರಿಗೊಂಡು ಎದ್ದು ನಿಂತಿತು. ಒಂದು ಚಿಕ್ಕ ಜಮಾಅತನ್ನು ಅದು ತನ್ನ ಸುತ್ತಲೂ ಜಮಾಯಿಸಿ ಇಸ್ಲಾಮಿನ ಪ್ರಚಾರಕ್ಕೆ ಮುಂದೆ ಸಾಗಿತು. ತನ್ನ ಜಮಾಅತಿನಲ್ಲಿ ಧರ್ಮ ಪ್ರಚಾರದ ಉತ್ಸಾಹ ಉಂಟುಮಾಡಿತು. ಅದು ಮುಸ್ಲಿಮರ ವಿವಿಧ ಪಂಗಡಗಳಿಗೆ ಮಾತ್ರವಲ್ಲ ಲೋಕದ ಎಲ್ಲ ಪ್ರಚಾರಕ ಸಂಘಟನೆಗಳಿಗೆ ಮಾದರಿಯಾಗಿದೆ.

("ಫಿತ್‌ನ ಇರ್ತಿದಾ ಔರ್ ಪೊಲಿಟಿಕಲ್ ಖಿಲಾಬಾರ್ಝಿಯಾಂ – ದ್ವಿತೀಯ ಮುದ್ರಣ – ಪುಟ 24)

ಇಂದು ಈ ಜಿಹಾದೆ ಕಬೀರ್ ಫಲಸ್ವರೂಪವಾಗಿ ಅಹ್ಮದಿಯಾ ಖಿಲಾಫತ್ ನೇತೃತ್ವದಲ್ಲಿ ಅಹ್ಮದಿಯಾ ಜಮಾಅತ್ 206 ದೇಶಗಳಲ್ಲಿ ಬಲಿಷ್ಠ ಅಸ್ತಿವಾರದಲ್ಲಿ ಸ್ಥಾಪಿತವಾಗಿದೆ ಮತ್ತು ಇಸ್ಲಾಮಿನ ಪ್ರಚಾರದ ಕಾರ್ಯ ಲೋಕದಲ್ಲೆಲ್ಲ ಹಬ್ಬುತ್ತಾ ಇದೆ. "ಮುಸ್ಲಿಮ್ ಟೆಲಿವಿಶನ್ ಅಹ್ಮದಿಯಾ" (ಎಂ.ಟಿ.ಎ.) ಇಂಟರ್‌ನೇಶನಲ್ ಈ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

ನಾವು ಸ್ಪಷ್ಟವಾಗಿ ಹೀಗೆ ಹೇಳಲು ಬಯಸುತ್ತೇವೆ: ಇಂದಿನ ಕಾಲದಲ್ಲಿ ಇಸ್ಲಾಮ್ ಧರ್ಮ ಪ್ರಚಾರದಲ್ಲಿ ಮತ್ತು ಸಮಾಜ ಸುಧಾರಣೆಯಲ್ಲಿ ಅಹ್ಮದಿಯಾ ಜಮಾಅತ್ ಅಪ್ರತಿಮವಾಗಿ ಕಾರ್ಯನಿರತವಾಗಿರುವ ಹಾಗೆಯೇ ಮುಂದಿನ ಕಾಲದಲ್ಲಿ ಎಂದಾದರೂ ಜಿಹಾದ್ ಸಗೀರ್ ಅಥವಾ ಖಡ್ಗವೆತ್ತುವ ಜಿಹಾದ್ ಮಾಡಬೇಕಾದ ಆವಶ್ಯಕತೆ ಉಂಟಾದಲ್ಲಿ ಮತ್ತು ಅಹ್ಮದಿಯಾ ಖಿಲಾಫತ್, ಜಮಾಅತ್‌ಗೆ ಆಯುಧವೆತ್ತಲು ಆಜ್ಞೆ ನೀಡುವುದಾದರೆ ಲೋಕವು ಕಾಣುವುದು – ಇನ್‌ಶಾಅ ಅಲ್ಲಾಹ್ ಜಮಾಅತ್ ಅಹ್ಮದಿಯಾ ಈ ಕ್ಷೇತ್ರದಲ್ಲೂ ಅಪ್ರತಿಮವಾಗಿ ಕಾರ್ಯ ನಿರತವಾಗುವುದು ಮತ್ತು ಸ್ಪಷ್ಟವಾದ ಅಂತಿಮ ಪರಿಣಾಮ ಸಾಧಿಸಿಕೊಡುವುದು. ನಮ್ಮ ನಾಯಕರಾಗಿದ್ದ ಚತುರ್ಥ ಖಲೀಫ ಹಝ್‌ರತ್ ಮಿರ್ಝಾ ತಾಹಿರ್ ಅಹ್ಮದ್[ರಹ] ಹೀಗೆ ಹೇಳಿದ್ದರು:

"ಓ ನಮ್ಮ ವಿರೋಧಿಗಳೇ, ನೀವು ನಮ್ಮ ವಿರುದ್ಧ ಎಷ್ಟು ಹಗೆತನದಿಂದ ವರ್ತಿಸಲು ಬಯಸುತ್ತೀರೋ ಹಾಗೆ ಮಾಡಿರಿ. ನೀವು ಕೃತಘ್ನತೆಯ ಸಾಕ್ಷ್ಯ ನೀಡುವುದಾದರೆ ನೀಡುತ್ತಾ ಹೋಗಿರಿ. ಆದರೆ ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ನಾನು ಆ ಅಲ್ಲಾಹನ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ: ನಿಮ್ಮ ಮೇಲೆ ನಾಳೆ ಬಂದೆರಗುವ ವಿಪತ್ತನ್ನು ಎದುರಿಸಲು ಅಹ್ಮದಿಯಾ ಜಮಾಅತ್ ಮುಂದಿನ ಸಾಲಲ್ಲಿ ನಿಂತುಕೊಳ್ಳುವುದು. ನಿಮ್ಮ ವಿರುದ್ಧ ಹೂಡಲಾಗುವ ಬಾಣಗಳಿಗೆ ತನ್ನ ಎದೆ ಒಡ್ಡುವುದು. ನಮಗಿಂತ ಮಿಗಿಲಾಗಿ ಇಸ್ಲಾಮಿಗೆ ನಿಷ್ಠಾವಂತರಾಗಿರುವವರು ಬೇರೆ ಯಾರೂ ಇಲ್ಲ. ಮುಸ್ಲಿಮ್ ಸಮುದಾಯದ ಹಿತೈಷಿಗಳಾಗಿ ನಮಗಿಂತ ಮಿಗಿಲಾದವರು ಬೇರೆ ಯಾರೂ ಇಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಧರ್ಮವನ್ನು ಪ್ರೀತಿಸುವವರೂ ಅದಕ್ಕೋಸ್ಕರ ಬಲಿಯರ್ಪಿಸುವವರೂ ನಮಗಿಂತ ಮೇಲು ಬೇರೆ ಯಾರೂ ಇಲ್ಲ. ಭೂತಕಾಲದ ಘಟನೆಗಳು ನಿಮಗೆ ಇದನ್ನೇ ಹೇಳಿಕೊಡುತ್ತವೆ. ಆದರೆ ನೀವು ಪ್ರತಿಸಲ ಈ ಪಾಠವನ್ನು ಮರೆತು ಬಿಡುತ್ತಾ ಇದ್ದಿರಿ. ನಾಳೆ ಬರಲಿರುವ ದಿನ ಸಹ ನಿಮಗೆ ಇದನ್ನೇ ಹೇಳಿಕೊಡುವುದು. ಅಕಟಾ, ನಿಮ್ಮ ಕಣ್ಣುಗಳು ತೆರೆಯಲ್ಪಡುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ನಿಮ್ಮ ಸ್ನೇಹಿತರು ಯಾರು, ನಿಮ್ಮ ಶತ್ರು ಯಾರು ಎಂದು ಆಗ ನೀವು ನೋಡುವಿರಿ."

(ಖುತ್‌ಬ ಜುಮುಅ 22–2–1985, ಮಸ್‌ಜಿದ್ ಫಝ್ಲ್ ಲಂಡನ್)


## Statement about ownership and other particulars about the Newspaper Yugarashmi Quarterly (Form IV See Rule 8)

| | | |
|---|---|---|
| 1. Place of Publication | : | Mangalore |
| 2. Period of its Publication | : | Quarterly |
| 3. Printer's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 4. Publisher's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 5. Editor's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | : | Jamath Ahmadiyya "Darussalam" Near Railway Level Crossing, Pandeshwar, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Sd/-

Date : 1-9-2015

Muhammad Yusuf

# ರಮಝಾನ್ ವ್ರತಾನುಷ್ಠಾನ

★ ಮುಹಮ್ಮದ್ ಯೂಸುಫ್

ರಮಝಾನ್ ಮಾಸದಲ್ಲಿಡೀ ಎಲ್ಲ ಮುಸ್ಲಿಮರು ವ್ರತವನ್ನನುಷ್ಠಿಸಬೇಕೆಂಬುದು ಇಸ್ಲಾಂ ಧರ್ಮದ ಅನುಶಾಸನವಾಗಿದೆ. ಪ್ರಾತಃ ಕಾಲದ ನಸುಕಿಗೆ ಮುಂಚಿತವಾಗಿ ಆಹಾರವನ್ನೇನಾದರೂ ಸೇವಿಸಿ ವ್ರತದ ಇಂಗಿತದಿಂದ ಭಕ್ತಿ ಭರಿತವಾದ ಜೀವನವನ್ನು ನಡೆಸುವುದಾಗಿದೆ ಇಸ್ಲಾಮಿಕ ವ್ರತಾನುಷ್ಠಾನ. ನಸುಕಿನ ಬೆಳಕು ಹರಿದ ಮೊದಲ್ಗೊಂಡು ಸೂರ್ಯಾಸ್ತಮಾನದವರೆಗಿನ ಕಾಲ ಎಲ್ಲ ವಿಧದ ಆಹಾರ ಪಾನೀಯಾದಿಗಳನ್ನೂ ಧೂಮ್ರಪಾನ, ನಸ್ಯ ಸೇವನೆ, ಹಾಗೆಯೇ ಪತಿ ಪತ್ನಿಯರು ತಮ್ಮ ದೈಹಿಕ ಸಂಬಂಧವನ್ನೂ ಪರಿತ್ಯಜಿಸಬೇಕಾದದ್ದು ಇಸ್ಲಾಮಿಕ ವ್ರತಾನುಷ್ಠಾನದ ನಿಯಮವಾಗಿದೆ. ಮನುಷ್ಯನು ಪರಮಾತ್ಮನ ದಯಾಪುರಸ್ಸರವಾದ ಸ್ನೇಹಕ್ಕೆ ಪಾತ್ರನಾಗಲಿಕ್ಕೂ ದೇವ ಸಾನ್ನಿಧ್ಯವನ್ನು ಪಡೆಯಲಿಕ್ಕೂ ಇಸ್ಲಾಂ ಧರ್ಮ ನಿರ್ದೇಶಿಸುವ ಕರ್ಮಗಳಲ್ಲಿ ವ್ರತಾನುಷ್ಠಾನವು ಒಂದಾಗಿದೆ. ಇಸ್ಲಾಂ ಧರ್ಮದ ತತ್ವ ಪ್ರಕಾರ ಮುಕ್ತಿ ಲಬ್ಧಿಗಾಗಿ ಭಕ್ತಿ ವಿಶ್ವಾಸಗಳಂತೆ ಬಾಹ್ಯಕರ್ಮಗಳೂ ಅತ್ಯಾವಶ್ಯಕ. ಪವಿತ್ರ ಖುರ್‌ಆನ್‌ನಲ್ಲಿಯೂ ಪೈಗಂಬರರ(ಸ) ನುಡಿಗಳಲ್ಲಿಯೂ ಭಕ್ತಿ ವಿಶ್ವಾಸಗಳನ್ನು ಪ್ರತಿಪಾದಿಸುವಾಗ ಸಂಬಂಧಪಟ್ಟ ಕರ್ಮಗಳು ಭಕ್ತಿಯ ಅಖಂಡವಾದ ಭಾಗಗಳೆಂಬಂತೆ ಪ್ರತಿಪಾದಿಸಲ್ಪಟ್ಟಿರುತ್ತವೆ.

ದೇವ ಸಂಪ್ರೀತಿಗಾಗಿ ಯಾವ ತ್ಯಾಗವನ್ನು ಮಾಡಬೇಕೆಂಬ ಪರಿಶುದ್ಧ ಬೋಧವು ವ್ರತದಿಂದ ಉಂಟಾಗುತ್ತದೆ. ಅಗತ್ಯ ಬಂದಲ್ಲಿ ತನ್ನ ದೇಹವನ್ನೂ ಧನವನ್ನೂ ಮಾತ್ರವಲ್ಲ ತನ್ನ ಸರ್ವಸ್ವವನ್ನೂ ದೇವನಿಗಾಗಿ ಬಲಿಯರ್ಪಿಸುವುದು ಬಹು ದೊಡ್ಡ ಭಾಗ್ಯವೆಂದು ಯಥಾರ್ಥ ಮುಸ್ಲಿಂ ತಿಳಿಯುತ್ತಾನೆ. ಈ ರೀತಿಯ ತ್ಯಾಗಕ್ಕೆ ಸನ್ನದ್ಧನಾಗದ ಓರ್ವನು ದೇವಸಂಪ್ರೀತಿಗೆ ಪಾತ್ರನಾಗಲು ಅರ್ಹನಲ್ಲ.

ವ್ರತ ಕಾಲದಲ್ಲಿ ಒಬ್ಬ ಮುಸ್ಲಿಂ ಆಹಾರ ಪಾನೀಯಗಳಿಲ್ಲದೆಯೂ ಪತ್ನಿಯಿಂದ ದೂರವಿರಲೂ ಅಭ್ಯಸಿಸುತ್ತಾನೆ. ಅದರಿಂದಾಗಿ ದೇವ ಪಥದಲ್ಲಿ ಹಸಿವು, ಬಾಯಾರಿಕೆಯನ್ನು ಸಹಿಸಲಿಕ್ಕೂ ಪತ್ನಿ ಪುತ್ರಾದಿಗಳಿಂದ ಬೇರ್ಪಡಬೇಕಾಗಿ ಬಂದರೆ ಅವನು ಉತ್ಸಾಹದಿಂದ ಅದಕ್ಕೂ ಸಿದ್ಧನಾಗುತ್ತಾನೆ. ದೇವ ಸಂಪ್ರೀತಿಯನ್ನು ಅಪೇಕ್ಷಿಸಿ ಒಂದು ಕ್ಲಪ್ತ ಸಮಯದ ತನಕ ಭಕ್ಷ್ಯಪೇಯಗಳನ್ನೂ ತನ್ನ ಪತ್ನಿಯನ್ನೂ ತ್ಯಜಿಸುವುದರಿಂದಾಗಿ, ಅಗತ್ಯ ಬಂದಾಗ ಅದಕ್ಕಿಂತ ಹೆಚ್ಚನ್ನು ಮಾಡಲಿಕ್ಕೂ ಅವನು ಸನ್ನದ್ಧನಾಗುವನೆಂದು ಸ್ಪಷ್ಟವಾಗುತ್ತದೆ.

ಲೋಭ, ಮೋಹ, ಕ್ರೋಧ ಮೊದಲಾದ ಅರಿಷಡ್ವರ್ಗಗಳು ಎಲ್ಲ ಪಾಪಗಳಿಗೆ ಮೂಲ ಕಾರಣ. ವ್ರತಾನುಷ್ಠಾನದಿಂದ ಇವು ನಿಯಂತ್ರಿಸಲ್ಪಡುತ್ತವೆ. ಲೋಭದಿಂದ ಓರ್ವನು ಅನ್ಯಾಯವಾಗಿ ಅನ್ಯರ ಸಂಪತ್ತನ್ನು ಆಶಿಸುವನು; ಮೋಹದಿಂದ ಅನೇಕ ಚಪಲ ಪ್ರವೃತ್ತಿಗಳಿಗೆ ವಶನಾಗುವನು; ಕ್ರೋಧವನ್ನು ನಿಯಂತ್ರಿಸಲಾರದೆ ಇರಿತಕ್ಕೂ ಕೊಲೆಪಾತಕಕ್ಕೂ ಕಾರಣನಾಗುವನು. ಆದರೆ ತಾನು ಸ್ವತಃ ಸಂಪಾದಿಸಿದ ಹಾಗೂ ತನಗೆ ಅವಕಾಶವಿರುವ ಭಕ್ಷ್ಯ ವಸ್ತುಗಳನ್ನೂ ತನ್ನ ಪ್ರೀತಿಯ ಧರ್ಮಪತ್ನಿಯನ್ನೂ ದೇವ ಸಂಪ್ರೀತಿಗಾಗಿ ಉಪೇಕ್ಷಿಸಲು ಸಾಧ್ಯವಾದ ಓರ್ವನಿಗೆ ತನಗವಕಾಶವಿಲ್ಲದ ಅನ್ಯರ ಸಂಪತ್ತಿನಲ್ಲಾಗಲೀ ಸ್ತ್ರೀಯಲ್ಲಾಗಲೀ ಮೋಹವುಂಟಾಗಲಾರದಷ್ಟೆ? ಅವನ ಈ ಸ್ವಭಾವದ ಫಲವಾಗಿ ತನ್ನ ಕ್ರೋಧವನ್ನು ನಿಯಂತ್ರಿಸುವ ಶಕ್ತಿಯೂ ಅವನಿಗೆ ಲಭಿಸುವುದು. ಹೀಗೆ ವ್ರತಾನುಷ್ಠಾನದಿಂದ ಸದ್ಗುಣಗಳು ಸಿದ್ಧಿಸುತ್ತವೆ.

ಮನುಷ್ಯನ ಕೆಲವು ಚಟಗಳು ಆರೋಗ್ಯಕ್ಕೆ ಹಾನಿಕರವೂ ಸತ್ಕರ್ಮಗಳಿಗೆ ಪ್ರತಿಬಂಧಕವೂ ದುಷ್ಕರ್ಮಗಳಿಗೆ ಕಾರಣವೂ ಆಗುತ್ತವೆ. ವ್ರತಾನುಷ್ಠಾನದಿಂದ ಈ ರೀತಿಯ ದುಷ್ಚಟಗಳನ್ನು ನಿವಾರಿಸಲಿಕ್ಕೂ ಆಧ್ಯಾತ್ಮಿಕ ಔನ್ನತ್ಯವನ್ನು ಪಡೆಯಲಿಕ್ಕೂ ಸಾಧ್ಯವಾಗುತ್ತದೆ. ಉದಾಹರಣೆಗೆ, ಬೀಡಿ – ಸಿಗರೇಟು ಸೇದುವುದು, ಅಥವಾ ಇನ್ನಿತರ ಧೂಮ್ರಪಾನ ಇಂತಹ ದುಷ್ಚಟಗಳನ್ನು ದೇವಸಂಪ್ರೀತಿಗಾಗಿ ಸ್ವಲ್ಪ ಸಮಯದವರೆಗಾದರೂ ತ್ಯಜಿಸುವ ಓರ್ವನು ಅವುಗಳನ್ನು ಸಂಪೂರ್ಣವಾಗಿ ವರ್ಜಿಸಲು ಶಕ್ತನಾಗುವನು. ಬದುಕಲು ಅತ್ಯಾವಶ್ಯಕವೂ ಉಪಯೋಗಿಸಲು ವಿರೋಧವೂ ಇಲ್ಲದ ವಸ್ತುಗಳನ್ನೇ ತ್ಯಜಿಸುವ ವ್ರತಾನುಷ್ಠಾನಿಗೆ ಇಂತಹ ಅನಾವಶ್ಯಕವೂ ದೋಷಕರವೂ ಆದ ವಸ್ತುಗಳನ್ನು ಪರಿತ್ಯಜಿಸಲು ಪ್ರಯಾಸವಾಗದು.

ವ್ರತಾನುಷ್ಠಾನವು ವಿಧಿಸಲ್ಪಟ್ಟದ್ದು "ನೀವು 'ಮುತ್ತಖೀ'ಗಳಾಗಿರಲಿಕ್ಕೆ ಆಗಿದೆ" ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. 'ಮುತ್ತಖೀ' ಎಂಬ ಅರಬಿ ಪದದ ಅರ್ಥ ಕಷ್ಟಾನುಭವದಿಂದ ವಿಮೋಚಿತನು; ಪಾಪದಿಂದ ಮುಕ್ತಿಹೊಂದಿದವನು; ಆಧ್ಯಾತ್ಮಿಕ ಉನ್ನತಿಯನ್ನು ಪಡೆದವನು ಎಂದಾಗಿದೆ.

ಧನಿಕರು ಸದಾ ಒಳ್ಳೆ ಒಳ್ಳೆಯ ಭಕ್ಷ್ಯ ಭೋಜನಾದಿಗಳನ್ನು ಯಥೇಷ್ಟವಾಗಿ ತಿನ್ನುವುದರಿಂದಾಗಿ ಹಸಿವು ಎಂದರೆ ಏನೆಂದು ಕೂಡ ಅವರಿಗೆ ತಿಳಿಯಲು ಸಾಧ್ಯವಿಲ್ಲ. ಆದುದರಿಂದ ದಾರಿದ್ರ್ಯ ದುಃಖಕ್ಕೆ ಸಿಲುಕಿ ಬಳಲುವ ಬಡವರ ಮೇಲೆ ಅವರಿಗೆ ಅನುಕಂಪವುಂಟಾಗಲು ಕಾರಣವಿಲ್ಲ. ಆದರೆ ಇಸ್ಲಾಮಿಕ ನಿಯಮ ಪ್ರಕಾರ ರಾಜ – ಪ್ರಜೆ, ಧನಿಕ – ದರಿದ್ರ ಎಂಬ ಭೇದಭಾವವಿಲ್ಲದೆ ಸಕಲರೂ ವ್ರತವನ್ನನುಷ್ಠಿಸಬೇಕಾದುದರಿಂದ ಎಲ್ಲರಿಗೂ ಹಸಿವಿನ ಕಠಿಣತೆಯನ್ನು ಅನುಭವಿಸಲು ಸಾಧ್ಯವಾಗುತ್ತದೆ. ಅದರ ಪರಿಣಾಮವಾಗಿ ಧನಿಕರಿಗೆ ದರಿದ್ರರ ಮೇಲೆ ಕರುಣೆಯುಂಟಾಗಿ, ಅವರಿಗೆ ಬೇಕಾದ ಸಹಾಯ ಸಹಕಾರಗಳನ್ನು ನೀಡಲು

ಪ್ರೇರಿತರಾಗುತ್ತಾರೆ. ಹಾಗೆ ವ್ರತವು ಬಡಜನರ ಸಂರಕ್ಷಣೆಗೂ ಸಮುದಾಯ ಕ್ಷೇಮಕ್ಕೂ ಹೇತುವಾಗುತ್ತದೆ. ಮನುಷ್ಯನು ಆಲಸಿಯೂ ಸುಖಲೋಲುಪನೂ ಆಗಿರಲಿಕ್ಕೆ ಇಸ್ಲಾಂ ಸುತರಾಂ ಸಮ್ಮತಿಸುವುದಿಲ್ಲ. ತದ್ವಿರುದ್ಧವಾಗಿ ಅವನು ಕ್ಲೇಶಗಳನ್ನು ಅನುಭವಿಸಲು ಪ್ರಾಪ್ತನೂ ಶ್ರಮಶೀಲನೂ ಆಗಿರಬೇಕೆಂದು ಇಸ್ಲಾಂ ಉಪದೇಶಿಸುತ್ತದೆ. ವ್ರತದಿಂದ ಈ ಉದ್ದೇಶವು ಸಾಧಿಸಲ್ಪಡುತ್ತದೆ. ಒಂದು ಸಮುದಾಯದ ಸರ್ವರೂ ಶ್ರಮಶಾಲಿಗಳೂ ಸಹನಾ ಶಕ್ತಿಯುಳ್ಳವರೂ ಆಗಿದ್ದರೆ, ಅದು ಸಂಕಷ್ಟಗಳನ್ನು ಎದುರಿಸಲಿಕ್ಕೂ ಅಭಿವೃದ್ಧಿಯನ್ನು ಪಡೆಯಲಿಕ್ಕೂ ಶಕ್ತವಾಗುತ್ತದೆ. ರಮಝಾನ್ ಚಾಂದ್ರಮಾಸವಾದುದರಿಂದ ಕೆಲವೊಮ್ಮೆ ಅದು ಅತಿ ಶೀತಕಾಲದಲ್ಲಿಯೂ ಕೆಲವೊಮ್ಮೆ ಅತಿ ಉಷ್ಣಕಾಲದಲ್ಲಿಯೂ ಬರುತ್ತದೆ. ಋತುಭೇದದಿಂದಾಗಿ ಒಂದು ಕಾಲದಲ್ಲಿ ಇಲ್ಲದ ಕಷ್ಟಕ್ಲೇಶಗಳನ್ನು ಇನ್ನೊಂದು ಕಾಲದಲ್ಲಿ ವ್ರತಾನುಷ್ಠಾನಿಯು ಅನುಭವಿಸಬೇಕಾಗುತ್ತದೆ. ಹೀಗೆ ಅವನು ವರ್ಷದ ಎಲ್ಲ ಋತುಗಳಲ್ಲಿ ಬರುವ ಪ್ರತಿಕೂಲಗಳನ್ನೂ ಕಷ್ಟಕ್ಲೇಶಗಳನ್ನೂ ಸಹಿಸಲು ತರಬೇತಿಯನ್ನು ಪಡೆಯುವನು.

ಮನುಷ್ಯನು ಇಂದ್ರಿಯೇಚ್ಛೆಗೆ ಅಧೀನನಾಗುವುದು ಸಹಜ. ಲೌಕಿಕಾಸಕ್ತಿಯಲ್ಲಿ ಮುಳುಗಿದವನಿಗೆ ಅದರಿಂದ ಮೇಲೇಳುವುದು ಅಷ್ಟು ಸುಲಭವಲ್ಲ. ಆದರೆ ಇಚ್ಛಾ ನಿರೋಧವನ್ನು ಅಭ್ಯಸಿಸಿದ ವ್ರತಾನುಷ್ಠಾನಿಗೆ ಐಹಿಕೇಚ್ಛೆಗಳನ್ನು ನಿಯಂತ್ರಿಸಲಿಕ್ಕೂ ದುರ್ವರ್ತನೆಯ ಕಡೆಗೆ ಚಲಿಸುವ ಮನಸ್ಸನ್ನು ಹಿಡಿದು ನಿಲ್ಲಿಸಲಿಕ್ಕೂ ಸಾಧ್ಯವಾಗಿ ಪಾಪಕರ್ಮಗಳಿಂದ ದೂರವಾಗುವನು.

ಲೌಕಿಕ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯಿಲ್ಲದ ವ್ರತಾನುಷ್ಠಾನಿ ಹಗಲು ಹೊತ್ತಿನಲ್ಲಿಡೀ ದೇವ ಧ್ಯಾನದಲ್ಲಿಯೂ ಮತ್ತಿತರ ಸತ್ಕರ್ಮಗಳಲ್ಲಿಯೂ, ಹಾಗೆಯೇ ರಾತ್ರಿ ಹೊತ್ತಿನಲ್ಲಿ ಹೆಚ್ಚು ನಿದ್ರಿಸದೆ ಪ್ರಾರ್ಥನೆಗಳಲ್ಲಿಯೂ ಮಗ್ನನಾಗುತ್ತಾನೆ. ಅದರ ಪರಿಣಾಮವಾಗಿ ಆತ್ಮಶುದ್ಧಿಯನ್ನು ಪಡೆದ ಅವನಿಗೆ ಕ್ರಮೇಣ ಆತ್ಮೋನ್ನತಿ ಲಭಿಸುವುದು.

ವ್ರತವನ್ನು ಅನುಷ್ಠಿಸುವುದರಿಂದಾಗಿ ಮನುಷ್ಯರು ಪರಮಾತ್ಮನೊಡನೆ ಕೃತಜ್ಞತೆಯುಳ್ಳವರಾಗುತ್ತಾರೆ. ಆಯುರಾರೋಗ್ಯದಿಂದ ಇರುವವನಿಗೆ ಆರೋಗ್ಯದ ಮಹತ್ವವನ್ನೂ, ದೃಷ್ಟಿ ಸರಿಯುಳ್ಳವನಿಗೆ ಕಣ್ಣಿನ ಮಹತ್ವವನ್ನೂ, ಅವು ನಷ್ಟವಾದಾಗ ಮನವರಿಕೆಯಾಗುವಷ್ಟು ಬೇರೆ ಯಾವ ಸಂದರ್ಭದಲ್ಲೂ ತಿಳಿಯಲು ಸಾಧ್ಯವಿಲ್ಲವಷ್ಟೆ? ಹಾಗೆಯೇ ಮನುಷ್ಯನ ಜೀವಿತಕ್ಕೆ ಅತ್ಯಾವಶ್ಯಕವಾದ ವಸ್ತುಗಳನ್ನು ವ್ರತಾನುಷ್ಠಾನಿ ವ್ರತಕಾಲದಲ್ಲಿ ತ್ಯಜಿಸಿದಾಗ ಅವನಿಗೆ ಅವುಗಳ ಮಹತ್ವವೇನೆಂಬುದು ಬಹಳ ಸ್ಪಷ್ಟವಾಗಿ ಅರಿವಾಗುತ್ತದೆ. ಆಗ ಅವನು ಆ ಸರ್ವದಾತನಾದ ಪರಿಪಾಲಕನಿಗೆ ಕೃತಜ್ಞತೆಯನ್ನು ಸೂಚಿಸುತ್ತಾನೆ.

ಹೀಗೆ ದೇವ ಸಂಪ್ರೀತಿಯನ್ನು ಗಳಿಸುವ ಉದ್ದೇಶದಿಂದ ವರ್ಷದಲ್ಲಿ ಒಂದು ತಿಂಗಳು ಎಡೆಬಿಡದೆ ಹಗಲು ಹೊತ್ತಿನಲ್ಲಿ ವ್ರತವನ್ನಾಚರಿಸಿ ಇಚ್ಛಾ ನಿಯಂತ್ರಣವನ್ನು ಮಾಡುತ್ತಿದ್ದರೆ ಈ ಸ್ವಭಾವವು ಒಂದು ಸ್ಥಿರ ಗುಣವಾಗಿ ಮಾರ್ಪಟ್ಟು ದೇವ ವಿರೋಧವಾದ ಏನನ್ನೂ ಆಶಿಸದಂತೆಯೂ ಪಡೆಯದಂತೆಯೂ ವರ್ತಿಸದಂತೆಯೂ ತಡೆಯುವ ಆತ್ಮಶಕ್ತಿಯು ಲಭಿಸಿ ಸಮಾಧಾನವೂ ಸ್ಥಿರತೆಯೂ ಅವನಲ್ಲಿ ಸ್ಥಾಯಿಯಾಗಿ ವಿರಾಜಿಸುವುವು.

(ಯುಗರಶ್ಮಿ ಅಕ್ಟೋಬರ್ 1975 ಸಂಚಿಕೆಯಿಂದ --ಪರಿಷ್ಕೃತ)

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

- ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್
ಅಹ್ಮದಿಯಾ ಪಂಚಮ ಖಲೀಫ

# ಮುಸ್ಲಿಮೇತರರಿಗೆ ಸಲಾಮ್ ಹೇಳಬಹುದೇ?

★ ಡಾ. ಸಿದ್ದೀಖ್ ಅಶ್‌ರಫ್ ಅಲಿ, ಮೊಗ್ರಾಲ್

ಮುಸ್ಲಿಮೇತರರಿಗೆ ಸಲಾಮ್ ಹೇಳಬಹುದೇ? ಎಂಬ ಪ್ರಶ್ನೆ ಬಹಳ ಜನರ ಮನಸ್ಸಿನಲ್ಲಿ ಉದಿಸುತ್ತಾ ಇರುತ್ತದೆ. ಸಾಮಾನ್ಯ ಜನರು ಮಾತ್ರವಲ್ಲ, ಬಹಳ ವಿದ್ಯಾವಂತರಾದ ಜನರು ಸಹ ಈ ಪ್ರಶ್ನೆಯಲ್ಲಿ ಸಿಲುಕಿಕೊಂಡಿರುತ್ತಾರೆ. ಕೆಲವು ಜನರು ಹೀಗೆ ಭಾವಿಸುತ್ತಾರೆ: ನಾವು ಮುಸ್ಲಿಮೇತರನಿಗೆ ಸಲಾಮ್ ಹೇಳಿದರೆ ನಾವು ಯಾವುದಾದರೂ ಧಾರ್ಮಿಕ ಅಪರಾಧ ಮಾಡಿದಂತಾಗುವುದೇ?

ಈ ಪ್ರಶ್ನೆಗೆ ಉತ್ತರ ನೀಡಲು "ಸಲಾಮ್" ಎಂಬ ಪದದ ಅರ್ಥ ಮತ್ತು ಅದರ ಉದ್ದೇಶ ತಿಳಿಯುವುದು ಆವಶ್ಯಕವಾಗಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ನೀಡುವ ಆಜ್ಞೆ ಏನೆಂದು ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಇದರ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆ ಹೇಗೆ ಪ್ರಕಾಶ ಬೀರುತ್ತದೆ ಎಂದು ಸಹ ತಿಳಿದುಕೊಳ್ಳುವುದು ಆವಶ್ಯಕವಾಗಿದೆ.

ವಾಸ್ತವಿಕವಾಗಿ "ಸಲಾಮ್" ಒಂದು ಪ್ರಾರ್ಥನೆಯಾಗಿದೆ. ಯಾರನ್ನು ಸಂಬೋಧಿಸಿ ಸಲಾಮ್ ಹೇಳಲಾಗುತ್ತಿದೆಯೋ ಆ ವ್ಯಕ್ತಿಯ ಪರವಾಗಿ ದೇವ ಸನ್ನಿಧಿಯಲ್ಲಿ ಮಾಡುವ ಪ್ರಾರ್ಥನೆ ಅದಾಗಿದೆ. ದೇವನು ಇಚ್ಛಿಸುವನಾದರೆ, ಆ ಪ್ರಾರ್ಥನೆ ಸ್ವೀಕರಿಸಿ ಅವನಿಗೆ ಅನುಗ್ರಹ ನೀಡಬಹುದಾಗಿದೆ. ಸಲಾಮ್ ಹೇಳುವವನು ತನ್ನ ಜೇಬಿನಿಂದ ಏನನ್ನೂ ಕೊಡುವುದಿಲ್ಲ ಮತ್ತು ಅವನ ಸಂಪತ್ತಿನಲ್ಲಿ ಯಾವ ರೀತಿಯ ಕಮ್ಮಿಯೂ ಸಂಭವಿಸುವುದಿಲ್ಲ ಹಾಗೂ ಸಲಾಮ್ ಹೇಳಿದುದರ ಕಾರಣ ಪಶ್ಚಾತ್ತಾಪ ಪಡಬೇಕಾಗಿ ಬರುವುದಿಲ್ಲ. ಸಲಾಮ್ ಹೇಳುವವನು ತನ್ನ ಸಂಕಲ್ಪದ ಪ್ರಕಾರ ದೇವನಿಂದ ಪ್ರತಿಫಲ ಪಡೆಯುತ್ತಾನೆ. ಸಲಾಮ್ ಹೇಳುವವನು ಎಲ್ಲ ರೀತಿಗಳಲ್ಲೂ ಲಾಭವನ್ನೇ ಪಡೆಯುವವನಾಗುತ್ತಾನೆ.

## ಸಲಾಮ್ ಮತ್ತು ಇಸ್ಲಾಮ್

ಈ ಎರಡು ಪದಗಳಲ್ಲಿ, ಅಕ್ಷರಗಳಲ್ಲಿ ಸಹಭಾಗಿತ್ವವಿರುವ ಹಾಗೆ ಅರ್ಥದಲ್ಲೂ ಸಹಭಾಗಿತ್ವವಿರುತ್ತದೆ. ಇವು ಅವುಗಳ ಮಧ್ಯೆ ಇರುವ ಗಾಢವಾದ ಸಂಬಂಧವನ್ನು ಸೂಚಿಸುತ್ತವೆ. ಇಸ್ಲಾಮ್ ಎಂದರೆ ಶಾಂತಿ ಮತ್ತು ಸಮಾಧಾನ. ಸಲಾಮ್ ಎಂಬ ಪದದ ಅರ್ಥ ಸಹ ಸುರಕ್ಷೆ, ಶಾಂತಿ ಎಂದೇ ಆಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ: ಯಾರ ನಾಲಗೆ ಮತ್ತು ಕೈಗಳಿಂದ ಅನ್ಯರು ಸುರಕ್ಷಿತರಾಗಿರುವರೋ ಅವನೇ ಮುಸ್ಲಿಮ್ ಆಗಿದ್ದಾನೆ. (ಬುಖಾರಿ)

ಆದರೆ ಇಂದಿನ ಕಾಲದ ನಾಮ ಮಾತ್ರ ಮುಸ್ಲಿಮರ ನಾಲಗೆ ಮತ್ತು ಕೈಗಳಿಂದ ಮುಸ್ಲಿಮೇತರರು ಮಾತ್ರವಲ್ಲ, ಮುಸ್ಲಿಮರು ಕೂಡ ಸುರಕ್ಷಿತರಲ್ಲ ಎಂಬುದು ಬೇರೆಯೇ ಒಂದು ವಿಷಯವಾಗಿದೆ.

## ಹತ್ತು, ಇಪ್ಪತ್ತು, ಮೂವತ್ತು ಪುಣ್ಯಗಳು

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಕುಳಿತಿದ್ದಾಗ ಒಬ್ಬ ವ್ಯಕ್ತಿ ಬಂದು "ಅಸ್ಸಲಾಮು ಅಲೈಕುಮ್" ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹತ್ತು ಪುಣ್ಯಗಳನ್ನು ಸಲಾಮ್ ಹೇಳಿದವ ಗಳಿಸಿದ. ಇನ್ನೊಬ್ಬ ವ್ಯಕ್ತಿ ಬಂದು "ಅಸ್ಸಲಾಮು ಅಲೈಕುಮ್ ವ ರಹಮತುಲ್ಲಾಹ್" ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸಲಾಮ್ ಹೇಳಿದವ ಇಪ್ಪತ್ತು ಪುಣ್ಯಗಳನ್ನು ಗಳಿಸಿದ. ಮತ್ತೊಬ್ಬ ವ್ಯಕ್ತಿ ಬಂದು "ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ" ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಮೂವತ್ತು ಪುಣ್ಯಗಳನ್ನು ಸಲಾಮ್ ಹೇಳಿದವ ಗಳಿಸಿದ.



ಇದರಿಂದ ತಿಳಿಯುವುದೇನೆಂದರೆ ಸಲಾಮ್ ಹೇಳುವವ ತಾನು ಮಾಡಿದ ಒಳಿತುಗಳಿಗನುಸಾರವಾಗಿ ಪ್ರತಿಫಲ ಪಡೆಯುತ್ತಾನೆ.

ಪವಿತ್ರ ಖುರ್‌ಆನ್ ಸಲಾಮ್ ಹೇಳುವುದರ ಮಹತ್ವ ಬಗ್ಗೆ ಒತ್ತಿ ಹೇಳಿದೆ. ನಲ್ವತ್ತಕ್ಕಿಂತ ಹೆಚ್ಚು ಸಲ ಈ ಪದವನ್ನು ಪವಿತ್ರ ಖುರ್‌ಆನಿನಲ್ಲಿ ಬಳಸಲಾಗಿದೆ. ಹತ್ತು ಹದಿನೈದು ವಚನಗಳಲ್ಲಿ ಹೀಗೆ ಹೇಳಲಾಗಿದೆ: ಸತ್ಯ ವಿಶ್ವಾಸಿಗಳಿಗೆ ಅಲ್ಲಾಹನು ಎಂತಹ ಸ್ವರ್ಗವನ್ನು ಸಿದ್ಧಪಡಿಸಿರುವನೆಂದರೆ ಅಲ್ಲಿ ನಾಲ್ಕುದಿಕ್ಕುಗಳಲ್ಲೂ ಶಾಂತಿ ಸಮಾಧಾನಗಳೇ ಇವೆ. ಎಲ್ಲ ಕಡೆಗಳಲ್ಲೂ ಸಲಾಮ್ ಸಲಾಮ್ ಎಂಬ ಶಬ್ದ ಕೇಳಿಸುತ್ತಾ ಇರುತ್ತದೆ.

ಸ್ವರ್ಗದ ಅಸಾಧಾರಣ ಸಂತೋಷದಾಯಕ ಪರಿಸರದ ಬಗ್ಗೆ ವಿವರಿಸುತ್ತಾ ಅಲ್ಲಾಹನು ಹೀಗೆ ಹೇಳುತ್ತಾನೆ: ಲಾ ಯಸ್‌ಮಊನ ಫೀಹಾ ಲಗ್ವ್‌ವನ್ ವ ಲಾ ತಅ್‌ಸೀಮಾ ಇಲ್ಲಾ ಖೀಲನ್ ಸಲಾಮನ್ ಸಲಾಮಾ –

"ಅವರು ಅಲ್ಲಿ ವ್ಯರ್ಥ ಮತ್ತು ಪಾಪಕರವಾದ ಮಾತನ್ನು ಆಲಿಸಲಾರರು – ಸಲಾಮ್, ಸಲಾಮ್ (ಶಾಂತಿ, ಶಾಂತಿ) ಎಂಬ ಹಾರೈಕೆಯ ಮಾತುಗಳ ಹೊರತು." (56:26, 27)

ಇಂತಹ ಸ್ವರ್ಗವನ್ನು ಗಳಿಸಲು ಪರಿಶ್ರಮ ನಡೆಸಬೇಕೆಂದು ಅಲ್ಲಾಹನು ಆದೇಶಿಸುತ್ತಾನೆ ಮತ್ತು ಅದರ ಚಿಕ್ಕ ಉದಾಹರಣೆಯನ್ನು ಭೂಲೋಕದಲ್ಲಿ ಸ್ಥಾಪಿಸಬೇಕು ಎಂದು ಅವನು ಬಯಸುತ್ತಾನೆ.

ಪವಿತ್ರ ಖುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿ ಜನರು ಪರಸ್ಪರ ಸಲಾಮ್ ಹೇಳಬೇಕೆಂದು ಮತ್ತು ಸಲಾಮ್ ಹೇಳುವ ಅಭ್ಯಾಸ ಹೊಂದಬೇಕೆಂದು ಅಲ್ಲಾಹನು ಆಜ್ಞಾಪಿಸಿದ್ದಾನೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಒಂದು ಕಡೆ ಹೀಗೆ ಹೇಳಿದ್ದಾನೆ:

"ನಮ್ಮ ದೃಷ್ಟಾಂತಗಳಲ್ಲಿ ವಿಶ್ವಾಸವಿಡುವವರು ನಿನ್ನ ಬಳಿಗೆ ಬಂದರೆ

ಹೇಳು: ನಿಮ್ಮ ಮೇಲೆ ಶಾಂತಿ ಇರಲಿ. ನಿಮ್ಮ ಪ್ರಭು ಕರುಣೆಯನ್ನು ತನ್ನ ಹೊಣೆಯನ್ನಾಗಿ ಮಾಡಿಕೊಂಡಿರುವನು." (6:55)

ಮನೆಗೆ ಪ್ರವೇಶಿಸುವಾಗ ಸಲಾಮ್ ಹೇಳಬೇಕೆಂದು ಪವಿತ್ರ ಖುರ್‌ಆನ್ 24:28 ಮತ್ತು 24:62ರಲ್ಲಿ ಆಜ್ಞಾಪಿಸಲಾಗಿದೆ. ಮುಸ್ಲಿಮರಿಗೆ ಮಾತ್ರವಲ್ಲ ಮುಸ್ಲಿಮೇತರರಿಗೂ ಸಲಾಮ್ ಹೇಳಬೇಕೆಂದು ಆಜ್ಞಾಪಿಸಲಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಮೇತರ ಬಗ್ಗೆ ಪ್ರಸ್ತಾಪಿಸುತ್ತಾ ಅವರು ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸದಿದ್ದರೂ ಅವರಿಗೆ ಸಲಾಮ್ ಹೇಳಬೇಕೆಂದು ಪವಿತ್ರ ಖುರ್‌ಆನ್ 43:89, 90 ವಚನಗಳಲ್ಲಿ ಆದೇಶಿಸಲಾಗಿದೆ. ಮುಸ್ಲಿಮೇತರರ ಬಗ್ಗೆ ಪ್ರತೀಕ್ಷೆ ಹೊಂದಲು ಹೇಳಲಾಗಿದೆ. ನೀವು ಅವರಿಗೆ ಸಲಾಮ್ ಹೇಳುವುದು, ಅವರಿಗೋಸ್ಕರ ಪ್ರಾರ್ಥಿಸುವುದು ಮತ್ತು ಅವರೊಂದಿಗೆ ಒಳ್ಳೆಯ ರೀತಿ ವರ್ತಿಸುವ ಮೂಲಕ ಅವರು ಇಸ್ಲಾಮ್ ಧರ್ಮದ ಸತ್ಯವನ್ನು ಅರಿಯಲು ಸಮೀಪಕ್ಕೆ ಬರುವಂತೆ ಮಾಡಬಹುದೆಂದು ವಿವರಿಸಲಾಗಿದೆ.

ಯಾರಾದರೂ ಅಜ್ಞಾನದ ಮಾತು ಆಲಿಸಬೇಕಾಗಿ ಬಂದರೆ ಹಾಗೆ ಮಾತನಾಡುವವನಿಗೆ ಸಲಾಮ್ ಹೇಳಲು ಆದೇಶಿಸಲಾಗಿದೆ. ಅದು ಹೀಗೆ:

ಇಧಾ ಖಾತಬಕುಮುಲ್ ಜಾಹಿಲೂನ ಖಾಲೂ ಸಲಾಮ

"ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು 'ಸಲಾಮ್' (ಶಾಂತಿ) ಎಂದು ಹೇಳುತ್ತಾರೆ." (ಪವಿತ್ರ ಖುರ್‌ಆನ್ 25:64)

ಸತ್ಯ ವಿಶ್ವಾಸಿಗಳ ಸದ್ಗುಣಗಳನ್ನು ವಿವರಿಸುತ್ತಾ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: ಸತ್ಯ ವಿಶ್ವಾಸಿಗಳು ಕೆಡುಕನ್ನು ಒಳಿತಿನ ಮೂಲಕ ತಡೆಯುತ್ತಾರೆ. ನಿಷ್ಪ್ರಯೋಜಕ ಮಾತುಗಳನ್ನು ಆಡುವವರೊಂದಿಗೆ ಹೇಳುತ್ತಾರೆ: ನಿಮಗೆ ಸಲಾಮ್. ಎಂದರೆ ಅಲ್ಲಾಹನು ನಿಮಗೆ ಒಳಿತು ಮಾಡಲಿ. (ಪವಿತ್ರ ಖುರ್‌ಆನ್ 28:55, 56 ನೋಡಿರಿ.)

ಅಹ್ಮದಿಯಾ ಜಮಾಅತ್ ಸ್ಥಾಪಕ ಹಝ್ರತ್ ವಾಗ್ದತ್ತ ಮಸೀಹ್(ಅ) ಎಷ್ಟು ಚೆನ್ನಾಗಿ ಹೇಳಿದ್ದಾರೆ:

ಗಾಲಿಯಾಂ ಸುನ್‌ಕರ್ ದುಆ ದೋ

ಪಾಕೆ ದುಖ್ ಆರಾಮ್ ದೋ

ಕಿಬ್ರ್ ಕಿ ಆದತ್ ಜೋ ದೇಖೋ

ತುಮ್ ದಿಖಾವೋ ಇನ್‌ಕಿಸಾರ್

"ಬೈಗಳನ್ನು ಆಲಿಸಿದರೆ, ಬೈದವರಿಗೆ ಪ್ರಾರ್ಥಿಸಿರಿ. ಕಷ್ಟ ಅನುಭವಿಸಿ ಸುಖ ನೀಡಿರಿ. ಅಹಂಕಾರದ ಸ್ವಭಾವವನ್ನು ಕಂಡರೆ ನೀವು ವಿನಯದೋರಿರಿ."

ಪ್ರವಾದಿ ಹಝ್ರತ್ ಇಬ್ರಾಹೀಮ್‌ರ(ಅ) ನಡೆವಳಿಕೆ ಸಹ ಹೀಗೆಯೇ ಆಗಿತ್ತು. ಬಹುದೇವಾರಾಧಕನಾದ ಅವರ ತಂದೆಯವರೊಂದಿಗೆ ಅವರು ಹೀಗೆ ಹೇಳಿದ್ದರು: ನಿಮ್ಮ ಮೇಲೆ ಸಲಾಮ್ (ಶಾಂತಿ) ಇರಲಿ. ನಾನು ನಿಮಗೋಸ್ಕರ ನನ್ನ ಪ್ರಭುವಿನಿಂದ ಕ್ಷಮೆಯಾಚಿಸುತ್ತೇನೆ. (ಪವಿತ್ರ ಖುರ್‌ಆನ್ 19:48)

ಪವಿತ್ರ ಖುರ್‌ಆನ್ ಉಪದೇಶಿಸುವುದೇನೆಂದರೆ, ಯಾರಾದರೂ ನಿಮಗೆ ಸಲಾಮ್ ಹೇಳಿದರೆ ಸಲಾಮ್ ಹೇಳಿದವನು ಸತ್ಯ ವಿಶ್ವಾಸಿಯೋ ಅಲ್ಲವೋ ಎಂದು ಗೊತ್ತುಹಚ್ಚಲು ಪ್ರಯತ್ನಿಸಬೇಡಿರಿ. ಸಲಾಮ್ ಹೇಳಿದವನಿಗೆ ಉತ್ತರ ಹೇಳುವುದು ಮಾತ್ರ ನಿಮ್ಮ ಕೆಲಸವಾಗಿದೆ. ಪವಿತ್ರ ಖುರ್‌ಆನ್ ಇದರ ಬಗ್ಗೆ ಹೀಗೆ ಹೇಳಿದೆ:

ವ ಲಾ ತಖೂಲೂ ಲಿಮನ್ ಅಲ್‌ಖಾ ಇಲೈಕುಮುಸ್ಸಲಾಮ

ಲಸ್‌ತ ಮೂಮಿನಾ

"ಯಾರಾದರೂ ನಿಮಗೆ ಶಾಂತಿಯನ್ನು ಹಾರೈಸಿದರೆ

'ನೀನು ವಿಶ್ವಾಸಿಯಲ್ಲ' ಎಂದು ಹೇಳಬೇಡಿರಿ." (4:95)

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆ

ಸಲಾಮ್ ಹೇಳುವ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆ ಅತ್ಯಂತ ಹೆಚ್ಚು ಸ್ಪಷ್ಟವಾಗಿದೆ. ಅವರು ಎಲ್ಲರಿಗೂ ಸಲಾಮ್ ಹೇಳುತ್ತಿದ್ದರು. ಮುಸ್ಲಿಮ್, ಮುಸ್ಲಿಮೇತರ, ಕ್ರೈಸ್ತ, ಬಹುದೇವಾರಾಧಕರಾದ ಎಲ್ಲರಿಗೂ ಅವರು ಸಲಾಮ್ ಹೇಳುತ್ತಿದ್ದರು. ಸಲಾಮನ್ನು ಬಹಳ ಹೆಚ್ಚು ಹೆಚ್ಚಾಗಿ ಹರಡಬೇಕೆಂದು ಅವರ ಅಭಿಲಾಷೆಯಾಗಿತ್ತು. ಲೋಕವು ಶಾಂತಿಯ ಉಯ್ಯಾಲೆಯಾಗಬೇಕೆಂದು ಅವರು ಬಯಸಿದ್ದರು. ಮಾರ್ಗದಲ್ಲಿ ನಡೆಯುವಾಗ ಮರ ಅಥವಾ ಗೋಡೆ ತಡೆಯಾಗಿ ಪರಸ್ಪರ ಕಾಣಲು ಸಾಧ್ಯವಾಗದೆ ಅನಂತರ ಪುನಃ ಜನರನ್ನು ಕಂಡರೆ ಅಂತಹ ಸ್ಥಿತಿಯಲ್ಲೂ ಪುನಃ ಪರಸ್ಪರ ಸಲಾಮ್ ಹೇಳಬೇಕೆಂದು ಹಝ್ರತ್ ಪೈಗಂಬರ್(ಸ) ಉಪದೇಶಿಸುತ್ತಿದ್ದರು. (ಅಬೂದಾಊದ್)

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳುತ್ತಿದ್ದರು:

ಅಫ್‌ಶಉಸ್ಸಲಾಮ –

"ಸಲಾಮನ್ನು ಚೆನ್ನಾಗಿ ಹರಡಿರಿ". (ತಿರ್ಮಿಧೀ)

ಎಂದರೆ ಸಲಾಮನ್ನು ದ್ವೇಷದ ಗೋಡೆಗಳ ಮಧ್ಯೆ ಬಂಧಿಸಿಡಬಾರದು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳುತ್ತಾರೆ:

ತಖ್‌ರಉಸ್ಸಲಾಮ ಅಲಾ ಮನ್ ಅರಫ್‌ತ ವ ಮನ್ ಲಮ್ ತಅರಿಫ್

"ನಿಮಗೆ ಪರಿಚಯವಿರುವವರಿಗೆ ಸಲಾಮ್ ಹೇಳಿರಿ ಮತ್ತು

ನಿಮಗೆ. ಪರಿಚಯ ಇಲ್ಲದವರಿಗೂ ಸಲಾಮ್ ಹೇಳಿರಿ."

(ಬುಖಾರಿ)

ಹಝ್ರತ್ ಉಸಾಮ ಬಿನ್ ಝೈದ್(ರ) ವರದಿ ಮಾಡುತ್ತಾರೆ:

"ಒಂದು ಸಭೆಯಲ್ಲಿ ಮುಸ್ಲಿಮರು, ಬಹುದೇವಾರಾಧಕರು; ಯಹೂದಿಯರು ಮೊದಲಾದವರು ಕುಳಿತಿದ್ದಾಗ ಅಲ್ಲಿಂದ ದಾಟಿಹೋಗುವಾಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅವರೆಲ್ಲರಿಗೂ ಅಸ್ಸಲಾಮು ಅಲೈಕುಮ್ ಎಂದು ಹೇಳಿದರು." (ಬುಖಾರಿ: ಹದೀಖತುಸ್ಸಾಲಿಹೀನ್ – ಪುಟ 488)

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಬ್ಬ ಯಹೂದಿ ಉದ್ಧಟತನದಿಂದ ಅಸ್ಸಲಾಮ್ ಎಂದು ಹೇಳುವುದಕ್ಕೆ ಬದಲಾಗಿ ಅಸ್ಸಾಮು ಅಲೈಕುಮ್ (ನಿಮಗೆ ನಾಶ ಸಂಭವಿಸಲಿ) ಎಂದು ಹೇಳಿದನು. ಆಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ವ ಅಲೈಕುಮ್. ಎಂದರೆ, ನೀವು ಬಯಸಿದ ಕೆಡುಕು "ನಿಮಗೆ".

ಈ ಹದೀಸನ್ನು ಆಧಾರವಾಗಿಟ್ಟುಕೊಂಡು ಕೆಲವರು ಹೀಗೆ ವಾದಿಸುತ್ತಾರೆ: ಮುಸ್ಲಿಮೇತರರಿಗೆ, ಅವರು ಸಲಾಮ್ ಹೇಳಿದರೆ "ವ ಅಲೈಕುಮ್" ಎಂದು ಮಾತ್ರ ಹೇಳುವುದು ಸರಿಯಾದ ವಿಧಾನವಾಗಿದೆ.

ಆದರೆ ಹದೀಸುಗಳಿಂದ ತಿಳಿಯುವುದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮುಸ್ಲಿಮೇತರರಿಗೂ ಸಲಾಮ್ ಹೇಳುತ್ತಿದ್ದರು. ಮುಸ್ಲಿಮೇತರರು ಸಲಾಮ್ ಹೇಳಿದರೆ ಸಾಧಾರಣ ರೀತಿಯಲ್ಲಿಯೇ ಸಲಾಮ್‌ಗೆ ಉತ್ತರ ಪೂರ್ಣವಾಗಿ ನೀಡುತ್ತಿದ್ದರು. ಆದರೆ ಒಬ್ಬ ಯಹೂದಿ ಉದ್ದೇಶಪೂರ್ವಕವಾಗಿ ಉದ್ಧಟತನದಿಂದ ಅಸ್ಸಾಮು ಅಲೈಕುಮ್ (ನಿಮಗೆ ನಾಶ ಸಂಭವಿಸಲಿ) ಎಂದು ಹೇಳಿದಾಗ ಮೌನವನ್ನು ಅವಲಂಬಿಸದೆ ಅವನು ಹಾನಿಯನ್ನು ಕೋರಿದುದನ್ನು ಅವನ ಕಡೆಗೆಯೇ ತಿರುಗಿಸಿ "ವ ಅಲೈಕುಮ್" (ಅದು ನಿನಗೆ) ಎಂದು ಉತ್ತರ ನೀಡಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯಾವಾಗಲೂ ಮುಸ್ಲಿಮೇತರರ ಸಲಾಮ್‌ಗೆ "ವ ಅಲೈಕುಮುಸ್ಸಲಾಮ್" ಎಂದೇ ಉತ್ತರ ಹೇಳುತ್ತಿದ್ದರು. ಇದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ರಹ್ಮತನ್ ಲಿಲ್ ಆಲಮೀನ್ (ಸಕಲ ಲೋಕಗಳಿಗೆ ಅನುಗ್ರಹ)ಆಗಿ ಆಗಮಿಸಿದ ಕಾರಣದಿಂದಾಗಿದೆ. ಅದು ಅವರ ವೈಭವಶಾಲಿ ವ್ಯಕ್ತಿತ್ವದ ದ್ಯೋತಕವಾಗಿದೆ.

ಸಲಾಮ್ ಹೇಳುವುದರ ಮಹತ್ವ ಇನ್ನೊಂದು ರೀತಿಯಲ್ಲೂ ಸ್ಪಷ್ಟವಾಗುತ್ತದೆ. ಅಲ್ಲಾಹನು ಲೋಕದಲ್ಲಿ ಆಗಮಿಸಿದ ಪ್ರಸಿದ್ಧ ಪ್ರವಾದಿಗಳ ಹೆಸರನ್ನು ಕರೆದು ಅವರ ಮೂಲಕ ಲೋಕದ ಎಲ್ಲ ಜನಾಂಗಗಳಿಗೂ ತನ್ನ ಸಲಾಮ್ ತಲಪಿಸಲು ಹೇಳಿದ್ದಾನೆ:

ಹಝ್ರತ್ ನೂಹ್ ಅಲೈಹಿಸ್ಸಲಾಮರೊಂದಿಗೆ,

"ಖೀಲ ಯಾ ನೂಹು ಹ್‌ಬಿತ್ ಬಿಸಲಾಮಿನ್ ಮಿನ್ನಾ –

ಓ ನೂಹ್, ನಮ್ಮ ಸಲಾಮ್ ಜೊತೆಗೆ (ನೌಕೆಯಿಂದ) ಇಳಿ."

(ಪವಿತ್ರ ಖುರ್‌ಆನ್ 11:49)

ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರ ಬಗ್ಗೆ,

"ಸಲಾಮುನ್ ಅಲಾ ಇಬ್ರಾಹೀಮ್ –

ಇಬ್ರಾಹೀಮ್ ಮೇಲೆ ಶಾಂತಿ ಇರಲಿ."

(ಪವಿತ್ರ ಖುರ್‌ಆನ್ 37:110)

ಹಝ್ರತ್ ಮೂಸಾ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಹಾರೂನ್ ಅಲೈಹಿಸ್ಸಲಾಮರ ಬಗ್ಗೆ,

"ಸಲಾಮುನ್ ಅಲಾ ಮೂಸಾ ವ ಹಾರೂನ್ –

ಮೂಸಾ ಮತ್ತು ಹಾರೂನರ ಮೇಲೆ ಶಾಂತಿಇರಲಿ."

(ಪವಿತ್ರ ಖುರ್‌ಆನ್ 37:121)

ಹಝ್ರತ್ ಇಲ್ಯಾಸ್ ಅಲೈಹಿಸ್ಸಲಾಮರ ಬಗ್ಗೆ,

"ಸಲಾಮುನ್ ಅಲಾ ಇಲ್‌ಯಾಸೀನ್ –

ಇಲ್ಯಾಸೀನ್ ಮೇಲೆ ಶಾಂತಿ ಇರಲಿ."

(ಪವಿತ್ರ ಖುರ್‌ಆನ 37:131)

ಹಝ್ರತ್ ಯಹ್‌ಯಾ ಅಲೈಹಿಸ್ಸಲಾಮರಿಗೆ ಸಲಾಮ್ ತಲಪಿಸಿದ ಬಗ್ಗೆ ಪವಿತ್ರ ಖುರ್‌ಆನ್ ಅಧ್ಯಾಯ 19 ವಚನ 16ರಲ್ಲೂ ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ಸಲಾಮ್ ತಲಪಿಸಿದ ಬಗ್ಗೆ ಪವಿತ್ರ ಖುರ್‌ಆನ್ ಅಧ್ಯಾಯ 19 ವಚನ 34ರಲ್ಲೂ ಪ್ರಸ್ತಾಪಿಸಲಾಗಿದೆ.

ಎಲ್ಲ ಸಂದೇಶವಾಹಕರ ಬಗ್ಗೆ ಹೀಗೆ ಹೇಳಲಾಗಿದೆ: "ಸಲಾಮುನ್ ಅಲಲ್ ಮುರ್‌ಸಲೀನ್ –

ಸಂದೇಶವಾಹಕರೆಲ್ಲರ ಮೇಲೆ ಶಾಂತಿ ಇರಲಿ."

(ಪವಿತ್ರ ಖುರ್‌ಆನ್ 37:182)

ಹೀಗೆ ಎಲ್ಲ ಜನಾಂಗಗಳಿಗೆ ಅವರ ಪ್ರವಾದಿಗಳ ಮೂಲಕ ಅಲ್ಲಾಹನು ತನ್ನ ಸಲಾಮ್ ತಲಪಿಸಿರುವನು.

ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅಲ್ಲಾಹನ ಮತ್ತು ಅವನ ದೂತರ ಸಲಾಮ್ ಬಗ್ಗೆ ಪ್ರಸ್ತಾಪಿಸುತ್ತಾ ಸತ್ಯ ವಿಶ್ವಾಸಿಗಳೂ ಅವರಿಗೆ ಸಲಾಮ್ ತಲಪಿಸಬೇಕೆಂದು ಆಜ್ಞೆ ಈ ಕೆಳಗಿನಂತೆ ನೀಡಲಾಗಿದೆ:

ಇನ್ನಲ್ಲಾಹ ವ ಮಲಾಯಿಕತಹೂ ಯುಸಲ್ಲೂನ ಅಲನ್ನಬಿಯ್ಯಿ ಯಾ ಅಯ್ಯುಹಲ್ಲದೀನ ಆಮನೂ ಸಲ್ಲೂ ಅಲೈಹಿ ವ ಸಲ್ಲಿಮೂ ತಸ್‌ಲೀಮಾ.

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಓ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ."

(ಪವಿತ್ರ ಖುರ್‌ಆನ್ 33:57)

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮುಸ್ಲಿಮರೊಂದಿಗೆ ಹೀಗೆ ಸಹ ಆಜ್ಞಾಪಿಸಿದ್ದಾರೆ: ಆಗಮಿಸಲಿರುವ ಮಹ್‌ದಿ ವಾಗ್ದಾನ ಪ್ರಕಾರ ಆಗಮಿಸಿದರೆ ಹಿಮಖಂಡಗಳ ಮೇಲೆ ಮೊಣಕಾಲೂರಿ ತೆವಳಿ ಹೋಗಬೇಕಾಗಿದ್ದರೂ ಹಾಗೆ ಕಷ್ಟಪಟ್ಟು ಹೋಗಿ ಅವರಿಗೆ ನನ್ನ ಸಲಾಮ್ ತಲಪಿಸಿರಿ.

## ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮತ್ತು ಸಲಾಮ್

ಅಹ್ಮದಿಯಾ ಜಮಾಅತಿನಲ್ಲಿ ಸಲಾಮ್‌ಗೆ ಬಹಳ ಪ್ರಾಮುಖ್ಯತೆ ಇದೆ. ಇಸ್ಲಾಮ್ ಧರ್ಮದ ಶಾಂತಿದಾಯಕ ಉಪದೇಶಗಳನ್ನು ಜಗತ್ತಿನಾದ್ಯಂತ ಎಲ್ಲ ಜನಾಂಗಗಳಿಗೆ ತಲಪಿಸುವ ಹೊಣೆಗಾರಿಕೆ ಈ ಜಮಾಅತಿನ ಮೇಲಿದೆ. ಇಸ್ಲಾಮ್ ಖಡ್ಗ ಮತ್ತು ಬಲಾತ್ಕಾರ ಮೂಲಕ ಹಬ್ಬಿತೆಂಬ ದೋಷಾರೋಪವನ್ನು ನಿವಾರಿಸುವ ಜವಾಬ್ದಾರಿ ಈ ಜಮಾಅತ್ ವಹಿಸಿಕೊಂಡಿದೆ. ಮುಸ್ಲಿಮರು ಇಸ್ಲಾಮಿನ ವಾಸ್ತವಿಕ ಅರ್ಥದಿಂದ ದೂರಸರಿದು ಹೋಗಿದ್ದಾರೆ. ಶಾಂತಿಸ್ಥಾಪನೆಗೆ ಮುಸ್ಲಿಮರು ಅಪಾಯಕರರಾಗಿದ್ದಾರೆಂದು ಲೋಕವು ಗಣಿಸುತ್ತಾ ಇದೆ. ಇಂದಿನ ಕಾಲದಲ್ಲಿ ಇಸ್ಲಾಮಿನ ಶಾಂತಿಯ ಉಪದೇಶಗಳನ್ನು ಹಿಂದೆಂದಿಗಿಂತಲೂ ಹರಡುವುದು ಅತ್ಯಾವಶ್ಯಕವಾಗಿದೆ. ಎಲ್ಲ ಜನಾಂಗಗಳನ್ನು ಇಸ್ಲಾಮ್ ಮೂಲಕ ಒಗ್ಗೂಡಿಸುವುದಕ್ಕಾಗಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿದೆ.

ಅಹ್ಮದಿಯಾ ಜಮಾಅತ್ ಪ್ರಥಮ ಶತಮಾನ ಕಳೆದು ದ್ವಿತೀಯ ಶತಮಾನಕ್ಕೆ ಪ್ರವೇಶಿಸುವ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತ್‌ನೊಂದಿಗೆ "ಸಲಾಮ್"ಗೆ ಗಾಢವಾದ ಸಂಬಂಧವಿರುವ ಬಗ್ಗೆ ಪ್ರಸ್ತಾಪಿಸುತ್ತಾ ಚತುರ್ಥ ಖಲೀಫ ಹಝ್ರತ್ ಮಿರ್ಝಾ

ತಾಹಿರ್ ಅಹ್ಮದ್[ರಹ] ಹೀಗೆ ಹೇಳಿದರು: ನನ್ನ ಜೀವ ಯಾರ ಕೈಯಲ್ಲಿದೆಯೋ ಆ ದೇವನ ಮೇಲೆ ಪ್ರಮಾಣ ಮಾಡಿ ಅವನನ್ನು ಸಾಕ್ಷಿಯಾಗಿಟ್ಟುಕೊಂಡು ಹೇಳುತ್ತೇನೆ– ಅಲ್ಲಾಹನು ನನಗೆ ಈ ದ್ವಿತೀಯ ಶತಮಾನದ ಪ್ರಥಮ ಸಂದೇಶವಾಗಿ "ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ" ಎಂದು ಹೇಳಿದ್ದಾನೆ. ಅಲ್ಲಾಹನಿಂದ ಅವತೀರ್ಣವಾದ ಸಲಾಮ್ ನಿಮ್ಮೆಲ್ಲರ ಶಿರಗಳ ಮೇಲೆ ಅನುಗ್ರಹದ ನೆರಳನ್ನು ಯಾವಾಗಲೂ ಇರಿಸುವುದು. ನೀವು ಆ ಅನುಗ್ರಹಗಳ ಮತ್ತು ಸಂರಕ್ಷಣೆಗಳ ನೆರಳಿನ ಕೆಳಗೆ ಮುಂದೆ ಸಾಗುತ್ತಾ ಹೋಗುವಿರಿ........ ಹೊಸ ಶತಮಾನ ಅಹ್ಮದಿಯಾ ಜಮಾಅತಿಗೆ ಹೊಸಹೊಸ ಸಂತೋಷಗಳನ್ನು ತರುವಂತಹದಾಗುವುದು". (24–3–1989ರ ಜುಮುಅ ಖುತ್‌ಬ. ಬದ್ರ್ ಪತ್ರಿಕೆ 20–4–1989)

ನಮ್ಮ ಪ್ರಿಯ ಇಮಾಮ್ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೀಗೆ ಹೇಳುತ್ತಾರೆ:

"ನಮ್ಮೆಲ್ಲರಲ್ಲಿ ಪ್ರತಿಯೊಬ್ಬನು ಶಾಂತಿಯ ಸಂದೇಶವಾಹಕನಾಗಬೇಕು. ಶಾಂತಿಯನ್ನು ಹರಡುವವನಾಗಬೇಕು. ತನ್ನ ಸಮಾಜದಲ್ಲಿ ಶಾಂತಿಯನ್ನು ಹರಡುವವನಾಗಬೇಕು. ತನ್ನ ಸಮಾಜದಲ್ಲಿ ಶಾಂತಿಯನ್ನು ಚೆಲ್ಲುವವನಾಗಬೇಕು."

"ಸತ್ಯವಿಶ್ವಾಸ ವರ್ಧಿಸುವಾಗ ಮುಸ್ಲಿಮರೊಂದಿಗೆ ಮಾತ್ರವಲ್ಲ ಮಾನವರೆಲ್ಲರೊಂದಿಗೆ ಪ್ರೀತಿ ಮತ್ತು ಶಾಂತಿಯ ಸಂಬಂಧ ಸ್ಥಾಪಿಸಲ್ಪಡುತ್ತದೆ. ಈ ಶಾಂತಿಯ ಸಂಬಂಧ ಒಳ್ಳೆಯ ಸಂದೇಶವನ್ನು ಅನ್ಯರಿಗೆ ತಲಪಿಸುತ್ತದೆ. ಇದೇ ಶಾಂತಿಯ ಸಂಬಂಧ ಅನ್ಯರನ್ನು ನಿಮ್ಮ ಸುತ್ತಮುತ್ತಲೂ ಕರೆದು ತರುವುದು. ಇದೇ ಶಾಂತಿ ಸಂಬಂಧದ ಮೂಲಕ ಧರ್ಮ ಪ್ರಚಾರದ ಬಾಗಿಲು ತೆರೆಯಲ್ಪಡುವುದು. ಇದೇ ಶಾಂತಿ ಸಂಬಂಧದ ಕಾರಣದಿಂದ ಜನರ ಗಮನ ನಿಮ್ಮ ಕಡೆಗೆ ಸೆಳೆಯಲ್ಪಡುವುದು. ಸತ್ಯವಾದ ಧರ್ಮ ಯಾವುದೆಂದು ಗುರುತಿಸಿ ಅದರಲ್ಲಿ ಜನರು ಸೇರುತ್ತಾರೆ. ನೀವು ಶಾಂತಿಯ ಸಂದೇಶವನ್ನು ಹೊಂದಿ ಅದನ್ನು ಹರಡುವಿರಾದರೆ ನೀವು ಅಲ್ಲಾಹನ ನೈಜ ಅನುಸರಣೆಗಾರರಾಗುವಿರಿ." (ಜುಮುಅ ಖುತ್‌ಬ 11–5–2007. ಬದ್ರ್ 19–7–2007)

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಒಂದು ಹದೀಸ್ ಉಲ್ಲೇಖಿಸಿ ಹೇಳುತ್ತಾರೆ: ಹಝ್ರತ್ ಅಬೂ ದರ್ದಾ[ರ] ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು: 'ನೀವು ಸಲಾಮನ್ನು ಹರಡುತ್ತಾ ಹೋಗಿರಿ – ಜಯಗಳಿಸಲಿಕ್ಕೋಸ್ಕರ.' ಸಲಾಮನ್ನು ಹರಡುತ್ತಾ ಇದ್ದರೆ ಪರಸ್ಪರ ಪ್ರೀತಿಯ ಸಂಬಂಧ ಸ್ಥಾಪಿಸಲ್ಪಡುವುದು. ಈ ಪ್ರೀತಿಯ ಸಂಬಂಧಗಳ ಕಾರಣ ಜಮಾಅತಿನಲ್ಲಿ ಶಕ್ತಿ ವರ್ಧಿಸುವುದು. ಜಮಾಅತಿನ ಶಕ್ತಿ ಮತ್ತು ಬಲಿಷ್ಠಗೊಳ್ಳುವಿಕೆಯ ಮೂಲಕವೇ ಜಯದ ಮಾರ್ಗವು ತೆರೆಯುತ್ತಾ ಹೋಗುವುದು." ( ಜುಮುಅ ಖುತ್‌ಬ 25–5–2007. ಬದ್ರ್ 2–8–2007)

ಅಲ್ಲಾಹನು ನಮಗೆಲ್ಲರಿಗೂ ಹಝ್ರತ್ ಖಲೀಫರ ಉಪದೇಶಗಳನ್ನು ಅನುಸರಿಸಿ ವರ್ತಿಸುವ ಭಾಗ್ಯ ದಯಪಾಲಿಸಲಿ.

●

## ಪುಸ್ತಕ ಪರಿಚಯ


**ಧರ್ಮದ ನಾಮದಲ್ಲಿ ರಕ್ತಪಾತ**

*ಗ್ರಂಥ ಕರ್ತ* : ಮಿರ್ಝಾ ತಾಹಿರ್ ಅಹ್ಮದ್

ಪುಟಗಳು : 185 *ಬೆಲೆ* : ರೂ. 50/-

**ಖತ್‌ಮೆ ನುಬುವ್ವತ್ - ಸತ್ಯಾಂಶಗಳು**

*ಗ್ರಂಥ ಕರ್ತ* : ಮಿರ್ಝಾ ಬಶೀರ್ ಅಹ್ಮದ್

ಪುಟಗಳು : 155 *ಬೆಲೆ* : ರೂ. 50/-

*ಸಂಪರ್ಕಿಸಿರಿ* :

**ಅಹ್ಮದಿಯಾ ಮುಸ್ಲಿಮ್ ಜಮಾಅತ್**

ನಂ.1, 3ನೇ ಕ್ರಾಸ್, ವಿಲ್ಸನ್ ಗಾರ್ಡನ್,

ಬೆಂಗಳೂರು - 560 027. Ph : 080 - 22246133




ಮಂಗಳೂರು: ಖುದ್ದಾಮುಲ್ ಅಹ್ಮದಿಯಾ ಸದಸ್ಯರು ಮಂಗಳೂರಿನ ಗಣ್ಯ ವ್ಯಕ್ತಿಗಳಿಗೆ ಅಹ್ಮದಿಯಾ ಸಾಹಿತ್ಯ ವಿತರಣೆ ಮಾಡಿದಾಗ......

## ವಾರ್ತೆಗಳು

# ಅಹ್ಮದಿಯಾ ಶಾಂತಿ ಪುರಸ್ಕಾರ ಸಿಂಧುತಾಯ್ ಸಪ್ಕಲ್‌ಗೆ



ಅಹ್ಮದಿಯಾ ಮುಸ್ಲಿಂ ಜಮಾಅತ್ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ನೀಡುತ್ತಿರುವ ಇಂಟರ್‌ನೇಶನಲ್ ಪೀಸ್ ಪ್ರೈಝ್ 'ಅನಾಥರ ತಾಯಿ' ಎಂದು ಕರೆಯಲ್ಪಡುವ ಸಿಂಧುತಾಯ್ ಸಪ್ಕಲ್‌ಗೆ ಅಹ್ಮದಿಯಾ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಲಂಡನಿನಲ್ಲಿ ಜರಗಿದ ಪೀಸ್ ಸಿಂಪೋಝಿಯಮ್‌ನಲ್ಲಿ ನೀಡಿದರು.

ಅತ್ಯಂತ ನಿಸ್ಸಹಾಯಾವಸ್ಥೆಯಲ್ಲಿ ಅವಿಶ್ವನೀಯ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ ಬೀದಿಗಳಲ್ಲಿ ಅನಾಥರಾಗಿ ಬೆಳೆದ ಗತಿಗೆಟ್ಟ ಮಕ್ಕಳಿಗೆ ಮಾತೆಯಾಗಿ ಮಾರ್ಪಟ್ಟ ಶ್ರೀಮತಿ ಸಿಂಧುತಾಯ್ ಸಪ್ಕಲ್ ಈ ವರ್ಷದ ಅಂತರ್ರಾಷ್ಟ್ರೀಯ ಅಹ್ಮದಿಯಾ ಶಾಂತಿ ಪುರಸ್ಕಾರಕ್ಕೆ ಅರ್ಹರಾದರು. ಅನಾಥರ ಮಾತೆ ಎಂದು ಕರೆಯಲ್ಪಡುವ ಈ ಮಹತ್ ವನಿತೆಯ ತ್ಯಾಗೋಜ್ವಲವೂ ಇತಿಹಾಸ ತುಲ್ಯವೂ ಆದ ಜೀವಿತ ಕಥೆ ವಿಸ್ಮಯಕರವಾಗಿದೆ.

ಮಹಾರಾಷ್ಟ್ರದ ವಾರ್ದಾ ಜಿಲ್ಲೆಯ ಪಿಂಪ್ರಿ ಮೇಘೆ ಗ್ರಾಮದಲ್ಲಿ ಅಭಿಮಾನ್‌ಜಿಯ ಮಗಳಾಗಿ 1948 ನವೆಂಬರ್ 14ರಂದು ಸಿಂಧುತಾಯ್ ಜನಿಸಿದರು. ಪಶುಪಾಲನೆ ಕಸಬಿನ ಒಂದು ಬಡ ಕುಟುಂಬವಾಗಿತ್ತು ಅವರದು. ಕುಟುಂಬದಲ್ಲಿ ಯಾರಿಗೂ ಬೇಡವಾದ ಒಂದು ಹೆಣ್ಣು ಶಿಶು ಅವರಾಗಿದ್ದರು. ಚಿಂದಿಬಟ್ಟೆ ಎಂಬ ಅರ್ಥ ಬರುವ "ಚಿಂಧಿ" ಎಂದು ಪರಿಹಾಸ್ಯವಾಗಿ ಆ ಹೆಣ್ಣು ಮಗುವನ್ನು ಮನೆಯಲ್ಲಿ ಕರೆಯುತ್ತಿದ್ದರು. ಸಿಂಧುತಾಯ್‌ಯ ಮಾತೆ ಅವಳನ್ನು ಶಾಲೆಗೆ ಹೋಗಲು ಅನುಮತಿಸಲಿಲ್ಲ. ಸ್ನೇಹನಿಧಿಯಾದ ಅವಳ ಬಡ ತಂದೆ ಅಭಿಮಾನ್‌ಜಿ ಪುಟ್ಟ ಸಿಂಧುಗೆ ವಿದ್ಯಾಭ್ಯಾಸ ನೀಡಲು ತೀರ್ಮಾನಿಸಿದರು. ಪಶುಪಾಲನೆ ಎಂಬ ಸುಳ್ಳು ವಿದ್ಯಾಲಯಕ್ಕೆ ಕಳುಹಿಸಿದರು. ಅಲ್ಲಿ ಮರದ ಎಲೆಗಳ ಮೇಲೆ ಸಿಂಧುತಾಯ್ ಬರೆದು ಕಲಿತರು. ಏಕೆಂದರೆ, ಸ್ಲೇಟ್ ಪಡೆಯಲು ಅವರ ಬಳಿ ಹಣವಿರಲಿಲ್ಲ. ನಾಲ್ಕನೇ ತರಗತಿ ಕಲಿತು ವಿದ್ಯಾಭ್ಯಾಸ ನಿಲ್ಲಿಸಬೇಕಾಯಿತು.

10ನೇ ವಯಸ್ಸಿನಲ್ಲಿ ಶ್ರೀಹರಿ ಸಪ್ಕಲ್ ಎಂಬ 30 ವರ್ಷ ಪ್ರಾಯದವನ ಜೊತೆ ಸಿಂಧುವಿನ ವಿವಾಹವಾಯಿತು. 20ನೇ ವಯಸ್ಸಿನಲ್ಲಿ ಮೂರು ಮಕ್ಕಳ ತಾಯಿಯಾಗಿದ್ದ ಅವರು ಸ್ಥಳೀಯ ಶಕ್ತನಾದ ಒಬ್ಬ ಗ್ರಾಮ ಪ್ರಮುಖನ ವಿರುದ್ಧದ ಹೋರಾಟದಲ್ಲಿ ಜಯಿಸಿದರು. ಒಣಗಿದ ಕಟ್ಟಿಗೆಗೆ ಬದಲು ಇಂಧನವಾಗಿ ಉಪಯೋಗಿಸುವ ಒಣ ಸೆಗಣಿಯನ್ನು ಬಹಳ ಬಡವರಾದ ಗ್ರಾಮ ನಿವಾಸಿಗಳಿಂದ ಪ್ರತಿಫಲವೇನೂ ನೀಡದೆ ಶೇಖರಿಸಿ ಈ ಗ್ರಾಮ ಪ್ರಮುಖನು ಮಾರಿ ಲಾಭಗಳಿಸುತ್ತಿದ್ದನು. ಇದನ್ನು ಪ್ರಶ್ನಿಸಿ ಸಿಂಧುತಾಯ್ ಸಮರ ಹೂಡಿದರು. ಕೊನೆಗೆ ಸಮಸ್ಯೆ ಜಿಲ್ಲಾಧಿಕಾರಿಯ ಮುಂದೆ ಬಂತು. ಸಿಂಧುತಾಯ್‌ಗೆ ಪರವಾಗಿ ಜಿಲ್ಲಾಧಿಕಾರಿ ತೀರ್ಪು ನೀಡಿದರು. ಅಂದಿನಿಂದ ಅವರ ಕಷ್ಟಕಾಲ ಆರಂಭವಾಯಿತು. ಅಪಮಾನಿತನಾದ ಆ ಗ್ರಾಮದ ಪ್ರಮುಖನು ಸಿಂಧುವಿನ ಪತಿ ಶ್ರೀಹರಿ ಸಪ್ಕಲನನ್ನು ಸ್ವಾಧೀನಿಸಿ ಸಿಂಧುವನ್ನು ಬೀದಿಪಾಲು ಮಾಡಲಾಯಿತು. 9 ಮಾಸ ತುಂಬು ಗರ್ಭಿಣಿ ಸಿಂಧುತಾಯ್ ಬೀದಿ ಪಾಲಾದರು. ಅವರು ಆ ರಾತ್ರಿ ದನದ ಹಟ್ಟಿಯಲ್ಲಿ ತನ್ನ ಮಗುವನ್ನು ಹೆತ್ತರು. ಕೆಲವು ಕಿಲೋ ಮೀಟರ್ ದೂರದಲ್ಲಿ ವಾಸಿಸುವ ತಾಯಿಯ ಮನೆಯಲ್ಲಿ ಆಶ್ರಯ ಪಡೆಯಲು ಪ್ರಯತ್ನಿಸಿದರೂ ಅಲ್ಲಿ ಕೂಡ ಅವರು ನಿರಾಕರಿಸಲ್ಪಟ್ಟರು. ಆತ್ಮಹತ್ಯೆ ಮಾಡಲು ಯೋಚಿಸಿದರು. ಕೊನೆಗೆ ಊಟಕ್ಕಾಗಿ ಭಿಕ್ಷೆ ಬೇಡಲು ತೊಡಗಿದರು. ಈ ಭಿಕ್ಷಾಟನ ಜೀವಿತದಲ್ಲಿ ಅವರು ಅನೇಕ ಉಪೇಕ್ಷಿಸಲ್ಪಟ್ಟ ಅನಾಥ ಮಕ್ಕಳನ್ನು ಭೇಟಿಯಾದರು. ಅವರೆಲ್ಲರಿಗೋಸ್ಕರ ಅವರು ಭಿಕ್ಷೆ ಬೇಡಿದರು. ಕೊನೆಗೆ ಅವರನ್ನೆಲ್ಲ ದತ್ತು ಪಡೆದರು. ಅವರೆಲ್ಲರ ತಾಯಿಯಾಗಲು ಅವರು ತೀರ್ಮಾನಿಸಿದರು. ಅನಂತರ ವಿಚಿತ್ರವಾದೊಂದು ತೀರ್ಮಾನವನ್ನು ಅವರು ಕೈಗೊಂಡರು. ಅಂದರೆ ತನ್ನ ಸ್ವಂತ ಮಕ್ಕಳನ್ನು ಪೂನದ ಒಂದು ಟ್ರಸ್ಟ್‌ಗೆ ಅವರು ಒಪ್ಪಿಸಿದರು. ತನ್ನ ಸ್ವಂತ ಮಕ್ಕಳ ಮೇಲೆ ದತ್ತು ಮಕ್ಕಳಿಗಿಂತ ಹೆಚ್ಚು ಪ್ರೀತಿ ಉಂಟಾಗುವುದನ್ನು ತಡೆಯಲಿಕ್ಕೋಸ್ಕರ ಟ್ರಸ್ಟ್‌ಗೆ ತನ್ನ ಸ್ವಂತ ಮಕ್ಕಳನ್ನು ಒಪ್ಪಿಸಿದ್ದೆಂದು ಅವರು ಸ್ಪಷ್ಟೀಕರಿಸುತ್ತಾರೆ.

ಆ ಮೇಲೆ ಅವರು ತನ್ನ ಜೀವನವನ್ನು ಪೂರ್ಣವಾಗಿ ಅನಾಥರ ಜೀವನಕ್ಕಾಗಿ ಸಮರ್ಪಿಸಿದರು. ಅವರನ್ನು ಎಲ್ಲರೂ ಪ್ರೀತಿಯಿಂದ ಮಾಯಿ (ಮಾತೆ) ಎಂದು ಕರೆದರು. 1050 ಅನಾಥ ಮಕ್ಕಳನ್ನು ಅವರು ದತ್ತು ಪಡೆದರು. ಇಂದು ಅವರು 207 ಅಳಿಯಂದಿರೂ 36 ಸೊಸೆಯಂದಿರೂ ಸಾವಿರಕ್ಕಿಂತ ಹೆಚ್ಚು ಮೊಮ್ಮಕ್ಕಳೂ ಇರುವ ಒಂದು ಕುಟುಂಬದ ಒಡತಿ. ಅನಾಥರ ಈ ಬೃಹತ್ ಕುಟುಂಬದಲ್ಲಿ ಇಂದು ಹಲವು ಕಾನೂನು ತಜ್ಞರು, ಡಾಕ್ಟರ್‌ಗಳು, ಪಿ.ಎಚ್.ಡಿ. ಪದವೀಧರರ ಸಹಿತ

## ವಾರ್ತೆಗಳು

ಉನ್ನತ ವಿದ್ಯಾಭ್ಯಾಸ ಪಡೆದವರಿದ್ದಾರೆ. ಆದರೂ ಈ ಪ್ರಾಯದಲ್ಲೂ ಸಿಂಧುತಾಯ್ ಇವರ ಊಟಕ್ಕಾಗಿ ಹೋರಾಡುತ್ತಿದ್ದಾರೆ. ಅವರ ಸ್ವಂತ ಮಕ್ಕಳು ಸ್ವತಂತ್ರ ಅನಾಥಾಲಯಗಳನ್ನು ನಡೆಸುತ್ತಿದ್ದಾರೆ. ಸಿಂಧುತಾಯ್‌ಗೆ ಮಾನವೀಯ ಸೇವೆಗೆ 273 ಪುರಸ್ಕಾರಗಳು ಲಭಿಸಿವೆ. ಈ ಪುರಸ್ಕಾರ ಧನವನ್ನೆಲ್ಲ ಅವರು ತನ್ನ ಮಕ್ಕಳಿಗೆ ಅನಾಥಾಲಯ ಕಟ್ಟಲು ವಿನಿಯೋಗಿಸಿದರು.

ವೃದ್ಧಾಪ್ಯದ ಎಂಬತ್ತನೇ ಪ್ರಾಯದಲ್ಲಿ ಹಿಂದೆ ಅವರನ್ನು ಬೀದಿಪಾಲು ಮಾಡಿದ್ದ ಅವರ ಪತಿ ಪಶ್ಚಾತ್ತಾಪಪಟ್ಟು ತನ್ನ ಪತ್ನಿಯ ಸಮೀಪಕ್ಕೆ ಮರಳಿಬಂದರು. ಅವರು ತನ್ನ ಪತಿಯನ್ನು ಆದರದಿಂದ ಬರಮಾಡಿದರು. ಒಬ್ಬ ಪುತ್ರನೆಂಬಂತೆ ಅವರನ್ನು ಸ್ವೀಕರಿಸಿದರು. ಅವರು ಈಗ ಓರ್ವ ಮಾತೆ ಮಾತ್ರ. ನೀವು ಅವರ ಆಶ್ರಮವನ್ನು ಸಂದರ್ಶಿಸಿದರೆ ಸಿಂಧುತಾಯ್ ಅವರ ಅತಿ ಹೆಚ್ಚು ಪ್ರಾಯದ ಈ 'ಪುತ್ರ'ನನ್ನು ತೋರಿಸಿಕೊಡುವರು. ಅವರು ಅತ್ಯಧಿಕ ಸತ್ಕರ್ಮಗಳ ಚೈತನ್ಯ. ಯಾವ ನಿಷೇಧಾತ್ಮಕ ಮನೋಭಾವವೂ ಅವರಲ್ಲಿ ಇಂದಿಲ್ಲ. ಯಾರೊಂದಿಗೂ ಹಗೆ ಅಥವ ದ್ವೇಷವಿಲ್ಲ. ಯಾರನ್ನೂ ದೋಷಾರೋಪಿಸುವುದಿಲ್ಲ. 2010ರಲ್ಲಿ ಅವರ ಬಗ್ಗೆ ಒಂದು ಮರಾಠಿ ಚಲಚ್ಚಿತ್ರ ಬಿಡುಗಡೆಯಾಗಿತ್ತು. ಸಿಂಧುತಾಯ್ ಸಪ್ಕಲ್ ಎಂದು ಆ ಚಲಚ್ಚಿತ್ರದ ಹೆಸರು. 54ನೇ ಲಂಡನ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಈ ಚಲಚ್ಚಿತ್ರ ಅವಾರ್ಡ್ ಪಡೆದಿತ್ತು.

## ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್‌ಫಾಲುಲ್ ಅಹ್ಮದಿಯಾ ಸೌತ್ ಝೋನ್ ಕರ್ನಾಟಕದ ವಾರ್ಷಿಕ ಇಜ್ತಿಮಾ 2015

ಮಡಿಕೇರಿ: ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್‌ಫಾಲುಲ್ ಅಹ್ಮದಿಯಾ ಸೌತ್ ಝೋನ್ ಕರ್ನಾಟಕದ 11ನೇ ಇಜ್ತಿಮಾ ಮಡಿಕೇರಿಯ ಬೈತುಲ್ ಹುದಾ ಮಸ್‌ಜಿದ್‌ನಲ್ಲಿ ಮೇ ದಿನಾಂಕ 16 ಮತ್ತು 17ರಂದು ಜರಗಿತು. ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತದ ನಾಯಿಬ್‌ಸದರ್ ಮತ್ತು ದಕ್ಷಿಣ ಭಾರತದ ಇನ್‌ಚಾರ್ಜ್ ಆಗಿರುವ ಜನಾಬ್ ಮುಸವ್ವಿರ್ ಅಹ್ಮದ್ ಸಾಹೇಬರು ಕೇಂದ್ರ ಮಜ್ಲಿಸ್‌ನ ಪ್ರತಿನಿಧಿಯಾಗಿ ಭಾಗವಹಿಸಿದರು.

ಜನಾಬ್ ಮುಸವ್ವಿರ್ ಅಹ್ಮದ್ ಸಾಹೇಬರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಧ್ವಜಾರೋಹಣ ಮಾಡಿದ ಅನಂತರ ಪ್ರಾರ್ಥನೆ ಮಾಡಿದರು. ಅನಂತರ ಇಜ್ತಿಮಾ ಕಾರ್ಯಕ್ರಮಗಳು ಆರಂಭಗೊಂಡವು.

### ಪ್ರಥಮ ದಿನ 16-5-2015

ಜನಾಬ್ ಮುಸವ್ವಿರ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಉದ್ಘಾಟನೆಯ ಸಮಾರಂಭ ಪ್ರಾರಂಭವಾಯಿತು. ಮೌಲವಿ ಮುಹಮ್ಮದ್ ಸಾಲಿಹ್ ಸಾಹೇಬ್. ಮುಬಲ್ಲಿಗ್ ಮಡಿಕೇರಿ ಪವಿತ್ರ ಖುರ್‌ಆನ್ ತಿಲಾವತ್ ಮಾಡಿದರು ಮತ್ತು ಉರ್ದು ಭಾಷಾಂತರ ಓದಿದರು. ಜನಾಬ್ ಸಲೀಮ್ ಅಹ್ಮದ್ ಸಾಹೇಬ್ (ಮಂಗಳೂರು) ಕನ್ನಡ ಭಾಷಾಂತರ ಓದಿದರು. ಜನಾಬ್ ತಾಹಿರ್ ಅಹ್ಮದ್ ಸಾಹೇಬ್ ಉರ್ದು ಪದ್ಯ ಹಾಡಿದರು. ಜನಾಬ್ ಅಶ್ರಫ್‌ಖಾನ್ ಸಾಹೇಬ್ ಮುಅತಮಿದ್ ಖುದ್ದಾಮುಲ್ ಅಹ್ಮದಿಯಾ ಸ್ವಾಗತ ಭಾಷಣ ಮಾಡಿ ಅರ್ಧವಾರ್ಷಿಕ ವರದಿ ಓದಿದರು. ಅನಂತರ ಮುಸವ್ವಿರ್ ಅಹ್ಮದ್ ಸಾಹೇಬರು ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ ಅವರ ಸಂದೇಶ ಓದಿ ಹೇಳಿದರು ಮತ್ತು ಉಪದೇಶಗಳನ್ನು ನೀಡಿದರು. ಅನಂತರ ಜನಾಬ್ ಮುಹಮ್ಮದ್ ಕಲೀಮ್ ಖಾನ್ ಸಾಹೇಬ್ ಮುಬಲ್ಲಿಗ್ ಬೆಂಗಳೂರು ಭಾಷಣ ಮಾಡಿದರು. ಅನಂತರ ಮಾಜಿ ಝೋನಲ್ ಖಾಯಿದ್ ಮತ್ತು ಬೆಂಗಳೂರಿನ ಈಗಿನ ಅಮೀರರಾದ ಜನಾಬ್ ಮುಸದ್ದಿಖ್ ಅಹ್ಮದ್ ಸಾಹೇಬರು ಭಾಷಣ ಮಾಡಿದರು. ಕೊನೆಗೆ ಜನಾಬ್ ಎಂ. ಅಬ್ದುಸ್ಸಲಾಮ್ ಸಾಹೇಬ್ ಝೋನಲ್ ಖಾಯಿದ್ ಸೌತ್ ಝೋನ್ ಕರ್ನಾಟಕ ಭಾಷಣ ಮಾಡಿದರು. ಅನಂತರ ಉದ್ಘಾಟನೆಯ ಸಮಾರಂಭ ಸಮಾಪನಗೊಂಡಿತು.

ಆ ಬಳಿಕ ವಿವಿಧ ಸ್ಪರ್ಧೆಗಳು ಪ್ರಾರಂಭಗೊಂಡವು. ಇದರಲ್ಲಿ ಎಂಟು ಮಜ್ಲಿಸ್‌ಗಳು ಭಾಗವಹಿಸಿದುವು: ಬೆಂಗಳೂರು, ಮಂಗಳೂರು, ಮಡಿಕೇರಿ, ಶಿವಮೊಗ್ಗ, ಸೊರಬ, ಸಾಗರ, ಗೋಣಿಕೊಪ್ಪ ಮತ್ತು ಜಕ್ಕೂರು. ಕ್ವಿಝ್ ಕಾರ್ಯಕ್ರಮ ಮತ್ತು ಪ್ರಶ್ನೋತ್ತರ ಕಾರ್ಯಕ್ರಮಗಳು ಇದ್ದುವು.

### ದ್ವಿತೀಯ ದಿನ 17-5-2015

ದ್ವಿತೀಯ ದಿನ ನಮಾಝ್ ತಹಜ್ಜುದ್ ಮತ್ತು ನಮಾಝ್ ಫಜರ್‌ಗೆ ಮೌಲವಿ ಮುಹಮ್ಮದ್ ಸಾಲಿಹ್ ಸಾಹೇಬರು ನೇತೃತ್ವ ವಹಿಸಿದರು. ಅಂದು ಮಡಿಕೇರಿಯ ಮ್ಯಾನ್ಸ್ ಕಂಪೌಂಡಿನಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆದುವು.

## ವಾರ್ತೆಗಳು

### ಸಮಾರೋಪ ಸಮಾರಂಭ

ಎಲ್ಲ ಸ್ಪರ್ಧೆಗಳು ಮುಗಿತಾಯವಾದ ನಂತರ ಸಾಯಂಕಾಲ ಝೋನಲ್ ಇಜ್ತಿಮಾದ ಸಮಾರೋಪ ಸಮಾರಂಭ ಮಡಿಕೇರಿಯ ಜಮಾಅತ್ ಅಹ್ಮದಿಯಾ ಅಧ್ಯಕ್ಷ ಜನಾಬ್ ವಸೀಮ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಸಲೀಮ್ ಅಹ್ಮದ್ ಸಾಹೇಬರು ಪವಿತ್ರ ಖುರ್‌ಆನ್ ಪಠಿಸಿ ಕನ್ನಡ ಭಾಷಾಂತರ ಓದಿದರು. ಬಾಲಕ ಹಿಸಾಮುದ್ದೀನದ ಉರ್ದು ಪದ್ಯ ಹಾಡಿದನು.

ಪ್ರಥಮ ಭಾಷಣ ಜನಾಬ್ ವಸೀಮ್ ಅಹ್ಮದ್ ಸಾಹೇಬರು ಮಾಡಿದರು. ಅನಂತರ ಜನಾಬ್ ಮುಸವ್ವಿರ್ ಅಹ್ಮದ್ ಸಾಹೇಬರು ಭಾಷಣ ಮಾಡಿದರು. ಕೊನೆಗೆ ಮಡಿಕೇರಿಯ ಖಾಯಿದ್ ಜನಾಬ್ ಜೆ. ಎಂ. ಶರೀಫ್ ಸಾಹೇಬರು ಕೃತಜ್ಞತೆಗಳನ್ನು ಅರ್ಪಿಸಿದರು. ಅನಂತರ ಸ್ಪರ್ಧೆಯ ವಿಜೇತರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು.

## ಅಹ್ಮದಿಯಾ ಮಹಿಳಾ ಶಾಂತಿ ಸಮ್ಮೇಳನ

ಶಿವಮೊಗ್ಗ: ಕಳೆದ ಮೇ ೩೦ರಂದು ಅಹ್ಮದಿಯಾ ಮಹಿಳಾ ಸಂಘ "ಲಜ್‌ನಾ ಇಮಾಇಲ್ಲಾಹ್" ವತಿಯಿಂದ ಅಂಬೇಡ್ಕರ್ ಭವನದಲ್ಲಿ ಶಾಂತಿ ಸಮ್ಮೇಳನ ಜರಗಿತು. ಹಾಜಿರ ಮನ್‌ಸೂರ ಸಾಹಿಬ ಅಧ್ಯಕ್ಷತೆ ವಹಿಸಿದರು. ಅಮತುಲ್ ಹಫೀಝ್ ಸಾಹಿಬ (ಜಿಲ್ಲಾಧ್ಯಕ್ಷೆ ಲಜ್ನಾ ಇಮಾಇಲ್ಲಾಹ್ ಶಿವಮೊಗ್ಗ) ಉಪಸ್ಥಿತರಿದ್ದರು. ಖುರ್‌ಆನ್ ಪಠನದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಮುಖ್ಯ ಅತಿಥಿ ಶ್ರೀಮತಿ ಶಾರದ ಪೂರ್ಯ (MLA) ಮಾತನಾಡಿ, ಪ್ರತಿಯೊಂದು ಧರ್ಮದವರು ಮಾನವೀಯತೆಗೆ ಬೆಲೆಕೊಡಬೇಕೆಂದು ಹೇಳಿದರು. ಅಹ್ಮದಿಯಾ ಸಂಘಟನೆಯ ಮಹಿಳಾ ಸಂಘ ಶಾಂತಿಗೋಸ್ಕರ ಪ್ರಯತ್ನಿಸುವುದನ್ನು ಅವರು ಶ್ಲಾಘಿಸಿದರು.

ಶಾಂತಿ ಕಾಪಾಡಲು ಪರಸ್ಪರ ಧರ್ಮಗಳನ್ನು ಗೌರವಿಸಬೇಕೆಂದೂ ಹಿಂಸೆಯನ್ನು ತ್ಯಜಿಸಬೇಕೆಂದೂ ಶ್ರೀಮತಿ ಶಾರದ ಗೋಪಲ್ ಹೇಳಿದರು. ಮುಸ್ಲಿಂ ಮಹಿಳೆಯರು ಇಂತಹ ಸಮ್ಮೇಳನವನ್ನು ಏರ್ಪಡಿಸಿ ಸಿಖ್ಖ್ ಧರ್ಮದ ಬಗ್ಗೆ ಮಾತನಾಡುವುದನ್ನು ನೋಡಿ ತನಗೆ ಆಶ್ಚರ್ಯವಾಯಿತೆಂದು ಶ್ರೀಮತಿ ಜಗದೀಶ್ ಕೌರ್ ಹೇಳಿದರು. ಶ್ರೀಮತಿ ಪೂರ್ಣಿಮ ಅಶೋಕ್ "ಜೈನಧರ್ಮದಲ್ಲಿ ಶಾಂತಿ"ಯ ಕುರಿತು ಮಾತನಾಡಿದರು. ಶ್ರೀಮತಿ ಶುಭ ಕೆರ್ಲ್‌ಕಾರ್ ಭಗವದ್ಗೀತೆ ಮತ್ತು ಹಿಂದೂ ಧರ್ಮದ ಬಗ್ಗೆ ಮಾತನಾಡಿದರು. ಶಫೀಖ ಸುಲ್ತಾನ ಸಾಹಿಬ ಇಸ್ಲಾಮ್ ಧರ್ಮದಲ್ಲಿ ಮಹಿಳೆಯರ ಸ್ಥಾನಮಾನ ಮತ್ತು ಹಕ್ಕುಗಳ ಕುರಿತು ಮಾತನಾಡಿದರು. ಶ್ರೀಮತಿ ಎಲಿಝಬೆತ್ ಸತ್ಯ ಬಾಬು "ಕ್ರೈಸ್ತ ಧರ್ಮದಲ್ಲಿ ಶಾಂತಿ"ಯ ಬಗ್ಗೆ ಮಾತನಾಡಿದರು. ಪರಸ್ಪರ ಗೌರವಾದರಗಳನ್ನು ಪ್ರಕಟಿಸಬೇಕೆಂದೂ ಪರಮತ ಸಹಿಷ್ಣುತೆ ತೋರ್ಪಡಿಸಬೇಕೆಂದೂ ಅವರು ಹೇಳಿದರು. ರಝಿಯಾ ಶರೀಫ್ ಸಾಹಿಬ ಇಸ್ಲಾಮಿನಲ್ಲಿ ಮಹಿಳೆಯ ಪಾತ್ರದ ಕುರಿತು ಮಾತನಾಡಿದರು. ಅಮತುಲ್ ಹಫೀಝ್ ಸಾಹಿಬ ಮುಹಮ್ಮದ್ ಪೈಗಂಬರರ(ಸ) ಆದರ್ಶ ಜೀವನದ ಬಗ್ಗೆ ಮಾತನಾಡಿದರು. ಸಭಾಧ್ಯಕ್ಷೆ ಹಾಜಿರ ಮನ್ಸೂರಾ ಸಾಹಿಬ, ಇಸ್ಲಾಂ ಧರ್ಮದ ತತ್ವಗಳನ್ನು ಪ್ರತಿಪಾದಿಸುತ್ತಾ, ಸ್ವದೇಶವನ್ನು ಪ್ರೀತಿಸಬೇಕೆಂದೂ ಎಲ್ಲ ಧರ್ಮಗಳನ್ನು ಗೌರವಿಸಬೇಕೆಂದೂ ಹಾಗಿದ್ದರೆ ಮಾತ್ರ ಒಂದು ಬಲಿಷ್ಠ ರಾಷ್ಟ್ರವನ್ನು ಕಟ್ಟಲು ಸಾಧ್ಯವಾಗುವುದೆಂದೂ ಹೇಳಿದರು.

ಅಮತುಲ್ ರಹೀಂ ಮಝ್‌ಹರ್ ಸಾಹಿಬ ಅತಿಥಿಗಳಿಗೆ ಸ್ಮರಣಿಕೆಗಳನ್ನು ನೀಡಿದರು ಮತ್ತು ಕೃತಜ್ಞತೆ ಸಲ್ಲಿಸಿದರು. ಕೊನೆಗೆ ಸಭಾಧ್ಯಕ್ಷೆಯ ನೇತೃತ್ವದಲ್ಲಿ ಮೌನ ಪ್ರಾರ್ಥನೆ ಮಾಡಲಾಯಿತು.

೩೩ ಭಾಷೆಗಳಲ್ಲಿರುವ ಖುರ್‌ಆನ್ ಅನುವಾದ ಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಪುಸ್ತಕ ಮಳಿಗೆಯನ್ನು ತೆರೆಯಲಾಗಿತ್ತು.


**ಯುಗರಶ್ಮಿಗೆ ಚಂದಾದಾರರಾಗಿರಿ**

*ಬಿಡಿ ಪ್ರತಿ : ರೂ. 15/- ವಾರ್ಷಿಕ ಚಂದಾ : ರೂ. 60/- ಅಂಚೆ ಮೂಲಕ : ರೂ. 70/*

*ಸಂಪರ್ಕಿಸಿರಿ :* **9900410789**

## ನಿಧನ ವಾರ್ತೆಗಳು

### ಜ। ಮುಹಮ್ಮದ್ ಅಝ್‌ಮತುಲ್ಲಾಹ್ ಖುರೈಶಿ ಸಾಹಿಬ್



ಬೆಂಗಳೂರು: ಮೂಲತಃ ತುಮಕೂರಿನ ಗುಬ್ಬಿಯವರಾದ ಜನಾಬ್ ಮುಹಮ್ಮದ್ ಅಝ್‌ಮತುಲ್ಲಾಹ್ ಖುರೈಶಿ ಸಾಹಿಬ್ 9–2–2015ರಂದು ಬೆಂಗಳೂರಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಅವರಿಗೆ 71 ವರ್ಷ ಪ್ರಾಯವಾಗಿತ್ತು. ಅವರು 1918ರಲ್ಲಿ ಅಹ್ಮದಿಯತ್ ಸ್ವೀಕರಿಸಿದರು. 1989ರಲ್ಲಿ ಬೆಂಗಳೂರಿನಲ್ಲಿ ಜರಗಿದ "ಅಹ್ಮದಿಯಾ ಶತಾಬ್ದ ಜೂಬಿಲಿ" ಸಮ್ಮೇಳನದ ನೇತೃತ್ವವನ್ನು ತಬ್ಲೀಗ್ ಸೆಕ್ರೆಟರಿ ಎಂಬ ನೆಲೆಯಲ್ಲಿ ಅವರು ವಹಿಸಿದ್ದರು. ಅವರ ಮುಖಾಂತರ ಹಲವರು ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.

ಬೆಂಗಳೂರು, ಶಿವಮೊಗ್ಗ, ಹೈದರಾಬಾದ್ ಮೊದಲಾದ ಕಡೆಗಳಲ್ಲಿ ಉರ್ದು ದಿನಪತ್ರಿಕೆಗಳಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ಪ್ರಕಟವಾದ ಲೇಖನಗಳಿಗೆ ಅವರು ಅಹ್ಮದಿಯಾ ಜಮಾಅತಿನ ಉರ್ದು ಮುಖವಾಣಿಯಾದ "ಬದರ್"ನಲ್ಲಿ ಉತ್ತರ ನೀಡುತ್ತಿದ್ದರು. ಬೆಂಗಳೂರಿನ ಮೌಲವಿ ಮಿಫ್ತಾಹಿ ದೇವ್‌ಬಂದಿ ಸಾಹಿಬರಿಗೆ ಅವರು ನೀಡಿದ್ದ ಉತ್ತರವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಖಲೀಫತುಲ್ ಮಸೀಹ್ ರಾಬಿಅ್ ಅನುಮತಿ ನೀಡಿದ್ದರು.

ದೇಶದಾದ್ಯಂತ ರಾಜಕಾರಣಿಗಳಿಗೆ, ಧರ್ಮಾಧಿಕಾರಗಳಿಗೆ, ಗಣ್ಯ ವ್ಯಕ್ತಿಗಳಿಗೆ ಜಮಾಅತಿನ ಬಗ್ಗೆ ಕಿರುಲೇಖನಗಳನ್ನೂ ಪುಸ್ತಕಗಳನ್ನೂ ಸಿ.ಡಿ.ಗಳನ್ನೂ ಅವರು ಕಳುಹಿಸುತ್ತಿದ್ದರು.

ಅಲ್ಲಾಹನು ಮೃತರಿಗೆ ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ– ಆಮೀನ್.

### ಜ। ಪಿ. ಅಹ್ಮದ್ ಶರೀಫ್ ಸಾಹಿಬ್

ಕಾಟಿಪಳ್ಳ: ಕಾಟಿಪಳ್ಳ ನಿವಾಸಿ ಜನಾಬ್ ಪಿ. ಅಹ್ಮದ್ ಶರೀಫ್ ಸಾಹಿಬರು 29–4–2015ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್") ಅವರಿಗೆ ಸುಮಾರು 69 ವರ್ಷ ಪ್ರಾಯವಾಗಿತ್ತು.


1979ರಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಮಂಗಳೂರು ಘಟಕವು, ಮಂಗಳೂರು ನೆಹರೂ ಮೈದಾನದಲ್ಲಿ ಏರ್ಪಡಿಸಲ್ಪಟ್ಟಿದ್ದ ಎಕ್ಸಿಬಿಷನ್‌ನಲ್ಲಿ ಪುಸ್ತಕ ಮಳಿಗೆಯನ್ನು ತೆರೆದಿತ್ತು. ಪುಸ್ತಕ ಮಳಿಗೆಯಿಂದ ಅಹ್ಮದಿಯಾ ಜಮಾಅತಿನ ಬಗ್ಗೆ ತಿಳಿದ ಶರೀಫ್ ಸಾಹೇಬರು ಹಲವು ವರ್ಷಗಳ ಕಾಲ ಅಧ್ಯಯನ ಮಾಡಿ 1995ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದರು. ತನ್ನ ಬಂಧು ಮಿತ್ರಾದಿಗಳಿಗೆ ಅಹ್ಮದಿಯತಿನ ಸಂದೇಶವನ್ನು ತಲಪಿಸುವುದರಲ್ಲಿ ಅವರು ಉತ್ಸುಕರಾಗಿದ್ದರು.

ಅವರು ತಾಯಿ, ಪತ್ನಿ, ಈರ್ವರು ಪುತ್ರರನ್ನೂ ಅನೇಕ ಬಂಧುಗಳನ್ನೂ ಅಗಲಿದ್ದಾರೆ. ಮೃತರಿಗೆ ಅಲ್ಲಾಹನು ಮಗ್ಫಿರತನ್ನೂ ಜನ್ನತನ್ನೂ ಕರುಣಿಸಲಿ – ಆಮೀನ್.

## ಈ ವಿಶೇಷ ಸಂಚಿಕೆಯನ್ನು ಪ್ರಕಟಿಸಲು ಸಹಾಯಧನ ನೀಡಿದ ಉದಾರಮತಿಗಳು

| | |
|---|---|
| ಜನಾಬ್ ಯು. ಎಸ್. ಮಾಹಿನ್ ಕುಞ್ಞಿ ಸಾಹಿಬ್, ಮಂಜೇಶ್ವರ | ರೂ. 3,000/- |
| ಜನಾಬ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಗೋಣಿ | ರೂ. 1,000/- |
| ಜನಾಬ್ ಕೆ. ಎಂ. ಉಮರ್ ಸಾಹಿಬ್, ಮಡಿಕೇರಿ | ರೂ. 1,000/- |

# ಸಜ್ಜನರ ಸಂಗಾತಿ "ಯುಗರಶ್ಮಿ"



★ ಕೆ. ಎಂ. ಉಮರ್
ಮಡಿಕೇರಿ.

ಸತ್ಯ ಮಹ್‌ದಿಯ ಸಂದೇಶವನ್ನು
ಸಾರುತ ಹುಟ್ಟಿತು ಯುಗರಶ್ಮಿ
ಸಾವಿರ ಪ್ರಶ್ನೆಗೆ ಉತ್ತರ ನೀಡುತ
ಸಾಗಿತು ಬರದಲಿ ಯುಗರಶ್ಮಿ

ಭಾರತ ಮಾತೆಯ ದಕ್ಷಿಣಕನ್ನಡ
ಕಡಲಿನ ತೀರದ ಮಂಗಳೂರು
ನಲವತ್ತು ವರ್ಷದ ಹಿಂದೆ ಉದಿಸಿತು
ಭಾಗ್ಯದ ಪತ್ರಿಕೆ ಯುಗರಶ್ಮಿ

ಪವಿತ್ರ ದೀನಿನ ಸುಂದರ ರೂಪವ
ಹೊರಹೊಮ್ಮಿಸಲು ಯುಗರಶ್ಮಿ
ಪವಿತ್ರ ಖುರ್‌ಆನ್ ಘನತೆಯ ತೋರಲು
ಶ್ರಮಿಸುತ ಬಂದಿದೆ ಯುಗರಶ್ಮಿ

ಮೂಢನಂಬಿಕೆ ಮಟ್ಟ ಹಾಕುತಲಿ
ನೇರ ಮಾರ್ಗವನು ತೋರಿಸುತ
ಮಾನವ ಮೈತ್ರಿಯ ಸಾರುತ ಬಂದಿದೆ
ನೆಚ್ಚಿನ ಪತ್ರಿಕೆ ಯುಗರಶ್ಮಿ

ಉಗ್ರರು ಎಂದರೆ ಮುಸ್ಲಿಮರಲ್ಲ
ಇಸ್ಲಾಮಿಗೆ ಅದು ಬಲುದೂರ
ಉತ್ತಮ ಶಿಷ್ಯರ ಸಾಲಿಗೆ ಜನರನು
ಕರೆಯುತ ಬಂದಿದೆ ಯುಗರಶ್ಮಿ

ಪ್ರೀತಿಯು ಇರುವುದು ಎಲ್ಲರ ಜೊತೆಯಲಿ
ದ್ವೇಷವು ಇಲ್ಲ ಯಾರಲ್ಲೂ
ಪ್ರೀತಿಗೆ ಪಾತ್ರರ ನುಡಿಗಳ ಬಿತ್ತಿದೆ
ಕನ್ನಡ ನಾಡಿಗೆ ಯುಗರಶ್ಮಿ

ಇಸ್ಲಾಂ ಧರ್ಮದ ಘನತೆಯನ್ನೆತ್ತಿ
ಸಾಗಿದೆ ಕನ್ನಡ ಮನೆಮನೆಗೆ
ಇಸ್ಲಾಂ ಧರ್ಮದ ಸುಂದರ ರೂಪವ
ತೋರಿಸಿಕೊಟ್ಟಿದೆ ಯುಗರಶ್ಮಿ

ವಿರೋಧದ ಅಲೆಗಳು ಅಪ್ಪಳಿಸಿದರೂ
ಎದೆಗುಂದದೆಯೇ ಮುಂದಕ್ಕೆ
ವೀರಾವೇಶದಿ ಸಾಗಿದೆ ನಮ್ಮ
ಪ್ರೀತಿಯ ಪತ್ರಿಕೆ ಯುಗರಶ್ಮಿ

ಕೋಟಿ ಗಣ್ಯರ ಮೆಚ್ಚಿಗೆ ಪಡೆಯುತ
ಮಾಡಿದೆ ದೀನಿನ ಸೇವೆಯನು
ಕೊರಗಲಿ ದುರ್ಜನರೆಲ್ಲರೂ ಸೇರಿ
ಲೆಕ್ಕಿಸದಿರು ನೀ ಯುಗರಶ್ಮಿ

ಪಶ್ಚಿಮ ಸೂರ್ಯನ ಕಿರಣವ ಚೆಲ್ಲಿದೆ
ಕನ್ನಡ ನಾಡಿನ ಜನರೆಡೆಗೆ
ಶಾಂತಿಯ ಸಂದೇಶ ಸಾರುತ ಸಾಗಿದೆ
ಸಜ್ಜನ ಸಂಗಾತಿ ಯುಗರಶ್ಮಿ

ಜಾತಿ ಭೇದಗಳ ಭೀತಿಯನಳಿಸುತ
ನೀತಿ ಮಾರ್ಗವನು ತೋರುತಲಿ
ಮೈತ್ರಿಯ ಸಾರಿದೆ ನಾಡಿನ ಜನಕೆ
ಹೆಮ್ಮೆಯ ಪತ್ರಿಕೆ ಯುಗರಶ್ಮಿ

ಪದ್ಯವ ಗದ್ಯವ ಇಸ್ಲಾಂ ಪಾಠವ
ಹರಡಿದೆ ಜನರೆಡೆ ಯುಗರಶ್ಮಿ
ಗುಡುಗಿನ ರೂಪದಿ ಬಂದ ವಿರೋಧಕೆ
ಉತ್ತರ ನೀಡಿದೆ ಯುಗರಶ್ಮಿ

ಮುಂದೆ ಸಾಗಲಿ ಮಹ್‌ದಿಯ ಸಂದೇಶ
ಲೋಕದ ಜನರ ಮನೆಮನೆಗೆ
ವಿಜಯದ ಕಾಲವು ಹತ್ತಿರ ಬಂದಿದೆ
ಎದೆಗುಂದದಿರು ನೀ ಯುಗರಶ್ಮಿ

ಸಜ್ಜನ ಕೂಟದ ಪ್ರಾರ್ಥನೆ ನಿನಗಿದೆ
ಪ್ರೋತ್ಸಾಹದ ಜೊತೆ ಬೆಂಬಲವೂ
ಮಹ್‌ದಿ ಮಸೀಹರ ಸಂದೇಶ ಸಾರಲು
ನಿನ್ನೊಡನಿರುವುದು ಓ ಯುಗರಶ್ಮಿ.

## ಓದಿದ್ದು

### ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮಿತಿ ಇದೆಯೆಂದು ಪೋಪ್

ಮನಿಲ: ಯಾರನ್ನೂ ಪ್ರಕೋಪಿಸಬಾರದೆಂದೂ ಅನ್ಯರ ನಂಬಿಕೆಯನ್ನು ಆಕ್ಷೇಪಿಸುವುದಾಗಲೀ ಅವಹೇಳಿಸುವುದಾಗಲೀ ಮಾಡಬಾರದೆಂದೂ ಪೋಪ್ ಫ್ರಾನ್ಸಿಸ್ ಹೇಳಿದರು. ಎಲ್ಲ ಧರ್ಮಗಳಿಗೆ ಮಾನ್ಯತೆ ಉಂಟೆಂದೂ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಮಿತಿ ಇದೆಯೆಂದೂ ಅವರು ನುಡಿದರು.

ಫ್ರೆಂಚ್ ವಾರಪತ್ರಿಕೆ ಚಾರ್ಲಿ ಹೆಬ್ಡೋ ವಿರುದ್ಧ ಧಾಳಿ ಕುರಿತು ಅವರು ಪ್ರತಿಕ್ರಿಯಿಸುತ್ತಿದ್ದರು. ಸ್ನೇಹಿತನೂ ಸಹಾಯಕನೂ ಆದ ಆಲ್‌ಬೆರ್ಟೋ ಗ್ಯಾಸ್ಪರಿ ತನ್ನ ತಾಯಿಯನ್ನು ಬೈದರೆ ಅವರಿಗೆ ಪೆಟ್ಟು ಕೊಡುವೆನೆಂದೂ ಅದು ಸಾಮಾನ್ಯವೆಂದೂ ಧಾಳಿಯ ಕುರಿತು ಪೋಪ್ ಉದಾಹರಣೆಯಾಗಿ ಹೇಳಿದರು.

ಪೋಪರ ಪ್ರತಿಕ್ರಿಯೆಯನ್ನು ಮಾಧ್ಯಮಗಳು ಚರ್ಚೆ ಮಾಡುವಾಗ ವೆಟಿಕನ್ ವಿಶದೀಕರಣ ನೀಡಿತು. ಚಾರ್ಲಿಹೆಬ್ಡೋ ವಿರುದ್ಧ ಉಂಟಾದ ಧಾಳಿಯನ್ನು ಪೋಪ್ ಸಮರ್ಥಿಸಿದ್ದಲ್ಲವೆಂದು ವೆಟಿಕನ್ ಹೇಳಿಕೆ ನೀಡಿತು.

(ಮಾತೃಭೂಮಿ 17-1-2015)

### ಶಾಲೆಯಲ್ಲಿ ಮಕ್ಕಳ ಕೊರತೆ: ಹೆಚ್ಚು ಮಕ್ಕಳ ಹೆರಲು ಸಲಹೆ

ಒಂದೆಡೆ ಹೇಗಾದರೂ ಮಾಡಿ ಜನಸಂಖ್ಯೆಯನ್ನು ಕಡಿಮೆ ಮಾಡಬೇಕು ಎಂದು ಭಾರತ ಸೇರಿದಂತೆ ಅನೇಕ ರಾಷ್ಟ್ರಗಳು ಒದ್ದಾಡುತ್ತಿದ್ದರೆ, ಇನ್ನೊಂದೆಡೆ ಡೆನ್ಮಾರ್ಕ್‌ನ ನಗರವೊಂದರ ಸ್ಥಳೀಯಾಡಳಿತ ಮಾತ್ರ ಇದಕ್ಕೆ ವ್ಯತಿರಿಕ್ತವೆಂಬಂತೆ ಹೇಳಿಕೆ ನೀಡಿದೆ. ಅಷ್ಟು ಮಾತ್ರವಲ್ಲದೇ ಸಂತತಿ ಹೆಚ್ಚಿಸಲು ಹೆಚ್ಚೆಚ್ಚು ಸಂಭೋಗ ನಡೆಸಿ ಸಾಧ್ಯವಿದ್ದಷ್ಟೂ ಹೆಚ್ಚು ಮಕ್ಕಳನ್ನು ಹಡೆಯಿರಿ ಎಂದು ಕರೆ ಕೊಟ್ಟಿದೆ. ಇದಕ್ಕೆ ಕಾರಣವೆಂದರೆ ತಿಸ್ಟೆಡ್ ನಗರದ ಶಾಲೆಗಳು, ನರ್ಸರಿಗಳು ಹೀಗೆ ಅಲ್ಲಿ ಎಲ್ಲಿ ನೋಡಿದರೂ ಮಕ್ಕಳ ಕೊರತೆ ಎದ್ದು ಕಾಣುತಿದೆಯಂತೆ. ಕಾರಣ ನಗರದಲ್ಲಿ ಮಕ್ಕಳ ಜನನ ಪ್ರಮಾಣ ಭಾರೀ ಪ್ರಮಾಣದಲ್ಲಿ ಇಳಿಮುಖವಾಗಿರುವುದು. ಹೀಗೆ ಆದರೆ ಶಾಲೆಗಳನ್ನು ಮುಚ್ಚಬೇಕಾಗುತ್ತದೆ ಎಂಬ ಭೀತಿ ಕಾಡತೊಡಗಿದೆ. ಯುರೋಪ್‌ನ ಇತರ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ಡೆನ್ಮಾರ್ಕ್‌ನಲ್ಲಿ ಜನನ ಪ್ರಮಾಣ ಕಡಿಮೆ ಇದೆ. ತಿಸ್ಟೆಡ್ ನಗರದಲ್ಲಿ ಈ ಪ್ರಮಾಣ ಮತ್ತೂ ಕಡಿಮೆ ಇದೆ. ಹೀಗಾಗಿ ಮಕ್ಕಳ ಸಂಖ್ಯೆ ಹೆಚ್ಚಿಸುವ ಸಲುವಾಗಿ ಹೆಚ್ಚೆಚ್ಚು ಲೈಂಗಿಕಕ್ರಿಯೆಯಲ್ಲಿ ತೊಡಗುವಂತೆ ಸೂಚಿಸಿದೆ.

(ಉದಯವಾಣಿ 1-2-2015)

### ಮುಸ್ಲಿಮರ ಸೃಷ್ಟಿಸಿದ್ದು ಶಿವ, ಪಾರ್ವತಿ: ಮೌಲ್ವಿ ವಿವಾದ

ಅಯೋಧ್ಯೆ, ಫೆ. 19: 'ಹಿಂದೂಗಳ ಆರಾಧ್ಯ ದೈವವಾಗಿರುವ ಈಶ್ವರ ಮುಸ್ಲಿಮರ ಮೊದಲ ಧರ್ಮಗುರು. ಮುಸ್ಲಿಮರು ಸನಾತನ ಧರ್ಮದ ಅನುಯಾಯಿಗಳು. ಶಿವ ಹಾಗೂ ಪಾರ್ವತಿಯೇ ಮುಸ್ಲಿಮರ ಸೃಷ್ಟಿಕರ್ತರು ಎಂದು ಅಯೋಧ್ಯೆಯ ಜಮಿಯತ್ ಉಲೇಮಾದ ಮುಫ್ತಿಯಾಗಿರುವ ಮುಹಮ್ಮದ್ ಇಲಿಯಾಸ್ ಹೇಳಿದ್ದಾರೆ.

ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಘೋಷಣೆ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಚೀನದಲ್ಲಿ ವಾಸಿಸುವವರನ್ನು ಚೀನಿಯರು ಎನ್ನುತ್ತಾರೆ. ಜಪಾನ್‌ನಲ್ಲಿರುವವರನ್ನು ಜಪಾನೀಯರು ಎನ್ನುತ್ತಾರೆ. ಹಾಗೆಯೇ ಹಿಂದುಸ್ಥಾನದಲ್ಲಿ ವಾಸಿಸುತ್ತಿರುವ ನಮ್ಮನ್ನು ಹಿಂದುಸ್ಥಾನಿಗಳು ಎನ್ನಲಾಗುತ್ತದೆ ಎಂದು ತಿಳಿಸಿದ್ದಾರೆ. ಇದೇ ವೇಳೆ, ಜಮಿಯತ್ ಉಲೇಮಾದ ನಿಯೋಗ ಅಯೋಧ್ಯೆಗೆ ತೆರಳಿ ಫೆ.27ರಂದು ಬಲರಾಮಪುರದಲ್ಲಿ ನಡೆಯಲಿರುವ ಕೋಮುಸೌಹಾರ್ದ ಸಮ್ಮೇಳನಕ್ಕೆ ಸಂತರಿಗೆ ಆಹ್ವಾನ ನೀಡಿದೆ. ಇಲಿಯಾಸ್ ಹೇಳಿಕೆಯನ್ನು ಅನೇಕ ಮುಸ್ಲಿಂ ಸಂಘಟನೆಗಳು 'ಪ್ರಚಾರ ತಂತ್ರ' ಎಂದಿವೆ.

(ಉದಯವಾಣಿ 20-2-2015)

### ಇಸ್ಲಾಂ ವಿರುದ್ಧ ಸಮರ ಸಾರಿಲ್ಲ: ಒಬಾಮಾ

ವಾಷಿಂಗ್ಟನ್: ಇಸ್ಲಾಂ ವಿರುದ್ಧ ಅಮೆರಿಕ ಸಮರ ಸಾರಿಲ್ಲ ಎಂದು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಸ್ಪಷ್ಟಪಡಿಸಿದ್ದಾರೆ. ಆದರೆ ಧರ್ಮ ಭ್ರಷ್ಟರ ವಿರುದ್ಧದ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಸಾರಿದ್ದಾರೆ. ಐಸಿಸ್ ಮತ್ತು ಅಲ್‌ಕಾಯಿದಾದಂತಹ ಭಯೋತ್ಪಾದಕ ಸಂಘಟನೆಗಳ ಭೀತಿವಾದದ ಸಿದ್ಧಾಂತಗಳನ್ನು ಕೋಟ್ಯಂತರ ಮುಸ್ಲಿಮರು ತಿರಸ್ಕರಿಸಿದ್ದಾರೆ ಎಂದವರು ಇದೇ ವೇಳೆ ಸ್ಪಷ್ಟಪಡಿಸಿದ್ದಾರೆ.

(ಉದಯವಾಣಿ 20-2-2015)

## 'ಧರ್ಮಗ್ರಂಥ ರಾಷ್ಟ್ರ ಗ್ರಂಥವಾಗಲಾರದು'

ಭಗವದ್ಗೀತೆ ಕುರಿತಂತೆ ಮಾತನಾಡಿದ ನಿಡುಮಾ ಮಿಡಿ ಸ್ವಾಮೀಜಿ, ಧರ್ಮ ನಿರಪೇಕ್ಷವಾಗಿರುವ ಭಾರತದಲ್ಲಿ ಯಾವುದೇ ಒಂದು ಧರ್ಮದ ಗ್ರಂಥವನ್ನು ರಾಷ್ಟ್ರ ಗ್ರಂಥ ಎಂದು ಘೋಷಿಸುವುದು ಸಂವಿಧಾನ ಹಾಗೂ ಬಹುಸಂಸ್ಕೃತಿಗೆ ಮಾಡುವ ಅಪಚಾರ ಎಂದರು.

ರಾಷ್ಟ್ರದ ಪವಿತ್ರ ಗ್ರಂಥ ಕೇವಲ ಸಂವಿಧಾನ ಮಾತ್ರ. ವಾಸ್ತವವಾಗಿ ಗೀತೆ ಕ್ಷತ್ರಿಯ ಮೌಲ್ಯಗಳಿಂದ ರಚಿತವಾಗಿತ್ತು, ಬಹುಜನರ ಭಾವನೆಗಳನ್ನು ಗೌರವಿಸಲಾಗಿತ್ತು. ಆದರೆ ಅನಂತರದ ದಿನದಲ್ಲಿ ವೈದಿಕರು ತಮ್ಮ ಶ್ರೇಷ್ಠತೆಯ ವಿಚಾರಗಳನ್ನು ಸೇರಿಸಿ ತಮಗೆ ತಕ್ಕುದಾದ ರೀತಿಯಲ್ಲಿ ಮಾಡಿಕೊಂಡು ಬಹು ಜನರಿಗೆ ವಂಚನೆ ಮಾಡುವ ಕೆಲಸ ಮಾಡಿದ್ದಾರೆ. ವಸ್ತುನಿಷ್ಠ ವಿಚಾರಗಳಿಗಾಗಿ ಯಾವುದೇ ಗ್ರಂಥಗಳನ್ನು ಸುಡಬೇಕಾಗಿಲ್ಲ. ಅಂಧಜ್ಞಾನವನ್ನು ಸುಡಬೇಕಾಗಿದೆ. ಸುಡುವುದರಿಂದ ಯಾವುದೇ ಸಮಸ್ಯೆ ಬಗೆಹರಿಯದು, ಅದರ ಮಹತ್ವವೂ ಕುಗ್ಗದು ಎಂದರು.

(ಉದಯವಾಣಿ 25–2–2015)

## ಶಾಂತಿಯೊಂದಿಗೆ ಶಸ್ತ್ರವನ್ನೂ ಹಿಡಿಯಬೇಕಾದೀತು

ಗೋಹತ್ಯೆ, ಮತಾಂತರ, ಲವ್ ಜಿಹಾದ್ ಮುಂತಾದ ಹಲವು ಹೊಡೆತಗಳು ಹಿಂದೂ ಸಮಾಜದ ಮೇಲೆ ನಿರಂತರ ನಡೆಯುತ್ತಿವೆ. ಇದನ್ನು ಇಷ್ಟು ವರ್ಷಗಳ ಕಾಲ ಸಹಿಸುತ್ತಾ ಬಂದಿದ್ದೇವೆ. ಇನ್ನೂ ಶಾಂತಿಯ ಬದಲು ಸಂಘರ್ಷದ ಹಾದಿ ಹಿಡಿಯಬೇಕಾದೀತು. ಗೋಹತ್ಯೆ ವಿಚಾರ ಬಂದಾಗ ಹಿಂದೂಗಳು ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಗೋವು ಹಾಲು ನೀಡುವ ವರೆಗೆ ಅದನ್ನು ಸಾಕಿ ಬಳಿಕ ಕಟುಕರಿಗೆ ಮಾರುವ ಪ್ರವೃತ್ತಿ ಬಿಡಿ. ಗೋಮಾತೆಯನ್ನು ತಾಯಿಯಂತೆ ಪ್ರೀತಿಸಿ ಕಾಪಾಡಿ ಎಂದು ಸಾಧ್ವಿ ಬಾಲಿಕಾ ಸರಸ್ವತಿ ಹೇಳಿದರು.

ಸಾಧುಗಳು ಸಂಘರ್ಷಕ್ಕಿಳಿಯಬಾರದು ಎಂದು ಹೇಳುವ ಕಾಲ ಇದಲ್ಲ. ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸು ಎಂಬ ತತ್ವ ಪಾಲಿಸುತ್ತಾ ಬಂದ ನಾವು ನಿರಂತರ ಕೆನ್ನೆಗೆ ಹೊಡೆತ ತಿನ್ನುತ್ತಾ ಬಂದಿದ್ದೇವೆ. ಸಮಯ ಬಂದರೆ ಧರ್ಮರಕ್ಷಣೆ, ರಾಷ್ಟ್ರರಕ್ಷಣೆಗೆ ಬೇಕಾಗಿ ಸಾಧುಸಂತರು ಕೂಡ ಶಸ್ತ್ರ ಕೈಗೆತ್ತಿಕೊಳ್ಳಬೇಕಾದೀತು ಎಂದರು.

(ಉದಯವಾಣಿ 2–3–2015)

## ಭಗವದ್ಗೀತೆ ಜನಕ ದೇವರಲ್ಲ ಮನುಷ್ಯ

ಮೈಸೂರಿನ ಒಂದು ಸಭೆಯಲ್ಲಿ ಪ್ರೊ| ಭಗವಾನರು ಜಾತೀಯತೆ ಹಾಗೂ ಹಿಂಸೆ ಬೋಧಿಸುವ ಭಗವದ್ಗೀತೆ ಸುಡಬೇಕೆಂದು ಹೇಳಿದ್ದರ ವಿರುದ್ಧ ರಾಜ್ಯದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ಗೀತೆಯನ್ನು ಸುಡಬೇಕು ಎಂದು ಹೇಳುವುದರ ಬದಲಿಗೆ ಗೀತೆಯನ್ನು ಮೂಲದಲ್ಲಿ ಬರೆದದ್ದು ಯಾರು ಎಂದು ಸಂಶೋಧಕರ ಅಭಿಪ್ರಾಯ ಜಗಜ್ಜಾಹೀರಗೊಳಿಸಿದರೆ ಗೀತೆಯ ಬಗೆಗೆ ಜನರಲ್ಲಿರುವ ಪೂಜ್ಯ ಭಾವನೆ ಕಡಿಮೆಯಾಗಬಹುದು. ಆಗ ಗೀತೆಯಲ್ಲಿರುವ ಕೆಟ್ಟ ಅಂಶಗಳನ್ನು ಬಿಟ್ಟು ಕೇವಲ ಒಳ್ಳೆಯ ಅಂಶಗಳನ್ನು ಮಾತ್ರ ಜನರು ಸ್ವೀಕರಿಸುತ್ತಾರೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿ ನಿವೃತ್ತರಾಗಿರುವ 72 ವರ್ಷದ ಹಿರಿಯ ಸಂಶೋಧಕರಾದ ಡಾ| ಕೃಷ್ಣಾನಂದ ಹೆಗಡೆ ಎಂಬುವರು ಹದಿನೈದು ವರ್ಷಗಳ ಕಾಲ ಭಗವದ್ಗೀತೆಯ ರಚನೆಕಾರರ ಮೂಲದ ಬಗ್ಗೆ ಸಂಶೋಧನೆ ಮಾಡಿ ಪುರಾವೆ ಸಹಿತ ಸಂಶೋಧನಾ ಗ್ರಂಥ ಬರೆದು ಮಂಗಳೂರು ವಿವಿಯಿಂದ ಡಾಕ್ಟರೇಟ್ ಪಡೆದಿದ್ದಾರೆ. ಹೆಗಡೆಯವರ ಪ್ರಕಾರ ಭಗವದ್ಗೀತೆಯ 30ಕ್ಕೂ ಹೆಚ್ಚು ಲೇಖಕರು ಸುಮಾರು ಐನೂರು ವರ್ಷಗಳ ಕಾಲಾವಧಿಯಲ್ಲಿ ಸ್ವಲ್ಪಸ್ವಲ್ಪವೇ ಸಂಸ್ಕರಿಸಿ ಬರೆದಿರುವ ಕೃತಿಯಾಗಿದೆ. ಈ ಎಲ್ಲ ಲೇಖಕರು ವ್ಯಾಸ ಎಂದೇ ಕಾವ್ಯನಾಮ ಹೊಂದಿದ್ದು, ಈ ವ್ಯಾಸ ಎಂಬುದು ಯಾರದೇ ಒಬ್ಬರ ವೈಯಕ್ತಿಕ ಹೆಸರಾಗಿರದೇ ಅದು ಒಂದು ಪದವಿಯ ಹೆಸರಾಗಿತ್ತು ಹಾಗೂ ವ್ಯಾಸ ಎಂಬುದು ಈಗಿನ ಡೀನ್ ಅಥವಾ ಕುಲಪತಿ ಎಂಬ ಪದವಿಗೆ ಸಮಾನಾಗಿತ್ತು. ಮೊದಲನೆಯ ವ್ಯಾಸ ಅರ್ಥಾತ್ ವೇದವ್ಯಾಸರ ಹೆಸರು ದ್ವೈಪಾಯನ ಕೃಷ್ಣ ಎಂದಾಗಿತ್ತು. ಆದರೆ ಸಂಪೂರ್ಣ ಮಹಾಭಾರತ ಹಾಗೂ ಗೀತೆಯನ್ನು ಇವರೊಬ್ಬರೇ ಗಣಪತಿಗೆ ಹೇಳುತ್ತಾ ಹೋಗಿ ಬರೆಸಿದ್ದು ಎಂಬ ನಂಬಿಕೆ ಸರಿಯಲ್ಲ. ಅನೇಕ ವ್ಯಾಸರು ಅದರಲ್ಲಿ ತಮ್ಮ ಹೊಸ ವಿಚಾರಗಳನ್ನು ಸೇರಿಸುತ್ತಾ ಹಳೆಯದನ್ನು ಬದಲಿಸುತ್ತಾ ಹೋಗಿ ಸುಮಾರು ಕ್ರಿ.ಪೂ.500ರ ಹೊತ್ತಿಗೆ ಈಗಿನ ಆಕಾರಕ್ಕೆ ಹಾಗೂ ಪ್ರಮಾಣಕ್ಕೆ ತಂದರು. ಹಾಗಾಗಿ ಕೃಷ್ಣನಿಗೂ ಗೀತೆ ರಚನೆಗೂ ಸಂಬಂಧವೇ ಇಲ್ಲ ಎಂಬುದು ಹೆಗಡೆಯವರ ಅಭಿಪ್ರಾಯ. ಈ ಸತ್ಯ ಸಂಗತಿ ಜನರಿಗೆ ಒಮ್ಮೆ ಮನದಟ್ಟಾದರೆ ದೇವರಾದ ಕೃಷ್ಣನು ಯುದ್ಧ ಭೂಮಿಯಲ್ಲಿಯೇ ಅರ್ಜುನನಿಗೆ ಬೃಹತ್ ಗೀತೆಯನ್ನು ಬೋಧಿಸಿದ್ದು ಎಂಬ ಪೂಜ್ಯ ಭಾವನೆ ಹೋಗಿ ಧಾರ್ಮಿಕ ತೀವ್ರವಾದ ಕಡಿಮೆಯಾಗಬಹುದು. ದೇವರೇ ತಮ್ಮ ಧರ್ಮದ ಪವಿತ್ರ ಗ್ರಂಥಗಳನ್ನು ಪ್ರವಾದಿಗಳಿಗೆ ನೇರವಾಗಿ ಬಹಿರಂಗಪಡಿಸಿದ್ದು ಅಥವಾ ಸಂತರಿಗೆ ದಿವ್ಯವಾಣಿಯಿಂದ ಬೋಧಿಸಿದ್ದು ಎಂದು ಜಗತ್ತಿನಲ್ಲಿಯ ಹೆಚ್ಚಿನ ಧರ್ಮಗುರುಗಳು ತಮ್ಮ ಧರ್ಮಗ್ರಂಥಗಳ ಪರ ಕುರುಡಾಗಿ ವಾದಿಸುತ್ತಾರೆ. ಇದು ಸತ್ಯವೆಂದು ಎಲ್ಲ ಧರ್ಮಗಳ ಸಾಮಾನ್ಯ ಜನರ ಅಚಲ ನಂಬಿಕೆ. ಆದರೆ ಎಲ್ಲ ಧರ್ಮಗಳವರಿಗೆ ತಮ್ಮ ಈ ನಂಬಿಕೆ ಸುಳ್ಳು ಎಂದು ಒಮ್ಮೆ ಮನದಟ್ಟಾದರೆ ಜಗತ್ತಿನೆಲ್ಲೆಡೆ ಮತಾಂಧತೆ ಹೊರಟು ಹೋಗುವುದು ಖಂಡಿತ. ಜಗತ್ತಿನ

ಓದಿದ್ದು

ಎಲ್ಲ ಧರ್ಮಗಳನ್ನು ದೇವರೇ ಸ್ವತಃ ಬೋಧಿಸಿದ್ದರೆ ಅವನೇಕೆ ಸೃಷ್ಟಿ ಚಪ್ಪಟೆಯಾಗಿದೆ, ಸೂರ್ಯನೇ ಭೂಮಿಯ ಸುತ್ತ ತಿರುಗುತ್ತಾನೆ, ಭೂಮಿಯ ಕೊನೆಗೆ ಆಕಾಶ ಭೂಮಿ ಒಂದಾಗುತ್ತವೆ, ಚಂದ್ರನೂ ಒಂದು ಪೂರ್ಣ ಗ್ರಹ ಎಂದೆಲ್ಲಾ ತಪ್ಪಾಗಿ ಬೋಧಿಸುತ್ತಿದ್ದ? ಎಲ್ಲ ಧರ್ಮಗಳನ್ನು ದೇವರೇ ಬೋಧಿಸಿದ್ದರೆ ದೇಶದಿಂದ ದೇಶಕ್ಕೆ ಭಾಷೆ ಬೇರೆಯಾಗಿದ್ದರೂ ಅವುಗಳಲ್ಲಿಯ ಬೋಧನೆಗಳೆಲ್ಲಾ ಒಂದೇ ರೀತಿಯಾಗಿರುತ್ತಿದ್ದವು. ಈಗಿನಂತೆ ವೈರುಧ್ಯಗಳಿಂದ ಕೂಡಿರುತ್ತಿರಲಿಲ್ಲ. ಯಾಕೆಂದರೆ ಇಡೀ ಜಗತ್ತಿಗೆಲ್ಲ ದೇವರು ಒಬ್ಬನೇ ಹಾಗಾಗಿ ಅವನ ಬೋಧನೆ ಎಲ್ಲೆಡೆ ಒಂದೇ ರೀತಿಯಾಗಿರಲೇ ಬೇಕಿತ್ತು. ಅದು ಹಾಗಿಲ್ಲ ಎಂದ ಮೇಲೆ ಯಾವುದೇ ಧರ್ಮವನ್ನು ಅಥವಾ ಧಾರ್ಮಿಕ ಗ್ರಂಥವನ್ನು ದೇವರು ಸ್ವತಃ ಬೋಧಿಸಿದ್ದು ಎಂಬ ವಾದ ಸುಳ್ಳು ಎಂದು ರುಜುವಾತಾಗುತ್ತದೆ. ಎಲ್ಲಾ ಜಾತಿ ಧರ್ಮಗಳನ್ನು ಮಾನವನೇ ರಚಿಸಿದ್ದು ಹಾಗೂ ಎಲ್ಲಾ ಧಾರ್ಮಿಕ ಗ್ರಂಥಗಳನ್ನು ಮಾನವನೇ ಬರೆದಿದ್ದು ಎಂದು ಜನರಿಗೆ ಅರ್ಥವಾದರೆ ಅನಂತರ ಜಗತ್ತಿನ ಯಾವುದೇ ಧರ್ಮಗ್ರಂಥ ಸುಟ್ಟರೂ ಯಾರೊಬ್ಬರೂ ಆಕ್ಷೇಪಿಸುವುದಿಲ್ಲ!

ಪಿ. ಎಸ್. ಶೆಟ್ಟಿ, ಮಂಗಳೂರು, (ಉದಯವಾಣಿ 2-3-2015)

## ಈಜಿಪ್ಟ್: ಬ್ರದರ್‌ಹುಡ್ ಮುಖ್ಯಸ್ಥನಿಗೆ ಮರಣದಂಡನೆ ಘೋಷಣೆ

ಕೈರೋ, ಎ.11: ಮುಸ್ಲಿಂ ಬ್ರದರ್‌ಹುಡ್‌ನ ಮುಖ್ಯಸ್ಥ ಮುಹಮ್ಮದ್ ಬದಿ ಹಾಗೂ ಇತರ 11 ಮಂದಿ ಹಿರಿಯ ಕಾರ್ಯಕರ್ತರಿಗೆ ಈಜಿಪ್ಟ್‌ನ ನ್ಯಾಯಾಲಯವೊಂದು ಶನಿವಾರ ಮರಣ ದಂಡನೆ ಘೋಷಿಸಿದೆ.

ಮಾತ್ರವಲ್ಲದೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕ ಮೂಲದ ನಾಗರಿಕನೋರ್ವನಿಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ಪ್ರಕಟಿಸಿದೆ.

ಶಿಕ್ಷೆ ಘೋಷಿಸಲ್ಪಟ್ಟ ಎಲ್ಲರೂ ಈಗಾಗಲೇ ಈಜಿಪ್ಟ್ ಸರಕಾರ ಬಂಧಿಸಿರುವ ಸಾವಿರಾರು ಕೈದಿಗಳಲ್ಲಿ ಒಳಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

2013ರಲ್ಲಿ ಅಬ್ದುಲ್ ಫತಾಹ್ ಅಲ್ ಸಿಸ್ಸಿಯವರ ಸೇನಾ ನೇತೃತ್ವದಲ್ಲಿ ಆಗಿನ ಅಧ್ಯಕ್ಷ ಮುಹಮ್ಮದ್ ಮುರ್ಸಿಯವರನ್ನು ಪದಚ್ಯುತಗೊಳಿಸಿದ ಬಳಿಕ ರಾಷ್ಟ್ರದಲ್ಲಿ ನಡೆದಿದ್ದ ಭೀಕರ ಹಿಂಸಾಚಾರಕ್ಕೆ ಕಾರಣರಾಗಿರುವ ಆರೋಪದಡಿ ಈ ಶಿಕ್ಷೆ ಪ್ರಕಟಿಸಲಾಗಿದೆ.

ಮುಸ್ಲಿಂ ಬ್ರದರ್‌ಹುಡ್ ರಾಷ್ಟ್ರೀಯ ಭದ್ರತೆಗೆ ಒಂದು ಪ್ರಮುಖ ಬೆದರಿಕೆಯಾಗಿದೆ ಎಂದು ಈಜಿಪ್ಟ್‌ನ ಈಗಿನ ಅಧ್ಯಕ್ಷ ಸಿಸ್ಸಿ ಹೇಳಿದ್ದಾರೆ.

ರಾಷ್ಟ್ರದಲ್ಲಿ ಶಾಂತಿ ಸ್ಥಾಪನೆ ತನ್ನ ಉದ್ದೇಶವಾಗಿದೆ ಮತ್ತು ಹಿಂಸಾಚಾರಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ಇದೇ ವೇಳೆ ಮುಸ್ಲಿಂ ಬ್ರದರ್‌ಹುಡ್ ಹೇಳಿಕೊಂಡಿದೆ.

ಘೋಷಿತ ಶಿಕ್ಷೆಯನ್ನು ಪ್ರಶ್ನಿಸಿ ಈಜಿಪ್ಟ್‌ನ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಅಂತಿಮ ತೀರ್ಪು ಪ್ರಕಟಗೊಳ್ಳಲು ಕೆಲವು ವರ್ಷಗಳೇ ಬೇಕಾಗಬಹುದು ಎಂದು ಮೂಲಗಳು ತಿಳಿಸಿವೆ.

(ವಾರ್ತಾಭಾರತಿ 12-4-2015)

## ಗಾಂಧಿ ಬ್ರಿಟಿಷರ ಏಜೆಂಟ್:ಕಾಟ್ಜು

ಹೊಸದಿಲ್ಲಿ, ಮಾ. 10: ವಿವಾದಗಳ ಮೂಲಕವೇ ಸುದ್ದಿಯಲ್ಲಿರುವ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ, ಭಾರತೀಯ ಪತ್ರಿಕಾ ಮಂಡಳಿ ಮಾಜಿ ಅಧ್ಯಕ್ಷ ಮಾರ್ಕಂಡೇಯ ಕಾಟ್ಜು, ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರೊಬ್ಬ ಬ್ರಿಟಿಷ್ ಏಜೆಂಟ್ ಎಂದು ಟೀಕಿಸುವ ಬ್ಲಾಗ್ ಬರೆದಿದ್ದಾರೆ.

'ನನ್ನ ಈ ಬ್ಲಾಗ್ ಟೀಕೆಗೆ ಆಹಾರವಾಗಲಿದೆ. ಆದರೆ ಅದು ನನಗೆ ಮುಖ್ಯವಲ್ಲ. ನಾನು ಜನಪ್ರಿಯತೆ ಬಯಸುವವನೂ ಅಲ್ಲ' ಎಂದು ಹೇಳಿರುವ ಅವರು, ಗಾಂಧೀಜಿ ಬ್ರಿಟಿಷ್ ಏಜೆಂಟ್ ಎಂಬ ತನ್ನ ವಾದ ಸಮರ್ಥನೆಗೆ ಕೆಲವು ಕಾರಣಗಳನ್ನು ನೀಡಿದ್ದಾರೆ. ನ್ಯಾ| ಕಾಟ್ಜು ಅವರ ವಿವಾದಾತ್ಮಕ ಲೇಖನ justicekatju.blogspot.in ನಲ್ಲಿ ಲಭ್ಯವಿದೆ.

1. ನಾನೊಬ್ಬ ಸನಾತನಿ ಹಿಂದೂ, ವರ್ಣಾಶ್ರಮ ಧರ್ಮದಲ್ಲಿ ನನಗೆ ನಂಬಿಕೆ ಇದೆ, ಗೋವುಗಳ ಸಂರಕ್ಷಣೆ ಪರ ಇದ್ದೇನೆ ಎಂಬ ಮಾತುಗಳ ಮೂಲಕ ಹಲವು ದಶಕಗಳ ಕಾಲ ರಾಜಕಾರಣದಲ್ಲಿ ಧರ್ಮವನ್ನು ಗಾಂಧಿ ಬೆರೆಸಿದರು. ತನ್ಮೂಲಕ ಬ್ರಿಟಿಷರ ಒಡೆದು ಆಳುವ ನೀತಿಗೆ ಮತ್ತಷ್ಟು ಬಲ ತಂದುಕೊಟ್ಟರು.

2. ಭಗತ್ ಸಿಂಗ್, ಆಜಾದ್‌ರಂಥವರು ಬ್ರಿಟಿಷರ ವಿರುದ್ಧ ಕ್ರಾಂತಿಕಾರಿ ಹೋರಾಟ ಆರಂಭಿಸಿದರು. ಆದರೆ ಗಾಂಧಿ ಅವರು ಈ ಹೋರಾಟವನ್ನು ಸತ್ಯಾಗ್ರಹದತ್ತ ತಿರುಗಿಸಿಬಿಟ್ಟರು.

3. ಸ್ವಾವಲಂಬಿ ಗ್ರಾಮ ಸಮಿತಿಗಳನ್ನು ಗಾಂಧಿ ಪ್ರತಿಪಾದಿಸಿದರು. ಆದರೆ ಅಂತಹ ಸಮಿತಿಗಳು ಸಂಪೂರ್ಣ ಜಾತಿಮಯವಾಗಿದ್ದವು. ಭೂಮಾಲೀಕರು ಹಾಗೂ ದುಡ್ಡಿನ ದಣಿಗಳ ಬಳಿ ಇದ್ದವು ಎಂಬುದು ಎಲ್ಲರಿಗೂ ಗೊತ್ತಿತ್ತು. ಗಾಂಧೀಜಿ ಕೈಗಾರೀಕರಣದ ವಿರುದ್ಧವಿದ್ದರು. ಹೀಗಾಗಿ ಚರಕದ ಬಗ್ಗೆ ಬೋಧನೆ ಮಾಡಿದರು. ಇದು ಅಸಂಬದ್ಧ.

(ಉದಯವಾಣಿ 11-3-2015)

ಓದಿದ್ದು

## ಹೃದಯ ಸಮಸ್ಯೆ: ಬೆನ್ನಿ ಹಿನ್ ಆಸ್ಪತ್ರೆಗೆ ದಾಖಲು

ವಾಷ್ಟಿಂಗನ್: ಹೀಲಿಂಗ್‌ನಿಂದ ಕಾಯಿಲೆ ಗುಣಪಡಿಸುವ ಮಾಂತ್ರಿಕ ಶಕ್ತಿ ಇದೆ ಎಂದು ಹೇಳಿಕೊಳ್ಳುವ ಸ್ವಯಂಘೋಷಿತ ದೇವಮಾನವ ಬೆನ್ನಿ ಹಿನ್ ಅವರನ್ನು ಹೃದಯ ಸಮಸ್ಯೆಯ ಕಾರಣ ಕ್ಯಾಲಿಫೋರ್ನಿಯಾದ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ. ಅವರ ಹೃದಯ ಬಡಿತದಲ್ಲಿ ಏರಿಳಿತ ಕಂಡು ಬರುತ್ತಿದ್ದು, ಆಮ್ಲಜನಕದ ಕೊರತೆ ಎದುರಿಸುತ್ತಿದ್ದಾರೆ. ಹೀಗಾಗಿ ಅವರನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ. ಕಳೆದ 20 ವರ್ಷಗಳಿಂದಲೂ ಅವರು ಆಗಾಗ ಈ ಸಮಸ್ಯೆ ಎದುರಿಸುತ್ತಿದ್ದಾರೆ. ಸದ್ಯ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ವೈದರು ತಿಳಿಸಿದ್ದಾರೆ.

(ಉದಯವಾಣಿ 26–3–2015)

## ಹಿಂದು ಬಳಿಯಿದ್ದ 700 ವರ್ಷ ಹಳೆ ಕುರಾನ್ ಲೂಟಿ

ರಾಜಸ್ಥಾನ: ಕೋಟಿಗಟ್ಟಲೆ ರೂ. ಬೆಲೆಯುಳ್ಳದ್ದು ಎನ್ನಲಾದ 700 ವರ್ಷ ಹಳೆಯ ಕುರಾನ್ ಪುಸ್ತಕವೊಂದನ್ನು ಅಪರಿಚಿತ ಶಸ್ತ್ರಾಸ್ತ್ರಧಾರಿಗಳು ಹಿಂದು ವ್ಯಕ್ತಿಯೊಬ್ಬನಿಂದ ಲೂಟಿ ಮಾಡಿರುವ ಘಟನೆ ಕಿಷನ್‌ಗಂಜ್‌ನ ಬಿವಾರ್ ಪ್ರದೇಶದಲ್ಲಿ ಬುಧವಾರ ನಡೆದಿದೆ. ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಕುರಾನ್ ಅನ್ನು ಇಟ್ಟುಕೊಂಡಿದ್ದ ಹಿಂದು ಮಾಲಕನ ಮೇಲೆ ದಾಳಿ ನಡೆಸಿ ಪವಿತ್ರ ಗಂಥವನ್ನು ಹೊತ್ತೊಯ್ದಿದ್ದಾರೆ. ಈ ಹಿಂದೆ ಅವರು ಹಿಂದು ವ್ಯಕ್ತಿಯಿಂದ ಕುರಾನ್ ಅನ್ನು ಕೊಂಡುಕೊಳ್ಳಲು ಯತ್ನಿಸಿದ್ದರು. ಆದರೆ, ಅದಕ್ಕೆ ಆತ ನಿರಾಕರಿಸಿದ್ದ.

(ಉದಯವಾಣಿ 26–03–2015)

## 2050ಕ್ಕೆ ಭಾರತ ವಿಶ್ವದಲ್ಲೇ ಗರಿಷ್ಠ ಮುಸ್ಲಿಮರು ಇರುವ ದೇಶ

ವಾಷಿಂಗ್ಟನ್, ಎ. 3: 2050ರ ಹೊತ್ತಿಗೆ ಭಾರತದ ಮುಸ್ಲಿಮರ ಜನಸಂಖ್ಯೆ, ಇಂಡೋನೇಷ್ಯಾದ ಮುಸ್ಲಿಮರ ಒಟ್ಟು ಜನಸಂಖ್ಯೆಯನ್ನು ಮೀರಿಸಲಿದೆ. ಇದರೊಂದಿಗೆ ಭಾರತ, ವಿಶ್ವದ ಇತರ ದೇಶಗಳಿಗಿಂತ ಅತಿ ಹೆಚ್ಚು ಮುಸ್ಲಿಮರನ್ನು ಹೊಂದಿದ ದೇಶವಾಗಿ ಹೊರಹೊಮ್ಮಲಿದೆ ಎಂದು ಅಧ್ಯಯನವೊಂದು ತಿಳಿಸಿದೆ.

ಅಮೇರಿಕದ ಚಿಂತಕರ ಚಾವಡಿ ಎನ್ನಿಸಿರುವ ಪ್ಯೂ ಸಂಶೋಧನಾ ಕೇಂದ್ರ ನಡೆಸಿರುವ ಸಮೀಕ್ಷೆ ಪ್ರಕಾರ, ಈಗ ಇಂಡೋನೇಷ್ಯಾದಲ್ಲಿ 20.5 ಕೋಟಿ ಮುಸ್ಲಿಂ ಜನಸಂಖ್ಯೆ ಇದೆ. ಭಾರತದಲ್ಲಿ 17.7 ಕೋಟಿ ಮುಸ್ಲಿಂ ಜನಸಂಖ್ಯೆ ಇದೆ. ಇನ್ನು 35 ವರ್ಷ ಬಳಿಕ ಇಂಡೋನೇಷ್ಯಾ ಮುಸ್ಲಿಂ ಜನಸಂಖ್ಯೆಯನ್ನು ಭಾರತ ಮೀರಿಸಲಿದೆ. ಆದರೂ ಕೂಡ ಭಾರತದಲ್ಲಿ ಹಿಂದುಗಳ ಸಂಖ್ಯೆಯೇ ಹೆಚ್ಚಿರಲಿದೆ ಎಂದು ವಿವರಿಸಲಾಗಿದೆ.

2070ರಲ್ಲಿ ಮುಸ್ಲಿಮರ ಜನಸಂಖ್ಯೆ ನಂ. 1: ಮುಸ್ಲಿಮರ ಜನಸಂಖ್ಯೆ ವಿಶ್ವದಲ್ಲಿ ಈಗ ಸಾಕಷ್ಟು ಪ್ರಗತಿ ಕಾಣತೊಡಗಿದೆ. ಇದೇ ವೇಗದಲ್ಲಿ ಮುಸ್ಲಿಂ ಜನಸಂಖ್ಯೆ ಬೆಳೆದರೆ 2070ರಲ್ಲಿ ಕ್ರೈಸ್ತ ಧರ್ಮವನ್ನು ಮೀರಿಸಿ ಮುಸ್ಲಿಂ ಜನಸಂಖ್ಯೆ ವಿಶ್ವದ ನಂ. 1 ಆಗಲಿದೆ ಎಂದು ಅಮೆರಿಕದ ಚಿಂತಕರ ಚಾವಡಿ 'ಪ್ಯೂ'ನ ಅಧ್ಯಯನ ಹೇಳಿದೆ.

2050ರ ಹೊತ್ತಿಗೆ ಕ್ರೈಸ್ತರು ಅಂದಾಜು 290 ಕೋಟಿ (ಶೇ.31), ಮುಸ್ಲಿಮರು ಅಂದಾಜು 280 ಕೋಟಿ (ಶೇ.30) ಆಗಿರಲಿದ್ದಾರೆ. ಇದೇ ವೇಗದಲ್ಲಿ ಇಸ್ಲಾಂ ಬೆಳವಣಿಗೆ ಮುಂದುವರಿದರೆ 2070ರಲ್ಲಿ ವಿಶ್ವದ ಜನಪ್ರಿಯ ಧರ್ಮ ಎಂಬ ಹೆಗ್ಗಳಿಕೆಗೆ ಅದು ಪಾತ್ರವಾಗಲಿದೆ.

(ಉದಯವಾಣಿ 4–4–2015)

## ಬಾಂಗ್ಲಾ ಜಮಾತ್ ನಾಯಕ ನೇಣುಗಂಬಕ್ಕೆ

ಢಾಕಾ: ಜಮಾತ್ ಎ ಇಸ್ಲಾಮಿ ಸಂಘಟನೆ ಮುಖಂಡ ಮುಹಮ್ಮದ್ ಖುರಾಮರುಜ್ಜಮನ್‌ನನ್ನು ಶನಿವಾರ ರಾತ್ರಿ ಗಲ್ಲಿಗೇರಿಸಲಾಗಿದೆ. ಈತ 1971 ಪಾಕಿಸ್ತಾನ ವಿರುದ್ಧದ ಬಾಂಗ್ಲಾ ವಿಮೋಚನೆ ಯುದ್ಧದ ವೇಳೆ ಸಾಮೂಹಿಕ ನರಹತ್ಯೆಯಲ್ಲಿ ಭಾಗಿಯಾಗಿದ್ದ.

(ಉದಯವಾಣಿ 12–4–2015)

## 'ಗೋಮಾಂಸ ತಿಂದ್ರೆ ತಪ್ಪೇನು?'

ಚಿತ್ರದುರ್ಗ, ಎ. 11: ಗೋಮಾಂಸ ತಿಂದರೆ ತಪ್ಪೇನು ಎಂದು ಪ್ರಶ್ನಿಸಿರುವ ಸಮಾಜ ಕಲ್ಯಾಣ ಸಚಿವ ಎಚ್. ಆಂಜನೇಯ, ಇಂಥದ್ದೇ ಆಹಾ ಸೇವನೆ ಮಾಡಿ ಎಂದು ಯಾರೂ ಯಾರನ್ನೂ ಕಟ್ಟಿ ಹಾಕಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಕೂಡ ಹಿಂದೆ ಗೋಮಾಂಸ ತಿಂದಿದ್ದೆ. ಇದರಲ್ಲಿ ತಪ್ಪೇನಿದೆ? ಆಹಾರ ವಿಚಾರದಲ್ಲಿ ಯಾರು ಯಾರನ್ನೂ ಕಟ್ಟಿಹಾಕಲು ಸಾಧ್ಯವಿಲ್ಲ. ಸಸ್ಯಾಹಾರ ಹಾಗೂ ಮಾಂಸಾಹಾರ ಸೇವನೆ ಅವರವರ ಇಷ್ಟಕ್ಕೆ ಬಿಟ್ಟಿದ್ದು. ಇದಕ್ಕೆ ಜಾತಿ ಲೇಪ ಬೇಡ' ಎಂದರು.

ಪ್ರತಿಭಟನೆ ನಡೆಸುವುದು ಸಾಂವಿಧಾನಿಕ ಹಕ್ಕು. ಸಾಹಿತಿಗಳು ಅವರದ್ದೇ ಆದ ಶೈಲಿಯಲ್ಲಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ ಎನ್ನುವ ಮೂಲಕ ಸಾಹಿತಿಗಳಾದ ಡಾ| ಗಿರೀಶ್ ಕಾರ್ನಾಡ್ ಮತ್ತು ಮರುಳಸಿದ್ದಪ್ಪ ಸಾರ್ವಜನಿಕವಾಗಿ ಗೋಮಾಂಸ ಹಂಚಿ ಪ್ರತಿಭಟನೆ ನಡೆಸಿದ್ದನ್ನು ಸಮರ್ಥಿಸಿಕೊಂಡರು.

ರಾಜ್ಯದಲ್ಲಿ ಗೋಹತ್ಯೆ ನಿಷೇಧಿಸುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಮಹಾರಾಷ್ಟ್ರ ಸೇರಿದಂತೆ ಯಾವ ರಾಜ್ಯದಲ್ಲಿ ಬೇಕಾದರೂ ಗೋಹತ್ಯೆ ನಿಷೇಧಿಸಲಿ. ರಾಜ್ಯ ಸರಕಾರ ಮಾತ್ರ ಗೋಹತ್ಯೆ ನಿಷೇಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

(ಉದಯವಾಣಿ 12-4-2015)

## ಇಂದು ಇಂಗ್ಲಿಷ್ ಭಾಷೆ ಅಗತ್ಯ

ಇಂದು ಇಂಗ್ಲಿಷ್ ಭಾಷೆ ಅಗತ್ಯ. ಇಂಗ್ಲಿಷ್ ಗೊತ್ತಿದ್ದವ ಜಗತ್ತು ಗೆಲ್ಲಬಹುದು. ರಾಜ್ಯಭಾಷೆಗೆ ಸ್ಥಾನಮಾನ ನೀಡಬೇಕು ಎನ್ನುತ್ತಾರೆ. ಆದರೆ ಇಂಗ್ಲಿಷ್ ಇಲ್ಲದಿದ್ದಲ್ಲಿ ಶಿಕ್ಷಣದಲ್ಲಿ ಮುಂದುವರಿಯಲು ಸಾಧ್ಯವಿಲ್ಲ.

– ಶಾಹುಲ್ ಹಮೀದ್ ಬಾಖವಿ ಶಾಂತಪುರ.

(ಉದಯವಾಣಿ 20-4-2015)

## ಪ್ರವಾದಿ ಮಹಮದ್ ಚಿತ್ರ ಬರೆಯೋಲ್ಲ: ಹೆಬ್ಡೋ

ಹೊಸದಿಲ್ಲಿ: ಫ್ರೆಂಚ್ ವಾರಪತ್ರಿಕೆ ಚಾರ್ಲಿ ಹೆಬ್ಡೋದ ಮುಖಪುಟದಲ್ಲಿ ಪ್ರವಾದಿ ಮುಹಮ್ಮದ್ ವ್ಯಂಗ್ಯಚಿತ್ರ ವಿನ್ಯಾಸ ಮಾಡಿದ್ದ ಕಲಾವಿದ ರೆನಾಲ್ಡ್ ಲುಝಿಯರ್, ತಾವು ಇನ್ನು ಮುಂದೆ ಪ್ರವಾದಿ ಮಹಮ್ಮದ್‌ರ ವ್ಯಂಗ್ಯಚಿತ್ರ ಬಿಡಿಸುವುದಿಲ್ಲ ಎಂದು ಹೇಳಿದ್ದಾರೆ. 'ನನಗೆ ಈಗ ಪ್ರವಾದಿಯ ವ್ಯಂಗ್ಯಚಿತ್ರ ಬಿಡಿಸುವ ಆಸಕ್ತಿ ಉಳಿದಿಲ್ಲ. ನನ್ನ ಜೀವನವೆಲ್ಲಾ ಅವರ ಚಿತ್ರ ಬಿಡಿಸುವುದರಲ್ಲಿ ಕಳೆಯಲು ಇಷ್ಟ ಇಲ್ಲ' ಎಂದು ಹೇಳಿಕೆ ನೀಡಿದ್ದಾರೆ. ಮಹಮ್ಮದ್ ವ್ಯಂಗ್ಯಚಿತ್ರ ಪ್ರಕಟವಾಗಿದ್ದ ಕಾರಣ ಪ್ಯಾರಿಸ್‌ನಲ್ಲಿನ ಚಾರ್ಲಿ ಹೆಬ್ಡೋ ಕಚೇರಿ ಮೇಲೆ ಇಸ್ಲಾಂ ಮೂಲಭೂತವಾದಿಗಳು ದಾಳಿ ಮಾಡಿದ್ದರು. ಈ ವೇಳೆ ಸಂಪಾದಕ ಸೇರಿ 6 ಜನ ಹತ್ಯೆಯಾಗಿದ್ದರು. ರೆನಾಲ್ಡ್ ಲುಝಿಯರ್ ಬದುಕುಳಿದವರಲ್ಲಿ ಒಬ್ಬರು.

(ಉದಯವಾಣಿ 1-5-2015)

## ಗೋಮಾಂಸ ರಫ್ತು: ಭಾರತಕ್ಕೆ ಅಗ್ರಸ್ಥಾನ!

ಕೊಚ್ಚಿ, ಎ.23: ಭಾರತವು ಗೋಮಾಂಸದ ರಫ್ತಿನಲ್ಲಿ ದಾಪುಗಾಲಿಡುತ್ತಿದೆ. ದೇಶದಲ್ಲಿ ಹೆಚ್ಚು ಹೆಚ್ಚು ರಾಜ್ಯಗಳು ದನ ಹಾಗೂ ಎತ್ತುಗಳ ಹತ್ಯೆಯನ್ನು ಕಡ್ಡಾಯವಾಗಿ ನಿಷೇಧಿಸಿರುವ ವೇಳೆ ಈ ಬೆಳವಣಿಗೆ ಕುತೂಹಲಕಾರಿಯಾಗಿದೆ. ಭಾರತವು ಅಗ್ರ ಜಾಗತಿಕ ಗೋಮಾಂಸ ರಫ್ತುದಾರ ರಾಷ್ಟ್ರವಾಗಿ ಬ್ರೆಝಿಲ್‌ಗಿಂತ ಮೇಲುಗೈ ಸಾಧಿಸಿದೆಯೆಂದು ಅಮೆರಿಕದ ಕೃಷಿ ಇಲಾಖೆ (ಯುಎಸ್‌ಡಿಎ) ಹೇಳಿದೆ.

ತನ್ನ ಅಕ್ಟೋಬರ್‌ನ – ನಿರೀಕ್ಷೆಯನ್ನು ಶೇ.3ರಷ್ಟು ಮರುವಿಮರ್ಶಿಸಿರುವ ಈ ತಿಂಗಳು ಬಿಡುಗಡೆಯಾಗಿರುವ ವರದಿಯೊಂದು 2015ರಲ್ಲಿ ಜಾಗತಿಕ ಗೋಮಾಂಸ ರಫ್ತು ವ್ಯವಹಾರವು ದಾಖಲೆ 10.2 ಮೆಟ್ರಿಕ್ ಟನ್‌ಗೆ ತಲುಪಲಿದೆಯೆಂದು ಭವಿಷ್ಯ ನುಡಿದಿದೆ. ತೈಲ ಆದಾಯ ಕುಸಿತ ಹಾಗೂ ದುರ್ಬಲ ಕರೆನ್ಸಿಗಳ ಕಾರಣ ರಶ್ಯಾ ಸಹಿತ ಅಸಂಖ್ಯಾತ ತೈಲಾವಲಂಬಿ ದೇಶಗಳು ಆಮದನ್ನು ಕಡಿತಗೊಳಿಸಿರುವ ಹೊರತಾಗಿಯೂ, ಅಮೆರಿಕ, ಬ್ರೆಝಿಲ್ ಹಾಗೂ ಉರುಗ್ವೆಗಳಿಂದ ಗೋಮಾಂಸ ರಫ್ತು ಇಳಿಕೆಯಾಗಿದ್ದರೂ, ಭಾರತದಿಂದ ಅತಿಹೆಚ್ಚು ಹಾಗೂ ಐರೋಪ್ಯ ಒಕ್ಕೂಟ ಮತ್ತು ಪರಾಗ್ವೆಗಳಿಂದ ಕಡಿಮೆ ಪ್ರಮಾಣದಲ್ಲಿ ರಫ್ತಾಗುತ್ತಿದೆಯೆಂದು ವರದಿ ಹೇಳಿದೆ.

ರಶ್ಯದ ಮಾರುಕಟ್ಟೆಯು ಭಾರತದಿಂದ ಕೋಣಗಳ ಮಾಂಸ ರಫ್ತಿಗೆ ತೆರೆದಿರುವುದರಿಂದ ಹಾಲಿ ಆರ್ಥಿಕ ವರ್ಷದಲ್ಲಿ ಪೂರೈಕೆ ಹೆಚ್ಚಾಗುವ ನಿರೀಕ್ಷೆಯಿದೆ. ರಶ್ಯವು ಮಾಂಸ ರಫ್ತಿಗೆ ಭಾರತದ ನಾಲ್ಕು ಕಂಪೆನಿಗಳನ್ನು ಅಂಗೀಕರಿಸಿದೆ. ಮೊದಲ ಹೇರು ಈಗಾಗಲೇ ಕಳುಹಿಸಲ್ಪಟ್ಟಿದೆ. ಕೋಣಗಳ ಮಾಂಸವು ಈಗಾಗಲೇ ಮೌಲ್ಯದ ದೃಷ್ಟಿಯಿಂದ ಅತಿ ಹೆಚ್ಚು ರಫ್ತಾಗುವ ಕೃಷಿ ಆಹಾರ ವರ್ಗದ ಬಾಸುಮತಿ ಅಕ್ಕಿಯನ್ನು ಹಿಂದೆ ಹಾಕಿದೆ ಎಂದು ಕೃಷಿ ಮತ್ತು ಸಂಸ್ಕೃತಿ ಆಹಾರೋತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರದ (ಅಪೆಡಾ) ಅಂಕಿ–ಅಂಶಗಳು ತಿಳಿಸಿದೆ.

ಫೆಬ್ರವರಿಗೆ ಕೊನೆಗೊಂಡ 11 ತಿಂಗಳುಗಳಲ್ಲಿ ಭಾರತದ ಕೋಣಗಳ ಮಾಂಸ ರಫ್ತು 13,56,794 ಟನ್‌ಗಳಾಗಿದ್ದು, ಅದರ ಮೌಲ್ಯ ರೂ. 26,965 ಕೋಟಿ. ಇದು ಪ್ರಮಾಣದಲ್ಲಿ ಶೇ. 13ರಷ್ಟು ಏರಿಕೆಯಾಗಿದೆ.

2014ರಲ್ಲಿ ಮೌಲ್ಯದ ದೃಷ್ಟಿಯಿಂದ ಗೋಮಾಂಸ ರಫ್ತು ರೂ. 26,458 ಕೋಟಿ ದಾಟಿದೆ. 2015ರಲ್ಲಿ ಗೋಜಾತಿಯ ಪ್ರಾಣಿಗಳ ಮಾಂಸ ರಫ್ತು ರೂ. 30 ಸಾವಿರ ಕೋಟಿಗೆ ತಲುಪುವ ಸಾಧ್ಯತೆಯಿದೆ. ಆದರೆ, ಈ ಕುರಿತ ಮಾಹಿತಿಯನ್ನು ಅಪೆಡಾ ಅಂತಿಮಗೊಳಿಸಿಲ್ಲ.

ಓದಿದ್ದು

ಹಿಂದಿನ ಆರ್ಥಿಕ ವರ್ಷದ 14,49,759 ಟನ್‌ಗಳಿಗೆ ಹೋಲಿಸಿದರೆ. ರಫ್ತು ಪ್ರಮಾಣವು 15 ಲಕ್ಷ ಟನ್‌ಗಳಿಗೆ ತಲುಪಬಹುದಿತ್ತು. ಆದರೆ, ಬಳಿಕ ಕೋಣಗಳ ಮಾಂಸ ರಫ್ತು ಪ್ರಮಾಣದಲ್ಲಿ ಇಳಿಕೆ ಉಂಟಾಯಿತು.

ಬ್ರೆಝಿಲ್‌ನ ಕರೆನ್ಸಿಯ ಅಪಮೌಲ್ಯ ಹಾಗೂ ವಿಯೆಟ್ನಾಂನಿಂದ ಹಾಂಕಾಂಗ್‌ಗೆ ಕೋಣಗಳ ಮಾಂಸದ ಮರು-ರಫ್ತಿನ ಸಮಸ್ಯೆ ಭಾರತದ ರಫ್ತಿನ ಮೇಲೆ ಪರಿಣಾಮ ಬೀರಿದೆಯೆಂದು ಅಖಿಲ ಭಾರತ ಮಾಂಸ ಮತ್ತು ಜಾನುವಾರು ರಫ್ತುದಾರರ ಸಂಘದ ಕಾರ್ಯದರ್ಶಿ ಡಿ.ಬಿ.ಸಭರ್ವಾಲ್ ತಿಳಿಸಿದ್ದಾರೆ. ವಿಯೆಟ್ನಾಂ, ಭಾರತದ ಕೋಣಗಳ ಮಾಂಸದ ಅತಿದೊಡ್ಡ ಖರೀದಿದಾರನಾಗಿದ್ದರೆ, ಬ್ರೆಝಿಲ್ ಭಾರತದ ಪ್ರಧಾನ ಪ್ರತಿಸ್ಪರ್ಧಿಯಾಗಿದೆ.

(ವಾರ್ತಾಭಾರತಿ 24-4-2015

## ಮೋರ್ಸಿ ಸೇರಿ 100 ಜನರಿಗೆ ಮರಣದಂಡನೆ

ಕೈರೋ: ಸರ್ವಾಧಿಕಾರಿ ಹೋಸ್ನಿ ಮುಬಾರಕ್ ಆಳ್ವಿಕೆಯನ್ನು ಕೊನೆಗೊಳಿಸಿದ 2011ರ ಈಜಿಪ್ಟ್ ಕ್ರಾಂತಿಯ ವೇಳೆ ಜೈಲಿನ ಬಾಗಿಲು ಮುರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪದಚ್ಯುತ ಅಧ್ಯಕ್ಷ ಮೊಹಮ್ಮದ್ ಮೋರ್ಸಿ ಮತ್ತು ಮುಸ್ಲಿಂ ಬ್ರದರ್ ಹುಡ್‌ನ ಪರಮೋಚ್ಚ ಮುಖಂಡ ಮೊಹಮದ್ ಬಾಡೈ ಮತ್ತು 100 ಮಂದಿಗೆ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ

(ಉದಯವಾಣಿ 17-6-2015)

## ನೆರಳು ಬಿದ್ದಿದ್ದಕ್ಕೆ ದಲಿತ ಬಾಲಕಿ ಮೇಲೆ ಹಲ್ಲೆ

ಮೇಲ್ವರ್ಗದ ಬಲಾಢ್ಯ ವ್ಯಕ್ತಿಯೊಬ್ಬನ ಮೇಲೆ ದಲಿತ ಸಮುದಾಯಕ್ಕೆ ಸೇರಿದ ಅಪ್ರಾಪ್ತ ವಯಸ್ಸಿನ ಬಾಲಕಿಯೊಬ್ಬಳ ನೆರಳು ಬಿದ್ದ ಕಾರಣಕ್ಕೆ ಆಕೆಯನ್ನು ಥಳಿಸಿರುವ ಅಮಾನವೀಯ ಘಟನೆ ಮಧ್ಯ ಪ್ರದೇಶದ ಛತ್ತರ್‌ಪುರದಲ್ಲಿ ನಡೆದಿದೆ. ಜೂ. 13ರಂದು ಈ ಘಟನೆ ನಡೆದಿದ್ದು ಈ ಸಂಬಂಧ ಗಾಂಧಿ ಮಲ್ಹೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಗಿದ್ದು ಇಷ್ಟು - ದಲಿತ ಬಾಲಕಿ ಗ್ರಾಮದ ಕೈ ಪಂಪಿನಿಂದ ನೀರನ್ನು ತರಲು ಹೋಗಿದ್ದಳು. ಆ ವೇಳೆ, ಮೇಲ್ವರ್ಗಕ್ಕೆ ಸೇರಿದ ಪುರಾನ್ ಯಾದವ್ ಎಂಬಾತನ ಮೇಲೆ ಆಕೆಯ ನೆರಳು ಬಿದ್ದಿದೆ. ಇದರಿಂದ ಸಿಟ್ಟಾದ ಪುರಾನ್ ಯಾದವ್‌ನ ಕುಟುಂಬದ ಮಹಿಳೆಯರು ಬಾಲಕಿಗೆ ಮನಬಂದಂತೆ ಥಳಿಸಿದ್ದಾರೆ. ಅಲ್ಲದೆ, ಮತ್ತೊಮ್ಮೆ ಕಣ್ಣಿಗೆ ಕಾಣಿಸಿಕೊಂಡರೆ ಕೊಲ್ಲುವುದಾಗಿಯೂ ಬೆದರಿಕೆ ಹಾಕಿದ್ದಾರೆ. ಅಲ್ಲದೆ, ಪೊಲೀಸರಿಗೆ ದೂರು ನೀಡದಂತೆಯೂ ಬೆದರಿಕೆ ಹಾಕಿದ್ದಾರೆ. ಭಯದ ನಡುವೆಯೇ ಬಾಲಕಿಯ ತಂದೆ ಪೊಲೀಸ್ ಠಾಣೆಗೆ ಬಂದು ದೂರು ದಾಖಲಿಸಿದ್ದು ಪ್ರಕರಣ ಬೆಳಕಿಗೆ ಬಂದಿದೆ.

(ಉದಯವಾಣಿ 17-6-2015)

## ರಮ್ಜಾನ್ ಆಚರಿಸದ ಇಬ್ಬರಿಗೆ ಐಸಿಸ್ ಗಲ್ಲು

ಬೈರೂತ್: ಮುಸ್ಲಿಮರ ಪವಿತ್ರ ರಮ್ಜಾನ್ ಮಾಸಾಚರಣೆ ವೇಳೆ ಹಗಲಿನ ಸಮಯದಲ್ಲಿ ಆಹಾರ ಸೇವಿಸಿದ್ದಾರೆ ಎಂದು ಆರೋಪಿಸಿ ಇಬ್ಬರು ಹದಿಹರೆಯದ ಯುವಕರನ್ನು ಐಸಿಸ್ (ಇಸ್ಲಾಮಿಕ್ ಸ್ಟೇಟ್) ಉಗ್ರರು ಸಿರಿಯಾದಲ್ಲಿ ಗಲ್ಲಿಗೇರಿಸಿದ್ದಾರೆ. ಡೈರ್ ಎಜ್ಜೋರ್ ಪ್ರಾಂತ್ಯದ ಮಾಯಾದೀನ್ ಎಂಬ ಗ್ರಾಮದಲ್ಲಿ 18 ವರ್ಷದ ಒಳಗಿನ ಇಬ್ಬರು ಯುವಕರು ಉಪವಾಸ ಮುರಿದು ಆಹಾರ ಸೇವಿಸುತ್ತಿರುವಾಗ ಉಗ್ರ ಕಣ್ಣಿಗೆ ಬಿದ್ದಿದ್ದರು. ಈ ಕಾರಣಕ್ಕಾಗಿ ಅವರನ್ನು ಮಧ್ಯಾಹ್ನದಿಂದ ಸಂಜೆಯವರೆಗೂ ಕಂಬಕ್ಕೆ ಹಗ್ಗಕಟ್ಟಿ ನೇತುಹಾಕಲಾಗಿದೆ.

(ಉದಯವಾಣಿ 24-6-2015)

## ಟೈಟ್ ಜೀನ್ಸ್ ತೊಟ್ಟಿದ್ದರಿಂದ ಕುಸಿದು ಬಿದ್ದ ಮಹಿಳೆ!

ಟೈಟ್ ಜೀನ್ಸ್ ತೊಟ್ಟುಕೊಳ್ಳುವುದು ಹುಡುಗಿಯರ ನೆಚ್ಚಿನ ಫ್ಯಾಷನ್. ಆದರೆ, ಇದರ ಘೋರ ಪರಿಣಾಮ ಹೇಗಿತ್ತು ಎಂಬುದನ್ನು ಆಸ್ಟ್ರೇಲಿಯಾದ ಅಡಿಲೇಡ್‌ನ 35 ವರ್ಷದ ಮಹಿಳೆಯೊಬ್ಬಳು ಅನುಭವಿಸಿದ್ದಾಳೆ. ಟೈಟ್ ಜೀನ್ಸ್ ತೊಟ್ಟಿದ್ದರಿಂದ ಕಾಲಿನ ನರಗಳಿಗೆ ಸರಿಯಾಗಿ ರಕ್ತ ಸಂಚಾರ ಆಗದೇ ಕುಸಿದು ಬಿದ್ದಿದ್ದಾಳೆ. ಕೊನೆಗೆ ತೆವಳಿಕೊಂಡು ಹೋಗಿ ಬೇರೆಯವರ ಸಹಾಯ ಪಡೆದಿದ್ದಾಳೆ. ಟೈಟ್ ಜೀನ್ಸ್ ಪ್ಯಾಂಟ್ ತೊಟ್ಟಿದ್ದರಿಂದ ಕಾಲಿನ ಕೆಳಭಾಗ ಜೋಮು ಹಿಡಿದು ನಡೆಯಲಾಗದ ಸ್ಥಿತಿಗೆ ತಲುಪಿದ್ದಾಳೆ. ಈ ಅಘಾತದಿಂದ ಆಕೆ ಸಂಪೂರ್ಣ ಚೇತರಿಸಿಕೊಳ್ಳಲು ನಾಲ್ಕು ದಿನ ಆಸ್ಪತ್ರೆಯಲ್ಲಿ ಕಳೆಯಬೇಕಾಯಿತು. ವೈದ್ಯರು ಆಕೆಗೆ 'ಫ್ಯಾಷನ್ ವಿಕ್ಟಿಮ್' ಎಂಬ ಹಣೆಪಟ್ಟಿ ಕಟ್ಟಿದ್ದಾರೆ. ಇಷ್ಟೆಲ್ಲಾ ಆಗುವುದಕ್ಕೆ ಆಕೆಯ ಫ್ಯಾಷನ್ ಹುಚ್ಚೇ ಕಾರಣ. ಆಕೆ ಮನೆಯಲ್ಲಿ ಇದ್ದಾಗಲೂ ಇಡೀದಿನ ಟೈಟ್ ಜೀನ್ಸ್ ಅನ್ನೇ ಧರಿಸುತ್ತಿದ್ದಳು. ಒಂದೆರು ಬಾರಿ ಕಾಲು ಜೋಮು ಹಿಡಿದಂತೆ ಆದರೂ ಅದೆಲ್ಲಾ ಮಾಮೂಲಿ ಎಂದು ನಿರ್ಲಕ್ಷ್ಯಮಾಡಿದ್ದಳು. ಹೀಗೇ ದಿನದೂಡುತ್ತಿದ್ದ ಆಕೆ, ತಕ್ಕ ಶಿಕ್ಷೆ ಅನುಭವಿಸಿದ್ದಾಳೆ.

(ಉದಯವಾಣಿ 24-6-2015)

**ಓದಿದ್ದು**

## 10 ಕೋಟಿ ರೂ. ಆಸ್ತಿ ಹೊಂದಿದ್ದರೂ ಭಿಕ್ಷೆ ಬೇಡುತ್ತಿದ್ದ ವ್ಯಕ್ತಿ ಕುವೈಟ್‌ನಲ್ಲಿ ಬಂಧನ

ದುಬ್ಬಾ, ಜು. 13: 10 ಕೋಟಿ ರೂಪಾಯಿ ಇದ್ದರೆ ಐಷಾರಾಮಿ ಬಂಗಲೆ ಕಟ್ಟಿಸಿ, ದುಬಾರಿ ಬೆಲೆಯ ಕಾರಿನಲ್ಲಿ ಓಡಾಡುತ್ತಾ, ಮೋಜು – ಮಸ್ತಿಯ ಜೀವನ ಸಾಗಿಸಬಹುದು. ಆದರೆ ಕುವೈಟ್‌ನಲ್ಲಿ ವಿದೇಶಿಗನೊಬ್ಬ ತನ್ನ ಬ್ಯಾಂಕ್ ಖಾತೆಯಲ್ಲಿ ಹತ್ತು ಕೋಟಿ ರೂ. ಹೊಂದಿದ್ದರೂ ಭಿಕ್ಷೆ ಬೇಡಿ, ಪೊಲೀಸರಿಂದ ಬಂಧನಕ್ಕೆ ಒಳಗಾಗಿದ್ದಾನೆ.

ಕುವೈಟ್ ರಾಜಧಾನಿ ಕುವೈತ್ ಸಿಟಿಯ ಮಸೀದಿಯೊಂದರ ಮುಂದೆ ನಿಂತು, ಅಲ್ಲಿಗೆ ಬಂದು-ಹೋಗುವ ಜನರ ಬಳಿ ವ್ಯಕ್ತಿಯೊಬ್ಬ ಭಿಕ್ಷೆ ಕೇಳುತ್ತಿದ್ದ. ತನಗೆ ಮನೆ ಕೂಡ ಇಲ್ಲ, ಹಣದ ತುರ್ತು ಆವಶ್ಯಕತೆ ಇದೆ, ದಾನ ಮಾಡಿ ಎಂದು ಅಂಗಲಾಚುತ್ತಿದ್ದ. ಇದನ್ನು ಗಮನಿಸಿದ ಗಸ್ತು ಪೊಲೀಸರು ಆತನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದರು. ಆತ ಕುವೈತ್‌ನವನಲ್ಲ ಎಂಬುದು ಗೊತ್ತಾಗುವುದರ ಜತೆಗೆ, ಭಿಕ್ಷುಕನ ಬ್ಯಾಂಕ್ ಖಾತೆಯಲ್ಲಿ ಬರೋಬ್ಬರಿ 10 ಕೋಟಿ ರೂ. (5 ಲಕ್ಷ ಕುವೈಟ್ ದಿನಾರ್) ಇರುವ ಮಾಹಿತಿ ತಿಳಿದು ಪೊಲೀಸರು ಅಚ್ಚರಿಗೆ ಒಳಗಾದರು ಎಂದು ಭದ್ರತಾ ಮೂಲಗಳನ್ನು ಉಲ್ಲೇಖಿಸಿ ಪತ್ರಿಕೆಯೊಂದು ವರದಿ ಮಾಡಿದೆ.

ಕೊಲ್ಲಿ ಸಹಕಾರ ಮಂಡಳಿಯ ವ್ಯಾಪ್ತಿಗೆ ಕುವೈಟ್, ಬಹ್ರೈನ್, ಒಮಾನ್, ಖತಾರ್, ಸೌದಿ ಅರೇಬಿಯಾ ಹಾಗೂ ಸಂಯುಕ್ತ ಅರಬ್ ಸಂಸ್ಥಾನ (ಯುಎಇ)ಗಳು ಸೇರಿವೆ. ಈ ರಾಷ್ಟ್ರಗಳಲ್ಲಿ ಭಿಕ್ಷೆ ಮಾಡುವುದಕ್ಕೆ ಅವಕಾಶವಿಲ್ಲ. ಅದರಲ್ಲೂ ರಮ್ಜಾನ್ ಮಾಸದಲ್ಲಿ ಜನರೇ ದಾನ – ಧರ್ಮದಂತಹ ಕಾರ್ಯ ಕೈಗೊಳ್ಳುತ್ತಾರೆ. ಅಂತಹ ಸಂದರ್ಭದಲ್ಲೇನಾದರೂ ಭಿಕ್ಷಾಟನೆ ಮಾಡಿದರೆ ಸರಕಾರಗಳು ಸಹಿಸುವುದಿಲ್ಲ.

ಕಳೆದ ಏಪ್ರಿಲ್‌ನಲ್ಲಷ್ಟೇ 22 ಭಿಕ್ಷುಕರನ್ನು ಕುವೈತ್ ಸರಕಾರ ಬಂಧಿಸಿ, ಜನರಿಗೆ ಕಿರುಕುಳ ನೀಡಿದ ಆಪಾದನೆ ಮೇಲೆ ದೇಶದಿಂದ ಗಡೀಪಾರು ಮಾಡಿತ್ತು. ಆ ಪೈಕಿ ಬಹುತೇಕ ಮಂದಿ ಏಷ್ಯಾ ಮೂಲದವರು.

(ಉದಯವಾಣಿ 14-7-2015)

## ವ್ಯಕ್ತಿ ಪರಿಚಯ

## ಜನಾಬ್ ಯಂ. ಉಬೈದುಲ್ಲಾ ಸಾಹಿಬ್



ಜ| ಯಂ. ಉಬೈದುಲ್ಲಾ ಸಾಹಿಬ್ "ಯುಗರಶ್ಮಿ" ಬಳಗದ ಹಿರಿಯ ಸದಸ್ಯರಾಗಿದ್ದಾರೆ. ಅವರು ಯುಗರಶ್ಮಿಯ ಪ್ರಧಾನ ಭಾಷಾಂತರಕಾರರಾಗಿದ್ದಾರೆ.

ಯುಗರಶ್ಮಿಯ ಪ್ರಥಮ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಪ್ರಕಟವಾದ "ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?" ಎಂಬ ಧಾರಾವಾಹಿಯನ್ನು ಅವರು "ಅಬೂ ತಾಹಿರ್" ಎಂಬ ಕಾವ್ಯನಾಮದಲ್ಲಿ ಭಾಷಾಂತರಿಸಿದ್ದಾರೆ.

"ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ", "ಧರ್ಮದ ನಾಮದಲ್ಲಿ ರಕ್ತಪಾತ" ಎಂಬ ಅವರ ಭಾಷಾಂತರ ಕೃತಿಗಳು ಯುಗರಶ್ಮಿಯಲ್ಲಿ ಪ್ರಕಟಗೊಂಡಿವೆ. ಅವರು ಇಂಗ್ಲಿಷ್, ಉರ್ದು, ಮಲಯಾಳಂ ಭಾಷೆಯ ಅನೇಕ ಲೇಖನಗಳನ್ನು ಯುಗರಶ್ಮಿಗೋಸ್ಕರ ಭಾಷಾಂತರಿಸಿದ್ದಾರೆ. ಸುಮಾರು 55 ವರ್ಷಗಳಿಂದ ಅಹ್ಮದಿಯಾ ಮುಸ್ಲಿಂ ಜಮಾಅತಿನ ಕನ್ನಡ ಸಾಹಿತ್ಯರಂಗದಲ್ಲಿ ಅವರು ಸೇವೆಸಲ್ಲಿಸುತ್ತಿದ್ದಾರೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಧಾನ ಭಾಷಾಂತರಕಾರರು ಸಹ ಅವರೇ ಆಗಿದ್ದಾರೆ. ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ, ಖತ್‌ಮೆ ನುಬುವ್ವತ್ – ಸತ್ಯಾಂಶಗಳು, ಧರ್ಮದ ನಾಮದಲ್ಲಿ ರಕ್ತಪಾತ, ಅಲ್‌ವಸಿಯ್ಯತ್, ಅಲ್‌ಖಸೀದ, ಇಸ್ಲಾಮಿನಲ್ಲಿ ಮಹಿಳೆಯ ಸ್ಥಾನ ಮೊದಲಾದ ಅವರ ಭಾಷಾಂತರ ಕೃತಿಗಳು ಪ್ರಕಾಶನಗೊಂಡಿವೆ. "ಮಸೀಹ್ ಹಿಂದೂಸ್ತಾನ್‌ಮೆ", "ಅಹ್ಮದಿಯತ್ ಯಾನೆ ಹಖೀಖಿ ಇಸ್ಲಾಂ", "ಶರಾಅತೆ ಬೈಅತ್", "Islam's Response To Contemporary Issues" ಮೊದಲಾದ ಹತ್ತಿಪ್ಪತ್ತು ಪುಸ್ತಕಗಳು ಈಗಾಗಲೇ ಅವರಿಂದ ಭಾಷಾಂತರಿಸಲ್ಪಟ್ಟಿವೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರ "Revelation Rationality Knowledge and Truth" ಎಂಬ ಬೃಹತ್ ಕೃತಿಯ ಭಾಷಾಂತರವನ್ನು ಅವರು ಈಗ ಕೈಗೆತ್ತಿಕೊಂಡಿದ್ದಾರೆ. ಕಳೆದ ಒಂದೂವರೆ ವರ್ಷದಿಂದ ಅಹ್ಮದಿಯಾ ಪಂಚಮ ಖಲೀಫರ ಜುಮುಅ ಖುತ್‌ಬವನ್ನು ಅವರು ಕನ್ನಡಕ್ಕೆ ಭಾಷಾಂತರಿಸುತ್ತಿದ್ದಾರೆ.

ಅವರು ತನ್ನ ಬಿ.ಎ. ಪದವಿಯನ್ನು ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನಿಂದ (1952-56) ಮತ್ತು ಎಲ್‌ಎಲ್‌ಬಿ. ಪದವಿಯನ್ನು ಬೊಂಬಾಯಿಯ ಗವರ್ನ್‌ಮೆಂಟ್ ಲಾ ಕಾಲೇಜಿನಿಂದ (1956-58) ಪಡೆದರು. ಮಾಜಿ ರಾಷ್ಟ್ರಾಧ್ಯಕ್ಷೆ ಶ್ರೀಮತಿ ಪ್ರತಿಭಾ ಪಾಟೀಲ್ ಅವರು ಎಲ್‌ಎಲ್‌ಬಿ. ತರಗತಿಯಲ್ಲಿ ಉಬೈದುಲ್ಲಾ ಸಾಹೇಬರ ಸಹಪಾಠಿ ಆಗಿದ್ದರು. ಅವರು ಯುಗರಶ್ಮಿ ಸಂಪಾದಕರ ಹಿರಿಯ ಸಹೋದರ ಆಗಿದ್ದಾರೆ.

ಸುಮಾರು 79 ವರ್ಷ ಪ್ರಾಯದ ಜನಾಬ್ ಉಬೈದುಲ್ಲಾ ಸಾಹೇಬರಿಗೆ ಅಲ್ಲಾಹನು ಆಯುರಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ದಯಪಾಲಿಸಲಿ ಎಂದು "ಯುಗರಶ್ಮಿ"ಯ ಪ್ರಾರ್ಥನೆ.

**ಅಹ್ಮದಿಯರಿಗೆ ಸುತ್ತೋಲೆ**

## ತಅ್‌ಲೀಮುಲ್ ಖುರ್‌ಆನ್

ತಅ್‌ಲೀಮುಲ್ ಖುರ್‌ಆನ್ ಸಂಬಂಧಿಸಿ, ಸಯ್ಯಿದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್, ಮಜ್‌ಲಿಸ್ ಅನ್ಸಾರುಲ್ಲಾಹ್‌ದ ಸದಸ್ಯರನ್ನು ಸಂಬೋಧಿಸಿ ಹೇಳುತ್ತಾರೆ:

'ಇದಕ್ಕೆ ಸಂಬಂಧಿಸಿ ಪ್ರಯತ್ನಿಸಬೇಕೆಂದು ನಾನು ಎಲ್ಲ ಶಾಖಾ ಸಂಘಟನೆಗಳೊಂದಿಗೆ ಹೇಳುತ್ತೇನೆ. ಆದರೂ ಅನ್ಸಾರುಲ್ಲಾಹ್‌ರೊಂದಿಗೆ ವಿಶೇಷವಾಗಿ ಹೇಳುತ್ತೇನೆ. ಏಕೆಂದರೆ ಈ ಕೆಲಸದ ಹೊಣೆಗಾರಿಕೆ ಅವರಿಗೆ ನೀಡಲಾಗಿತ್ತು. ಆದ್ದರಿಂದಲೇ 'ತಅ್‌ಲೀಮುಲ್ ಖುರ್‌ಆನ್' ಎಂಬ ಹೆಸರಿನ ಒಂದು ನೇತೃತ್ವ ಅವರಿಗಾಗಿ ಇದೆ. ಅನ್ಸಾರ್ ಸಹೋದರರು ಪರಿಪೂರ್ಣವಾಗಿ ಶ್ರದ್ಧೆವಹಿಸುವುದಾದರೆ, ಪ್ರತಿ ಮನೆಯಲ್ಲಿ ನಿಯತವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡಿಸುವ ಮತ್ತು ಅದನ್ನು ಮನವರಿಕೆ ಮಾಡಿಸುವ ಕ್ಲಾಸುಗಳನ್ನು ಸಂಘಟಿಸಬಹುದು ................ ತೃತೀಯ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನ್‌ನ ಪಾಠವನ್ನು ಪ್ರಚಲಿತಗೊಳಿಸುವ ಹೊಣೆಗಾರಿಕೆ ಅನ್ಸಾರುಲ್ಲಾಹ್‌ಗೆ ನೀಡಲಾಗಿತ್ತು. ಪವಿತ್ರ ಖುರ್‌ಆನ್‌ನ ಪಾರಾಯಣದ ಕಡೆಗೆ ಗಮನ ಹರಿಸಿರಿ, ಮನೆಗಳನ್ನು ಸಹ ಅದರ ಪ್ರಕಾಶದಿಂದ ಬೆಳಗಿಸಿರಿ.' (ಜುಮುಅ ಖುತ್‌ಬ 24 ಡಿಸೆಂಬರ್, 2004)

ಬಹುಮಾನ್ಯ ಮಜ್‌ಲಿಸ್ ಅನ್ಸಾರುಲ್ಲಾಹ್‌ದ ಸದಸ್ಯರೇ,

ತಮ್ಮ ಪ್ರಿಯ ಇಮಾಮರ ಧ್ವನಿಗೆ ಕಿವಿಗೊಡುತ್ತಾ, ವಖ್‌ಫೆ ಆರ್‌ಝೀಯ ಮಹತ್ವಾದ ದೈವಿಕ ಯೋಜನೆಯ ಅಡಿಯಲ್ಲಿ ಎರಡರಿಂದ ಆರು ವಾರಗಳ ವರೆಗಿನ ಸಮಯವನ್ನು ತ್ಯಾಗ ಮಾಡುತ್ತಾ ಮುಂದಕ್ಕೆ ಹೆಜ್ಜೆ ಹಾಕಿರಿ. ಪವಿತ್ರ ಖುರ್‌ಆನ್ ಪಾರಾಯಣ ಮಾಡುವ ಮತ್ತು ಮಾಡಿಸುವ ಮಹಾ ಜಿಹಾದಿನಲ್ಲಿ ಭಾಗವಹಿಸಿರಿ. ಅಲ್ಲಾಹನು ಅದರ ಸೌಭಾಗ್ಯ ದಯಪಾಲಿಸಲಿ – ಆಮೀನ್.

**– ನಝಾರತ್ ಇಸ್‌ಲಾಹ್ ವ ಇರ್ಶಾದ್ ತಅ್‌ಲೀಮುಲ್ ಖುರ್‌ಆನ್ ವಖ್‌ಫೆ ಆರ್‌ಝೀ**

ಸಂಪರ್ಕಿಸಿರಿ: 09872022708, 09417411702, 01872220861

## ತಹ್‌ರೀಕ್ ಜದೀದಿನ ವೈಶಿಷ್ಟ್ಯಗಳು

ಸಯ್ಯಿದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ದೃಢಸಂಕಲ್ಪ, ದೇವದತ್ತ ಸೂಕ್ಷ್ಮಗ್ರಹಿಕೆ ಮತ್ತು ವಿವೇಕದ ಕನ್ನಡಿಯಾದ ಕ್ರಾಂತಿಕಾರಿ ಯೋಜನೆ 'ತಹ್‌ರೀಕ್ ಜದೀದ್'ಗೆ ಜಮಾಅತಿನ ಎಲ್ಲ ಐಚ್ಛಿಕ ಯೋಜನೆಗಳ ಮೇಲೆ ಹಲವು ವಿಧದಲ್ಲಿ ಒಂದು ವಿಶಿಷ್ಟ ಮತ್ತು ಪ್ರತ್ಯೇಕವಾದ ಸ್ಥಾನವಿದೆ. ಉದಾ:-

- ★ ತಹ್‌ರೀಕ್ ಜದೀದಿನ ಕಾರ್ಯವಲಯ ಲೋಕದ ಎಲ್ಲ ಕೋಣಗಳವರೆಗೆ ಹರಡಿದೆ. ಇದರ ಜಾರಿಯಾಗುವಿಕೆಯ ಅತಿ ಮುಖ್ಯ ಮೂಲಭೂತ ಉದ್ದೇಶ ಲೋಕದೆಲ್ಲೆಡೆ ಅಲ್ಲಾಹನ ಆಧ್ಯಾತ್ಮಿಕ ಪ್ರಭುತ್ವ ಸ್ಥಾಪಿಸುವುದಾಗಿದೆ.
- ★ ತಹ್‌ರೀಕ್ ಜದೀದ್ ಜಾಗತಿಕ ಮಟ್ಟದಲ್ಲಿ ತರ್‌ಬಿಯತ್(ತರಬೇತಿ), ಇಸ್‌ಲಾಹ್(ಸುಧಾರಣೆ) ಮತ್ತು ದಅ್‌ವತ್ ಇಲಲ್ಲಾಹ್‌ದ(ತಬ್ಲೀಗ್) ಮಹಾ ಜಿಹಾದ್‌ಗಳ ಸಮ್ಮಿಶ್ರವಾಗಿದೆ.
- ★ ತಹ್‌ರೀಕ್ ಜದೀದಿನ ಕಾರಣದಿಂದ ಅಹ್ಮದಿಯಾ ಜಮಾಅತಿಗೆ ಇಸ್ಲಾಮಿನ ಮತ್ತೆಲ್ಲ ಪಂಗಡಗಳಿಗಿಂತ ಅಧಿಕ ಸತ್ಯಸಂದೇಶ ತಲುಪಿಸಿದ ವಿಶಿಷ್ಟವಾದ ಪದವಿ ಲಭಿಸಿದೆ.
- ★ ತಹ್‌ರೀಕ್ ಜದೀದ್ ಮೂಲಕ ಇಸ್ಲಾಮಿನ ವಿಶ್ವವ್ಯಾಪಿ ಆಧ್ಯಾತ್ಮಿಕ ವಿಜಯ ಮತ್ತು ಪ್ರಭುತ್ವದ ಸ್ಥಾಪನೆಯ ಸುವಾರ್ತೆ ನೀಡಲಾಗಿದೆ.
- ★ ತಹ್‌ರೀಕ್ ಜದೀದ್‌ನ ಮಹಾ ಜಿಹಾದಿನಲ್ಲಿ ಸೇರುವುದು ದೇವ ಸಾಮೀಪ್ಯ ಲಭ್ಯತೆಯ ಮಾರ್ಗವಾಗಿದೆ.
- ★ ತಹ್‌ರೀಕ್ ಜದೀದ್‌ನಲ್ಲಿ ಮಾಡಲಾಗುವ ಪ್ರತಿಯೊಂದು ತ್ಯಾಗ ಸದ್‌ಖ ಜಾರಿಯಃದ ಪುಣ್ಯ ಸಿಗುವಂತದ್ದಾಗಿದೆ.
- ★ ತಹ್‌ರೀಕ್ ಜದೀದ್‌ನ ಮಹಾ ಜಿಹಾದಿನಲ್ಲಿ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಭಾಗಿಯಾಗುವುದು ಅತ್ಯಗತ್ಯವೆಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದ್ದಾರೆ.
- ★ ತಹ್‌ರೀಕ್ ಜದೀದ್‌ಗಾಗಿ ಅಲ್ಲಾಹನ ಆಸ್ಥಾನದ ಫಕೀರರಾಗಲು ತಾಕೀತು ಮಾಡಲಾಗಿದೆ.
- ★ ತಹ್‌ರೀಕ್ ಜದೀದ್‌ಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರು(ರಹ್) ಎಲ್ಲ ಐಚ್ಛಿಕ ಚಂದಾಗಳ ತಾಯಿಯ ಸ್ಥಾನ ನೀಡಿದ್ದಾರೆ ಮತ್ತು ಆಮ್ ಚಂದಾದ ನಂತರ ಚಂದಾ ತಹ್‌ರೀಕ್ ಜದೀದ್ ಅತ್ಯಂತ ಮುಖ್ಯ ಮತ್ತು ಆವಶ್ಯಕ ಚಂದಾ ಎಂದು ನಿರ್ಣಯಿಸಿದ್ದಾರೆ.

**– ತಹ್‌ರೀಕ್ ಜದೀದ್ ಖಾದಿಯಾನ್.**

ಸ್ಮರಣೆ

## ಮಂಗಳೂರಿನ ಪ್ರಥಮ ಅಹ್ಮದಿ
## ಜನಾಬ್ ಎಂ. ಕೆ. ಯೂಸುಫ್ ಹುಸ್ಸೈನ್ ಸಾಹಿಬ್



ಸುಮಾರು 1930ನೇ ಇಸವಿಯಲ್ಲಿ ಮಂಗಳೂರಿನ ಎಂ. ಕೆ. ಯೂಸುಫ್ ಹುಸ್ಸೈನ್ ಸಾಹಿಬರಿಗೆ ಹಂಪನಕಟ್ಟೆಯ ಈಗಿನ ತಾಜ್‌ಮಹಲ್ ಹೋಟೆಲ್ ಇರುವಲ್ಲಿ "ಮದ್ರಾಸ್ ಹೋಟೆಲ್" ಎಂಬ ಹೋಟೆಲ್ ಇತ್ತು. ಆ ಕಾಲದಲ್ಲಿ ಮಂಗಳೂರಿನಲ್ಲಿ ಕುಸ್ತಿ ಸ್ಪರ್ಧೆಗಳು ಜರುಗುತ್ತಿದ್ದವು. ಭಾರತದ ಎಲ್ಲೆಡೆಗಳಿಂದ ಸ್ಪರ್ಧಾಳುಗಳು ಬರುತ್ತಿದ್ದರು. ಪಂಜಾಬಿನಿಂದ ಬಂದ ಮುಸ್ಲಿಂ ಕುಸ್ತಿ ಸ್ಪರ್ಧಾಳುಗಳಿಂದ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅಹ್ಮದಿಯಾ ಜಮಾಅತಿನ ಕುರಿತು ತಿಳಿದ ಯೂಸುಫ್ ಹುಸ್ಸೈನ್ ಸಾಹಿಬರು ಖಾದಿಯಾನಿಗೆ ಪತ್ರ ಬರೆದು ಮಾಹಿತಿ ಪಡೆದರು. ಕೆಲಕಾಲ ಅಧ್ಯಯನ ಮಾಡಿದ ನಂತರ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು.

ಜ। ಯೂಸುಫ್ ಹುಸ್ಸೈನ್ ಸಾಹಿಬ್ ಮಂಗಳೂರಿನ ಬಂದರ್‌ನ ಮುಹಮ್ಮದಲಿ ರಸ್ತೆಯಲ್ಲಿ ಸಹ "ಮದ್ರಾಸ್ ಹೋಟೆಲ್" ಎಂಬ ಹೆಸರಿನಲ್ಲಿ ಒಂದೆರಡು ವರ್ಷ ಕಾಲ ಉದ್ಯಮ ನಡೆಸಿದ್ದರು. ಅಹ್ಮದಿಯೇತರ ಮುಸ್ಲಿಮರಿಂದ ವಿಧಿಸಲ್ಪಟ್ಟ ಸಾಮಾಜಿಕ ಬಹಿಷ್ಕಾರ ನಿಮಿತ್ತ ಜ। ಯೂಸುಫ್ ಹುಸ್ಸೈನ್ ಸಾಹಿಬರಿಗೆ ತನ್ನ ಹೋಟೆಲ್ ಉದ್ಯಮವನ್ನು ನಿಲ್ಲಿಸಬೇಕಾಯಿತು. ಅವರೋರ್ವ ಗಣ್ಯ ಸಮಾಜ ಸೇವಕರಾಗಿದ್ದರು. 1928ರಲ್ಲಿ ಸ್ಥಾಪಿಸಲಾದ ಮಂಗಳೂರಿನ ಮುಸ್ಲಿಂ ಎಜುಕೇಶನಲ್ ಅಸೋಸಿಯೇಶನಿನ ಆಡಳಿತ ಸಮಿತಿಯ ಸದಸ್ಯರಾಗಿ ಅವರು ಸೇವೆಗೈಯ್ದಿದ್ದಾರೆ. ಅವರು ಅನೇಕ ವರ್ಷಗಳ ಕಾಲ ಅಹ್ಮದಿಯಾ ಜಮಾಅತಿನ ಸ್ಥಳೀಯ ಘಟಕದ ಸೆಕ್ರಿಟರಿಯಾಗಿಯೂ ಕೆಲವು ವರ್ಷಗಳ ಕಾಲ ಪ್ರೆಸಿಡೆಂಟ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. 1970ರಲ್ಲಿ ಅವರು ನಿಧನಹೊಂದಿದರು.

---

## ಅಹ್ಮದಿಯಾ ಮುಸ್ಲಿಂ ಜಮಾಅತ್ ಮಂಗಳೂರಿನ ಪ್ರಥಮ ಪ್ರೆಸಿಡೆಂಟ್
## ಜನಾಬ್ ಎಂ. ಅಬ್ದುಲ್ ರಶೀದ್ ಸಾಹಿಬ್



ಮೂಲತಃ ಉಳ್ಳಾಲದವರಾದ ಜ। ಎಂ. ಅಬ್ದುಲ್ ರಶೀದ್ ಸಾಹಿಬ್ 1930ರಲ್ಲಿ ಹಿಂದೂ ಧರ್ಮದಿಂದ ಇಸ್ಲಾಂ ಧರ್ಮಕ್ಕೆ ಮತಾಂತರವಾದರು. ಅನಂತರ ಅವರು ಅರಬಿ, ಉರ್ದು ಕಲಿಯಲಿಕ್ಕಾಗಿ ಹೈದರಾಬಾದ್‌ಗೆ ಹೋದರು. ಅಲ್ಲಿ ಅವರು ಅಹ್ಮದಿಯಾ ಮಿಶನರಿ ಜನಾಬ್ ಅಬ್ದುರ್ರಹೀಂ ನಯ್ಯರ್ ಸಾಹಿಬರಿಂದ ಅಹ್ಮದಿಯತ್ ಬಗ್ಗೆ ತಿಳಿದು ಅಧ್ಯಯನ ಮಾಡಿದರು.

1935ರಲ್ಲಿ ಅಬ್ದುಲ್ ರಶೀದ್ ಸಾಹಿಬ್ ಅಹ್ಮದಿಯಾ ಜಮಾಅತಿಗೆ ಸೇರಿದರು. ಅಹ್ಮದಿಯಾ ಜಮಾಅತಿನ ಮಂಗಳೂರು ಘಟಕದ ಪ್ರಥಮ ಪ್ರೆಸಿಡೆಂಟ್ ಅವರೇ ಆಗಿದ್ದರು. 1941ರಿಂದ 1983ರ ಮಧ್ಯೆ ಸುಮಾರು 40 ವರ್ಷಗಳ ದೀರ್ಘಕಾಲ ಅವರು ಮಂಗಳೂರು – ಮಂಜೇಶ್ವರ – ಮೊಗ್ರಾಲ್ ಸಂಯುಕ್ತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದ ಅವರು ಓರ್ವ ಗಣ್ಯ ವ್ಯಕ್ತಿಯಾಗಿದ್ದರು.

"ಯುಗರಶ್ಮಿ" ಸಂಪಾದಕರ ತಂದೆಯವರಾದ ಅಬ್ದುಲ್ ರಶೀದ್ ಸಾಹಿಬರು "ಯುಗರಶ್ಮಿ" ಪತ್ರಿಕೆಯನ್ನು ಆರಂಭಿಸಲು ಕಾರಣಕರ್ತರಲ್ಲಿ ಓರ್ವರಾಗಿದ್ದಾರೆ. ಯುಗರಶ್ಮಿಗೆ ಅವರು ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. 1986 ನವೆಂಬರ್ 30ರಂದು ತನ್ನ 84ನೇ ವಯಸ್ಸಿನಲ್ಲಿ ಅವರು ನಿಧನ ಹೊಂದಿದರು.

---

## ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹಿಬ್



1946ರಲ್ಲಿ ಜ। ಸಿದ್ದೀಖ್ ಅಮೀರ್ ಅಲಿ ಸಾಹಿಬ್ ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರು ಮಂಗಳೂರು ಮಂಜೇಶ್ವರ ಮೊಗ್ರಾಲ್ ಸಂಯುಕ್ತ ಜಮಾಅತಿನ ಸೆಕ್ರಿಟರಿಯಾಗಿ ಹಲವು ವರ್ಷಗಳ ಕಾಲ ಮತ್ತು ಪ್ರೆಸಿಡೆಂಟ್ ಆಗಿ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಕೇರಳ ಅಹ್ಮದಿಯಾ ಕೇಂದ್ರ ಸಮಿತಿಯ ಪ್ರಥಮ ಅಧ್ಯಕ್ಷರಾಗಿಯೂ ಕೇರಳ ರಾಜ್ಯದ ಪ್ರಥಮ ಅಮೀರ್ ಆಗಿಯೂ ಅವರು ಚುನಾಯಿಸಲ್ಪಟ್ಟಿದ್ದರು. ಅವರು ಅನೇಕ ವರ್ಷಗಳ ಕಾಲ ಅಹ್ಮದಿಯಾ ಕೇಂದ್ರ ಸಂಸ್ಥೆಯ (ಸದರ್ ಅಂಜುಮನ್ ಅಹ್ಮದಿಯಾ) ಸದಸ್ಯರೂ ಆಗಿದ್ದರು. "ಯುಗರಶ್ಮಿ"ಯನ್ನು ಪ್ರಾರಂಭಿಸಲು ಕಾರಣಕರ್ತರಲ್ಲಿ ಓರ್ವರಾಗಿದ್ದ ಅವರು 1975ರಿಂದ 1988ರ ವರೆಗೆ ಮೇನೇಜರ್ ಆಗಿ "ಯುಗರಶ್ಮಿ"ಗೆ ಸೇವೆ ಸಲ್ಲಿಸಿದ್ದಾರೆ. ಅವರೋರ್ವ ಗಣ್ಯ ವ್ಯಕ್ತಿಯೂ ತ್ಯಾಗಶೀಲರೂ ಉದಾರಮತಿಯೂ ಸರಳ ಸ್ವಭಾವಿಯೂ ಆಗಿದ್ದರು. ಕುಲೀನ ಕುಟುಂಬದ ಅವರ ಧರ್ಮ ಪತ್ನಿ ಸಿ. ಬೀಫಾತಿಮ ಸಾಹಿಬ ಮಂಗಳೂರಿನ ಪ್ರಥಮ ಅಹ್ಮದಿ ಮಹಿಳೆಯಾಗಿದ್ದರು. "ಯುಗರಶ್ಮಿ" ಸಂಪಾದಕರ ಪತ್ನಿಯ ಪಿತರಾದ ಜ। ಅಮೀರ್ ಅಲಿ ಸಾಹಿಬ್ 1989ರಲ್ಲಿ ನಿಧನರಾದರು.

## ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ ......................

### ಸಂಪಾದಕರಿಗೆ ಪತ್ರ

*(ದಶಂಬರ 1976 ಸಂಚಿಕೆಯಿಂದ)*

ಪ್ರಿಯ ಸಂಪಾದಕರಾದ ಜನಾಬ್ ಮುಹಮ್ಮದ್ ಯೂಸುಫ್‌ರವರಿಗೆ ಪ್ರೀತಿಯ ಅಸ್ಸಲಾಮು ಅಲೈಕುಂ.

ತಾವು ಪ್ರೀತಿ ವಿಶ್ವಾಸದಿಂದ ಕಳುಹಿಸಿಕೊಟ್ಟ "ಯುಗರಶ್ಮಿ"ಯ ಜೂನ್, ಸಪ್ಟಂಬರ ಎರಡು ತಿಂಗಳ ಅಮೂಲ್ಯವಾದ ಎರಡು ಪ್ರತಿಗಳು ದೊರಕಿದವು. ಇಸ್ಲಾಮಿನ ಬಗ್ಗೆ ಸ್ವಚ್ಛ ಕನ್ನಡದಲ್ಲಿ ಇಷ್ಟೊಂದು ಸ್ವಾರಸ್ಯವಾಗಿ ಬರೆದ ಈ ಪತ್ರಿಕೆಯನ್ನು ಓದಿ ನಮಗೆ ಬಹಳ ಸಂತೋಷವಾಗಿದೆ.

ಅದಕ್ಕಾಗಿ ನಮ್ಮ ಕೃತಜ್ಞತೆಗಳು.

ಪ್ರೆಸಿಡೆಂಟ್,
ಉಳ್ಳಾಲ — ಯಂಗ್‌ಮೆನ್ಸ್ ವೆಲ್‌ಫೇರ್ ಸೆಂಟರ್,ಮೇಲಂಗಡಿ.

---

.................. ಅನೀರಿಕ್ಷಿತವಾಗಿ ನನ್ನ ಕಣ್ಣಿಗೆ ಬಿದ್ದ ಯುಗರಶ್ಮಿಯನ್ನು ಎತ್ತಿ ಕೊಂಡಾಗ ನನಗೆ ಸಂತೋಷವಾಯಿತು. ............... ಮನುಷ್ಯನು ಮನುಷ್ಯನನ್ನು ಪ್ರೀತಿಸಲಾರದೆ ಹೋದ ಈ ಕಾಲದಲ್ಲಿ ಯುಗರಶ್ಮಿ ಸಮಸ್ತ ಲೋಕಕ್ಕೆ ಪಾಠ ಹೇಳುತ್ತಿದೆ. ಯುಗರಶ್ಮಿ ಯುಗ ಯುಗಕ್ಕೂ ರಶ್ಮಿಯನ್ನು ಬೀರುತ್ತಿರಲಿ.

ಯುಗರಶ್ಮಿಯ ಬಂಧು
ಉದುಮ. — M. E. ಜನಾರ್ಧನ ಆಚಾರ್ಯ

---

*(ಜೂನ್ 1977 ಸಂಚಿಕೆಯಿಂದ)*

ಶ್ರೀ ಮುಹಮ್ಮದ್ ಯೂಸುಫ್ ಅವರಿಗೆ – ವಂದನೆಗಳು.

ನೀವು ಸಂಪಾದಿಸಿ ಪ್ರಕಾಶಿಸುತ್ತಿರುವ ಯುಗರಶ್ಮಿ ಪತ್ರಿಕೆಯನ್ನು ಆಗಾಗ ನೋಡುತ್ತಿರುತ್ತೇನೆ. ಅದು ಚೆನ್ನಾಗಿಯೇ ಬರುತ್ತಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಮತ್ತು ತಮ್ಮ ಧರ್ಮತತ್ವಗಳನ್ನು ಪ್ರಚಾರಪಡಿಸಲಿಕ್ಕೆ ಭಾಷೆಗಿಂತ ಬೇರೆ ಪ್ರಭಾವೀ ಸಾಧನವಿಲ್ಲ. ಇದು ನಿಮ್ಮ ಪತ್ರಿಕೆಯಿಂದ ಸ್ಪಷ್ಟವಾಗುತ್ತದೆ. ನಿಮ್ಮ ಪತ್ರಿಕೆಯ ಕನ್ನಡ ಭಾಷೆಯಲ್ಲಿ ನನಗೆ ಒಂದು ಕುಂದೂ ಕೂಡ ಕಂಡು ಬರಲಿಲ್ಲ. ಅದಕ್ಕಾಗಿ ನಿಮಗೆ ಶತಶಃ ಧನ್ಯವಾದಗಳು. ನೀವು ಇಷ್ಟು ಸುಂದರವಾಗಿ ಪತ್ರಿಕೆಯನ್ನು ಸಂಪಾದಿಸುತ್ತಿರುವುದು ಅಚ್ಚರಿಯೇ ಸರಿ. ನಿಮ್ಮ ಪತ್ರಿಕೆ ಬೆಳೆದು ಲೋಕ ಪ್ರಿಯವಾಗಿ ಚಿರಕಾಲ ಬಾಳಲೆಂದು ಕೋರುತ್ತೇನೆ.

ಚಿ. ಲ. ದೇಶಪಾಂಡೆ
ಕಲಕತ್ತಾ – 27. — ನ್ಯಾಶನಲ್ ಲೈಬ್ರರಿ.

---

ಮಾನ್ಯರೇ,

ನಿಮ್ಮ ಪತ್ರಿಕೆ ತನ್ನ ಉದ್ದೇಶದ ಪರಿಮಿತಿಯೊಳಗೆ ಆಸಕ್ತಿ ಹುಟ್ಟಿಸುವಂತಿದೆ. ಜವಾಬ್ದಾರಿಯುತವಾದ ಈ ಕಾರ್ಯದಲ್ಲಿ ನಿಮಗೆ ಇನ್ನೂ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ.

**ರಾಮಚಂದ್ರ ದೇವ, ಎಂ.ಎ.**
ನ್ಯೂಡೆಲ್ಲಿ — ಸೆಲೆಕ್ಷನ್ ಆಫಿಸರ್, ಯುನೈಟೆಡ್ ಸ್ಟೇಟ್ ಲೈಬ್ರರಿ ಆಫ್ ಕಾಂಗ್ರೆಸ್

---

ಸಂಪಾದಕ ಮಿತ್ರ,

ತಮ್ಮ ತ್ರೈಮಾಸಿಕ "ಯುಗರಶ್ಮಿ" ಈ ದಿನ ಕೈ ಸೇರಿದೆ. ನೋಡಿ ಸಂತೋಷವಾಯಿತು, ಧನ್ಯವಾದ.

ನಿಜ ಹೇಳಲೇ? ಧರ್ಮ ಮಾನವನ ಉಸಿರು. ಧರ್ಮವಿಲ್ಲದೆ ಮನುಷ್ಯ ಬದುಕಲಾರ. ಎಲ್ಲದೆ ಧರ್ಮ ಎನ್ನುವವರಿಗೂ ಒಂದು ಧರ್ಮ ಇದ್ದೇ ಇದೆ. ಅದರಲ್ಲೂ ಪೈಗಂಬರನ ವಾಣಿ ಉಸುರುವ ತಮ್ಮ ಪ್ರತಿಕೆಯ ಶಬ್ದಶಬ್ದಗಳಂತೂ ಧರ್ಮಮಯವಾಗಿರುವುದನ್ನು ನೋಡಿ ನನಗಂತೂ ತುಂಬ ಹರ್ಷವಾಯಿತು .............................

ತಮ್ಮ "ಯುಗರಶ್ಮಿ" ಯುಗಯುಗದ ವರೆಗೂ ಸಹಸ್ರರಶ್ಮಿಯಾಗಿ ಜಗದ ತುಂಬೆಲ್ಲ ಭಾರತೀಯತ್ವದ ಹೊಂಬೆಳಕನ್ನು ಚೆಲ್ಲಲಿ!


ನಿಮ್ಮ ಬಂಧು
ವೆ. ವಿಜಯಕುಮಾರ್,
ಬೆಳಗಾವಿ — ಸಂಪಾದಕ, ಕನ್ನಡ ಸಾಹಿತ್ಯ ಮಂಟಪ

---

ಜನಾಬ್ ಮುಹಮ್ಮದ್ ಯೂಸುಫ್‌ರವರಿಗೆ ಅಸ್ಸಲಾಮು ಅಲೈಕುಂ

ಯುಗರಶ್ಮಿಯ ಅಮೂಲ್ಯ ಪ್ರತಿಗಳು ಕೈ ಸೇರಿದವು. ಇಸ್ಲಾಮಿನ ಬಗ್ಗೆ ತಿಳಿ ಕನ್ನಡದಲ್ಲಿ ತಿಳಿಸುವ ಪತ್ರಿಕೆ ತುಂಬಾ ಸಹಕಾರಿಯಾಗಿದೆ. ಕನ್ನಡ ನಾಡಿನ ಮೂಲೆ ಮೂಲೆಗಳಲ್ಲೂ ಯುಗರಶ್ಮಿ ಹರಡಿ ಬೆಳಗಲಿ.

ಪುತ್ತೂರು — ಬೊಳುವಾರು ಯೂಸುಫ್ ಹಮೀದ್





## ಅಹ್ಮದಿಯಾ ಮುಸ್ಲಿಂ ಜಮಾಅತಿನ
## ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**



# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

**ಪುಟಗಳು - 320. ಬೆಲೆ : 100/-**

## ದೊರೆಯುವ ವಿಳಾಸ


AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)


**National Toll Free Number : 1800 3010 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Prasad Printers' Kulashekara, Mangalore on behalf of Jubilee Printing Press, Mangalore.
Typeset at 'We Are Designers', Bharath Building, Hampankatta, Mangalore - 575 001


## ಯುಗರಶ್ಮಿ ಮಾಣಿಕ್ಯ ಹೆಜ್ಜೆ ಗುರುತುಗಳು




ಯುಗರಶ್ಮಿಯ ಪ್ರಥಮ ಸಂಚಿಕೆ: ಎಪ್ರಿಲ್ 1975




11ನೇ ವರ್ಷದ ವಿಶೇಷ ಸಂಚಿಕೆ: ಡಿಸೆಂಬರ್ 1985




ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆ: 1990




ಅಹ್ಮದಿಯಾ ಖಿಲಾಫತ್ ಶತಾಬ್ದ ವಿಶೇಷ ಸಂಚಿಕೆ: 2008

Registered with the Registrar of Newspapers for India No. R.N. 27354/75
YUGARASHMI Kannada Quarterly, September - 2015

**RUBY JUBILEE SPECIAL ISSUE**

Price Rs. :



ಮರ್ಯಮ್ ಮಸ್ಜಿದ್ – ಐಯರ್ಲೇಂಡಿನ ಪ್ರಥಮ ಅಹ್ಮದಿಯಾ ಮಸೀದಿ. ಉದ್ಘಾಟನೆ: 26–09–2014



ಬೈತುಲ್ ಖಾದಿರ್ – ಜರ್ಮನಿಯ ವೆಚ್‌ಟಾದಲ್ಲಿ. ಉದ್ಘಾಟನೆ :09–06–2015